ಶ್ರೀ ಜಿ.ವಿ.ಶ್ರೀರಾಮರೆಡ್ಡಿ :- ನಿಲುವಳಿ ಸೂಚನೆಯನ್ನು ನಿಯಮ 69ರ ಅಡಿಯಲ್ಲಿನ ಚರ್ಚೆಗೆ ಪರಿವರ್ತಿಸಿ ಟೈಮ್ ಫಿಕ್ಸ್ ಮಾಡುತ್ತೇನೆ ಎಂದು ಹೇಳಿದ್ದೀರಿ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ. ನಂತರ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :- ಸಾರ್, ಪ್ರಶ್ನೋತ್ತರ ಬಹಳ ಪ್ರಾಮುಖ್ಯವಾದುದು. ದಯಮಾಡಿ ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು :- ಈಗ ವಿತ್ತೀಯ ಕಾರ್ಯಕಲಾಪಗಳು. ದಯಮಾಡಿ ಸಹಕರಿಸಿ. ವಿತ್ತೀಯ ಕಲಾಪಗಳೂ ಸಹ ಅಷ್ಟೇ ಮುಖ್ಯ.

ಶ್ರೀ ಬಿ.ನಾಗರಾಜ ಶೆಟ್ಟಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಯೋಗೀಶ್ ಭಟ್‌ರವರು ಬೇಡಿಕೆಗಳ ಮೇಲೆ ಮಾತನಾಡಲು ನಿಂತಿದ್ದಾರೆ. ಆದರೆ ಇಲ್ಲಿ ಯಾರೂ ಮಂತ್ರಿಗಳೇ ಇಲ್ಲ. ಸ್ವಲ್ಪ ಹೇಳಿ.

ಅಧ್ಯಕ್ಷರು :- ಆಯಿತು, ಅವರನ್ನು ಕರೆಸೋಣ. ಮಾನ್ಯ ಸಿಂಧ್ಯಾರವರು ಬಂದಿದ್ದಾರೆ. ಮಾನ್ಯ Social Welfare Minister ಕೂಡ ಇದ್ದಾರೆ. ಚೀಫ್ ವಿಪ್‌ರವರ, ಮಂಡಿಸಲ್ಪಟ್ಟ ಬೇಡಿಕೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಯಾರ್‍ಯಾರು ಇದ್ದಾರೋ, ಅವರೆಲ್ಲರನ್ನು ಸದನಕ್ಕೆ ಕರೆಸಿ.

ವಿತ್ತೀಯ ಕಾರ್ಯಕಲಾಪ

2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಎನ್.ಯೋಗೀಶ್ ಭಟ್ :- ಮಾನ್ಯ ಅಧ್ಯಕ್ಷರೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಬೇಡಿಕೆ ಮೇಲೆ ನಾನು ಮಾತನಾಡುತ್ತೇನೆ. ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಲಿಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ನನ್ನ ಕೆಲವು ಅನಿಸಿಕೆಗಳನ್ನು ಹೇಳಲಿಕ್ಕೆ ಇಚ್ಛಿಸುತ್ತಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆ ಅದರಲ್ಲೂ ವಿಶೇಷವಾಗಿ ಮಂಗಳೂರು ಕರ್ನಾಟಕ ರಾಜ್ಯದ ಆರ್ಥಿಕ ರಾಜಧಾನಿಯನ್ನಾಗಿ ಮಾಡಬೇಕೆಂಬ ಆಸೆ ನಮ್ಮದಾಗಿದೆ. ಯಾವ ರೀತಿಯಲ್ಲಿ ಬೊಂಬಾಯಿ ಮಹಾರಾಷ್ಟ್ರ ರಾಜ್ಯದ ಆರ್ಥಿಕ ರಾಜಧಾನಿಯಾಗಿ ಗುರುತಿಸಲ್ಪಡುತ್ತದೋ, ಅದೇ ರೀತಿಯಲ್ಲಿ ಇರುವಂತಹ potentiality, ಅದೇ ರೀತಿಯಲ್ಲಿ ಇರುವಂತಹ ಯೋಗ್ಯತೆಗಳು ನಮ್ಮಲ್ಲೂ ಇದೆ. ಒಂದು ಕಡೆಯಲ್ಲಿ ಬಂದರು, ಮತ್ತೊಂದು ಕಡೆಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗುವಂತಹ ಹಂತ, ರೈಲ್ವೆ ಇತ್ಯಾದಿ ಬೇರೆ ಬೇರೆ ರೀತಿಯಲ್ಲಿ ಇಲ್ಲಿ ವ್ಯವಸ್ಥೆಗಳು ಇರುವುದರಿಂದ ಖಂಡಿತವಾಗಿಯೂ ಇದಕ್ಕೆ ನಮ್ಮ ಕರ್ನಾಟಕ

ರಾಜ್ಯದ ಆರ್ಥಿಕ ರಾಜಧಾನಿ ಆಗುವಂತಹ ಎಲ್ಲಾ ಅರ್ಹತೆಯೂ ಇದೆ. ಆದರೆ ನಾನು ವಿಶೇಷವಾಗಿ ನಮ್ಮ ಮಾನ್ಯ ಕೈಗಾರಿಕಾ ಸಚಿವರ ಹೇಳಿಕೆಗಳನ್ನು ಪ್ರತಿ ದಿವಸ ನೋಡುವಾಗ, ಒಂದು ರೀತಿಯಲ್ಲಿ ಸಂತೋಷವಾಗುತ್ತದೆ, ಇನ್ನೊಂದು ಕಡೆಯಲ್ಲಿ ಕನಿಕರ ಕೂಡ ಆಗುತ್ತಿದೆ. ಏಕೆಂದರೆ, ಇವತ್ತು ಪತ್ರಿಕೆಗಳಲ್ಲಿ ಹೇಳಿಕೆಗಳು ಬರುತ್ತಿವೆ. ಆದರೆ, ಕಾರ್ಯರೂಪದಲ್ಲಿ ಅವುಗಳು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ಬಂದಿದೆ ಎಂಬುದು ನಮ್ಮನ್ನು ಕಾಡುತ್ತಿರುವಂತಹ ಪ್ರಶ್ನೆಯಾಗಿದೆ. ಇವತ್ತು ONGC ಗೆ ಸಂಬಂಧಪಟ್ಟಿರುವಂತಹ ಒಂದು ಪ್ರಶ್ನೆ. ONGC, MRPLಗೆ ಸಂಬಂಧಪಟ್ಟು, ನಮ್ಮ Special Economic Zoneಗೆ ಸಂಬಂಧಪಟ್ಟಂತಹ ಈ ಕಾಮಗಾರಿ, ಇದಕ್ಕೆ ಸಂಬಂಧಪಟ್ಟಂತಹ ಯೋಜನೆಗಳು, ಸುಮಾರು 25 ಸಾವಿರ ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಈ ಯೋಜನೆ ನಮ್ಮ ಕ್ಷೇತ್ರಕ್ಕೆ ಬಂದಲ್ಲಿ ಬಹುಶಃ ಅದರಿಂದ ಕನಿಷ್ಟ 25 ಸಾವಿರ ಜನರಿಗೆ ಉದ್ಯೋಗಾವಕಾಶಗಳು, ancillary units ಬರುತ್ತವೆ. ಈ ಮೂಲಕ ಬಹುತೇಕ ಸ್ಥಳೀಯರಿಗೂ ಮಾತ್ರವಲ್ಲ, ರಾಜ್ಯಕ್ಕೂ ಕೂಡ ಆರ್ಥಿಕ ಶಕ್ತಿ ಬರುವಂತಹ ಯೋಜನೆ ಇದಾಗಿದೆ. ಆದರೆ ಈ ಯೋಜನೆಯಲ್ಲಿ ಬಂದಿರುವಂತಹ ದುರಂತ ಏನೆಂದರೆ, ಇದರಲ್ಲಿ ಇಷ್ಟರತನಕ, ಅದಕ್ಕೆ ಸಂಬಂಧಪಟ್ಟಂತಹ ಪರವಾನಿಗೆಯನ್ನು ಪಡೆದುಕೊಳ್ಳಲಿಕ್ಕೆ ಕರ್ನಾಟಕ ರಾಜ್ಯ ವಿಫಲವಾಗಿದೆ. ನಮ್ಮ ಘಟಾನುಘಟಿಗಳು, ಪ್ರಭಾವಿ ಮಂತ್ರಿಗಳು ಕೇಂದ್ರದಲ್ಲಿದ್ದರೂ ಕೂಡ, ಇಲ್ಲಿ ಮುಖ್ಯಮಂತ್ರಿಗಳು ತಮ್ಮ ಕಡೆಯಿಂದ ಪ್ರಯತ್ನ ಮಾಡಿದ್ದರೂ ಕೂಡ ಇವತ್ತಿತನಕ ಅದಕ್ಕೆ consent ಸಿಕ್ಕಿಲ್ಲ. ಅದಕ್ಕೆ permission ಸಿಕ್ಕಿಲ್ಲ. ONGC ಮತ್ತು ಇದಕ್ಕೆ ಸಂಬಂಧಪಟ್ಟಂತಹ ಯೋಜನೆಗಳಿಗೆ ಅನುಮತಿ ಸಿಕ್ಕಿಲ್ಲ. 25 ಸಾವಿರ ಕೋಟಿ ರೂಪಾಯಿಗಳ ಯೋಜನೆಗಳು ಇವು. ಏಕೆ ಅಲ್ಲಿಂದ ಪರ್ಮಿಷನ್ ಸಿಕ್ಕಿಲ್ಲ? ಯಾವ ಕಾರಣಕ್ಕೋಸ್ಕರ ಅಲ್ಲಿರುವಂತಹ ಕೇಂದ್ರ ಸಚಿವರಾದ ಮಾನ್ಯ ಮಣಿಶಂಕರ್ ಅಯ್ಯರ್‌ರವರು ನಮ್ಮ ಮೇಲೆ ದುರಾಗ್ರಹ ಪೀಡಿತರಾಗಿದ್ದಾರೆ. ಈ ಯೋಜನೆಯನ್ನು ಚೆನ್ನೈಗೋ ಅಥವಾ ಬೇರೆ ಕಡೆಗೋ ಸ್ಥಳಾಂತರಿಸಲಿಕ್ಕೆ ಏಕೆ ಪ್ರಯತ್ನ ಮಾಡುತ್ತಿದ್ದಾರೆ ಎಂಬ ಬಗ್ಗೆ ಕೂಡ ಇವತ್ತು ನಾವು ವಿಶ್ಲೇಷಣೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಪಕ್ಷಭೇದ ರಹಿತವಾಗಿ ಅಲ್ಲಿರುವಂತಹ ನಮ್ಮ ಎಲ್ಲಾ ಎಂ.ಪಿಗಳು ಮತ್ತು ಇಲ್ಲಿರುವಂತಹ ಎಲ್ಲಾ ಸದಸ್ಯರೂ ಕೂಡ ಒಕ್ಕೊರಲಿನ ಒತ್ತಾಯವನ್ನು ಇವತ್ತು ಕೇಂದ್ರ ಸರ್ಕಾರದ ಮೇಲೆ ಮಾಡಬೇಕಾಗಿದೆ. ಇವತ್ತು ತಾರತಮ್ಯ ನೀತಿಯನ್ನು ನಮ್ಮ ರಾಜ್ಯದ ವಿಷಯದಲ್ಲಿ ಮಾಡುತ್ತಿರುವುದನ್ನು ನಾವು ಖಂಡಿಸಬೇಕಾಗಿದೆ. ಈ ಒಂದು ಕಡೆಯಲ್ಲಿ, ಅವರ ಒಂದು ತಾರತಮ್ಯ ನೀತಿಯಲ್ಲಿ, ಈ ಒಂದು ದುರಂತ

ಆಗುವುದಿದ್ದರೆ, ಬಹುಶಃ ನಮ್ಮ ರಾಜ್ಯದಲ್ಲಿ ಇರುವಂತಹ ಈ ಒಂದು ಪರಿಸ್ಥಿತಿ ಹೇಗಿದೆ ಎಂಬ ಬಗ್ಗೆ ವಿಶ್ಲೇಷಣೆ ಮಾಡಬೇಕಾಗಿದೆ. ಆಂಧ್ರದ ಕಾಕಿನಾಡ ಇರಬಹುದು, ಮಹಾರಾಷ್ಟ್ರ ಇರಬಹುದು ಅಥವಾ ಇನ್ನಿತರ ಮೂರು ರಾಜ್ಯಗಳಲ್ಲಿ ಇರುವಂತಹ ಪ್ರದೇಶಗಳಲ್ಲಿ ನಮ್ಮ ನಂತರ Special Economic Zoneಗೆ apply ಮಾಡಿಕೊಂಡು, ಅವರಿಗೆ ಇವತ್ತು special purpose vehicle ಎಂದೇನು ಹೇಳುತ್ತಾರೋ, ವಿಶೇಷ ಉದ್ದೇಶ ವಾಹನಗಳು, ಅದನ್ನು ಮಾಡಿಕೊಂಡು 100-150-200 ಕೋಟಿ ರೂಪಾಯಿಗಳಷ್ಟು ಕೇಂದ್ರದ ಅನುದಾನವನ್ನು ಪಡೆದುಕೊಂಡು, ಈಗಾಗಲೇ ಕಾರ್ಯಪ್ರವೃತ್ತರಾಗಿದ್ದಾರೆ. ನಮ್ಮ ದುರದೃಷ್ಟ ಏನೆಂದರೆ, SEZ ಮಾಡಲಿಕ್ಕೆ ನಮಗೆ ಇನ್ನೂ ಆಗಿಲ್ಲ. NMPTಯವರು ಇದರಲ್ಲಿ ನೇರವಾಗಿ ಪ್ರವೇಶ ಮಾಡಿದ್ದರೆ, ಕೇವಲ MRPL, ONGC ಮಾತ್ರವಲ್ಲ, ಅದರ ಜೊತೆಯಲ್ಲಿ Chamber of Commerce ಇರುತ್ತದೆ ಮತ್ತು KIADB ಇರುತ್ತದೆ. ಅದರ ಜೊತೆಯಲ್ಲಿ NMPT ಇದ್ದರೆ ಮಾತ್ರ ಇದು ಕಾರ್ಯರೂಪಕ್ಕೆ ಬರಲಿಕ್ಕೆ ಸಾಧ್ಯವಿದೆ. NMPT ಬರಬೇಕು ಎಂದರೆ, Chief Secretary ಯವರ ನೇತೃತ್ವದಲ್ಲಿ, NMPT ಇದರಲ್ಲಿ ಒಂದು, ಎಲ್ಲಾ ನಮ್ಮ ಕರ್ನಾಟಕ ರಾಜ್ಯದ top executives, ಬೇರೆ ಬೇರೆ ಡಿಪಾರ್ಟ್‌ಮೆಂಟ್‌ನ ಹೆಡ್‌ಗಳು, ಪ್ರಿನ್ಸಿಪಲ್ ಸೆಕ್ರೆಟರಿಗಳೆಲ್ಲಾ ಬಂದಿದ್ದರು. ಆ ಒಂದು ಸಭೆಯಲ್ಲಿ ಭಾಗವಹಿಸುವಂತಹ ಅವಕಾಶ ನನಗೆ ಒದಗಿ ಬಂದಿತ್ತು. ನಾನು ಅದರಲ್ಲಿ ಭಾಗವಹಿಸಿದ್ದೆ. ಆ ಸಭೆಯಲ್ಲಿ ಕೆಲವು requisitionಗಳನ್ನು ಕೇಳಿದ್ದರು. NMPT SEZಗೆ ಸೇರಬೇಕೆಂದು ಇದ್ದರೆ, ನಮಗೆ ಅಂದರೆ ಕೇಂದ್ರ ಸರ್ಕಾರಕ್ಕೆ ಕೆಲವೊಂದು requisition ಗಳನ್ನು, ಕೆಲವೊಂದು ಮಾಹಿತಿಗಳನ್ನು ರಾಜ್ಯ ಸರ್ಕಾರದ ಕಡೆಯಿಂದ ಕೊಡಬೇಕು ಎಂದು ಕೇಳಿದ್ದರು. ಮೇ 2ಕ್ಕೆ ಅಲ್ಲಿ ಸಭೆ ಆಯಿತು. ಹೆಚ್ಚು ಕಡಿಮೆ ನಿನ್ನೆಯ ತನಕ ಅದಕ್ಕೆ ಸಂಬಂಧಪಟ್ಟಂತಹ ಮಾಹಿತಿಗಳನ್ನು ಕೊಡಲಿಕ್ಕೆ Commerce and Industriesಗೆ ಸಂಬಂಧಪಟ್ಟಂತಹ ನಮ್ಮ ಅಧಿಕಾರಿಗಳು ಏಕೆ ವಿಳಂಬ ಮಾಡಿದ್ದಾರೆ? ಏಕೆ ಇನ್ನೂ ಕೊಟ್ಟಿಲ್ಲ? ಈ ಬಗ್ಗೆ ತಾವು ದಯವಿಟ್ಟು ಒಂದು ಸಲ ಪರಿಶೀಲಿಸಬೇಕು.

ಶ್ರೀ ಎನ್.ಯೋಗೀಶ್ ಭಟ್ :- ಆ ಮಾಹಿತಿಯನ್ನು ಎನ್‌ಎಮ್‌ಪಿಟಿಗೆ ಸಂಬಂಧಪಟ್ಟ ರಿಕ್ವಿಸಿಷನ್ಗೆ ಸಂಬಂಧಪಟ್ಟಂತಹ ಮಾಹಿತಿಯನ್ನು ತಾವು ದಯವಿಟ್ಟು ಅಲ್ಲಿ ಕೇಳಿ ಆ ಫೈಲ್ ಅಲ್ಲಿ ಪೆಂಡಿಂಗ್ ಇದೆ. ನಾನು ಎಲ್ಲ ಪ್ರಾಜೆಕ್ಟ್ ಬರುತ್ತದೆ. ಇದಕ್ಕೆ ಸಂಬಂಧಪಟ್ಟ ಎಲ್ಲ ವಿವರಗಳು ಏನೆಲ್ಲಾ ಯೋಜನೆಗಳು ಬೇಕಾಗುತ್ತವೆ ಎಂದು ಹೇಳುವುದರ ಬಗ್ಗೆ ಎಷ್ಟು ಲ್ಯಾಂಡ್ ಬೇಕಾಗುತ್ತದೆ ಎಂದು ಹೇಳುವುದು. ಈ ಎಲ್ಲ ವಿವರಗಳನ್ನು ಕ್ವೈರೀಸ್

ಹಾಕಿಕೊಂಡು ಅಲ್ಲಿ ಕಳುಹಿಸಿದರೆ ನಿನ್ನೆ ತನಕ ಅದು ಸೈನ್ ಆಗಿಲ್ಲ. ಇನ್ನು ಎಷ್ಟು ವಿಳಂಬ ನಮ್ಮ ರಾಜ್ಯ ಸರ್ಕಾರದ ಕಡೆಯಿಂದ ಮಾಡುವುದು ಎಂದು ಹೇಳಿದರೆ ನಾವು ಎಲ್ಲಿಗೆ ತಲುಪುತ್ತಿದ್ದೇವೆ? ಮಾನ್ಯ ಸಚಿವರೇ ತಾವು ದಯವಿಟ್ಟು ಇದನ್ನು ವಿಚಾರಿಸಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ತಾವು ಒಂದು ನಿಮಿಷ ಯೀಲ್ಡ್ ಆದರೆ ಹೇಳುತ್ತೇನೆ. ಸ್ಪೆಷಲ್ ಎಕನಾಮಿಕ್ ಆ್ಯಕ್ಟ್ ಝೋನ್ ಪಾಸ್ ಆಗಿರುವುದು ಇನ್ನು 15 ದಿವಸಗಳಾಗಿವೆ. ನಾವು 2003ರಲ್ಲಿ ರಾಜ್ಯ ಸರ್ಕಾರ ಸ್ಪೆಷಲ್ ಎಕನಾಮಿಕ್ ಝೋನ್ ಒಂದು ಆ್ಯಕ್ಟ್ ಏನು ಮಾಡಿದ್ದಾರೆ. ಕರ್ನಾಟಕದವರು ಆ ಸ್ಪೆಷಲ್ ಎಕನಾಮಿಕ್ ಝೋನ್ ಆ್ಯಕ್ಟ್ ಈಗ ರಿಡೆಂಟೆಂಟ್ ಆಗುತ್ತದೆ. ಅದಕ್ಕೆ ಬೆಲೆ ಇರುವುದಿಲ್ಲ ಸತ್ವ ಇರುವುದಿಲ್ಲ ಶಕ್ತಿ ಇರುವುದಿಲ್ಲ ಶಕ್ತಿ ಕಳೆದುಕೊಂಡಿದೆ. ಏಕೆಂದರೆ ಕೇಂದ್ರ ಸರ್ಕಾರದವರು ಮೊದಲನೇ ಬಾರಿಗೆ ಸ್ಪೆಷಲ್ ಎಕನಾಮಿಕ್ ಝೋನ್‌ಗಳನ್ನು ದೇಶದಲ್ಲಿ ಎಲ್ಲೆಲ್ಲಿ ಮಾಡಬೇಕು ಎನ್ನುವುದರ ಬಗ್ಗೆ ಐಡೆಂಟಿಫೈ ಮಾಡಿ ಅದಕ್ಕೆ ಶಕ್ತಿ ಕೊಡಬೇಕೆನ್ನುವುದರ ದೃಷ್ಟಿಯಿಂದ ವ್ಯಾಪಾರ, ವಾಣಿಜ್ಯ ಕೈಗಾರಿಕೆ, ನಿರುದ್ಯೋಗ ಇದಕ್ಕೆ ಎಲ್ಲಾ ಪೂರಕವಾಗಿ ಆಗತಕ್ಕಂತಹ ಒಂದು ಸ್ಪೆಷಲ್ ಎಕನಾಮಿಕ್ ಝೋನ್ ಆ್ಯಕ್ಟನ್ನು ಕೇಂದ್ರ ಸರ್ಕಾರದವರು ಮಾಡಿ 15 ದಿವಸ ಆಗಿದೆ. ಮತ್ತೆ ಈಗ ರಾಜ್ಯ ಸರ್ಕಾರದ ಆ್ಯಕ್ಟ್ ನಾವು ಜಾರಿಗೊಳಿಸಲಿಕ್ಕೆ ಆಗುವುದಿಲ್ಲವೆಂದು ತಮಗೆ ಅರ್ಥವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಈಗ ಅಲ್ಲಿ ಸ್ಪೆಷಲ್ ಎಕನಾಮಿಕ್ ಝೋನ್ ಎಂದು ಮಂಗಳೂರಿನಲ್ಲಿ ಮಾಡಬೇಕೆಂದು ರಾಜ್ಯ ಸರ್ಕಾರದ ಉದ್ದೇಶ. ಹಾಸನದಲ್ಲಿ ಸ್ಪೆಷಲ್ ಎಕನಾಮಿಕ್ ಝೋನ್ ಮಾಡಬೇಕೆಂದು ರಾಜ್ಯ ಸರ್ಕಾರದ ಉದ್ದೇಶ. ಇದಕ್ಕೆ ಬೇಕಾದ ಎಲ್ಲ ಮಾಹಿತಿಗಳನ್ನು ನಾವು ಕಳುಹಿಸಿಕೊಟ್ಟಿದ್ದೇವೆ. ಇದರ ಜೊತೆಗೆ ಇನ್ನು ನಾಲ್ಕು ಸ್ಪೆಷಲ್ ಎಕನಾಮಿಕ್ ಝೋನ್ ಕರ್ನಾಟಕದಲ್ಲಿ ಮಾಡಬೇಕು ಎನ್ನುವುದಕ್ಕೆ ಕೂಡ ನಾವು ಅವರಿಗೆ ಎನ್‌ಕ್ವೈರಿ ಮಾಡಿದ್ದೇವೆ. ಎನ್‌ಕ್ವೈರಿಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ವಿಳಂಬದ ಪ್ರಶ್ನೆ ಎಲ್ಲಿ ಬರುತ್ತದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಕಾರಣ ಎನ್‌ಎಮ್‌ಪಿಟಿಸಿಯವರು ಏನು ಕೇಳುತ್ತಿದ್ದಾರೆ. ಅವರು ಅವರ ಜಾಗವನ್ನು ಸಹಿತ ಸ್ಪೆಷಲ್ ಎಕನಾಮಿಕ್ ಝೋನ್‌ಗೆ ಸೇರಿಸಿಕೊಳ್ಳಬೇಕೆಂದು ಅವರ ಬೇಡಿಕೆ ಇರಬಹುದು. ಪ್ರಶ್ನೆ ಏನಿದೆ ಎಂದರೆ, ಸ್ಪೆಷಲ್ ಎಕನಾಮಿಕ್ ಝೋನ್ ಇನ್ನು ರೆಕಗ್ನೈಸ್ ಮಾಡಿಲ್ಲ. ಅದನ್ನು ಮಾಡಬೇಕೆಂದು ಮೊನ್ನೆ ಕಾಮರ್ಸ್ ಮಿನಿಸ್ಟರ್ ಬಂದಂತಹ ಸಂದರ್ಭದಲ್ಲಿ ಮತ್ತು ಫೈನಾನ್ಸ್ ಮಿನಿಸ್ಟರ್ ಬಂದಂತಹ ಸಂದರ್ಭದಲ್ಲಿ ಸಹಿತ ಒತ್ತಾಯ ಮಾಡಿದ್ದೇನೆ. ನಮ್ಮ ಸ್ಪೆಷಲ್ ಎಕನಾಮಿಕ್ ಝೋನ್‌ಗೆ ಕೇಂದ್ರ ಸರ್ಕಾರದವರು

ಏನು ಹೊಸ ಆ್ಯಕ್ಟ್ ಮಾಡಿದ್ದಾರೆ ಅದರ ಪ್ರಕಾರವಾಗಿ ಕರ್ನಾಟಕಕ್ಕೆ ಆದ್ಯತೆ ಕೊಡಬೇಕು. ಒಂದಲ್ಲ ಎರಡಲ್ಲ ಆರು ಸ್ಪೆಷಲ್ ಎಕನಾಮಿಕ್ ಝೋನ್‌ಗಳನ್ನು ಪ್ರಾಡಕ್ಟ್ ಸ್ಪೆಸಿಫಿಕ್ ಮಾಡಬೇಕೆಂದು ಹೇಳಿದ್ದೇವೆ. ಇದರಲ್ಲಿ ವಿಳಂಬದ ಪ್ರಶ್ನೆ ಎಲ್ಲಿ ಬರುತ್ತದೆ. ಆದ್ದರಿಂದ ದಯಮಾಡಿ ತಮ್ಮಲ್ಲಿ ಇರತಕ್ಕಂತಹ ಮಾಹಿತಿಯನ್ನು ಕಳುಹಿಸಿ ಕೊಡಿ ವಿಳಂಬ ಆಗಿದ್ದರೆ ಸರಿಪಡಿಸುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್ :- ಸನ್ಮಾನ್ಯ ಅಧ್ಯಕ್ಷರೆ, ನಾನು ಆಧಾರಗಳು ಇಲ್ಲದೆ ಈ ಆರೋಪ ಮಾಡುತ್ತಿಲ್ಲ. ತಾವು ದಯವಿಟ್ಟು ತಮ್ಮ ಕಛೇರಿಯಲ್ಲಿ ವಿಚಾರಿಸಿ. ಎಸ್‌ಇಜಡ್‌ಗೆ ಎನ್‌ಎಮ್‌ಪಿಟಿಸಿ ಸರ್ಫೇಸ್ ಟ್ರಾನ್ಸ್‌ಫರ್ ಕೇಂದ್ರದ ಆ ಇಲಾಖೆ ಮೂಲಕ ಅನುಮತಿ ಪಡೆಯಬೇಕಾಗಿದೆ. ಅನುಮತಿ ಪಡೆಯಬೇಕಾದರೆ ಕೆಲವು ರಿಕ್ವಿಸಿಷನ್ ರಾಜ್ಯ ಸರ್ಕಾರದ ಕಡೆಯಿಂದ ಕೇಳಿದ್ದು, ರಾಜ್ಯ ಸರ್ಕಾರದಿಂದ ಮೊನ್ನೆ ತನಕ ಕ್ಲಿಯರೆನ್ಸ್ ಸಿಕ್ಕಿರಲಿಲ್ಲ ಎಂದು ಹೇಳತಕ್ಕಂತಹ ಅಧಿಕೃತ ಮಾಹಿತಿ ಆಧಾರದಲ್ಲಿ ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ :- ದಯಮಾಡಿ ಮಾನ್ಯ ಗೌರವಾನ್ವಿತ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಇನ್ನು ಈ ಆ್ಯಕ್ಟ್ ಆಗಿ 15 ದಿವಸಗಳಾಗಿವೆ. ಆ್ಯಕ್ಟ್ ಆಗಿ 15 ದಿವಸಗಳಾಗಿರುವಾಗ ಇನ್ನು information delay ಎಲ್ಲಿ ಬರುತ್ತದೆ? This is my point.

ಶ್ರೀ ಎನ್.ಯೋಗೀಶ್ ಭಟ್ : ತಾವು ದಯವಿಟ್ಟು ವೆರಿಫೈ ಮಾಡಿಕೊಳ್ಳಿ, ತಪ್ಪು ಇದ್ದರೆ ಅದನ್ನು ಸರಿಪಡಿಸುವ ಹೊಣೆಗಾರಿಕೆ ತಮಗೆ ಇದೆ. ಖಂಡಿತ ತಾವು ಇದಕ್ಕೆ ಉತ್ತರ ಕೊಡಿ, ಈ ಮಾಹಿತಿಗಳನ್ನು ಪಡೆದುಕೊಂಡೇ ನಾನು ಇಲ್ಲಿ ಹೇಳುತ್ತಿದ್ದೇನೆ. ಈ ನಿಟ್ಟಿನಲ್ಲಿ ಯಾವ ರೀತಿಯಲ್ಲಿ ಅದನ್ನು ಸರಿಪಡಿಸುತ್ತೀರಿ, ಯಾವ ರೀತಿಯಲ್ಲಿ ನಮಗೆ ನ್ಯಾಯ ಕೊಡಿಸುತ್ತೀರಿ ಎಂದು ಹೇಳುವುದನ್ನು ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಪರವಾಗಿ, ಕರ್ನಾಟಕ ರಾಜ್ಯದ ಜನತೆ ಪರವಾಗಿ ಹೇಳುತ್ತಿದ್ದೇನೆ. ವಿಶೇಷವಾದ ಆರ್ಥಿಕ ಶಕ್ತಿ ಕೊಡುವಂತಹ ಪ್ರಾಜೆಕ್ಟ್ ನಮಗೆ ಬರುತ್ತಿದೆ. ಪಕ್ಕದ ಗುಜರಾತ್ ರಾಜ್ಯದಲ್ಲಿ ಪವರ್ ಪ್ರೊಡಕ್ಷನ್‌ಗೆ ಸಂಬಂಧಪಟ್ಟ ವಿಎನ್‌ಜಿಸಿ ಕಡೆಯಿಂದ ಪರ್ಮಿಷನ್ ಸಿಕ್ಕಿದೆ. 740 ಮೆ.ವ್ಯಾ.ಗೆ. ಪವರ್ ಪ್ರೊಡಕ್ಷನ್‌ಗೆ ಅವಕಾಶ ಕೊಟ್ಟಿದ್ದಾರೆ. ಆದರೆ ಕರ್ನಾಟಕದಲ್ಲಿ ಮಾತ್ರ ಈ ತಾರತಮ್ಯ ಏಕೆ ಎಂದು ಹೇಳಿದರೆ ಇದು ದೊಡ್ಡ ಒಂದು ದುರಂತ. ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಇದನ್ನು ಕ್ಲಿಯರೆನ್ಸ್ ಮಾಡಿದ್ದರು. ಟೆಕ್ನೋ ಎಕನಾಮಿಕ್ ವಿಷನ್ ಎಂದು ಹೇಳುವಂತಹ ಸಂಸ್ಥೆಯಿಂದ ಸಂಪೂರ್ಣವಾಗಿ ಸರ್ವೆ ಮಾಡಿಕೊಂಡು ಮಂಗಳೂರು ಫಿಸಿಬಲ್ ಇರುವಂತಹ ಒಂದು ಪೋರ್ಟ್ ಮತ್ತು ಈ ಪ್ರದೇಶದಲ್ಲಿ ಅದನ್ನು ಮಾಡಬಹುದು ಎಂದು

ಹೇಳುವುದು ಆಗಿದೆ. ಪೆಟ್ರೋ ಕೆಮಿಕಲ್‌ಗೆ ಸಂಬಂಧಪಟ್ಟಿದ್ದು ಇರಬಹುದು. ವಿದ್ಯುತ್ ಉತ್ಪಾದನೆಗೆ ಸಂಬಂಧಪಟ್ಟಿದ್ದು ಇರಬಹುದು. ಅಥವ ಎಲ್ ಅಂಡ್ ಟಿ ಗೆ ಸಂಬಂಧಪಟ್ಟಿದ್ದು ಇರಬಹುದು. ಶೇಖರಣೆ ಮತ್ತು ವಿತರಣೆ ಜಾಲಕ್ಕೆ ಸಂಬಂಧಪಟ್ಟಿದ್ದು ಇರಬಹುದು ಅಷ್ಟು ಮಾತ್ರ ಮಂಗಳೂರಿನಿಂದ ಬೆಂಗಳೂರು ತನಕ, ಬೆಂಗಳೂರಿನಿಂದ ಚೆನ್ನೈ ತನಕ ಹೋಗುವಂತಹ ಈ ಲೈನ್‌ನಲ್ಲಿ ದಾರಿ ಉದ್ದಕ್ಕೂ ಅನೇಕ ಕಡೆಗಳಲ್ಲಿ ಪವರ್ ಪ್ರಾಜೆಕ್ಟ್‌ಗಳನ್ನು ಮಾಡುವುದಕ್ಕೆ ಅವಕಾಶ ಇದೆ. ಈ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಇರುವಂತಹ ವಿದ್ಯುತ್ ಅಭಾವವನ್ನು ಕೂಡ ನೀಗಿಸುವುದಕ್ಕೆ ಸಾಧ್ಯ ಇರುವಂತಹ ಒಂದು ಪ್ರಾಜೆಕ್ಟನ್ನು ಯಾವುದೇ ರೀತಿಯಲ್ಲಿ ಒತ್ತಡ ತಂದು ನಾವು ಕಾವೇರಿ ಬಗ್ಗೆ ಏನು ಹೋರಾಟ ಮಾಡುತ್ತಿದ್ದೇವೆ, ಸನ್ಮಾನ್ಯ ಸಚಿವರೇ, ಅದೇ ರೀತಿ ಕೃಷ್ಣ ಬಗ್ಗೆ ಏನು ಮಾಡುತ್ತಿದ್ದೇವೆ, ಅದೇ ರೀತಿಯಲ್ಲಿ ಇರುವಂತಹ ಆಗ್ರಹ ನಮ್ಮ ರಾಜ್ಯದ ವಿಧಾನಸಭೆಯಲ್ಲಿ ಒಕ್ಕೊರಲಿನ ಒತ್ತಾಯ ಮತ್ತು ಈ ತರಹದ ಕೂಗು ಬಂದರೆ ಮಾತ್ರ ನಾವು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗಬಹುದು. ನಾವು ಎಣಿಸಿಕೊಂಡಷ್ಟು ಸುಲಭದಲ್ಲಿ ಅದು ಬರುತ್ತಿಲ್ಲ. ಆ ನೋವು ನಮ್ಮಲ್ಲಿ ಇದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಖಂಡಿತ ಇದರಲ್ಲಿ ಮುಂಚೂಣಿಯಲ್ಲಿರಬೇಕು. ನಿಮ್ಮ ಜೊತೆಯಲ್ಲಿ ನಾವು ಇದ್ದೇವೆ ಎಂಬ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ ರೈಲ್ವೆಗೆ ಸಂಬಂಧಪಟ್ಟ ಹಾಗೆ ಕಳೆದ 11 ವರ್ಷಗಳಿಂದ ವಿಳಂಬ ಆಗಿರುವುದು ಕರ್ನಾಟಕ ರಾಜ್ಯದ ಇತಿಹಾಸ. ಈ ದೇಶದ ಇತಿಹಾಸದಲ್ಲಿ ಬ್ರಾಡ್‌ಗೇಜ್ ಕನ್‌ವರ್ಷನ್‌ಗೆ ಇಷ್ಟು ವಿಳಂಬ ನೀತಿ ಆಗಿರುವುದು ಎಲ್ಲಿಯೂ ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ. ಪೋರ್ಟ್ ಕನೆಕ್ಟಿವಿಟಿಗೆ ಆಗುವಂತಹ ಬ್ರಾಡ್ ಗೇಜ್ ಕನ್‌ವರ್ಷನ್, ಇಲ್ಲಿ ಆಗಿರುವಂತಹ ದುರಂತ ಏನೆಂದರೆ, ನಮ್ಮಲ್ಲಿ ಕೆಆರ್‌ಎಲ್‌ಡಿ ಎಂದು ಮಾಡಿದ್ದೇವೆ. ನಂತರ ಹೆಚ್‌ಎಮ್‌ಆರ್‌ಡಿ ಎಂದು ನಾವು ಮಾಡಿದ್ದೇವೆ. ಒಪ್ಪಂದದ ಮೇಲೆ ಒಪ್ಪಂದ ಮಾಡಿಕೊಂಡು ಕೊಡಬೇಕಾದ ಹಣ ಕೊಡದೆ ಇದ್ದರೆ ಈ ಕಾಮಗಾರಿಗಳು ಇಷ್ಟು ವಿಳಂಬ ಆಗಿವೆ ಎಂದು ಹೇಳುವುದು. ಇನ್ನು ಏಳು ಕೋಟಿ ರೂಪಾಯಿ ಕೊಡುವುದಕ್ಕೆ ಬಾಕಿ ಇದೆ. ಇದನ್ನು ತಕ್ಷಣ ಕೊಡಿ. 3–4 ತಿಂಗಳುಗಳಲ್ಲಿ ಆದರೂ ರೈಲ್ವೆ ಓಡಾಡುವ ರೀತಿಯಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದು. ಮಂಗಳೂರು ಮತ್ತು ಬೆಂಗಳೂರು ರೈಲ್ವೆ ಕೇವಲ ಪ್ರವಾಸೋದ್ಯಮ ದೃಷ್ಟಿಯಿಂದ ಮಾತ್ರವಲ್ಲ, ಅದರ ಜೊತೆಯಲ್ಲಿ ಇಲ್ಲಿ ಬೇರೆ ಬೇರೆ ರೀತಿಯಲ್ಲಿ ಇರುವಂತಹ ಗೂಡ್ಸನ್ನು ಬೇರೆ ಬೇರೆ ರೀತಿಯಲ್ಲಿ ಎಕ್ಸ್‌ಪೋರ್ಟ್ ಆಗುವ ಯಾವುದು ಪೋರ್ಟ್ ಕಾಫಿ

ಕನೆಕ್ಟಿವಿಟಿ ಬರುವಂಥದ್ದು ಇರಬಹುದು. ಜಿಂದಾಲಕ್ಕೆ ಸಂಬಂಧಪಟ್ಟಿದ್ದು ಇರಬಹುದು. ಕೋಲ್‌ಗೆ ಸಂಬಂಧಪಟ್ಟಿದ್ದು ಇರಬಹುದು. ಇನ್ನಿತರ ಅನೇಕ ಲಕ್ಷಗಟ್ಟಲೆ ಟನ್‌ನಷ್ಟು ಮಾರುಕಟ್ಟೆಗೆ ಹೋಗುವುದು. ಈ ಮೂಲಕ ಹೋಗಲಿಕ್ಕೆ ಸಾಧ್ಯ ಇರುವುದರಿಂದ ಅದಕ್ಕೆ ಬರಬೇಕಾದ ಬಾಕಿ ಹಣವನ್ನು ತಕ್ಷಣ ಬಿಡುಗಡೆ ಮಾಡಿ ಎಂದು ಹೇಳಿದ್ದೇವೆ. ರೈಲ್ವೆ ವಿಷಯದಲ್ಲಿ ಕೇಂದ್ರ ಸರ್ಕಾರ ಇದರಲ್ಲಿ ರಾಜಕೀಯ ಮಾಡುತ್ತಿದೆ. ಮೊನ್ನೆ ನನಗೆ ಉದ್ಘಾಟನೆ ಪ್ರಶ್ನೆ ಇಲ್ಲ. ರೈಲು ಓಡಾಡುತ್ತಾ, ಯಾರು ಬೇಕಾದರೂ ಉದ್ಘಾಟನೆ ಮಾಡಲಿ. ಆದರೆ ರೈಲ್ವೆ ವಿಷಯದಲ್ಲಿ ಕೂಡ ಈ ತಾರತಮ್ಯ ಮಾಡುವುದು ಸರಿಯಲ್ಲ.

ಶ್ರೀಮತಿ ಶಕುಂತಲ ಟಿ.ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಮಂಗಳೂರು, ಹಾಸನ ರೈಲ್ವೆ ನಮ್ಮ ಪುತ್ತೂರಿನ ತನಕ ಹೋಗುತ್ತಿದೆ. ಮೊನ್ನೆ ಎಂಟನೇ ತಾರೀಕಿಗೆ ಉದ್ಘಾಟನೆ ಎಂದು ನೀವು ಎಲ್ಲ ತಯಾರು ಮಾಡಿ ಅಧಿಕಾರಿಗಳು ವ್ಯವಸ್ಥೆ ಮಾಡಿ ಕೊನೇ ಗಳಿಗೆಯಲ್ಲಿ ಯಾರೋ ಮಂತ್ರಿಗಳು ಬರಬೇಕು. ಸಂಸತ್ ಸದಸ್ಯರು ಮಾತ್ರ ಇರುವುದು ಸರಿಯಲ್ಲ ಎಂದು ಹೇಳಿ ಅವರೇ ಕ್ಯಾನ್ಸಲ್ ಮಾಡಿದರು. ಆ ಮೇಲೆ ನಾನು ಮೊನ್ನೆ ಹೋಗಿದ್ದಾಗ ಶನಿವಾರದ ದಿವಸ ಮೈಸೂರಿನ ರೈಲ್ವೆ ಅಧಿಕಾರಿಗಳು ನನಗೆ ದೂರವಾಗಿ ಮಾಡಿ ನಿಮ್ಮ ಪುತ್ತೂರಿನಿಂದ ಸುಬ್ರಹ್ಮಣ್ಯ ತನಕ ನಾವು 22ನೇ ತಾರೀಖಿಗೆ ರೈಲು ಓಡಿಸುತ್ತಿದ್ದೇವೆ ನೀವೂ ಬರಬೇಕೆಂದು ಹೇಳಿದರು. ನಾನು ಹೇಳಿದಾಗ ಬಹಳ ಸಮಯದಿಂದ ರೈಲು ಬಿಡುತ್ತಿದ್ದೀರಿ. ನಾಡಿದ್ದು ನಮಗೆ ಶಾಸಕರ ದಿನಾಚರಣೆ ಇದ್ದ ಕಾರಣ ನಾನು ಬರುವುದಿಲ್ಲ. ಅದೇ ರೀತಿಯಲ್ಲಿ ಸಂಸತ್ ಸದಸ್ಯರಿಗೂ ಸಮಯ ಅವಕಾಶ ಇಲ್ಲ ನೀವು ರೈಲನ್ನು ಓಡಿಸಿ ಜನರು ಅದರ ಪ್ರಯೋಜನ ಪಡೆಯಲಿ. ನಾವು ಟೇಪು ಕಟ್ ಮಾಡಿ ಉದ್ಘಾಟನೆ ಮಾಡುವುದರ ಅಗತ್ಯವಿಲ್ಲವೆಂದು ಹೇಳಿದೆವು. ಆದರೆ ಈಗ ಅದು ಮುಂದುವರೆದಿದೆ. ನಾನು ಹೇಳುವುದು ಯಾರೋ ನೀವು ರಾಜಕಾರಣಿಗಳು ಹೋಗಿ ಉದ್ಘಾಟನೆ ಮಾಡುವ ಬದಲು ರೈಲು ಮೊದಲು ಹೋಗಲಿ. ಆ ಮೇಲೆ ನಾವು ಆ ರೈಲು ಬಿಡುವುದಾದರೂ ನಿಲ್ಲಿಸಿದ್ದೇವೆ ಎಂದು ಹೇಳಬಹುದು. ರೈಲು ಬಿಡುವುದು ಮಾತ್ರ ಆಗಿದೆ. ರೈಲು ಹೋಗುತ್ತಿಲ್ಲ.

ಶ್ರೀ ಕೆ.ಪದ್ಮನಾಭ ಕೊಠಾರಿ : ಮಂಗಳೂರು ಸುಬ್ರಹ್ಮಣ್ಯ ರೈಲು ಓಡಿಸುವುದಿಲ್ಲ ರೈಲು ಬಿಡುವುದು ಮಾತ್ರ ಇದೆ.

ಶ್ರೀಮತಿ ಶಕುಂತಲ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ರೈಲು ಓಡಲಿ, ನಂತರ ರೈಲು ಉದ್ಘಾಟನೆ ಮಾಡೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಗೌರವಾನ್ವಿತ

ಸದಸ್ಯರುಗಳು ಅವರ ಕ್ಷೇತ್ರದಲ್ಲಿ ನಡೆಯುವಂತಹ ಯಾವುದಾದರೂ ಕಾರ್ಯಕ್ರಮಗಳು ಇರಲಿ, ಸರ್ಕಾರದ ಕಾರ್ಯಕ್ರಮಗಳು ಇದ್ದಂತಹ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮತ್ತು ಜಿಲ್ಲಾಪಂಚಾಯಿತಿ ಅದು ಒಂದು ಭಾಗ ಆದರೆ ಕರ್ನಾಟಕ ರಾಜ್ಯ ಸರ್ಕಾರ ಆಶ್ರಯದಲ್ಲಿ ನಡೆಯತಕ್ಕಂತಹ ಕಾರ್ಯಕ್ರಮಗಳಿಗೆ ಅವರಿಗೆ ಸುದ್ದಿ ತಿಳಿಸದೆ ಕಾರ್ಯಕ್ರಮವನ್ನು ಮಾಡಿದರೆ ಅದು ಎಷ್ಟರ ಮಟ್ಟಿಗೆ ಸಮಂಜಸ? ಇದರ ಹಿನ್ನೆಲೆಯಲ್ಲಿ ನಾನು ಇವತ್ತು ಹಾಸನ – ಮಂಗಳೂರು ಮಧ್ಯೆ ಇರತಕ್ಕಂತಹ ರೈಲ್ವೆ ಲೈನ್ ಏನಿದೆ ಇದಕ್ಕೋಸ್ಕರ ಸ್ಪೆಷಲ್ ಪರ್ಪಸ್ ವೆಹಿಕಲ್ ಎಂದು ನಾವು ನಮ್ಮ ರಾಜ್ಯ ಸರ್ಕಾರದಿಂದ ಮಾಡಿದ್ದೇವೆ. ಮಾನ್ಯ ದೇಶಪಾಂಡೆಯವರು ಇದ್ದಂತಹ ಸಂದರ್ಭದಲ್ಲಿ ಆಗಿರತಕ್ಕಂತಹ ಕೆಲಸ ಅದು. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಇದು ಆಗಿ ರುವುದು. ರಾಜ್ಯ ಸರ್ಕಾರ ಸುಮಾರು 35 ರಿಂದ 40 ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ಕೊಡುತ್ತಿದೆ. ಇದರಲ್ಲಿ ಒಂದು ಅಂಶ ಬರುತ್ತದೆ. ಮಾನ್ಯ ಯೋಗೀಶ್ ಭಟ್‌ರವರು ಹೇಳಿದ್ದಾರೆ. ಇನ್ನು ಏಳು ಕೋಟಿ ರೂಪಾಯಿಗಳು ಬಿಡುಗಡೆ ಆಗಬೇಕೆಂದು ಹೇಳಿದ್ದಾರೆ. ನಾನು ಒಪ್ಪಿಕೊಳ್ಳುತ್ತಿದ್ದೇನೆ. ಈಗಾಗಲೇ ಅದರಲ್ಲಿ ಏನು ಮಾಡಿದ್ದೇನೆಂದರೆ, ಇದು ಎಕನಾಮಿಕಲಿ ಬಹಳ ವಯಬಲ್ ರೂಟ್. ಮಂಗಳೂರಿನ ಪೋರ್ಟಿಗೆ ಇಡೀ ಕರ್ನಾಟಕದಿಂದ ಕನೆಕ್ಟ್ ಮಾಡತಕ್ಕಂತಹ ರೈಲ್ವೆ ಲೈನ್ ಒಂದು ಸಾರಿ ಬೆಂಗಳೂರು – ಹಾಸನ ರೂಟ್ ಆದರೆ ಆ ಕಡೆಯಿಂದ ಬರತಕ್ಕಂಥದ್ದು, ಹುಬ್ಬಳ್ಳಿಯಿಂದ ಬರತಕ್ಕಂಥದ್ದು, ಹಾಸನದಿಂದ ಬರತಕ್ಕಂಥದ್ದು, ಮಂಗಳೂರಿಗೆ ಹೋಗುವಲ್ಲಿ ಬಹಳ ದೊಡ್ಡ ಪೋರ್ಟ್ ಆಗುತ್ತದೆ. ಅದರಲ್ಲಿ ಎಮ್‌ಎಸ್‌ಐಎಲ್ ಸಹಿತ ಭಾಗವಹಿಸಬೇಕೆಂದು ಸರ್ಕಾರದ ನಿರ್ಧಾರ. ಆದ್ದರಿಂದಾಗಿ ಎಮ್‌ಎಸ್‌ಐಎಲ್ ಈ ವರ್ಷ ಲಾಭ ಮಾಡಿದೆ. ಅವರ ಹತ್ತಿರ ಹಣ ಇದೆ. ಸುಮಾರು 2,000 ಕೋಟಿ ರೂಪಾಯಿಗಳ ವಹಿವಾಟು ಈ ವರ್ಷ ಎಮ್‌ಎಸ್‌ಐಎಲ್ ಸಂಸ್ಥೆ ಮಾಡಿದೆ. ಅವರ ಕಡೆಯಿಂದ ಏಳು ಕೋಟಿ ರೂಪಾಯಿ ಬಿಡುಗಡೆ ಮಾಡಿಸಬೇಕೆಂದು ನಾನು ನಾಲ್ಕೈದು ದಿನಗಳ ಸಮಯ ತೆಗೆದುಕೊಂಡಿದ್ದೇನೆ ಹೊರತು ದುಡ್ಡಿನ ಕೊರತೆ ಇಲ್ಲ. ಮಂಗಳೂರು ರೈಲು ಕಂಪ್ಲೀಟ್ ಮಾಡುವುದಕ್ಕೆ ಸರ್ಕಾರಕ್ಕೆ ಹಣದ ಕೊರತೆ ಇಲ್ಲ. ಸರ್ಕಾರದ ಹತ್ತಿರ ಸಾಕಷ್ಟು ಹಣ ಇದೆ. ಇನ್ನು 15 ದಿವಸಗಳ ಒಳಗೆ ಏಳು ಕೋಟಿ ರೂಪಾಯಿ ಬಿಡುಗಡೆ ಮಾಡತಕ್ಕಂತಹ ಭರವಸೆಯನ್ನು ನಾನು ಕೊಡುತ್ತೇನೆ.

ಎಂ.ಎಸ್.ಐ.ಎಲ್. ಅದರಲ್ಲಿ ಒಬ್ಬ ಪಾರ್ಟ್‌ನರ್ ಆದರೆ ಈ ಸ್ಪೆಷಲ್

ಪರ್ಪಸ್ ವೆಹಿಕಲ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಅನುಕೂಲವಾಗುತ್ತದೆ. ಇವೊತ್ತು ನಾನು ಇರುತ್ತೇನೆ, ನಾಳೆ ದಿವಸ ನೀವು ಬರಬಹುದು That is a different issue. But, ಎಂ.ಎಸ್.ಐ.ಎಲ್. ಆಗಬೇಕು ಎನ್ನತಕ್ಕಂಥದ್ದು ಒಂದು ವಿಚಾರ. ಇನ್ನು ಎರಡನೆಯದಾಗಿ ಈ ಸುಬ್ರಹ್ಮಣ್ಯ ಮತ್ತು ಪುತ್ತೂರಿನ ಮಧ್ಯೆ ರೈಲ್ವೆ ಲೈನ್ ರೆಡಿಯಾಗಿರತಕ್ಕಂಥದ್ದು ನಿಜ. This is only a part. It is not the full.

ಹಾಸನದಿಂದ ಮಂಗಳೂರಿಗೆ ಹಾಕತಕ್ಕಂಥ ರೈಲ್ವೆ ಲೈನ್ ಸೆಪ್ಟೆಂಬರ್ ಅಷ್ಟರೊಳಗೆ ಪೂರ್ತಿ ಆಗಬಹುದು ಎನ್ನತಕ್ಕಂಥದ್ದು ನಮ್ಮ ಅಂದಾಜು. ಈ ಏಳು ಕೋಟಿ ರೂಪಾಯಿಗಳು ಬಿಡುಗಡೆ ಆದ ಮೇಲೆ ಸೆಪ್ಟೆಂಬರ್ ಅಷ್ಟೊತ್ತಿಗೆ ಆಗಬಹುದು ಎಂದಿದೆ. ಆದರೆ ಇವರು ಏನು ಹೇಳುತ್ತಿದ್ದಾರೆ ಎಂದರೆ ನೀವು ರಾಜಕೀಯ ಬೆರೆಸುತ್ತಿದ್ದೀರಿ, ಪುತ್ತೂರು ಮತ್ತು ಸುಬ್ರಹ್ಮಣ್ಯದ ಮಧ್ಯೆ ಉದ್ಘಾಟನೆ ಮಾಡುವುದನ್ನು ತಡೆಹಿಡಿದಿದ್ದೀರಿ ಎನ್ನುವ ಅರ್ಥದಲ್ಲಿ ಮಾತನಾಡುತ್ತಿದ್ದಾರೆ. ಆದರೆ ನಾವೇನು ತಡೆಹಿಡಿದಿಲ್ಲ. ಆದರೆ ರಾಜ್ಯ ಸರ್ಕಾರದಿಂದ 40 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ನಮ್ಮವರೂ ಕೂಡ ವಿಧಾನಸಭಾ ಸದಸ್ಯರಿದ್ದಾರೆ. ಲೋಕಸಭಾ ಸದಸ್ಯರಿದ್ದಾರೆ, ಪ್ರತಿಯೊಬ್ಬರನ್ನೂ ಕೂಡ ಕರೆಯಬೇಕಾಗುತ್ತದೆ. ರಾಜ್ಯ ಸರ್ಕಾರ ಎನ್ನುತಕ್ಕಂಥದ್ದೂ ಕೂಡ ಇದೆ. ನಮ್ಮ ಮಾಹಿತಿಯನ್ನೂ ಕೂಡ ತೆಗೆದುಕೊಳ್ಳಬೇಕಾಗುತ್ತದೆ. ಅದರಿಂದಾಗಿ ಇದು ಮುಂದು ಹೋಗಿದೆಯೇ ವಿನಃ ಬೇರೆ ಇನ್ನ್ಯಾವ ಕಾರಣವೂ ಕೂಡ ಇಲ್ಲ. ಇವೊತ್ತು ನೀವೂ ಕೂಡ ಹೋಗಬೇಕಾಗುತ್ತದೆ. ಏಕೆ ಹೋಗುವುದಿಲ್ಲ ನೀವು? ನಾವೇನು 7 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ ಅಥವಾ 40 ಕೋಟಿ ರೂಪಾಯಿಗಳಲ್ಲಿ ಈಗಾಗಲೇ ನಾವು 33 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದಕ್ಕೆ ನೀವೂ ಕೂಡ ಪಾಲುದಾರರಿದ್ದೀರಿ. ಈ ಸದನದಲ್ಲಿ ಒಪ್ಪಿಗೆ ಕೊಟ್ಟರೇನೇ ಹಣ ಖರ್ಚು ಮಾಡುವುದಕ್ಕೆ ಆಗತಕ್ಕಂಥದ್ದು.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ : ಸುಬ್ರಹ್ಮಣ್ಯದಿಂದ ಹಾಸನಕ್ಕೆ ಬರುವಾಗ ಮಾಡೋಣ ಸಾರ್. ಈಗ ರೈಲನ್ನು......

ಶ್ರೀ ಪಿ.ಜಿ.ಆರ್.ಸಿಂಧ್ಯಾ :- ನಾನು ಹೇಳುವುದನ್ನು ಸ್ವಲ್ಪ ಕೇಳಿ. ತಾವು ಹೊಸದಾಗಿ ಗೆದ್ದು ಬಂದಿದ್ದೀರಿ. ನಾನು ಹೇಳುವುದನ್ನು ಕೇಳಿ. ಆಮೇಲೆ ನೀವು ಮಾತನಾಡಿ. ಅಥವಾ ನಾನು ಕುಳಿತುಕೊಳ್ಳುತ್ತೇನೆ. ನೀವು ಮಾತನಾಡಿ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ : ನಾವು ಸುಬ್ರಹ್ಮಣ್ಯದಿಂದ ಹಾಸನಕ್ಕೆ ಬರುವಾಗ ಬಹಳ ಗ್ರ್ಯಾಂಡ್ ಆಗಿ ಮಾಡೋಣ ಸಾರ್. ಈಗ ಒಮ್ಮೆ ರೈಲು ಹೋಗಲಿ. ಮಂಗಳೂರಿನಿಂದ ಸುಬ್ರಹ್ಮಣ್ಯದ ತನಕ ಬರಲಿ ಎಂದು ನಮ್ಮ ಅಪೇಕ್ಷೆ. ಅಥವಾ

ಎಲ್ಲರೂ ಇದ್ದುಮಾಡುವುದಾದರೂ, ಈಗ ನಾವು ಅಧಿವೇಶನವಿರುವಾಗ ಮಧ್ಯದಲ್ಲಿ ಮಾಡಿದರೆ ಎಲ್ಲರಿಗೂ ತೊಂದರೆ ಅಲ್ಲವೇ ಸಾರ್. ಆ ಉದ್ದೇಶದಿಂದ ಮಾತ್ರ ನಾನು ಆ ರೀತಿ ಹೇಳಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ :– ಮಾನ್ಯ ಅಧ್ಯಕ್ಷರೆ, ಯಾವುದೇ ಕಾರ್ಯಕ್ರಮ ಇಲ್ಲದೇ ರೈಲ್ವೆ ಲೈನ್ ನಡೆಯಲಿಕ್ಕೆ ಎಂದು ಹೇಳಿ ನಾನು ಸೂಚನೆಯನ್ನು ಕೊಡುತ್ತೇನೆ. ಆದರೆ ಕಾರ್ಯಕ್ರಮ ಆಗಬೇಕಾದರೆ ರಾಜ್ಯ ಸರ್ಕಾರಾನೂ ಕೂಡ ಭಾಗವಹಿಸಬೇಕಾಗುತ್ತದೆ. ವಿಧಾನಸಭಾ ಸದಸ್ಯರೂ ಕೂಡ ಭಾಗವಹಿಸಬೇಕಾಗುತ್ತದೆ. ಲೋಕಸಭಾ ಸದಸ್ಯರೂ ಕೂಡ ಭಾಗವಹಿಸಬೇಕಾಗುತ್ತದೆ. ಕೇವಲ ಲೋಕಸಭಾ ಸದಸ್ಯರು ಮಾಡುವುದಕ್ಕೆ ಆಗುವುದಿಲ್ಲ. ನಾವೂ ಕೂಡ ದುಡ್ಡನ್ನು ಕೊಟ್ಟಿದ್ದೇವೆ. ಬರೀ ಕೇಂದ್ರ ಸರ್ಕಾರದ ಯೋಜನೆ, ನಮ್ಮದೇನೂ ಹಣವೇ ಇಲ್ಲ ಎಂದು ಹೇಳಿದರೆ that is immaterial. Special purpose vehicle ನಲ್ಲಿ ನಾವೇ ಇದನ್ನು ಕಾನ್ಸ್‌ಟ್ಯೂಟ್ ಮಾಡಿರತಕ್ಕಂಥದ್ದು ನಾವೇ ಮಾಡಿರತಕ್ಕಂಥದ್ದು. ಹಣ ಬಿಡುಗಡೆ ಮಾಡುವುದಕ್ಕೆ ನೀವೂ ಕಾರಣಕರ್ತರಿದ್ದೀರಿ. ಅದರಿಂದಾಗಿ ತಾವು ದಯಮಾಡಿ ನಾನು ಹೇಳುತ್ತೇನೆ; ಇವೊತ್ತು ಅಥವಾ ನಾಳೆ ನಾನು ಬಿಡುವಾದ ತಕ್ಷಣವೇ ಡಿಮ್ಯಾಂಡ್ಸ್ ಪಾಸ್ ಆದಮೇಲೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಸೂಚನೆಯನ್ನು ಕೊಡುತ್ತೇನೆ. ಯಾವುದೂ ಕಾರ್ಯಕ್ರಮ ಇಲ್ಲದೇ ರೈಲ್ವೆ ಲೈನ್ ರೆಡಿಯಾಗಿರುವುದರಿಂದ ರೈಲನ್ನು ಹೊರಡಿಸಿ ಎಂದು ನಾನು ಹೇಳುತ್ತೇನೆ. ಆದರೆ ಉದ್ಘಾಟನಾ ಕಾರ್ಯಕ್ರಮವನ್ನು ನಾವೆಲ್ಲರೂ ಸೇರಿ ಮಾಡೋಣ.

ಶ್ರೀ ಬಿ.ನಾಗರಾಜ್ ಶೆಟ್ಟಿ :– ಮಾನ್ಯ ಸಚಿವರೆ, ಬಹಳ ಸಂತೋಷ ಸಾರ್. ರೈಲು ಓಡಿಸುವುದಕ್ಕೆ ತಾವು ಒಪ್ಪಿಗೆ ಕೊಟ್ಟಿದ್ದಕ್ಕಾಗಿ. ಆದರೆ ಅವರು ಒಂದು ಮಾತನ್ನು ಹೇಳಿದರು. ನೀವುಗಳು ಕಾರ್ಯಕ್ರಮ ಮಾಡುತ್ತಿದ್ದೀರಿ ಎಂದು. ನಾವು ಕಾರ್ಯಕ್ರಮ ಮಾಡುವುದಲ್ಲ. ರೈಲ್ವೆ ಡಿಪಾರ್ಟ್‌ಮೆಂಟ್‌ನವರು ಮಾಡುವುದು. ಏಕೆಂದರೆ, ಅಲ್ಲಿ ಸ್ಥಳೀಯ ಶಾಸಕನಾದ ನನ್ನನ್ನು ಕರೆಯಲಿಲ್ಲ. ಮೊನ್ನೆ 8ನೆಯ ತಾರೀಖಿನ ಕಾರ್ಯಕ್ರಮಕ್ಕೆ ನನ್ನನ್ನು ಕರೆಯಲಿಲ್ಲ. ಅದು ಮುಖ್ಯವಲ್ಲ. ಆದರೆ ಇಲ್ಲಿ ಏನಾಗಿದೆಯೆಂದರೆ ಕಾರ್ಯಕ್ರಮ ಮಾಡುವುದು ಮುಖ್ಯವಲ್ಲ. ನಾನು ಹೋಗುವುದು ಮುಖ್ಯವಲ್ಲ. ಆದರೆ ಬಡಜನರು ಹೋಗುವಂಥ ರೈಲು ಹೋಗುವ ವ್ಯವಸ್ಥೆ ಆಗುವುದು ಮುಖ್ಯ.

ಶ್ರೀ ಕೆ.ಅಭಯಚಂದ್ರ (ಮುಖ್ಯ ಸಚೇತಕರು) :– ಅಲ್ಲಿಯ ಸಂಸದರು ನಾನೇ ರೈಲು ಬಿಡಲು ಕಾರಣ ಎಂದು ರೀಲ್ ಬಿಟ್ಟಿದ್ದರು.

ಶ್ರೀ ಎನ್.ಯೋಗೀಶ್‌ಭಟ್ :– ಮಾಜಿ ಮುಖ್ಯಮಂತ್ರಿಗಳೂ 7 ರೀಲ್

ಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಎನ್.ಯೋಗೀಶ್ ಭಟ್:– ಸಂಸದರು ಮತ್ತು ನಾವೆಲ್ಲರೂ ಇಷ್ಟು ಹೋರಾಟ ಮಾಡಿದ ಮೇಲೆ ಅಲ್ಲಿ ರೈಲು ಬಂದಿದೆ.

ಮಾನ್ಯ ಸದಸ್ಯರು :– ಇಷ್ಟು ಸಮಯ ರೈಲ್ ಬಿಟ್ ತಾನೇ ಬಂದದ್ದು ನೀವು ಇಲ್ಲಿ. ನೀವು ದೆಹಲಿಯಲ್ಲಿ. ರೈಲ್ ಬಿಟ್ಟು ತಾನೇ ಬಂದದ್ದು ಇಷ್ಟು ಸಮಯ.

ಒಬ್ಬ ಮಾನ್ಯ ಸದಸ್ಯರು :– ಎಲ್ಲಾ ರೈಲೇ ಬಿಡ್ತಾರೆ ವಿನಃ ರೈಲು ಓಡುವುದಿಲ್ಲ. ಸುಮ್ಮನೇ ನಾವು ರೈಲ್ ಬಿಡ್ತಾ ಇದ್ದೇವೆ.

ಅಧ್ಯಕ್ಷರು :– ಆಯಿತು, ಆಯಿತು, ಯೋಗೀಶ್‌ಭಟ್‌ರೇ, ತಾವು ಮಾತನಾಡಿ.

ಶ್ರೀ ಎನ್.ಯೋಗೀಶ್ ಭಟ್:– ಮಾನ್ಯ ಅಧ್ಯಕ್ಷರೆ, ನಾನು ಎಂ.ಪಿ.ಗಳ ಬಗ್ಗೆ ಬಹಳ ಅಭಿಮಾನವನ್ನು ಪಡೆದುಕೊಂಡಿದ್ದೇನೆ. ಅವರು ಬಹಳ ಹೋರಾಟ ಮಾಡಿದ್ದಾರೆ. ಈ ಒತ್ತಡವನ್ನು ಕೇಂದ್ರ ಮತ್ತು ರಾಜ್ಯದ ಮೇಲೆ ತಂದಿದ್ದಾರೆ. ನಮ್ಮ ಎಲ್ಲಾ ಶಾಸಕರುಗಳೂ ಕೂಡ ಇದರಲ್ಲಿ ಪ್ರಯತ್ನವನ್ನು ಮಾಡಿದ್ದಾರೆ. ಖಂಡಿತ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ, ಇಲ್ಲಿ ಬೇಕಾಗಿರುವಂಥದ್ದು ಈ ಒಂದು ಕಾರ್ಯಕ್ರಮಕ್ಕಿಂತ ರೈಲು ಓಡಾಟ ಅಲ್ಲಿ ಮುಂದುವರೆಯಲಿ ಎಂದು ಹೇಳುವಂಥ ಆಶಯವನ್ನು ಮಾತ್ರ ಇಲ್ಲಿ ವ್ಯಕ್ತಪಡಿಸಿದ್ದೇವೆಯೇ ವಿನಃ ಬೇರೆ ಯಾವುದೂ ಹೇಳಲಿಲ್ಲ. ಇನ್ನು ಸಕಲೇಶಪುರ ಮತ್ತು ಹಾಸನಕ್ಕೆ ಸಂಬಂಧಪಟ್ಟದ್ದನ್ನು ಯಾವಾಗ ಸಂಪೂರ್ಣಗೊಳ್ಳುತ್ತದೆ ಈ ಸುಬ್ರಹ್ಮಣ್ಯ-ಸಕಲೇಶಪುರದ್ದು ಆ ಸಂದರ್ಭದಲ್ಲಿ ಒಳ್ಳೆಯ ಒಂದು ಕಾರ್ಯಕ್ರಮವನ್ನು ತಾವು ಹಮ್ಮಿಕೊಳ್ಳಿ. ಅದರಲ್ಲಿ ಎಲ್ಲರನ್ನೂ ಇನ್‌ವಾಲ್ವ್ ಮಾಡುವಂಥ ಕಾರ್ಯಕ್ರಮವನ್ನು ತಾವು ಖಂಡಿತ ಮಾಡಿ ಎಂದು ಹೇಳೂವಂಥ ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ. ಅದೇ ರೀತಿ ಮಾನ್ಯ ಸಚಿವರಲ್ಲಿ ಒಂದು ವಿನಂತಿ. ಅಂಕೋಲಾ ಮತ್ತು ಹುಬ್ಬಳ್ಳಿಗೆ ಸಂಬಂಧಪಟ್ಟದ್ದು. ಕಾರವಾರ ಪೋರ್ಟ್ ಕನೆಕ್ಟಿವಿಟಿ ಕೂಡಾ ಆಗುವುದರಿಂದ ಇದರ ಬಗ್ಗೆ ಈಗಾಗಲೇ 29 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಾ. ಈ ಹಿನ್ನೆಲೆಯಲ್ಲಿ ಅದಕ್ಕೂ ತಾವು ಆದ್ಯತೆಯನ್ನು ಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ. ಇನ್ನು ರಸ್ತೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಬಹುಶಃ ಬೇರೆ ಎಲ್ಲಾ ಜಿಲ್ಲೆಗಳಲ್ಲಿ ಇದಕ್ಕೆ ಇರುವಂಥ ಪ್ರಾಮುಖ್ಯತೆಯನ್ನು ಗಮನಿಸಿದಾಗ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಇದರಲ್ಲಿ ಏಕೆ ತಾರತಮ್ಯ ಮಾಡುತ್ತಿದ್ದೀರಿ ಎಂದು ಹೇಳುವುದರಲ್ಲಿ ನನಗೆ ಸ್ವಲ್ಪ ಕನಿಕರವಿದೆ.

ವಿಶೇಷವಾಗಿ ಮೈಸೂರು – ಬಂಟ್ವಾಳಕ್ಕೆ ಸಂಬಂಧಪಟ್ಟಂತೆ ಚತುಷ್ಪಥ ರಸ್ತೆ

ಶೀಘ್ರದಲ್ಲಿಯೇ ಆಗಬೇಕಾಗಿದೆ. ಅದೇ ರೀತಿ ಎನ್. ಹೆಚ್. 48 ಮಂಗಳೂರು – ಬೆಂಗಳೂರಿಗೆ ಸಂಬಂಧಪಟ್ಟದ್ದು, ಅದೇ ರೀತಿಯಲ್ಲಿ ಬಿ. ಸಿ. ರೋಡ್ – ಸುರತ್ಕಲ್‌ಗೆ ಸಂಬಂಧಪಟ್ಟದ್ದು. ಪೋರ್ಟ್ ಕನೆಕ್ಟಿವಿಟಿ ರೋಡ್ ಕೂಡ ಇನ್ನೂ ಆಗಿಲ್ಲ. ಅದಕ್ಕೆ ಮೇಲ್ಸೆತುವೆ ಎಂದು ಹೇಳಿರುವಂಥದ್ದಕ್ಕೆ ಇನ್ನೂ ಟೆಂಡರ್ ಆಗಿಲ್ಲ. ಸೆಕೆಂಡ್ ಫೇಸ್ , ಥರ್ಡ್ ಫೇಸ್‌ಗೆ ಇನ್ನೂ ಟೆಂಡರ್ ಪ್ರೋಸಸ್ ಕೂಡ ಆಗಿಲ್ಲ. ಬೇರೆ ಕಡೆಗಳಲ್ಲಿ ಪ್ರಗತಿಯಾಗುತ್ತಿದೆ. ನಮ್ಮಲ್ಲಿ ಏಕೆ ಈ ತಾರತಮ್ಯವನ್ನು ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. ಇನ್ನೂ ಅದೇ ರೀತಿಯಲ್ಲಿ ಎನ್. ಹೆಚ್. 17 ರಲ್ಲಿ ಫೋರ್ ಲೈನ್ ಕುಂದಾಪುರ ಮತ್ತು ಕಾಸರಗೋಡಿಗೆ ಸಂಬಂಧಪಟ್ಟಂಥದ್ದು. ಅದು ಬಾಂಬೆ ಕನೆಕ್ಟಿಂಗ್‌ಗೆ ಇರುವಂಥ ರಸ್ತೆ. ಅದರಲ್ಲಿ ಕೂಡ ನಮ್ಮಲ್ಲಿ ಅನ್ಯಾಯವಾಗಿದೆಯೆಂದು ಹೇಳುತ್ತೇನೆ. ಆದಕಾರಣ ಈ ಕಾಮಗಾರಿಗಳನ್ನು ತ್ವರಿತವಾಗಿ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಬಯಸುತ್ತೇನೆ. ಸುಮಾರು 40 ಸಾವಿರ ವಾಹನಗಳ ಡೆನ್ಸಿಟಿ ಈ ಮಂಗಳೂರು – ಉಡುಪಿ ಹತ್ತಿರ ಇಷ್ಟು ಇದೆ. ದೇಶದಲ್ಲಿ ಸುಮಾರು 40600 ಆ್ಯಕ್ಸಿಡೆಂಟ್ ಕೇಸ್‌ಗಳಾಗಿದ್ದರೆ ಕರ್ನಾಟಕದಲ್ಲಿ ಆಗಿರುವಂಥದ್ದು 4500. ಈ ಹಿನ್ನೆಲೆಯಲ್ಲಿ ಈ ಒಂದು ವಾಹನಗಳ ಡೆನ್ಸಿಟಿ ಇರುವಲ್ಲಿ ಚತುಷ್ಪಥ ರಸ್ತೆ ಎಷ್ಟು ಅಗತ್ಯವಿದೆ ಎಂದು ಹೇಳುವಂಥದ್ದನ್ನು ತಮ್ಮ ಗಮನಕ್ಕೆ ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ಈ ಪೋರ್ಟ್ ಕನೆಕ್ಟಿವಿಟಿ ಮತ್ತು ರೈಲು ಇರುವುದರ ಜೊತೆಯಲ್ಲಿ ಮೀನುಗಾರಿಕಾ ಬಂದರಲ್ಲಿ ಹಿಂದೆ ಕಸ್ಟಮ್ಸ್ ಇರುವಂಥ ಒಂದು ವ್ಯವಸ್ಥೆಗಳು ನಮ್ಮಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆಯಲ್ಲಿ ಕಾರವಾರದಲ್ಲಿ ಒಟ್ಟು ಮೂರು ಜಿಲ್ಲೆಗಳು ಎಂಟು ಕಸ್ಟಂ ಓರಿಯೆಂಟೆಡ್ ಅದಕ್ಕೆ ಸಂಬಂಧಪಟ್ಟಂಥ ಕಸ್ಟಂ ಬೈಂಡಿಂಗ್ ಇರುವಂಥ ಒಂದು ಬಂದರುಗಳು ಇದ್ದವು. ಈಗ ಕೇವಲ ನಾಲ್ಕು ಮಾತ್ರ ಇದೆ. ಅದರಲ್ಲಂತೂ ಮಂಗಳೂರು ಮೀನುಗಾರಿಕಾ ಬಂದರು ಅಂತೂ ಇಡೀ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಗರಿಷ್ಠವಾಗಿ ಮೀನುಗಳನ್ನು ಏಕ್ಸ್‌ಪೋರ್ಟ್ ಮಾಡುವಂಥ ಒಂದು ಬಂದರು ಆಗಿದೆ. ಅದಕ್ಕೆ ಬೇಕಾದಂಥ ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟಿ ಕೂಡಾ ಇಲ್ಲ. 1500 ಬೋಟ್‌ಗಳು ನಿಲ್ಲುವುದಿದ್ದರೂ ಕೂಡ ಅದಕ್ಕೆ ಢಕ್ಕೆ ವಿಸ್ತರಣೆ ಆಗಿಲ್ಲ. ಎಕ್ಸ್‌ಪೋರ್ಟ್‌ಗೆ ಸಂಬಂಧಪಟ್ಟಂತೆ ಯಾರ್ಡ್ ಇನ್ನೂ ನಿರ್ಮಾಣವಾಗಲಿಲ್ಲ. ಇಂಥ ಅನೇಕ ವ್ಯವಸ್ಥೆಗಳನ್ನು ತಾವು ಜೋಡಿಸಿದಲ್ಲಿ ಮೀನುಗಾರಿಕಾ ಈ ಒಂದು ಕ್ಷೇತ್ರದಲ್ಲಿ ಕೂಡ ಬಂದರು ಪೋರ್ಟ್‌ಗೆ ಸಂಬಂಧಪಟ್ಟಂತೆ ಮೀನುಗಾರಿಕಾ ಬಂದರುಗಳ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ

ಚೆನ್ನಾಗಿ ಅದನ್ನು ಮಾಡುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ನಾನು ಈಗ ಹೇಳಲಿಚ್ಛಿಸುತ್ತೇನೆ.

ಇನ್ನು ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ,

ಅಧ್ಯಕ್ಷರು :- ಬೇಗ ಮುಗಿಸಿ ಯೋಗಿಶ್‌ಭಟ್ಟರೇ, ಈಗಾಗಲೇ 20 ನಿಮಿಷದ ಮೇಲಾಯಿತು. ತಾವು ಮಾತನಾಡಲು ಪ್ರಾರಂಭ ಮಾಡಿ.

ಶ್ರೀ ಎನ್. ಯೋಗೀಶ್‌ಭಟ್ :- ನಾನು ಬಹಳ ವಿಷಯಗಳನ್ನು ಹೇಳುವುದಿದೆ. ಇನ್ನು ಐದರಿಂದ ಹತ್ತು ನಿಮಿಷದೊಳಗೆ ಮುಗಿಸುತ್ತೇನೆ. ಅಧ್ಯಕ್ಷರೆ.

ಅಧ್ಯಕ್ಷರು :- ಬೇಗ ಮುಗಿಸಬೇಕು. ನಾನು ಆಗಲೇ ಹತ್ತು ನಿಮಿಷ ಎಂದು ಹೇಳಿದ್ದೆ. ಆದರೆ ಈಗಾಗಲೇ ಇಪ್ಪತ್ತು ನಿಮಿಷದ ಮೇಲಾಯಿತು. ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ. ಬೇಗ ಮುಗಿಸಿ.

ಶ್ರೀ ಎನ್. ಯೋಗೀಶ್‌ಭಟ್ :- ಮಾನ್ಯ ಅಧ್ಯಕ್ಷರೇ, ಇದರಲ್ಲಿ ನಾನು ವಿಶೇಷವಾಗಿ ಪ್ರಸ್ತಾಪ ಮಾಡಲು ಇಚ್ಛೆ ಪಡುವಂಥದ್ದು ಎಂಪ್ಲಾಯ್‌ಮೆಂಟ್ ಜನರೇಶನ್ ಮಾಡುವಂಥ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ ಇರಬಹುದು. ಅಥವಾ ಮೈಕ್ರೋ ಎಂಟರ್‌ಪ್ರೈಸ್ ಎಂದು ಹೇಳುವಂಥದ್ದು ಇರಬಹುದು. ತರಬೇತಿಗೆ ಸಂಬಂಧಪಟ್ಟಂತೆ ಇರಬಹುದು. ಕಳೆದ ಕೆಲವು ವರ್ಷಗಳದ್ದನ್ನು ಕಂಪೇರ್ ಮಾಡಿದಾಗ ನಮ್ಮಲ್ಲಿ ತುಂಬಾ ಇಳಿತವಾಗಿದೆ. ಈ ಸಲವಂತೂ ತರಬೇತಿಗೆ ಸಂಬಂಧಪಟ್ಟಂತೆ ಯಾವುದೇ ಹಣ ಬರಲಿಲ್ಲ. ತರಬೇತಿಯ ಮೂಲಕ ಒಬ್ಬ ರಿಕ್ಷಾ ಡ್ರೈವರ್‌ನ್ನಾಗಲೀ ಒಬ್ಬ ಕಾರ್‌ಡ್ರೈವರ್‌ನ್ನಾಗಲೀ ಅಥವಾ ಅದಕ್ಕೆ ಸಂಬಂಧಪಟ್ಟಂಥ ತರಬೇತಿಯನ್ನು ಕೊಟ್ಟಲ್ಲಿ ಆತನು ಸ್ವಾವಲಂಬಿಯಾಗಿ ಜೀವನ ನಡೆಸುವುದಕ್ಕೆ ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಕೂಡ ಈ ಒಂದು ಸೆಕ್ಟರ್‌ಗಳು ಯಾವುದೆ ಕಳೆದ ವರ್ಷಗಳಿಗೆ ಕಂಪೇರ್ ಮಾಡಿದಾಗ ಇದರಲ್ಲಿ ಸ್ವಲ್ಪ ಹೊಡೆತ ಬಿದ್ದಿದೆ. ಇದನ್ನು ಕೂಡ ತಾವು ಗಮನಿಸಬೇಕು ಎಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಯಾವುದು ಅದು?

ಶ್ರೀ ಎನ್. ಯೋಗಿಶ್ ಭಟ್ :- ಈ ತರಬೇತಿ ಎಂದು ಕೇಂದ್ರ ಪ್ರಾಯೋಜಿತ ಸ್ಕೀಂಗಳು ಇವೆ. ಅದಕ್ಕೆ ಸಂಬಂಧಪಟ್ಟ ಹಣ ಮತ್ತು ಮೈಕ್ರೋ ಎಂಟರ್‌ಪ್ರೈಸ್ ಎಂದು ಹೇಳುವಂಥದ್ದಕ್ಕೆ ಸಂಬಂಧಪಟ್ಟಂಥ ಯೋಜನೆಗಳು, ಅದೇ ರೀತಿ ರೋಜ್‌ಗಾರ್ ಯೋಜನೆಗೆ ಸಂಬಂಧಪಟ್ಟದ್ದು ಆ ರೋಜ್‌ಗಾರ್ ಯೋಜನೆಗೆ ಸಂಬಂಧಪಟ್ಟಂಥದ್ದರಲ್ಲೂ ಕೂಡ ಸಾಕಷ್ಟು ಹೊಡೆತಗಳು ಬಿದ್ದಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಯಾವುದು ಪಿ. ಎಂ. ಆರ್. ವೈ. ಯೋ?

ಶ್ರೀ ಎನ್. ಯೋಗೀಶ್‌ಭಟ್ :- ಪಿ. ಎಂ. ಆರ್. ವೈ. ನಲ್ಲಿ ಕೂಡ ಈ ಬಾರಿ ಕಡಿತ ಇದೆ. ಮತ್ತೆ ಇದರಲ್ಲಿ 90 ಲಕ್ಷ ರೂಪಾಯಿಗಳನ್ನು ತಾವು ಕಳೆದ ವರ್ಷ ಖರ್ಚು ಮಾಡಿದ್ದೀರಿ ಎಂದು ಹೇಳಿದ್ದೀರಿ. ಅದರಲ್ಲಿ ಒಂದು ಕೋಟಿ

ಖಂಡಿತ ನಮಗೆ ಸಾಧ್ಯವಾಗುವುದಿಲ್ಲ. ಸಾಕಷ್ಟು ತರಬೇತಿಗೆ ಸಂಬಂಧಪಟ್ಟಂತೆ ಸಾಕಷ್ಟು ಮಾಹಿತಿಗಳು ಬೇಕಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಯಾರೂ ತಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಪಿ. ಎಂ. ಆರ್. ವೈ. ಕಳೆದ ವರ್ಷ ಇದ್ದದ್ದು 20 ಸಾವಿರ. ಬೆನಿಫಿಶರಿಯಸ್ 2003–04 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಇದ್ದದ್ದು. 2004–05 ರಲ್ಲಿ 25 ಸಾವಿರ ಬೆನಿಫಿಶರಿಯಸ್‌ನ್ನು ಪಿ. ಎಂ. ಆರ್. ವೈ ನಲ್ಲಿ ಐಡೆಂಟಿಫೈ ಮಾಡಿ ಸಾಲ ವಿತರಣೆಗೆ ಜುಲೈ 31 ನೆಯ ತಾರೀಖಿನವರೆಗೂ ಸಮಯವಿದೆ. ಈಗ the performance is satisfactory ಮತ್ತು ಹಿಂದೆ 20 ಇದ್ದದ್ದು 25 ಸಾವಿರವಾಗಿದೆ. ಆದ್ದರಿಂದ ಕಡಿಮೆ ಪ್ರಶ್ನೆ ಎಲ್ಲಿ ಬರುತ್ತದೆ. ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎನ್. ಯೋಗೀಶ್‌ಭಟ್ :– ದಯವಿಟ್ಟು ತಾವು ತರಬೇತಿಗೆ ಎಷ್ಟು ಹಣ ಕೊಟ್ಟಿದ್ದೀರಿ ಮತ್ತು ಎಂ. ಇ. ಗೆ ಎಷ್ಟು ಹಣ ಕೊಟ್ಟಿದ್ದೀರಿ ಎಂಬ ಬಗ್ಗೆ ತಾವು ಗಮನಿಸಬೇಕು.

ಶ್ರೀ ಪಿ. ಜಿ. ಆರ್ ಸಿಂಧ್ಯಾ :– ನಾನು ಅದನ್ನು ಕೊಡುತ್ತೇನೆ.

ಶ್ರೀ ಎನ್. ಯೋಗೀಶ್‌ಭಟ್ :– ಅದೇ ರೀತಿಯಲ್ಲಿ ಕರಕುಶಲಕರ್ಮಿಗಳಿಗೆ ಸಂಬಂಧಪಟ್ಟಂತೆ ಯೋಜನೆ ಇದೆ. ವಿಶೇಷವಾಗಿ ಚಿನ್ನ – ಬೆಳ್ಳಿಗೆ ಸಂಬಂಧ ಪಟ್ಟಂತೆ ವಿಶೇಷವಾಗಿ ಇರುವಂಥ ಈ ಒಂದು ಕ್ಷೇತ್ರದಲ್ಲಿ ಇರುವಂಥ ವಿಶ್ವ ಕರ್ಮ ಸಮಾಜ ಹಾಗೂ ಇನ್ನಿತರ ಸಮಾಜದಲ್ಲಿರುವಂಥ ಈ ಒಂದು ಕರಕುಶಲಕರ್ಮಿಗಳು ಯಾರಿದ್ದಾರೆ ಅವರಿಗೂ ಕೂಡ ಇಂಡಸ್ಟ್ರಿಯಲೈಸ್‌ಗೆ ಕೊಡು ವಂಥ ಸ್ಥಾನಮಾನ ಕೊಡುವ ಮೂಲಕ ಒಂದು ವಿಶೇಷವಾದಂಥ ನಿಗಮವನ್ನು ಮಾಡಿದಲ್ಲಿ ಅವರಿಗೆ ಹೆಚ್ಚು ಲಾಭವಾಗುತ್ತದೆ ಎಂದು ಹೇಳುತ್ತೇನೆ. ಸಣ್ಣ ಕೈಗಾರಿ ಕೆಗಳಿಗೆ ಸಂಬಂಧಪಟ್ಟಂತೆ ಸುಮಾರು 3 ಲಕ್ಷದ 16 ಸಾವಿರದಷ್ಟು ಸಣ್ಣ ಕೈಗಾರಿ ಕೆಗಳ ಬಗ್ಗೆ, ಅಂದರೆ ಒಟ್ಟು 3,21,676 ಸಣ್ಣ ಪ್ರಮಾಣದ ಕೈಗಾರಿಕೆಗಳ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ಆದರೆ ಎಷ್ಟು ನಷ್ಟದಲ್ಲಿವೆ. ಎಷ್ಟು ಬಂದ್ ಆಗಿವೆ ಎನ್ನುವುದರ ಬಗ್ಗೆ ಏನೂ ಉಲ್ಲೇಖ ಮಾಡಿಲ್ಲ. ಹತ್ತಿರ ಹತ್ತಿರ 50 ಪ್ರತಿಶತ ಸಣ್ಣ ಕೈಗಾರಿಕೆಗಳು ಹೊಡೆತ ತಿಂದಿವೆ. ಬಂದ್ ಆಗಿವೆ. ನಷ್ಟದಲ್ಲಿ ಇವೆ. ಇವುಗಳಿಗೆ ಕಾಯಕಲ್ಪ ಕೊಡುವಂಥ ನಿಟ್ಟಿನಲ್ಲಿ ಏನು ಕ್ರಮಗಳನ್ನು ತಾವು ತೆಗೆದುಕೊಂಡಿದ್ದೀರಿ. ನಾನು ಸನ್ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ಕನಿಷ್ಠ ಇನ್‌ಫ್ರಾಸ್ಟ್ರಕ್ಚರ್‌ಗೆ ಸಂಬಂಧಪಟ್ಟಂತೆ ಬೇರೆ ರಾಜ್ಯಗಳು ಏನು ಲಾಭವನ್ನು ಮಾಡಿಕೊಂಡಿವೆ ವಿಶೇಷವಾಗಿ ಮೊನ್ನೆ ಸನ್ಮಾನ್ಯ ದೇವೇಗೌಡರವರು ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಭೇಟಿ ಮಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು, 500 ಕೋಟಿ ರೂಪಾಯಿಯಷ್ಟು

ಹಣವನ್ನು ಮಹಾರಾಷ್ಟ್ರದಲ್ಲಿ ಶರದ್ ಪವಾರ್ ಮೂಲಕ ಆ ಹಣವನ್ನು ತರಲಾಗಿದೆ. ಅದರಲ್ಲೂ ವಿಶೇಷವಾಗಿ ಸಕ್ಕರೆ ಕಾರ್ಖಾನೆಗಳಿಗೆ ಶಕ್ತಿಯನ್ನು ಕೊಡುವ ದೃಷ್ಟಿಯಿಂದು. ಆದರೆ ನಮ್ಮ ರಾಜ್ಯದಲ್ಲಿ ಇದನ್ನೇನು ತರುವುದಕ್ಕೆ ಆಗಿಲ್ಲವೆಂದು ಹೇಳಿದರು. ನಾನು ಇದೇ ಮಾತನ್ನು ಸ್ಕೀಮ್‌ಗೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೇನೆ. ನಮ್ಮಲ್ಲಿರುವಂತಹ ಇನ್‌ಫ್ರಾಕ್ಚರ್ ಫೆಸಿಲಿಟಿಸ್ಸನ್ನು ಅನ್ನು ಸ್ಟ್ರೆಂಥನ್ ಮಾಡುವ ದೃಷ್ಟಿಯಿಂದ ಈ ಎಸೆಟಿಕ್ ಸ್ಕೀಮ್‌ನಲ್ಲಿ ಹೆಚ್ಚಿನ ಹಣವನ್ನು ಪಡೆದುಕೊಳ್ಳುವಂತಹ ನಿಟ್ಟಿನಲ್ಲಿ ತಮ್ಮ ಕಡೆಯಲ್ಲಿ ಯೋಜನೆಗಳು ಇದರಲ್ಲೂ ಕೂಡ ಅನುಷ್ಠಾನಕ್ಕೆ ಬಂದಿಲ್ಲ. ಕಳೆದ ಒಂದು ವರ್ಷದಿಂದ ನಮ್ಮಲ್ಲಿ ಬೈಕಂಪಾಡಿ ಕ್ಷೇತ್ರದಲ್ಲಿ ಇವತ್ತು ಎಷ್ಟು ದುಃಸ್ಥಿತಿ ಎಂದರೆ ಅಲ್ಲಿ ರಸ್ತೆಯಲ್ಲಿ ಹೋಗುವ ಹಾಗೆ ಇಲ್ಲ. ರಾತ್ರಿ ದೀಪಗಳ ವ್ಯವಸ್ಥೆ ಇಲ್ಲ. ನೀರಿನ ಸೌಲಭ್ಯಗಳು ಇಲ್ಲ. ಡ್ರೈನೇಜ್ ವ್ಯವಸ್ಥೆಗಳಿಲ್ಲ. ಅಲ್ಲಿ ಏನಾಗಿದೆ ಎಂದರೆ ಹಂತ ಹಂತವಾಗಿ ಇರುವಂತಹ ಶೆಡ್ಡುಗಳು ಗೋಡೌನ್‌ಗಳಾಗಿ ಕನ್‌ವರ್ಟ್ ಆಗುತ್ತಿದೆ. ಗೋಡೌನ್‌ಗಳಾಗಿ ಒಂದು ರೀತಿಯಲ್ಲಿ ನಿಸ್ತೇಜವಾಗಿರುವಂತಹ ವಾತಾವರಣ ಉಂಟಾಗಿದೆ. ಎಲ್ಲ ಕಡೆಗಳಲ್ಲಿ ತಾವು ಇಂಡಸ್ಟ್ರಿಯಲ್ಲಿ ಟೌನ್‌ಶಿಪ್ ಅನ್ನು ಮಾಡಿದಲ್ಲಿ ಹೆಚ್ಚಿನ ಲಾಭವನ್ನು ಅದರಲ್ಲಿ ಖಂಡಿತ ಆಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ತಮಗೆ ಇಚ್ಛೆ ಇದೆ. ಅದನ್ನು ಅನುಷ್ಠಾನಕ್ಕೆ ತರುವಂತಹ ಕಾರ್ಯ ಮಾಡಬೇಕಾಗಿದೆ. ಮತ್ತು ವಿಶೇಷವಾಗಿ ನನ್ನ ವಿನಂತಿ ಏನೆಂದರೆ ಒನ್ ಟೈಂ ಸೆಟ್ಲ್‌ಮೆಂಟ್‌ಗೆ ಸಂಬಂಧಪಟ್ಟ ಹಾಗೆ ಕೆಎಸ್‌ಎಫ್‌ಸಿ ಇರಬಹುದು. ಕೆಐಡಿಸಿ ಕಡೆಯಿಂದ ಇರಬಹುದು. ಇವರಲ್ಲೆ ಕೋಆರ್ಡಿನೇಷನ್ ಇಲ್ಲದೆ ಏನು ತೊಂದರೆಗಳು ಆಗುತ್ತಿದೆ ಎನ್ನುವುದರ ಬಗ್ಗೆ ಕೂಡ ತಮ್ಮ ಗಮನಕ್ಕೆ ನಾನು ಕಳೆದ ಬಾರಿ ತಂದಿದ್ದೇನೆ. ಸೌಪರ್ಣಿಕ ಬೇವರೇಜರ್‌ಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ತಾವು ಮಂಗಳೂರಿಗೆ ಬಂದಂತಹ ಸಂದರ್ಭದಲ್ಲಿ ತಮಗೆ ವೈಯಕ್ತಿಕವಾಗಿ ಮನವಿ ಕೊಟ್ಟಿಲ್ಲ ಒಬ್ಬ ಎನ್‌ಆರ್‌ಐ ಇಂಗ್ಲೆಂಡ್ ದೇಶದಲ್ಲಿ ಕೆಲಸ ಮಾಡುತ್ತಿದ್ದು ಲಂಡನ್‌ನಿಂದ ಭಾರತಕ್ಕೆ ಬಂದು ಅದು ಮಂಗಳೂರಿನಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಿ, ಯಾವರೀತಿ ಕೋಕಕೋಲ ಕಂಪನಿಗೆ ತೊಂದರೆ ಇತ್ತು. ಈ ಆರ್ಡರ್‌ನಲ್ಲಾದರೂ ಅವರಿಗೆ ರಿಲೀಫ್ ಸಿಗಬೇಕು ಎಂದು ಹೇಳಿ ಅವರು ಮಾಡಿದಂತಹ ಎಲ್ಲಾ ಬವಣೆಗಳನ್ನು ತಮಗೆ ಮನಸ್ಸಿಗೆ ಗೊತ್ತಾಗುವಂತಹ ಹೇಳಿದರೂ ಕೂಡ ಇವತ್ತಿನ ತನಕ ಅದಕ್ಕೆ ಸಂಬಂಧಪಟ್ಟ ಯಾವ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲವೆಂದು ಹೇಳುವಂತಹ ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತಿದ್ದೇನೆ. ನಂತರ ತಾವು ಸಲಹಾ ಸಮಿತಿಗಳ ಬಗ್ಗೆ ಯೋಚನೆ ಮಾಡಿ ಈ ಸಲಹಾ ಸಮಿತಿಗಳು ಜಿಲ್ಲಾ ಮಟ್ಟದಲ್ಲಿ ಕೂಡ ಇರುವಂತಹ ಅವಶ್ಯಕತೆ ಇದೆ. ಈ ಸಲಹಾ ಸಮಿತಿ ಮೂಲಕ ಯಾವ ರೀತಿಯಲ್ಲಿ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಿದೆ. ಈ ನಿಟ್ಟಿನಲ್ಲಿ ಕೂಡ ಯೋಚನೆ ಮಾಡುವಂ

ತಹ ಅವಶ್ಯಕತೆ ಇದೆ. ಮತ್ತು ಸನ್ಮಾನ್ಯ ಸಚಿವರಲ್ಲಿ ಒಂದು ವಿಶೇಷವಾದಂತಹ ವಿನಂತಿ ಏನೆಂದರೆ, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟಂತಹ ಮ್ಯಾನುಫ್ಯಾಕ್ಚರ್ ಗೂಡ್ಸ್ ಯಾವುದಿದೆ. ಅದರ ಮಾರುಕಟ್ಟೆಗೆ ಸಂಬಂಧಪಟ್ಟಿದ್ದು. ಇವತ್ತು ಕೆಎಸ್‌ಆರ್‌ಟಿಸಿ ಇರಬಹುದು – ಇನ್ನಿತರ ಸಂಸ್ಥೆಗಳು ಇರಬಹುದು, ಅವರು ಪರ್ಚೇಸ್ ಮಾಡುವಂತಹ ಸಾಮಗ್ರಿಗಳು ಅದು ಸ್ಪ್ರಿಂಗ್ ಲೇಫ್ ಇರಬಹುದು ಅಥವಾ ರಬ್ಬರ್‌ಗೆ ಸಂಬಂಧಪಟ್ಟಿದ್ದು ಇರಬಹುದು. ಅದನ್ನು ಇವತ್ತು 18 1/2 ಪರ್ಸೆಂಟ್ ಹೆಚ್ಚಿನ ಬೆಲೆಯಲ್ಲಿ ಪಕ್ಕದ ರಾಜ್ಯದಿಂದ ಖರೀದಿ ಮಾಡುತ್ತಿದ್ದಾರೆ. ಅತೀ ಕಡಿಮೆ ಬೆಳೆಯಲ್ಲಿ ನಾವು ಕೊಡುವುದಿದ್ದರೂ ಕೂಡ, ನಮ್ಮ ಕರ್ನಾಟಕದಲ್ಲಿ ಅಂತಹ ಇಂಡಸ್ಟ್ರೀಸ್‌ಗಳು ಇದ್ದರೂ ಕೂಡ ಅವುಗಳಿಗೆ ಸ್ಥಾನಮಾನಗಳು ಸಿಗುತ್ತಿಲ್ಲ. ನಾನು ಒಂದು ವಿಶೇಷವಾದಂತಹ ವಿನಂತಿ ಮಾಡುತ್ತಿದ್ದೇನೆ. ನಮ್ಮ ಪಕ್ಕದ ರಾಜ್ಯಗಳಲ್ಲಿ ಯಾವ ರೀತಿ ಕಾರ್ಯ ನಿರ್ವಹಿಸುತ್ತಾರೆವೆಂಬುದನ್ನು ಗಮನಿಸಬೇಕು. ನಮ್ಮ ಕರ್ನಾಟಕ ರಾಜ್ಯದಲ್ಲಿ ಇರುವಂತಹ ಎಲ್ಲಾ ಕೈಗಾರಿಕಾ ಹಾಗೂ ವಿವಿಧ ಇಲಾಖೆಗಳು ಯಾವರೀತಿ ಕಾರ್ಯನಿರ್ವಹಿಸುತ್ತಾರೆ ಎನ್ನುವುದನ್ನು ಗಮನಿಸಬೇಕು ನಮ್ಮ ಕರ್ನಾಟಕ ರಾಜ್ಯದಲ್ಲಿ ಇರುವಂತಹ ಎಲ್ಲಾ ಕೈಗಾರಿಕಾ ಹಾಗೂ ವಿವಿಧ ಇಲಾಖೆಗಳು ಯಾವರೀತಿ ಖರೀದಿ ಮಾಡುತ್ತಿದ್ದಾರೆ. ಅವರ ರಿಕ್ವಿಜಿಷನ್ ಏನು ಎನ್ನುವುದರ ಬಗ್ಗೆ ಅದಕ್ಕೆ ಸಂಬಂಧಪಟ್ಟ ಇನ್‌ಪುಟ್ಸ್ ಮತ್ತು ಅದಕ್ಕೆ ಬೇಕಾದಂತಹ ಮಾಹಿತಿಗಳನ್ನು ಪಡೆದುಕೊಂಡಲ್ಲಿ ತಾವು ಅದನ್ನು ಈಟರ್ ಮಾಡುವಂತಾದ್ದು ಬುಲೆಟಿನ್ ಮೂಲಕ ಎಲ್ಲಾ ಕೈಗಾರಿಕೆಗಳಿಗೆ ಇಂತಿಂತಹ ರಿಕ್ವಿಜಿಷನ್ ಇದೆ ಎಂದು ತಾವು ಮಾಹಿತಿಗಳನ್ನು ಕೊಟ್ಟಿಲ್ಲ. ಅದರಿಂದ ಹೆಚ್ಚು ಲಾಭವಾಗುತ್ತದೆ ಎನ್ನುವಂತಹ ಅಂಶವನ್ನು ಕೂಡ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ ಅದರಲ್ಲಿ ವಿಶೇಷವಾಗಿ, ಫುಡ್ ಪಾರ್ಕ್‌ಗೆ ಸಂಬಂಧಪಟ್ಟ ಹಾಗೆ ತಾವು ಯೋಚನೆಯನ್ನು ಹೇಳಿ, ಬಜೆಟ್‌ನಲ್ಲಿ ಉಲ್ಲೇಖ ಮಾಡಿದಿರಿ ಅದಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಜಿಲ್ಲೆಯಲ್ಲಿ ಅದರ ಜೊತೆಗೆ ಜವಳಿ ಉದ್ಯಮಕ್ಕೆ ಸಂಬಂದಪಟ್ಟಂತೆ ಕೂಡ ತಾವು ಸಹಾಯ ಮಾಡಬೇಕೆಂದು ಹೇಳುತ್ತಾ ವಿಶೇಷವಾಗಿ ಬೀಡಿ ಉದ್ಯಮದಲ್ಲಿ ತತ್ತರಿಸಿರುವಂತಹ ನಮ್ಮ ಜಿಲ್ಲೆ ಇವತ್ತು ಕೆಲಸವಿಲ್ಲದೆ ದುಸ್ಥಿತಿಯಲ್ಲಿರುವಂತಹ ಪರಿಸ್ಥಿತಿಯಲ್ಲಿ ಬದಲಿ ಉದ್ಯೋಗ ವನ್ನು ತರುವಂತಹ ನಿಟ್ಟಿನಲ್ಲಿ ಬಹಳ ಅವಶ್ಯ ಇದೆ. ಅದಕ್ಕೆ ತಾವು ವಿಶೇಷವಾಗಿ ಈ ಜವಳಿ ಉದ್ಯಮವಾದ ಸಿದ್ಧ ಉಡುಪುಗಳಿಗೆ ಸಂಬಂಧಪಟ್ಟಂತಹ ವಿಚಾರ ದಲ್ಲಿ ವ್ಯವಸ್ಥೆಯನ್ನು ಮಾಡುವಂತಹ ಅವಶ್ಯಕತೆ ಇದೆ. ಇನ್ನು ನಾನು ಮಾತನ್ನು ಮುಗಿಸುವ ಮುಂಚೆ ಒಂದೆರಡು ಮಾತುಗಳನ್ನು ನಾನು ವಿಶೇಷವಾಗಿ ಸಮಾಜ

ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಆಯುಕ್ತರು ಮಟ್ಟದಲ್ಲಿ ಏನು ಭ್ರಷ್ಟಾಚಾರ ನಡೆಯಿತು. ಅದೇ ನಮ್ಮ ಜಿಲ್ಲಾ ಘಟಕ ಹಾಗೂ ತಾಲ್ಲೂಕು ಘಟಕದಲ್ಲಿ ಕೂಡ ನಡೆದು ಮಕ್ಕಳಿಗೆ ಕೊಡುವಂತಹ ಮೀನು, ಮಾಂಸ, ಮೊಟ್ಟೆ ಇದನ್ನು ಕೂಡ ಹೊಡೆದುಕೊಂಡರು. ಅದರಲ್ಲಿ ಕೂಡ ಹೊಡೆದುಕೊಂಡು ತಿನ್ನುವಂತಹ ವರ್ತನೆ ಇರುವ ಅಧಿಕಾರಿಗಳು ಇರುವಂತಹ ಸಂದರ್ಭದಲ್ಲಿ ಇವತ್ತು ಅಲ್ಲಿ ಮಕ್ಕಳು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ನಮ್ಮಲ್ಲಿ ಮಂಗಳೂರು ಇವತ್ತು ಪರಿಶಿಷ್ಟ ವಿದ್ಯಾರ್ಥಿನಿಯರು ಕುದಿಗೋಳ್ ರಂಗರಾವ್ ಎಂದು ಅವರಿಗೆ ಸಂಬಂಧಪಟ್ಟಿರುವಂತಹ ಹಾಸ್ಟೆಲ್‌ನಲ್ಲಿ ಅವರಿಗೆ ಕೊಡಬೇಕಾಗಿರುವಂತಹ ಆಹಾರದಲ್ಲಿ ಹುಳುಗಳು ಬರುತ್ತಿದೆ ಎಂದು ಹೇಳುವಂತಹ ಸಂಗತಿ ಇದೆ. ಇದರ ಬಗಗೆ ತನಿಖೆ ನಡೆಸಬೇಕೆಂದು ಹೇಳಿದರೆ ಅದಕ್ಕೆ ಕೊಟ್ಟಿರುವಂತಹ ಉದ್ಧಟತನದ ಉತ್ತರ ಕೊಟ್ಟಿದ್ದು ಇದರ ಬಗ್ಗೆ ಪ್ರಿವಿಲೀಜ್ ಮೂವ್ ಮಾಡಬಹುದು. ಅಂತಹ ರೀತಿಯಲ್ಲಿ ತಪ್ಪು ಉತ್ತರಗಳನ್ನು ಇಲ್ಲಿ ಕೊಟ್ಟಿದ್ದಾರೆ. ಇನ್ನೊಂದು ಕಡೆಯಲ್ಲಿ ಮಲೇರಿಯಾ ಕೇಸುಗಳು ಇಲ್ಲವೆಂದು ಕೊಟ್ಟಿದ್ದಾರೆ ನನಗೆ ಆಶ್ಚರ್ಯವಾಗುವುದೇನೆಂದರೆ ನಾನು ಇಲ್ಲಿ ಸದನದಲ್ಲಿ ರೈಜ್ ಮಾಡಿದನಂತರ ಅಲ್ಲಿ ಹಿರಿಯ ಅಧಿಕಾರಿಗಳು ಇನ್ಸ್‌ಪೆಕ್ಷನ್‌ಗೆ ಹೋದರು. ಅವರು ಇನ್ಸ್‌ಪೆಕ್ಷನ್‌ಗೆ ಹೋದಂತಹ ಸಂದರ್ಭದಲ್ಲಿ ಈ ಮಕ್ಕಳನ್ನು ಕೂಡಿ ಹಾಕಿ ಬೀಗ ಹಾಕಿ ಅಲ್ಲಿಯೂ ಯಾರೂ ಕೂಡ ಕೆಮ್ಮಬಾರದು ಎಂದು ಹೇಳಿ ಸೂಚನೆ ಕೊಟ್ಟಿರುವುದು ಇಂತಹ ಒಂದು ದುಃಸ್ಥಿತಿ ಕೂಡ ಅಲ್ಲಿ ನಡೆದಿದೆ. ಮಕ್ಕಳಿಗೆ ಕೊಡುವಂತಹ ಆಹಾರವನ್ನು ತಿನ್ನುವವರು ಯಾರಿದ್ದಾರೆ. ಅವರು ರಾಕ್ಷಸರು ಎಂದು ಹೇಳಬೇಕೋ ಏನು ಹೇಳಬೇಕೋ ಗೊತ್ತಿಲ್ಲ. ಅಂತಹ ಅಧಿಕಾರಿಗಳನ್ನು ಅವರು ಡೈರೆಕ್ಟರ್ ಇರಬಹುದು. ಯಾರೇ ಇರಬಹುದು ಅವರನ್ನು ತಕ್ಷಣ ಸಸ್ಪೆಂಡ್ ಮಾಡಿ ಎಂದು ಹೇಳುವಂತಹ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಿ, ಮಾನ್ಯ ಅಧ್ಯಕ್ಷರೆ, ಇನ್ನೂ ಬೇರೆ ಸಂಗತಿಗಳನ್ನು, ಹೇಳುವುದಕ್ಕೆ ಇಚ್ಛೆ ಇದ್ದರೂ ಕೂಡ ಸಮಯಾವಕಾಶ ಇಲ್ಲದ ಕಾರಣ ತಾವು ಅವಕಾಶ ಮಾಡಿಕೊಟ್ಟಿದ್ದಕ್ಕೆ ವಂದನೆಯನ್ನು ಸಲ್ಲಿಸುತ್ತಾ ನಾನು ಮಾತನ್ನು ಮುಕ್ತಾಯ ಮಾಡುವ ಮೊದಲು ಈ ಓ.ಟಿ.ಎಸ್ ಬಗ್ಗೆ ಮಾನ್ಯ ಸಿಂಧ್ಯಾರವರು ವಿಶೇಷವಾದಂತಹ ಕಾಳಜಿಯನ್ನು ವಹಿಸಬೇಕು ಅದು ಸೆಟ್ಲಿಮೆಂಟ್ ಆಗುವಂತಹ ನಿಟ್ಟಿನಲ್ಲಿ ತಮ್ಮ ಪ್ರಯತ್ನವನ್ನು ಮಾಡಬೇಕೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಅಧ್ಯಕ್ಷರು :- ಈಗ ಬಸವರಾಜ್ ರಾಯರೆಡ್ಡಿಯವರು ತಾವು 15 ನಿಮಿಷದಲ್ಲಿ ಮುಗಿಸಬೇಕು ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ) :- ಮಾನ್ಯ ಅಧ್ಯಕ್ಷರೇ, ಸಹಕಾರ ಮತ್ತು ಕೈಗಾರಿಕೆ ವಸತಿ ಮತ್ತು ಸಮಾಜಕಲ್ಯಾಣ ಇಲಾಖೆಗಳಿಗೆ ಸಂಬಂಧಿಸಿದಂತೆ ಬೇಡಿಕೆಗಳಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾಕ್ಕಾಗಿ ವಂದನೆಗಳು ಈಗಾಗಲೇ ಹಲವು ಬಾರಿ ತಮ್ಮ ಗಮನಕ್ಕೆ ನಾನು ಮತ್ತು ಎಲ್ಲಾ ಸದಸ್ಯರು ಗಮನಕ್ಕೆ ತಂದಿದ್ದು, ಯಾವ ಇಲಾಖೆಯ ಬೇಡಿಕೆಗಳನ್ನು ಇಲ್ಲಿ ಮಾನ್ಯ ಮಂತ್ರಿ ಗಳು ಮಂಡಿಸುತ್ತಾರೆ. ಸದಸ್ಯರಿಗೆ ಕೇವಲ ಹಿಂದಿನ ವರ್ಷದ ಆನ್ಯೂಯಲ್ ರಿಪೋರ್ಟ್‌ಅನ್ನು ಮಾತ್ರ ಕೊಡುತ್ತಾರೆ. ಆದರೆ ಬೇಡಿಕೆಗಳು ಏನಿದೆ ಅದರ ಬಗ್ಗೆ ಆಕ್ಷನ್ ಪ್ಲಾನ್ ಮತ್ತು ಪರ್‌ಫಾರ್ಮೆನ್ಸ್ ಆಫ್ ಬಜೆಟ್ ಬಗ್ಗೆ ಈ ವರ್ಷ ಏನು ಮಾಡುತ್ತೇವೆ. ಎಂದು ಸದಸ್ಯರಿಗೆ ತಿಳಿಸುವುದೇ ಇಲ್ಲ. ಹೀಗಾಗಿ ಬಹಳ ಕಷ್ಟ ವಾಗುತ್ತದೆ. ನಾನು ಈಗಾಗಲೇ ತಮಗೆ ಶಿಕ್ಷಣ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ತಮಗೆ ರಿಕ್ವೆಸ್ಟ್ ಮಾಡಿದ್ದೆ. ಬೇರೆ ಬೇರೆ ಇಲಾಖೆಗಳಿಂದ ಫರ್‌ಫಾರ್ಮೆನ್ಸ್ ಆಫ್ ಬಜೆಟ್‌ಅನ್ನು ಕೊಡದೆ ಇರುವುದರಿಂದ ಸದಸ್ಯರಿಗೆ ತೊಂದರೆಯಾಗುತ್ತದೆ ಎನ್ನುವ ಮಾತನ್ನು ಹೇಳಿದೆ. ಮುಂಬರುವಂ ತಹ ದಿನಗಳಲ್ಲಿ ಕೊಡುತ್ತಾರೆ ಎಂದರೆ ಇನ್ನೂ ಯಾವ ಇಲಾಖೆಯವರು ಕೊಡಲಿಲ್ಲ. ಹೀಗಾಗಿ ಬಹಳ ಕಷ್ಟವಾಗುತ್ತದೆ. ದಯಮಾಡಿ ತಾವು ಇನ್ನು ಮುಂದೆಯಾದರೂ. ಕೂಡ ತಾವು ಮಾನ್ಯ ಮಂತ್ರಿಗಳಿಗೆ ಅಥವಾ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಇಲಾಖೆಗಳು ಡಿಮ್ಯಾಂಡ್ ಇಟ್ಟಾಗ, ಚಾಲ್ತಿ ವರ್ಷದ ಡಿಮ್ಯಾಂಡ್ ಏನಿದೆ, ಅದರ ಫರ್‌ಫಾರ್ಮೆನ್ಸ್ ಆಫ್ ಬಜೆಟ್ ಅನ್ನು ಸದಸ್ಯರಿಗೆ ಕಡ್ಡಾಯವಾಗಿ ಕೊಡಬೇಕು. ನಾನು ಕೇಳಿದೆ ಕೊಡಲಿಲ್ಲ. ಅದಕ್ಕೆ ಹೇಳಿದೆ.

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೇ, ನಿಜವಾಗಿ ಹೇಳಬೇಕೆಂದರೆ ಈ ಸಬ್ಜೆಕ್ಟ್ ಕಮಿಟಿಗಳು ಏನಿದ್ದವು ಅವುಗಳು ಇರುವುದು ಸರಿಯೆನಿಸುತ್ತದೆ. ಈ ಚರ್ಚೆಯನ್ನು ನಾವು ನೋಡಿದರೆ ಯಾರೂ ಕೂಡ ಆ ಫರ್‌ಫಾರ್ಮೆನ್ಸ್ ಆಫ್ ಬಜೆಟ್ ಅನ್ನು ಕೊಡುತ್ತಿಲ್ಲ. ಮುಂದೆ ಇವರು ಏನು ಮಾಡುತ್ತಾರೆ ಯಾರಿಗೂ ಬಂದಿಲ್ಲ. ಬೇಡಿಕೆಗಳನ್ನು ಮಾನ್ಯ ಮಂತ್ರಿಗಳು ಇಡುತ್ತಾರಲ್ಲ. ಏನು ಬೇಡಿಕೆ ಎನ್ನುವುದೇ ಗೊತ್ತಿಲ್ಲ. ನಮಗೆ ಯಾರಿಗೂ ಕಳುಹಿಸಿಯೇ ಇಲ್ಲ. ಕೇವಲ ಹೋದ ವರ್ಷದ್ದು ಏನಾಗಿದೆ ಎಂದು ಅದರ ಬಗ್ಗೆ ಕಳುಹಿಸಿಬಿಡುತ್ತಾರೆ. ಆ ವರದಿ ಬಿಟ್ಟು ಇನ್ನೊಂದು ಏನೂ ಕಳುಹಿಸಿಲ್ಲ. ಕಳುಹಿಸಬೇಕು ಆ ಬೇಡಿಕೆ ಏನು ಎನ್ನುವುದೇ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ As for as industries department & infrastructure is concerned.

ನಾನು ಮಾನ್ಯ ಗೌರವಾನ್ವಿತ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಮಂಗಳವಾರ ಇದು ಸೋಮವಾರ ಪರ್‌ಫಾರ್ಮೆನ್ಸ್ ರಿಪೋರ್ಟ್ ಅನ್ನು ಕೊಟ್ಟಿದ್ದೇವೆ. ತಮ್ಮ ಆಫೀಸಿಗೆ ಸಬ್‌ಮಿಟ್ ಮಾಡಿದ್ದೇವೆ. ತಮಗೆ ಬೇಕಾದರೆ ನಾನು ಕಾಪಿಯನ್ನು ಕಳುಹಿಸಿಕೊಡುತ್ತೇನೆ ಮತ್ತು ನಮ್ಮ ಡಿಪಾರ್ಟ್‌ಮೆಂಟ್ ರಿಪೋರ್ಟ್ ಏನಿದೆ. ಅದನ್ನು well in advance we have given and along with that, we have also given the performance budget.

ತಾವೇನು ಕೇಳುತ್ತಿದ್ದೀರಿ ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ವಿರೋಧಪಕ್ಷದಲ್ಲಿ ನಾನೂ ಕುಳಿತುಕೊಂಡು ಹತ್ತು ವರ್ಷ ಕೆಲಸ ಮಾಡಿರುವುದರಿಂದಾಗಿ ಪರ್ ಫಾರ್ಮೆನ್ಸ್ ಬಜೆಟ್ ಇಲ್ಲದೆ ಹೋದರೆ ಮಾತನಾಡುವುದು ಕಷ್ಟ ಮಾನ್ಯ ರಾಯರೆಡ್ಡಿಯವರ ಅನುಕೂಲಕ್ಕೆ ಬೇಕಾದರೆ ನಾನು ಕಳುಹಿಸಿಕೊಡುತ್ತೇನೆ. ನಂತರ ನೀವು ಮಾತನಾಡಬಹುದು. I have already sent

ಶ್ರೀ ವಾಟಾಳ್ ನಾಗರಾಜ್ :- ಬಂದಿದೆ.

ಶ್ರೀ ಎಸ್. ಎಸ್. ಪಾಟೀಲ್ :- ಸಹಕಾರ ಇಲಾಖೆಯವರು ಕಳುಹಿಸಿದ್ದಾರೆ ಹೇಗೆ ಕೇಳಿ?

ಶ್ರೀ ಬಸವರಾಜ್ ರಾಯರೆಡ್ಡಿ :- ಬಹುತೇಕ ಇಲಾಖೆಗಳು ಕಳುಹಿಸಿಲ್ಲ.

ಶ್ರೀ ಎಸ್. ಎಸ್. ಪಾಟೀಲ್ :- ಹೋದ ಸಲ ಕಳುಹಿಸಲಿಲ್ಲ. ಇನ್ನು ಮುಂದೆಯಾದರೂ ಕಳುಹಿಸಬೇಕು.

ಶ್ರೀ ಬಸವರಾಜ್ ರಾಯರೆಡ್ಡಿ :- ಇಲ್ಲ ಅವರ ಇಲಾಖೆಯದು ಬಂದಿದೆ, ಬೇರೆ ಇಲಾಖೆಗಳದ್ದು ಬಹಳಷ್ಟು ಬಂದಿಲ್ಲವೆಂದು ಹೇಳಿದೆ.

ಶ್ರೀ ಎಸ್. ಎಸ್. ಪಾಟೀಲ್ :- ನಿಮ್ಮ ಇಲಾಖೆಯದು ಬಂದಿದೆ ಎಂದರೆ ಸಂತೋಷವಾಯಿತು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಸಿಂಧ್ಯಾ ಇಲಾಖೆಯದು ನಮಗೆಲ್ಲಾ ಬಂದಿದೆ. ಅದು ನಷ್ಟ.

ಶ್ರೀ ಬಸವರಾಜ್ ರಾಯರೆಡ್ಡಿ :- ನಿನ್ನೆ ನಿಮಗೆ ಕೊಟ್ಟಿದ್ದಾರೆ. ನಮಗ್ಯಾರಿಗೂ ಕೊಟ್ಟಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ :- ಫೈಲ್ ಕಳುಹಿಸಿದ್ದಾರೆ. ಬಿಡಿ.

ಶ್ರೀ ಬಸವರಾಜ್ ರಾಯರೆಡ್ಡಿ :- ಮಾನ್ಯ ಅಧ್ಯಕ್ಷರೇ, ಕೈಗಾರಿಕಾ ಇಲಾಖೆಯವರು ಕಳುಹಿಸಿಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದರು. ಆದರೆ ಸದಸ್ಯರಿಗೆ ಬಂದಿಲ್ಲ. ಅದನ್ನು ಕಳುಹಿಸಿಕೊಡುವಂತಹ ವ್ಯವಸ್ಥೆಯಾಗಬೇಕು. ನೀವು ಕಳುಹಿಸಿದ್ದರೂ ಕೂಡ ಲೆಜಿಸ್ಲೇಚರ್‌ರವರು ಕಳುಹಿಸಬೇಕಲ್ಲ.

ಶ್ರೀ ಎಸ್. ಎಸ್. ಪಾಟೀಲ್ :- ಇದು ಏನಾಗಿದೆ. ಎಂದರೆ ಆಡಳಿತ ಪಕ್ಷದವರಿಗೆ ಇದು ಬೇಕಾಗಿಲ್ಲ ಎಂದು ತಿಳಿದುಕೊಂಡಿದ್ದಾರೆ. ಏನೋ ಅವರಿಗೆ ಹೋಗಿರಬಹುದು. ಇಲ್ಲವೆಂದು ಹೇಳುವುದಿಲ್ಲ. ಆದರೆ ನಮಗೂ ಕೂಡ

ಬೇಕಾಗುತ್ತದೆ. ನಾವೂ ಕೂಡ ಮಾತನಾಡಬೇಕಾಗುತ್ತದೆ. ನಮ್ಮ ಸರ್ಕಾರದ ಬಜೆಟ್‌ನ್ನು ನಾವು ಸ್ವಾಗತ ಮಾಡಿ ಮಾತನಾಡಬೇಕಾಗುತ್ತದೆ. ಬರೀ ಟೀಕೆ ಮಾಡುವುದನ್ನು ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ.

ಶ್ರೀ ಬಸವರಾಜ್ ರಾಯರೆಡ್ಡಿ :- ಮಾನ್ಯ ಅಧ್ಯಕ್ಷರೇ, 2004-05 ಮತ್ತು 2006 ನೇ ಸಾಲಿನಲ್ಲಿ ಕರ್ನಾಟಕದಲ್ಲಿ ಮಾನ್ಯ ಪಿ. ಜಿ. ಆರ್. ಸಿಂಧ್ಯಾರವರು ಇಂಡಸ್ಟ್ರಿ ಮಿನಿಸ್ಟರ್ ಆದಮೇಲೆ ಕೆಲವೊಂದು ಮೆಗಾ ಪ್ರಾಜೆಕ್ಟ್ ಬಗ್ಗೆ ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಬಗ್ಗೆ ಆಸಕ್ತಿಯನ್ನು ವಹಿಸಿ ಕಳೆದ ಸಾಲಿನಲ್ಲಿ ಈ ಫಾರಿನ್ ಡೈರಕ್ಟ್ ಇನ್‌ವೆಸ್ಟ್‌ಮೆಂಟ್ ಏನು ಕಡಿಮೆಯಾಗಿತ್ತು, ಅದನ್ನು ಹೆಚ್ಚು ಮಾಡುವಂತಾದ್ದಕ್ಕೆ ಮತ್ತು ಫಾರಿನ್ ಇನ್‌ವೆಸ್ಟರ್‌ಗಳನ್ನು ಆಕರ್ಷಣೆ ಮಾಡಿ. ಹೆಚ್ಚು ಉದ್ದಿಮೆಗಳನ್ನು ಸ್ಥಾಪನೆ ಮಾಡುವಂಥಾದ್ದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಅದಕ್ಕೆ ನಾನು ಮಾನ್ಯ ಮಂತ್ರಿಯವರನ್ನು ಅಭಿನಂದಿಸುತ್ತಾ ಇವತ್ತು 2004-05 ನೇ ಸಾಲಿನಲ್ಲಿ ತಾವು ಮೆಗಾ ಪ್ಲಾನ್‌ಗೆ, ಲಾರ್ಜ್ ಅಂಡ್ ಮೀಡಿಯಮ್ ಇಂಡಸ್ಟ್ರಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗೆ ಈ ನಮ್ಮ ರಾಜ್ಯದಲ್ಲಿ ಏನು ಉತ್ತೇಜನವನ್ನು ಕೊಟ್ಟಿದ್ದೀರಿ. ಆ ಉತ್ತೇಜನದ ಸಲುವಾಗಿ ಮೆಗಾ ಪ್ಲಾನ್‌ನಲ್ಲಿ ಸುಮಾರು 32 ಸಾವಿರ ಕೋಟಿ ರೂಪಾಯಿಗಳ ತಾವು ಈ ಯೋಜನೆಗೆ ಅನು ಮೋದನೆಯನ್ನು ನೀಡಿದ್ದೀರಿ. ಈಗಾಗಲೇ ಇದಕ್ಕೆ ಅನುಮೋದನೆಯನ್ನು ನೀಡಿ ಸುಮಾರು 8-10 ತಿಂಗಳುಗಳಾಯಿತು. ಅದರಲ್ಲಿ ಬಹುತೇಕ ಶೇ. 50 ರಿಂದ ಶೇ. 60 ರಷ್ಟು ಈ ಮೆಗಾ ಪ್ಲಾನ್‌ನಲ್ಲಿ ಮಂಗಳೂರು ರಿ ಫೈಂಡ್ರಿಯಾವರದೇ ಆಗಿದೆ. ಬೇರೆ ಬೇರೆ ವಿವಿಧ ಇಂಡಸ್ಟ್ರೀಗಳಿಗೆ ಮಂಗಳೂರು ರಿ ಫೈಂಡ್ರಿಯವರದೇ ಮೇಜರ್ ಷೇರ್ ಇದೆ. ಅದಕ್ಕೆ ತಾವು ಯಾವ್ಯಾವ ಉದ್ದಿಮೆಗಳಿಗೆ ಒಪ್ಪಿಗೆಯನ್ನು ನೀಡಿದ್ದೀರಿ. ಅವುಗಳ ಕೆಲಸ ಎಷ್ಟರಮಟ್ಟಿಗೆ ಪ್ರಾರಂಭವಾಗಿದೆ. ಎಷ್ಟು ಬಂಡ ವಾಳವನ್ನು ಈಗಾಗಲೇ ಅವರು ಹೂಡಿಕೆ ಮಾಡಿದ್ದಾರೆ. ಎಷ್ಟು ಜನರಿಗೆ ಉದ್ಯೋಗವನ್ನು ಸೃಷ್ಟಿ ಮಾಡಿದ್ದಾರೆನ್ನುವುದನ್ನು ಮಾನ್ಯ ಮಂತ್ರಿಯವರು ಸದನಕ್ಕೆ ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಅದೇ ರೀತಿಯಲ್ಲಿ ಲಾರ್ಜ್ ಮೀಡಿಯಮ್ ಇಂಡಸ್ಟ್ರೀಗಳಲ್ಲೂ ಕೂಡ ಸುಮಾರು 4500 ಕೋಟಿ ರೂಪಾಯಿಗಳ ಇನ್‌ವೆಸ್ಟ್‌ಮೆಂಟ್ ಆಗಿದೆ. ಆ ಕೆಲಸಗಳು ಎಷ್ಟು ಪ್ರಾರಂಭ ಆಗಿದೆ. ಎಷ್ಟು ಜನರಿಗೆ ಉದ್ಯೋಗಾವಕಾಶ ಸಿಗುತ್ತದೆಂಬ ಬಗ್ಗೆ ಇಂಡಸ್ಟ್ರಿ ಮಂತ್ರಿಗಳು ತಿಳಿಸಬೇಕು. ಅದೇ ರೀತಿಯಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಯಲ್ಲೂ ಕೂಡ ಸುಮಾರು 400 ಕೋಟಿ ರೂಪಾಯಿಗಳ ಇನ್‌ವೆಸ್ಟ್‌ಮೆಂಟ್ ಆಗಿದೆ. ಈ ಎಲ್ಲಾ ಇಂಡಸ್ಟ್ರೀಗಳು ಪ್ರಾರಂಭವಾಗುವ ಹಂತದಲ್ಲಿ ಇದೆಯೇ ಎಂಬುದರ ವಿವರಗಳನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಕೇಳುತ್ತೇನೆ. ಇದರ ಜೊತೆಗೆ ಈ ಕರ್ನಾಟಕ ರಾಜ್ಯದಲ್ಲಿ ಏನು ಉದ್ದಿಮೆಗಳು ಸ್ಥಾಪನೆಯಾಗಿವೆ. ಈ

ಉದ್ದಿಮೆಗಳಲ್ಲಿ ಕನ್ನಡಿಗರಿಗೆ ಹೆಚ್ಚು ಉದ್ಯೋಗವಕಾಶ ಸಿಗಬೇಕೆನ್ನುವ ಶ್ರೀಮತಿ ಸರೋಜಿನಿಮಹಿಷಿಯವರ ವರದಿಯನ್ನು ಯತಾರ್ಥವಾಗಿ ಜಾರಿಗೊಳಿಸುವುದಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದೆ. ಈ ರೀತಿಯಾಗಿ ಮಾಡಿದರೂ ಕೂಡ ಬೆಂಗಳೂರು ಮಹಾನಗರದಲ್ಲಿ ಇವತ್ತು ಕನ್ನಡಿಗರಿಗೆ ಉದ್ಯೋಗಸಿಗುವುದು ಕಷ್ಟವಾಗಿದೆ.

ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಎಷ್ಟೋ ಜನರು ನಮ್ಮಲ್ಲಿ ಇಂಜಿನಿಯರ್ ಬೇರೆ ಬೇರೆ ಪದವೀಧರರು ಆಗಿದ್ದರೂ ಕೂಡ ಇವತ್ತು ಉದ್ಯೋಗದಿಂದ ವಂಚಿತರಾಗಿದ್ದಾರೆ. ಇದನ್ನು ಇನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಿದರೆ ನಮ್ಮ ಕ್ನನ್ನಡಿಗರಿಗೆ ಹೆಚ್ಚು ಉದ್ಯೋಗವಕಾಶ ಸಿಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ನಿಮ್ಮ ವರಿದಿಯ ಪ್ರಕಾರ ಈಗಾಗಲೇ ಸುಮಾರು 100 ಕ್ಕೆ ಶೇ. 90ರಷ್ಟು ಕನ್ನಡಿಗರಿಗೆ ಉದ್ಯೋಗವಕಾಶ ಸಿಕ್ಕಿದೆಯೆನ್ನುವ ಮಾತನ್ನು ಹೇಳಿದ್ದಾರೆ. ಆದರೂ ಕೂಡ ಬೆಂಗಳೂರು ನಂತರ ಮಹಾನಗರದಲ್ಲಿ ಇನ್ನು ಕನ್ನಡಿಗರಿಗೆ ಹೆಚ್ಚಿನ ಉದ್ಯೋಗವಕಾಶ ಸಿಗಬೇಕು. ಇದರ ಬಗ್ಗೆ ಇಂಡಸ್ಟ್ರೀ ಮಿನಿಸ್ಟರ್ ಆದ ಮಾನ್ಯ ಪಿ. ಜಿ.ಆರ್. ಸಿಂಧ್ಯಾರರು ಪ್ರಯುತ್ನವನ್ನು ಮಾಡುತ್ತಾರೆಂದು ಹೇಳಲಿಚ್ಚಿಸುತ್ತೇನೆ. ಇನ್ನು ಫಾರಿನ್ ಡೈರೆಕ್ಟ್ ಇನ್ವೆಸ್ಟ್‌ಮೆಂಟ್ ಅಂದರೆ ವಿದೇಶಿ ನೇರ ಬಂಡವಾಳದ ಬಗ್ಗೆ ನಾನು ಮಾತನಾಡಿಲಿಚ್ಚಿಸುತ್ತೇನೆ. ಇವತ್ತು ಒಂದು ದೇಶದಲ್ಲಿ ಪ್ರಗತಿಯಾಗಬೇಕಾದರೆ ಕೇವಲ ದೇಶದಲ್ಲಿರುವಂತಹ ಬಂಡವಾಳವನ್ನು ನಂಬಿಕೊಂಡು ಇರುವುದಕ್ಕೆ ಆಗುವುದಿಲ್ಲ. ಇವತ್ತು ಡಬ್ಲ್ಯೂ ಅಗ್ರಿಮೆಂಟ್ ಮತ್ತು ಗ್ಲೋಬಲೈಜೇಷನ್ ಈ ಎಲ್ಲಾ ವಿಚಾರಗಳು ಆರ್ಥಿಕರಂಗದಲ್ಲಿ ಬದಲಾವಣೆಯಾಗುವಂತಹ ಸಂದರ್ಭದಲ್ಲಿ ವಿದೇಶ ನೇರ ಬಂಡವಾಳ ಯೋಜನೆಗಳಿಗೆ ಸರ್ಕಾರ ಪ್ರೋತ್ಸಾಹ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಚೈನಾ ಅತ್ಯಂತ ಬಹಳ ಮುಂದೆ ಇದೆ. ಇವತ್ತು ನಮ್ಮ ದೇಶದಲ್ಲಿ ಇದುವರೆಗೂ ಎಂದರೆ ಕಳೆದ ಎರಡು ದಶಕದಲ್ಲಿ ನಮ್ಮ ದೇಶದಲ್ಲಿ ಕೇವಲ 50 ಬಿಲಿಯನ್ ಡಾಲರ್‌ಗಳಿಗಿಂತ ಹೆಚ್ಚು ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಆಗಿಲ್ಲ. ಆದರೆ, ಅದೇ ಚೈನಾ ದೇಶದಲ್ಲಿ ಕಳೆದ 20 ವರ್ಷಗಳಲ್ಲಿ ಸುಮಾರು 4000 ಬಿಲಿಯನ್ ಡಾಲರ್‍ಗಳು ಫಾರಿನ್ ಡೈರಕ್ಟ್ ಇನ್‌ವೆಸ್ಟ್‌ಮೆಂಟ್ ಆಗಿದೆ.

ಶ್ರೀ ಕೆ. ಆರ್. ರಮೇಶ್ ಕುಮಾರ್ : Are you trying to take a chance to compare the economy of China with that of India?

Sri. Basavaraja raya reddy:- Definitely, we are on par

with the...

Sri K. R. Ramesh kumar : please don't commit that with these things china has virtually taken up a finance for 50 years to build up their economy. your economy is a fissiparious economy. china can with stand the on slaught of all this. can you with stand the on slaught of FDI? What is the percentage you want to fix at?

ಫಾರಿನ್ ಡೈರೆಕ್ಟ್ ಇನ್ವೆಸ್ಟ್‌ಮೆಂಟ್ ಎಷ್ಟು ಇರಬೇಕೆಂದು ಹೇಳುತ್ತೀರಿ? You want to just through away this country?

Sri Basavaraja Raya Reddy :- It is not a question of through away.

Sri Ramesh Kumar :- You are mis - leading this House.

ಶ್ರೀ ಬಸವರಾಜ ರಾಯರೆಡ್ಡಿ :- No. I am not mis-leading the House. ಹಾಗಾದರೆ, ಚೈನಾ ದೇಶದಲ್ಲಿ 400 ಬಿಲಿಯನ್ ಡಾಲರ್‌ಗಳನ್ನು ಮಾಡಿದ್ದಾರೆ. ಹಾಗೆ ಎಂದು ಚೈನಾ ದೇಶದವರು ಪರದೇಶಕ್ಕೆ ಮಾರಿಬಿಟ್ಟಿದ್ದಾರೆಂದು ಅಲ್ಲ.

Sri Basavaraja Raya Reddy : That policy has to be checked.

-Disturbance-

ಅಧ್ಯಕ್ಷರು: ಈಗ ಅವರು ಅವರ ಮಾತನ್ನು ಹೇಳಲಿ, ನೀವು ಹೇಳುವಾಗ ನೀವು ಹೇಳಿ. ಇಲ್ಲಿ ಅವರ ಅಭಿಪ್ರಾಯಗಳು ಬೇರೆ ಇರುತ್ತವೆ. ದಯಮಾಡಿ ಮಾನ್ಯ ಬಸವರಾಜರಾಯರೆಡ್ಡಿಯವರು ಅವರ ಅಭಿಪ್ರಾಯವನ್ನು ಹೇಳಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜ ರಾಯರೆಡ್ಡಿಯವರು ಮಾತನಾಡುವಾಗ ಚೈನಾ ದೇಶದಲ್ಲಿ 400 ಬಿಲಿಯನ್ ಡಾಲರ್ ಬಂದಿದೆಯೆಂದು ಹೇಳಿದೆ ಬಂದಿದೆ, ಅದು ಯಾವ ಷರತ್ತಿನ ಆಧಾರದ ಮೇಲೆ, ಯಾವ ಕೆಲಸಕ್ಕೋಸ್ಕರಕ್ಕೆ ಬಂದಿದೆಯೇ ಮಾಹಿತಿ ಮಾನ್ಯ ಬಸವರಾಜ ರಾಯರೆಡ್ಡಿಯವರ ಬಳಿ ಇದೆಯಾ? ಇದನ್ನು ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ಅದು ಕಂಪ್ಯೂಟರ್ ಹಾರ್ಡ್‌ವೇರ್...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮ್ಮ ಹತ್ತಿರ ತಪ್ಪು ಮಾಹಿತಿ ಇದೆ. ನೀವು ಕುಳಿತು ಕೊಳ್ಳಿ. ನಾವು ಮತ್ತು ಸ್ಪೀಕರ್ ಎಲ್ಲರೂ ಚೈನಾ ದೇಶಕ್ಕೆ ಹೋಗಿದ್ದೆವು. ಅಲ್ಲಿ ಬಂದಿರತಕ್ಕಂಥ ಹಣ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೆ ಹಣವನ್ನು

ತಂದಿದ್ದಾರೆ. ಅವರು ಕಂಪ್ಯೂಟರ್, ಸಾಫ್ಟ್‌ವೇರ್‌ಗಳಿಗೂ, ಷೇರು ಮಾರ್ಕೆಟ್‌ಗೆ ಹಣವನ್ನು ಅಲ್ಲಿ ತಂದಿಲ್ಲ. ಕನ್‌ಸ್ಯೂಮರ್ ಮಾರ್ಕೆಟ್‌ಗೂ ಹಣವನ್ನು ತಂದಿಲ್ಲ. ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್ ಇಂಡಸ್ಟ್ರೀಸ್ ಅನ್ನು ಪ್ರೊಡಕ್ಷನ್ ಓರಿಯೆಂಟೆಡ್ ಇಂಡಸ್ಟ್ರೀಸ್‌ಗೆ ಹಣವನ್ನು ತಂದಿದ್ದಾರೆ. ನೀವು ಒಂದು ನಿಮಿಷ ಕೇಳಿ.

ಶ್ರೀ ಬಸವರಾಜರಾಯರೆಡ್ಡಿ: ನಾವು ಹೇಳುವಂತದ್ದನ್ನು ನೀವು ಕೇಳುವುದು ಬೇಡವಾ...

ಅಧ್ಯಕ್ಷರು: ಮಾನ್ಯ ಶ್ರೀ ರಾಮರೆಡ್ಡಿಯವರೇ, ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ : ತಾವು ತಪ್ಪು ಮಾಹಿತಿಯನ್ನು ಕೊಡಬೇಡಿ.

ಶ್ರೀ ಬಸವರಾಜರಾಯರೆಡ್ಡಿ: ತಪ್ಪು ಮಾಹಿತಿ ಅಲ್ಲ. ಅದಕ್ಕೆ ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಕಂಪ್ಯೂಟರ್ ಹಾರ್ಡ್‌ವೇರ್ ಬಗ್ಗೆ ಅಲ್ಲಿ ಎಫ್.ಡಿ.ಐ. ಆಗಿಲ್ಲವೆಂದು ಹೇಳುತ್ತಾರಲ್ಲಾ, ಚೈನಾದಲ್ಲಿ a place called Suzu ಇದೆ. ನಮ್ಮ ಇನ್ಫೋಸಿಸ್‌ನವರು ಅಲ್ಲಿ ಹಾರ್ಡ್‌ವೇರ್ ಟೆಕ್ನಾಲಜಿಯನ್ನು, ಸಾಫ್ಟ್‌ವೇರ್ ಟೆಕ್ನಾಲಜಿಯನ್ನು ಪ್ರಾರಂಭ ಮಾಡಿದ್ದಾರೆ. ಅದು ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಅಲ್ಲವಾ? Infosys has opened a office there.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ: Infosys has opened a office there, it is...

ಶ್ರೀ ಬಸವರಾಜ ರಾಯರೆಡ್ಡಿ: ನಾನು ಇದು ಉದಾಹರಣೆಯಾಗಿ ಕೊಟ್ಟಿದ್ದೇನೆ. ಇನ್ನು ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು 400 ಬಿಲಿಯನ್ ಡಾಲರ್ ಬಂದಿದೆಯೆಂದು ಹೇಳಿದ್ದೀರಿ. ಈ 400 ಬಿಲಿಯನ್ ಡಾಲರ್‌ಗಳನ್ನು ಯಾವ್ಯಾವುದಕ್ಕೆ ಉಪಯೋಗ ಮಾಡಿದ್ದಾರೆಂಬುದನ್ನು ತಾವು ಮೊದಲು ತಿಳಿದುಕೊಳ್ಳಿ.

ಅದ್ಯಕ್ಷರು: ಮಾನ್ಯ ಶ್ರೀ ರಾಮರೆಡಿಯವರೇ, ನೀವು ಹೀಗೆ ಪರಸ್ಪರ ನಿಂತುಬಿಟ್ಟರೆ ಹೇಗೆ? ಅವರಿಗೆ ಮಾತನಾಡಲು ಅವಕಾಶವನ್ನು ಕೊಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಇದು ಬಹಳ ಮಹತ್ವವಾದ ವಿಷಯವಾಗಿದೆ. ತಾವು ದಯಮಾಡಿ ಸ್ವಲ್ಪ ಗಮನವನ್ನು ಕೊಡಬೇಕು. ಇದರಲ್ಲಿ intervention ಆಗಲಿ, ಈಗ ನಮ್ಮ ದೇಶದಲ್ಲಿ ವಿಕೃತ ಆರ್ಥಿಕ ವ್ಯವಸ್ಥೆ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: 'ಮಾನ್ಯ ರಮೇಶ್‌ಕುಮಾರ್‌ರವರೇ, ಈಗ ಚೈನಾ ದೇಶದ ಬಗ್ಗೆ ಅವರು ಸ್ವಲ್ಪ ಓದಿದ್ದಾರೆ, ಅವರು ಓದಿದ ಹಾಗೆ ಅವರು ಹೇಳುತ್ತಾರೆ'.

ಇವರು ಓದಿದ್ದಾರೆ. ಅಲ್ಲಿ ನೋಡಿಕೊಂಡು ಬಂದಿದ್ದಾರೆ, ಅದನ್ನು ಹೇಳುತ್ತಾರೆ.

ಈಗ ಅವರು ಏನು ಹೇಳುತ್ತಾರೋ, ಹೇಳಲಿ, ಅವರು ಹೇಳುವಾಗ ಮಧ್ಯದಲ್ಲಿ ಪ್ರವೇಶ ಮಾಡಿ ಮಾತನಾಡುವಂಥದ್ದು ಅಲ್ಲ.

ಶ್ರೀ ಕೆ. ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ತಾವು ದಯಮಾಡಿ ಕೇಳಿ. We are not using this forum to record our opinion, this forum should register the records as they are established documents

ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತೇನೆಂದರೆ Ours is a/ distorted economy

ನಮ್ಮ ಹಳ್ಳಿಯಲ್ಲಿ ಇವತ್ತು ಮೊಬೈಲ್ ಇದೆ, ಡಿಸ್ ಆಂಟೆನಾ ಇದೆ, ಆದರೆ ಕುಡಿಯುವುದಕ್ಕೆ ನೀರು ಇಲ್ಲ, ನೋಡುವುದಕ್ಕೆ ಡಾಕ್ಟರ್ ಇಲ್ಲ, ಪ್ರೈಮರಿ ಸ್ಕೂಲಿಗೆ ಬಿಲ್ಡಿಂಗ್ ಇಲ್ಲ, ಮಾಸ್ಟರ್ ಇಲ್ಲ. You call this the prosperity? You call this as the economic growth? a village which has no school, no drinking water, no hospital, no road, But has a mobile dish antena, You call this as the economic growth?

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ರಮೇಶ್‌ಕುಮಾರ್‌ರವರೇ,main ingredient/ಮುಖ್ಯವಾಗಿ ಪವರ್ ಇಲ್ಲ.

ಅಧ್ಯಕ್ಷರು: ಅವರವರ ಅಭಿಪ್ರಾಯಗಳು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವಲಪ್ ಮಾಡದೇ, ನೀವು ಫಾರಿನ್ ಇನ್‌ವೆಸ್ಟ್‌ಮೆಂಟ್ ಅನ್ನು ತಂದರೆ, ಏನೇನು ಅನಾಹುತಗಳು ಆಗುತ್ತದೆ. ಎಂಬುದಕ್ಕೆ ಲ್ಯಾಟಿನ್ ಅಮೇರಿಕಾ ಉದಾಹರಣೆಯಾಗಿ ಇದೆ. ಮೆಕ್ಸಿಕೋ ಉದಾಹರಣೆಗೆ ಇದೆ. ಬೆಸಿಕ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಆಗದೇ, ಬೆಸಿಕ್ ಎಕಾನಮಿಯನ್ನು ಡೆವಲಪ್ ಮಾಡದೇ without developing the micro economy, if you develop a macro economy on the super structure of the non- availability of the basic infrastructure, that whole economy will collapse. ನೀವು ಇದನ್ನು ತಿಳಿದುಕೊಳ್ಳಿ

ಶ್ರೀ ಬಸವರಾಜರಾಯರೆಡ್ಡಿ: ಹಾಗಾದರೆ ಚೈನಾದಲ್ಲಿ ಫಾರಿನ್ ಡೈರಕ್ಟ್ ಇನ್‌ವೆಸ್ಟ್‌ಮೆಂಟ್ ಅನ್ನು ಇನ್‌ಫ್ರಾಸ್ಟ್ರಕ್ಚರ್‌ಗಾಗಿ ಮಾಡಿಲ್ಲವಾ, ಅವರು...

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಾವು ಇನ್‌ಪ್ರಾಸ್ಟ್ರಕ್ಚರ್‌ಗೆ ಮಾಡಿದ್ದಾರೆಂದು ಹೇಳುತ್ತಿರುವುದು. ಈಗ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ್ದಾರಲ್ಲಾ, ಕುಡಿಯುವುದಕ್ಕೆ ನೀರಿಲ್ಲ, ಮೊಬೈಲ್ ಫೋನ್ ಅನ್ನು ಕೊಟ್ಟಿದ್ದೀರೆಂದು, ಇದು ನಮ್ಮ ಎಕಾನಮಿ...

Sri Basavaraj Raya Reddy :- there also, how they are producing the electricity?

ಶ್ರೀ ಕೆ.ಆರ್. ರಮೇಶ್‌ಕುಮಾರ್: That is where I wanted to intervene. Foreign Direct Investment, ಇಂಥ ದೇಶದಲ್ಲಿ ಯಾವ ಪ್ರಮಾಣದಲ್ಲಿರಬೇಕು. ಯಾವ ಕ್ಷೇತ್ರದಲ್ಲಿರಬೇಕು, ಯಾವ ಕ್ಷೇತ್ರದಲ್ಲಿ ಇರಬಾರದು ಎಂದು ತೀರ್ಮಾನ ಮಾಡುವ ಡಿಸ್ಕ್ರೀಷನ್ ನಮಗೆ ಇಲ್ಲದೇ ಹೋದರೆ ಈ ರಾಕ್ಷಸ ನಮ್ಮನ್ನು ಪೂರ್ಣ ಕಬಳಿಸಿಬಿಡುತ್ತಾನೆ. ನಾಳೆಯ ದಿವಸ ನಮ್ಮ ಛಾಯಾಚಿತ್ರ ಕೂಡ ಇರುವುದಿಲ್ಲ. we would completely get dismembered. That should not happen ಎಂದು ಹೇಳುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ: ನಾನು ಅದಕ್ಕೇ ಬರುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಒಂದೇ ಒಂದು ನಿಮಿಷ ರಾಯರೆಡ್ಡಿಯವರೇ ಇವತ್ತಿನ ಹಿಂದೂ ಪತ್ರಿಕೆಯಲ್ಲಿ ಫ್ರಾನ್ಸ್‌ನ ಎಕ್ಸ್‌ಪೀರಿಯೆನ್ಸ್ ಬಗ್ಗೆ ಒಂದು ಲೇಖನವಿದೆ. ದಯವಿಟ್ಟು ಅದನ್ನು ನೀವು ಓದಿ ನೋಡಿ. The most advanced country in the world has experienced the globalisation: what is their fate, ಎಂದು ಹೇಳತಕ್ಕಂಥಾದ್ದರ ಬಗ್ಗೆ ಇವತ್ತಿನ ಹಿಂದೂ ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ. ಬೇಕಾದರೆ ನೀವು ಈಗಲೇ ತರಿಸಿ ಓದಿ ನೋಡಿ, ಅರ್ಥವಾಗುತ್ತದೆ. ಲಾಂಗ್ ರನ್‌ನಲ್ಲಿ ಇದರ ಪರಿಣಾಮ ಏನೇನಾಗುತ್ತದೆ ಎನ್ನುವುದರ ಬಗ್ಗೆ France is an experience. Although, being one of the G-7 countries..

ಶ್ರೀ ಬಸವರಾಜ ರಾಯರೆಡ್ಡಿ: ಹಿರಿಯ ಸದಸ್ಯರಾದಂಥ ರಮೇಶ್‌ಕುಮಾರ್‌ರವರು ಮತ್ತು ಶ್ರೀರಾಮರೆಡ್ಡಿಯವರು ಏನು ಹೇಳಿದರು ಎಂದರೆ, ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ನಾವು ಎಷ್ಟು ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟನ್ನು ಆಕರ್ಷಣೆ ಮಾಡಬೇಕಾಗಿತ್ತೋ, ಅಷ್ಟನ್ನು ಮಾಡಲಿಲ್ಲ ಎಂದು ಹೇಳಿದರು. ನಾನು ಇನ್ನೂ ಮಾತನಾಡುತ್ತಿರುವಾಗಲೇ ನೀವು ಸ್ಟಾರ್ಟ್ ಮಾಡಿಬಿಟ್ಟಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಯಾವ ಸೆಕ್ಟಾರ್‌ನಲ್ಲಿ ಇರಬೇಕು. ಯಾವ ಸೆಕ್ಟಾರ್‌ನಲ್ಲಿ ಇರಬಾರದು ಎನ್ನುವ ಬಗ್ಗೆ ಗೌರವಾನ್ವಿತ ಸದಸ್ಯರುಗಳು ಅವರವರ ಅಭಿಪ್ರಾಯ ಕೊಡುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಅ ತೀರ್ಮಾನ ತೆಗೆದುಕೊಳ್ಳತಕ್ಕಂಥವರು ಕೇಂದ್ರ ಸರ್ಕಾರದವರು. ನಮ್ಮ ಕೈಯಲ್ಲಿ ಇಲ್ಲ ಅದು. Government of India will decide. Unfortunately, it is not in our hands.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ...

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಶ್ರೀರಾಮರೆಡ್ಡಿಯವರ ಮಾತನ್ನು ನಾವು

ಕೇಳಿದ್ದೇವೆ. ನಮ್ಮ ಮಾತನ್ನೂ ದಯವಿಟ್ಟು ಅವರು ಆಲಿಸಬೇಕು. ತಾವು ದಯವಿಟ್ಟು ಕುಳಿತುಕೊಳ್ಳಬೇಕು. FDI, I fully agree with you, ಮೈಕ್ರೋ ಕ್ರೆಡಿಟಿಂಗ್ ಸಿಸ್ಟಂ ಆಧಾರದ ಮೇಲೆ ಮೈಕ್ರೋ ಇಂಡಸ್ಟ್ರೀಸನ್ನು ಡೆವೆಲಪ್ ಮಾಡಿ, ಅದಾದನಂತರ ಇನ್‌ಫ್ರಾಸ್ಟ್ರಕ್ಚರ್‌ಗೆ ಸೆಕೆಂಡ್ ಪ್ರಿಯಾರಿಟಿ ಕೊಟ್ಟು, ಅದಾದ ನಂತರ ನೀವು ಮಾಡಿ ಎನ್ನತಕ್ಕಂಥ ಅಭಿಪ್ರಾಯವನ್ನು ತಾವು ವ್ಯಕ್ತಮಾಡಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. That is the Common Minimum Program of this Government and also the UPA Government. ನೀವೂ ನಾವೂ ಸೇರಿ ಆ ಒಪ್ಪಂದಕ್ಕೆ ಬಂದಿರತಕ್ಕಂಥಾದ್ದು, But as far as FDI is concerned

ಈ ಹೌಸ್‌ನಲ್ಲಿ ಚರ್ಚೆಯಾಗಬಾರದು ಎಂದು ನಾನು ಹೇಳುವುದಿಲ್ಲ, ಚರ್ಚೆಯಾಗಲಿ, ತಾವು ತಮ್ಮ ಅಭಿಪ್ರಾಯವನ್ನು ಕೊಡಿ. ಆದರೆ ಎಫ್‌ಡಿಐ ಯನ್ನು ಡಿಸೈಡ್ ಮಾಡತಕ್ಕಂಥವರು ಗವರ್ನಮೆಂಟ್ ಆಫ್ ಇಂಡಿಯಾದವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮ್ಮನ್ನು ನಾವು ಬ್ಲೇಮ್ ಮಾಡುತ್ತಿಲ್ಲವಲ್ಲ. we are not blaming you. You are not responsible for that. I know that.

ಶ್ರೀ ಕೆ.ಆರ್. ರಮೇಶ್‌ಕುಮಾರ್: The Hon'ble Minister is long over due to be in Parliament. He has over- stayed here. I appreciate his diplomacy. Ours is a union of States.

Sri Basavaraj Raya Reddy :- we are in federal structure.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಫೆಡರಲ್ ಸ್ಟ್ರಕ್ಚರ್ ಅಲ್ಲ. ರಾಯರೆಡ್ಡಿಯವರೇ ಒಂದು ನಿಮಿಷ. ಸಿಂಧ್ಯಾ ಸಾಹೇಬರೇ, ನಾನು ಅದನ್ನೇ ಹೇಳಿದೆ. ಕಾಮರ್ಸ್ ಮಿನಿಸ್ಟ್ರಿಯಲ್ಲಿ ಒ ಜಿ ಎಲ್ ಲಿಸ್ಟನ್ನು ಕೈಯ್ಯಲ್ಲಿ ಇಟ್ಟುಕೊಂಡು indiscreet ಆಗಿ, ಮನಸ್ಸಿಗೆ ಬಂದ ಹಾಗೆ they keep on adding and deleting the list. ಇಲ್ಲಿ ರೇಷ್ಮೆ ಬೆಳೆಗಾರ ಸಾಯುತ್ತಿದ್ದರೆ, ಸಿಲ್ಕನ್ನು ಇಂಪೋರ್ಟ್ ಮಾಡಲು ಓ ಜಿ ಎಲ್ ಲಿಸ್ಟಿನಲ್ಲಿ ಸೇರಿಸುತ್ತಾರೆ. There is no co-ordination between the States and the Centre. ಇಂಥ ವಿಚಾರಗಳಿದ್ದಾಗ, how can we directly make efforts to see.. something which cannot be digested by us.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರು ಹೇಳಿದುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಚೈನಾ ದೇಶದಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಹೆಚ್ಚು ವಿದೇಶಿ ಬಂಡವಾಳವನ್ನು ಆಕರ್ಷಣೆ ಮಾಡಿದರು. ಉದಾಹರಣೆಗೆ, ವಿದ್ಯುತ್ತಿನ ಉತ್ಪಾದನೆ, ಒಳ್ಳೆಯ ರಸ್ತೆಗಳನ್ನು ಮಾಡಲು, ರೈಲ್ವೆ ವ್ಯವಸ್ಥೆಯನ್ನು ಸುಧಾರಣೆ ಮಾಡಲಿಕ್ಕೆ ಉದ್ಯೋಗವನ್ನು ಸೃಷ್ಟಿ ಮಾಡಲಿಕ್ಕೆ ಕೆಲವು ಇಂಡಸ್ಟ್ರಿಗಳನ್ನು ಮಾಡಿದರು.

ನಮ್ಮ ದೇಶದಲ್ಲಿ ಏನಾಗಿದೆ ಎಂದರೆ, ನಮ್ಮ ಇಂಡಸ್ಟ್ರಿ ಮಿನಿಸ್ಟರ್ ಹೇಳಿದ ಹಾಗೆ ವಿದೇಶೀ ನೇರ ಬಂಡವಾಳದ ಯೋಜನೆಗೆ ಅನುಮತಿಯನ್ನು ಕೊಡ ಬೇಕಾದಂಥವರು ಕೇಂದ್ರ ಸರ್ಕಾರದವರು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಈ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರಕ್ಕೆ ಹೇಳಬೇಕಾದುದು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ. ನಾವು ನಮ್ಮ ನೀತಿಯನ್ನು ಬದಲಾವಣೆ ಮಾಡಿಕೊಳ್ಳದಿದ್ದರೆ, ಮುಂಬರುವಂಥ ದಿನಗಳಲ್ಲಿ ನಾವು ಹೆಚ್ಚು ವಿದೇಶೀ ನೇರ ಬಂಡವಾಳವನ್ನು ಆಕರ್ಷಣೆ ಮಾಡದಿದ್ದರೆ, ಉದ್ಯೋಗವನ್ನೂ ಸೃಷ್ಟಿ ಮಾಡಲಿಕ್ಕೆ ಆಗುವುದಿಲ್ಲ ಮತ್ತು ಮೂಲಭೂತ ಸೌಕರ್ಯಗಳನ್ನೂ ಕೊಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಚೈನಾದಲ್ಲಿ ಷರತ್ತುಗಳನ್ನು ವಿಧಿಸಿದ್ದಾರೆ. ಷರತ್ತುಗಳನ್ನು ವಿಧಿಸದೇ ಯಾವುದನ್ನೂ ಮಾಡಲಿಲ್ಲ. ಅದೇ ರೀತಿ ನಮ್ಮ ದೇಶದಲ್ಲೂ ಷರತ್ತುಗಳನ್ನು ವಿಧಿಸಿದ್ದಾರೆ. ಆದರೆ ನಮ್ಮ ದೇಶದಲ್ಲಿ ಏನಾಗಿದೆ ಎಂದರೆ, ಹರ್‍ಯಾಸ್‌ಮೆಂಟ್ ಜಾಸ್ತಿಯಾಗುತ್ತಿದೆ. ಇಲ್ಲಿಯ ಇಂಡಸ್ಟ್ರಿ ಡಿಪಾರ್ಟ್‌ಮೆಂಟ್, ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗಳು ಬಂಡವಾಳದಾರರಿಗೆ ಒಳ್ಳೆಯ ಸೌಲಭ್ಯಗಳನ್ನು ಕೊಡುವುದಿಲ್ಲ. ತ್ವರಿತವಾಗಿ ಕೆಲಸಗಳನ್ನು ಮಾಡಿಕೊಡುವುದಿಲ್ಲ.

ಹಿಂದೆ, ಬ್ರಿಟಿಷರ ಕಾಲದ ವ್ಯವಸ್ಥೆಯಲ್ಲಿದ್ದಂಥ ಲೈಸೆನ್ಸ್ ರಾಜ್ಯದ ವ್ಯವಸ್ಥೆಯ ಮಾದರಿಯಲ್ಲೇ ನಡೆದುಕೊಂಡು ಹೋಗುತ್ತಿದೆ. ಹೀಗಾಗಿ, ಹೆಚ್ಚು ವಿದೇಶೀ ನೇರ ಬಂಡವಾಳ ಬರುತ್ತಿಲ್ಲ. ಇದರ ಜೊತೆಗೆ, ನಮ್ಮ ದೇಶದಲ್ಲಿ ನಾನ್ ರೆಸಿಡೆಂಟ್ ಇಂಡಿಯನ್ಸ್ ಬಹಳಷ್ಟು ಜನರಿದ್ದಾರೆ, ಅವರ ಹತ್ತಿರ ಸಾಕಷ್ಟು ಬಂಡವಾಳ ಇದೆ. ಆಎನ್‌ಆರ್‌ಐ ಗಳಿಂದ ನಮ್ಮ ದೇಶಕ್ಕೆ ಎಷ್ಟು ಪ್ರಮಾಣದಲ್ಲಿ ಹಣ ಹರಿದು ಬರಬೇಕಾಗಿತ್ತೋ ಅಷ್ಟು ಬರಲಿಲ್ಲ. ಇದಕ್ಕೆ ಕಾರಣವೆಂದರೆ, ನಾವು ಅವರನ್ನು ಕನ್ವಿನ್ಸ್ ಮಾಡುತ್ತಿಲ್ಲ. ನಮ್ಮ ದೇಶದಲ್ಲಿ ನೀವು ಬಂಡವಾಳವನ್ನು ಹಾಕಬೇಕಾಗುತ್ತದೆ. ನಿಮಗೆ ನಮ್ಮ ದೇಶದಲ್ಲಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡುತ್ತೇವೆ ಎಂದು ನಾವು ಅವರನ್ನು ಕನ್ವಿನ್ಸ್ ಮಾಡಬೇಕಾಗುತ್ತದೆ.

ಶ್ರೀ ಧರಂಸಿಂಗ್: ಬಹಳಷ್ಟು ಮಂತ್ರಿಗಳು ಮತ್ತು ಶಾಸಕರು ಚೈನಾ ದೇಶಕ್ಕೆ ಹೋಗಿ ಬಂದಿದ್ದಾರೆ. ತಾವೂ ಕೂಡ ಹೋಗಿ ಬಂದಿದ್ದೀರಿ. ಚೈನಾ ದೇಶದಲ್ಲಿರುವ ಸೋಷಿಯೋ– ಎಕನಾಮಿಕ್ ಫ್ಯಾಕ್ಟರ್‌ಗಳು ಬೇರೆ. ಚೈನಾದಲ್ಲಿ ಆದಂಥ ರೆವಲ್ಯೂಷನ್ ಯಾವ ಹಿನ್ನೆಲೆಯಲ್ಲಿ ಆಯಿತು ಎಂದು ನೋಡಬೇಕಾಗುತ್ತದೆ. ಚೈನಾದಲ್ಲಿ ಹಾಗೆ ಆಗಿದೆ. ಹೀಗೆ ಆಗಿದೆ ಎಂದು ಪದೇ ಪದೇ ಅವರೂ ಹೇಳುತ್ತಾರೆ. ಇವರೂ ಹೇಳುತ್ತಾರೆ. ಆದರೆ, ಇವತ್ತು ನಮ್ಮ ದೇಶದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಅಂದರೆ ಇಲ್ಲಿ ಸಾಮಾಜಿಕ, ರಾಜಕೀಯ ಫ್ಯಾಕ್ಟರ್ಸ್ ಏನಿದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು. ನಮ್ಮ ಖರ್ಗೆಯವರೂ ಕೂಡ ಚೈನಾಕ್ಕೆ

ಹೋಗಿ ಬಂದಿದ್ದಾರೆ. ಚೈನಾದಲ್ಲಿ ಆದಂಥಾದ್ದು ನಮ್ಮ ರಾಜ್ಯದಲ್ಲೂ ಆಗಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, ಇವತ್ತು ನಮ್ಮ ಅರ್ಥ ವ್ಯವಸ್ಥೆ ಯಾವ ರೀತಿಯಾಗಿ ನಡೆಯುತ್ತಿದೆ ಎನ್ನುವುದನ್ನು ನೋಡಬೇಕು. ಚೈನಾ ದೇಶದಂತೆ ಅನುಕರಣೆ ನಮ್ಮಲ್ಲಿಯೂ ಮಾಡಿದರೆ ಯಡಿಯೂರಪ್ಪನವರು ಬಿಡುತ್ತಾರೇನು ಚೈನಾ ದೇಶದ ಅನುಕರಣೆ ಮಾಡಲು ಅವರೂ ಬಿಡುವುದಿಲ್ಲ. ಆದ್ದರಿಂದ, ಪ್ರಸ್ತಾಪ ಮಾಡುವಂಥ ಸಮಯದಲ್ಲಿ ರಾಜ್ಯದ ಸಮಸ್ಯೆಗಳು ಏನಿವೆ, ಯಾವ ರೀತಿ ಮಾಡಬೇಕು, ನಮ್ಮ ಸಂಪನ್ಮೂಲ ಏನಿದೆ, ಇವುಗಳೆಲ್ಲವನ್ನೂ ಎದುರಿಗಿಟ್ಟುಕೊಂಡು ಮಾತನಾಡಿದರೆ, ಸಲಹೆ ಸೂಚನೆಗಳನ್ನು ಕೊಟ್ಟರೆ ಸುಧಾರಣೆ ಮಾಡಲು ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಚೈನಾ ದೇಶ ಮತ್ತು ನಮ್ಮ ದೇಶದ ಪರಿಸ್ಥಿತಿಯ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ಆದರೆ, ಅವರು ಹೇಳಿದ ಹಾಗೆಯೇ, ನಮ್ಮ ದೇಶದಲ್ಲಿ ಮಾನವ ಸಂಪನ್ಮೂಲ ಬಹಳ ದೊಡ್ಡ ಪ್ರಮಾಣದಲ್ಲಿ ಇರುವಾಗ, ಮಾಡ್ರನೈಸೇಷನ್ ಮತ್ತು ಲಿಬರಲೈಸೇಷನ್ ಹಿನ್ನಲೆಯಲ್ಲಿ ಮನುಷ್ಯನನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಿ, ಮಾನವ ಶಕ್ತಿಯನ್ನು ಸಂಪೂರ್ಣವಾಗಿ ಮೂಲೆಗುಂಪು ಮಾಡಿ ಬರೀ ಉತ್ಪಾದನೆ ಮತ್ತು ಬೆಳವಣಿಗೆ ಬಗ್ಗೆ ಮಾತ್ರ ಯೋಚನೆ ಮಾಡಿದರೆ, ಈ ದೇಶದಲ್ಲಿ ಬಹಳ ದೊಡ್ಡ ಅನಾಹುತವಾಗುತ್ತದೆ ಎನ್ನುವುದನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ. ದುಡಿಯುವ ಕೈಗಳಿಗೆ ಕೆಲಸ ಕೊಡುವಂಥಾದ್ದನ್ನು ನಾವು ಎಲ್ಲಿಯವರೆಗೆ ಮಾಡುವುದಿಲ್ಲವೋ, ಅಲ್ಲಿಯವರೆಗೆ ನಮ್ಮ ದೇಶ ಅಭಿವೃದ್ಧಿ ಆಗಲು ಸಾಧ್ಯವಿಲ್ಲ ಎನ್ನುವ ಮಾತನ್ನು ಗಾಂಧೀಜಿಯವರು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪಾಟೀಲರೇ, ಈಯರ್ ಫೋನ್ ಹಿಡಿದುಕೊಂಡು ನೀವು ವೈಜನಾಥ್ ಪಾಟೀಲರನ್ನು ಅನುಕರಣೆ ಮಾಡಬೇಡಿ.

ಶ್ರೀ ಬಿ.ಆರ್. ಪಾಟೀಲ್: ಕ್ಷಮಿಸಬೇಕು. ನಾನು ಅವರನ್ನು ಅನುಕರಣೆ ಮಾಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ವೈಜನಾಥ ಪಾಟೀಲ್ ಎಂದರೆ ನಿಮಗೆ ಭಾರೀ ಭಯ ಇದ್ದ ಹಾಗಿದೆ.

ಶ್ರೀ ಸಿ.ಟಿ. ರವಿ: ಮಾನ್ಯ ಖರ್ಗೆ ಸಾಹೇಬರೇ, ಇಬ್ಬರೂ ಸಮಾನ ದುಃಖಿಗಳು ಮತ್ತು ಸಮಾನ ಮನಸ್ಕರು. ಹಾಗಾಗಿ, ಅವರನ್ನು ಅನುಕರಣೆ ಮಾಡುತ್ತಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅವರ ವಿದ್ಯಾರ್ಥಿ ಜೀವನದಲ್ಲಿ ಎಡಪಂಕ್ತಿ ವಿಚಾರವನ್ನು ಪ್ರೇರೇಪಿಸಿಯೇ ರಾಜಕಾರಣಕ್ಕೆ ಬಂದಂಥವರು. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಚೈನಾ ದೇಶದ ಪರಿಸ್ಥಿತಿ

ಮತ್ತು ನಮ್ಮ ಇಂಡಿಯಾ ದೇಶದ ಪರಿಸ್ಥಿತಿ ಹೆಚ್ಚು ಕಡಿಮೆ ಒಂದೇ ತರ ಇದೆ. ಅಲ್ಲಿ ಮಾನವ ಸಂಪನ್ಮೂಲವನ್ನು ಬಳಸಿಕೊಂಡು ಯಾವ ರೀತಿ ಅಭಿವೃದ್ಧಿ ಮಾಡಿದ್ದಾರೆ. ಅದೇ ರೀತಿ ಇಲ್ಲೂ ಕೂಡ ಮಾನವ ಸಂಪನ್ಮೂಲವನ್ನು ಬಳಸಿ ಕೊಳ್ಳುವಂಥ ಒಂದು ಯೋಜನೆಯನ್ನು ಹಾಕಿಕೊಂಡಾಗ ಮಾತ್ರ ನಾವು ಉತ್ಪಾದನೆ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಮುಂದೆ ಹೋಗಲು ಸಾಧ್ಯವಿದೆ. ಆ ದೃಷ್ಟಿಯಿಂದ ಚರ್ಚೆಯಾಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ: ಸ್ನೇಹಿತರು ಮತ್ತು ಸದಸ್ಯರಾದಂಥ ಬಿ.ಆರ್. ಪಾಟೀಲ್‌ರವರು ಹೇಳಿದರು. ಚೈನಾ ಮತ್ತು ಇಂಡಿಯಾಗಳಲ್ಲಿ ಪಾಪುಲೇಷನ್‌ನಲ್ಲಿ ಬಹಳ ಸಿಮಿಲಾರಿಟಿ ಇದೆ. ಹೀಗಾಗಿ, "ಮಾನವ ಸಂಪನ್ಮೂಲ ಅಭಿವೃದ್ಧಿಯ ಬಗ್ಗೆ ನಾವು ಹೆಚ್ಚು ಯೋಜನೆಗಳನ್ನು ಹಾಕಬೇಕು. ಆಗ ಹೆಚ್ಚು ಆಕರ್ಷಕವಾದಂಥ ಬಂಡವಾಳವನ್ನು ಹಾಕಿಕೊಂಡು ಹೆಚ್ಚು ಉದ್ಯೋಗವನ್ನು ಸೃಷ್ಟಿ ಮಾಡಲು ಸಾಧ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿ ನಮ್ಮ ಆರ್ಥಿಕ ನೀತಿಯನ್ನು ಕೆಲವು ಕಡೆ ಬದಲಾವಣೆ ಮಾಡಬೇಕಾಗುತ್ತದೆ. ಏಕೆ ಈ ಮಾತನ್ನು ಹೇಳಿದೆ ಎಂದರೆ, ಚೈನಾದಂಥ ಕಮ್ಯೂನಿಸ್ಟ್ ಕಂಟ್ರಿಯಲ್ಲಿ 400 ಬಿಲಿಯನ್ ಡಾಲರ್‌ಗಳನ್ನು ಮೂಲಭೂತ ಸೌಕರ್ಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯ ಬಗ್ಗೆ ಹೆಚ್ಚು ವಿದೇಶೀ ನೇರ ಬಂಡವಾಳವನ್ನು ತೆಗೆದುಕೊಳ್ಳಲು ಅವರು ಯಶಸ್ವಿಯಾಗಿದ್ದರೆ, ನಮ್ಮಲ್ಲಿ ಅದು ಆಗಿಲ್ಲ. ಅದಕ್ಕಾಗಿ, ನಮ್ಮಲ್ಲಿ ಎಲ್ಲಿ ನ್ಯೂನತೆಗಳಿವೆ, ಅದನ್ನು ಬದಲಾವಣೆ ಮಾಡಬೇಕು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, 1997ರಿಂದ 2005ರವರೆಗೆ, ನಾನು ಈಗಾಗಲೇ ಹೇಳಿದಂತೆ ನಮ್ಮ ದೇಶಕ್ಕೆ ಕೇವಲ 50 ಬಿಲಿಯನ್ ಡಾಲರ್ ಮಾತ್ರ ಬಂದಿದೆ. ಕೂಡ ಒಂದು ವರದಿ ಪ್ರಕಾರ ನಮ್ಮ ದೇಶದಲ್ಲಿ ಒಟ್ಟು ವಿದೇಶಿ ಬಂಡವಾಳದಲ್ಲಿ 11 ಪರ್ಸೆಂಟ್ Foreign Direct Investment ನಮ್ಮ ರಾಜ್ಯಕ್ಕೆ ಬಂದಿದೆ ಎನ್ನುವ ಮಾತನ್ನು ಹೇಳಿದ್ದಾರೆ. 2003-04ನೇ ಸಾಲಿನಲ್ಲಿ ಅತ್ಯಂತ ಕಡಿಮೆ Foreign Direct Investment ನಮ್ಮ ರಾಜ್ಯಕ್ಕೆ ಬಂತು. 1997ನೇ ಸಾಲಿನಲ್ಲಿ 5627 ಕೋಟಿ ರೂಪಾಯಿಗಳ ವಿದೇಶಿ ಬಂಡವಾಳ ಆಕರ್ಷಣೆಯನ್ನು ಮಾಡಿದ್ದೇವೆ. 1998ರಲ್ಲಿ ಸುಮಾರು 5000 ಕೋಟಿ ರೂಪಾಯಿಗಳು, 1999ರಲ್ಲಿ ಸುಮಾರು 2600ರಲ್ಲಿ ಕೋಟಿ ರೂಪಾಯಿಗಳು, 2001ರಲ್ಲಿ ಸಾಲಿನಲ್ಲಿ ಸುಮಾರು ನಾಲ್ಕು ಸಾವಿರದ...

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಶ್ನೆಯನ್ನು ಮಾನ್ಯ ಸದಸ್ಯರಲ್ಲಿ ಕೇಳುತ್ತಿದ್ದೇನೆ. ಯಾವ sector ನಲ್ಲಿ ವಿದೇಶಿ ಬಂಡವಾಳ ಬಂತು? ಅದು IT ನಲ್ಲಿ ಬಂತೇ? ಅಥವಾ Basic Industry ಯಲ್ಲಿ ಬಂತೇ? ಎಂಬುದರ ಬಗ್ಗೆ ಸ್ವಲ್ಪ ಹೇಳಬೇಕು. ಈಗ ITಯಲ್ಲಿ ಬಂದಿರುವುದಕ್ಕೆ ಸರ್ಕಾರಕ್ಕೆ

credit ತೆಗೆದುಕೊಳ್ಳುವುದು ಬೇಡ, ನೀವು ಯಾರೂ credit ತೆಗೆದುಕೊಳ್ಳುವುದು ಬೇಡ. Basic Industry ಮೂಲಕ employment generate ಆಗುವುದರಲ್ಲಿ ಏನು, ಎಷ್ಟು ಬಂತು? ಎನ್ನುವುದರ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಾನು ಹೇಳುತ್ತೇನೆ.

ಅಧ್ಯಕ್ಷರು: ಶ್ರೀ ರಾಯರೆಡ್ಡಿಯವರೆ ನೀವು ಆದಷ್ಟು ಬೇಗ ಮಾತನಾಡಿ ಮುಗಿಸಬೇಕು.

ಶ್ರೀ ಬಸವರಾಜ ರಾಯರೆಡ್ಡಿ: ಬೇಗ ಮುಗಿಸುತ್ತೇನೆ. 2003–04ನೇ ಸಾಲಿನಲ್ಲಿ ಕೇವಲ 372 ಕೋಟಿ ರೂಪಾಯಿಗಳು ಮಾತ್ರ ವಿದೇಶಿ ಬಂಡವಾಳ ಬಂದಿದೆ. ಆ ಮೇಲೆ ಮಾನ್ಯ ಸಿಂಧ್ಯಾರವರು ಅಧಿಕಾರಕ್ಕೆ ಬಂದ ಮೇಲೆ ವಿದೇಶಿ ಬಂಡವಾಳದಲ್ಲಿ ಬಹಳ ಒಳ್ಳೆಯ improvement ಆಗಿದೆ. 2004–05ನೇ ಸಾಲಿನಲ್ಲಿ ಕಳೆದ ವರ್ಷ ಏನು 372 ಕೋಟಿ ರೂಪಾಯಿಗಳು ಏನಿತ್ತು ಅದು ಈ ವರ್ಷ 1226 ಕೋಟಿ ರೂಪಾಯಿಗಳಷ್ಟು ವಿದೇಶಿ ಬಂಡವಾಳ ಹರಿದು ಬಂದಿದೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹಾಗೆ ಈ ವಿದೇಶಿ ನೇರ ಬಂಡವಾಳ ಹೆಚ್ಚಾಗಿ ನಮ್ಮಲ್ಲಿಗೆ ಬಂದಿರುವುದು Computer based Industries, software business ನಿಂದ. ಚೈನಾ ಮಾದರಿಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಗಳನ್ನು ಮಾಡಲಿಕ್ಕೆ ಮತ್ತು ನಮ್ಮ ದೇಶದಲ್ಲಿರುವಂಥ ಮೂಲಭೂತ ಸೌಕರ್ಯಗಳನ್ನು ಹೆಚ್ಚು ಮಾಡಿಕೊಳ್ಳಲಿಕ್ಕೆ ನಾವು ವಿದೇಶಿ ಬಂಡವಾಳವನ್ನು ಆಕರ್ಷಣೆ ಮಾಡಲಿಲ್ಲ, ಮಾಡುವುದರಲ್ಲಿ ವಿಫಲರಾಗಿದ್ದೇವೆ. ಇದಕ್ಕೆ ಕಾರಣ ಇನ್ನೂ ನಮ್ಮಲ್ಲಿ Licence Raj ವ್ಯವಸ್ಥೆ ಮುಂದುವರಿಯುತ್ತಾ ಬಂದಿದೆ. ಅದಕ್ಕಾಗಿ ನಾವು ಇವತ್ತು ನಮ್ಮ ವಿಚಾರವನ್ನು ಬದಲಾವಣೆ ಮಾಡಬೇಕಾಗಿದೆ. Industries Minister ಕೇವಲ Industries Minister ಆಗಿ ಕೆಲಸ ಮಾಡುವುದಲ್ಲ. Industry Seccretary ಕೇವಲ Industry Seccretary ಆಗಿ ಕೆಲಸ ಮಾಡುವುದಲ್ಲ. entrepreneur ಆಗಿ ಕೆಲಸ ಮಾಡಬೇಕಾಗುತ್ತದೆ. ಅಂದರೆ ಮಾತ್ರ ಬಂಡವಾಳಗಾರರು ರಾಜ್ಯಕ್ಕೆ ಬರುತ್ತಾರೆ. ಆ ದಿಶೆಯಲ್ಲಿ ಮಾನ್ಯ ಸಿಂಧ್ಯಾರವರು ಬಹಳ ಅನುಭವವಿರುವುದರಿಂದ ಮುಂಬರುವಂಥ ವರ್ಷಗಳಲ್ಲಿ ಈ ಮೂಲಭೂತ ಸೌಕರ್ಯಗಳಿಗೆ ಮತ್ತು ನಮ್ಮ ರಾಜ್ಯದ ಮಾನವ ಸಂಪನ್ಮೂಲ ಅಭಿವೃದ್ಧಿಯ ಸಲುವಾಗಿ ಹೆಚ್ಚು ವಿದೇಶಿ ನೇರ ಬಂಡವಾಳವನ್ನು ಆಕರ್ಷಣೆ ಮಾಡುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಿ. ಕೇಂದ್ರ ಸರ್ಕಾರದ ಜೊತೆ ತಾವು ಮಾತನಾಡುವ ಅವಶ್ಯಕತೆ ಇದ್ದರೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಮಾತನಾಡುತ್ತಾರೆ. ಏಕೆಂದರೆ ನಮ್ಮ ಮಾನ್ಯ ಪ್ರಧಾನ ಮಂತ್ರಿಗಳಾದಂಥ ಡಾಃ ಮನಮೋಹನ ಸಿಂಗ್‌ರವರು ಈ ವಿಚಾರದಲ್ಲಿ ಬಹಳ ಪರಿಣಿತರಾಗಿದ್ದಾರೆ ಮತ್ತು ಅವರಿಗೆ ಈ ವಿಚಾರ ಚೆನ್ನಾಗಿ ಗೊತ್ತಿದೆ. ಹೀಗಾಗಿ ಸಾಧ್ಯತೆಗಳಿರುವುದರಿಂದ ಇದರ ಬಗ್ಗೆ

ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತದೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ನಮ್ಮ ರಾಜ್ಯದ ಕೃಷಿವಲಯಗಳಲ್ಲಿ ಇತ್ತೀಚೆಗೆ ಕೆಲವೊಂದು exports ಬಗ್ಗೆ ನಾನು ನೋಡಿದೆ. ಕಳೆದ 2–3 ವರ್ಷಗಳನ್ನು ನಾವು ಗಮನಿಸಿದರೆ ನಮ್ಮ ರಾಜ್ಯದ ಕೃಷಿ ವಲಯದಲ್ಲಿ exports ಬಹಳ ಕಡಿಮೆ ಆಗುತ್ತಿದೆ. ನಮ್ಮ ಬೇರೆ ಬೇರೆ ವಲಯಗಳಲ್ಲಿ exports ಸ್ವಲ್ಪ ಜಾಸ್ತಿ ಆಗಿದೆ. ಆದರೆ Agricultural Sector ನಲ್ಲಿ ಉದಾಹರಣೆಗೆ: Coffee Products 2001–02ನೇ ಸಾಲಿನಲ್ಲಿ 881 ಕೋಟಿ ರೂಪಾಯಿಗಳಷ್ಟು export ಆಗಿದ್ದರೆ 2002–03ರಲ್ಲಿ 730 ಕೋಟಿ ರೂಪಾಯಿಗಳಷ್ಟು ಆಗಿದೆ. 2003–04ರ ಸಾಲಿನಲ್ಲಿ 757 ಕೋಟಿ ರೂಪಾಯಿಗಳಷ್ಟು ಆಗಿದ್ದರೆ ಈ ವರ್ಷ 705 ಕೋಟಿ ರೂಪಾಯಿಗಳಷ್ಟು ಆಗಿದೆ. ಆದರೆ ಪ್ರತಿ ವರ್ಷ ಕೂಡ Coffee exports ಕಡಿಮೆಯಾಗುತ್ತಿದೆ. Coffee exports ಏಕೆ ಕಡಿಮೆಯಾಗುತ್ತಿದೆ? ನಮ್ಮ ರೈತರಿಗೆ ಇದರಿಂದ ತೊಂದರೆಯಾಗುತ್ತದೆ ಎನ್ನುವುದರ ಬಗ್ಗೆ ವಿಚಾರ ಮಾಡಬೇಕು. ಇನ್ನು Leather Products ಬಗ್ಗೆ ಹೇಳುವುದಾದರೆ, ನಮ್ಮ ದೇಶ ಚರ್ಮ ಕೈಗಾರಿಕೆಯಲ್ಲಿ ಬಹಳ ಹೆಸರು ವಾಸಿಯಾಗಿದೆ. ಇದರಿಂದ ನೇರವಾಗಿ ಉದ್ಯೋಗ ಸೃಷ್ಟಿಯಾಗುತ್ತದೆ. ಅದರಲ್ಲೂ ವಿಶೇಷವಾಗಿ ಚರ್ಮ ಕೈಗಾರಿಕೆಗಳನ್ನು ಏನು ಮಾಡುತ್ತಿದ್ದಾರೆ. ಹೆಚ್ಚಾಗಿ ಹರಿಜನ ಗಿರಿಜನರು, ಹಿಂದುಳಿದ ವರ್ಗಕ್ಕೆ ಸೇರಿದಂಥ ಜನ ಕೂಲಿ ಕಾರ್ಮಿಕರು ಅಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಆ Industries ಗೆ ಉತ್ತೇಜನವನ್ನು ನಾವು ನೀಡಬೇಕಾಗುತ್ತದೆ. ಈ Leather Products ನಲ್ಲಿ ಕೂಡ 2003–04ನೇ ಸಾಲಿನಲ್ಲಿ ರೂ. 776 ಕೋಟಿ ಇದ್ದದ್ದು 2004–05ನೇ ಸಾಲಿನಲ್ಲಿ ರೂ. 186 ಕೋಟಿಗೆ ಇಳಿದಿದೆ. ಹೀಗಾಗಿ Leather Products ನಲ್ಲಿ ಕೂಡ export ಕಡಿಮೆಯಾಗಿದೆ ಏಕೆ? Agriculture Coffee Products ನಲ್ಲಿ ಏಕೆ export ಕಡಿಮೆಯಾಗಿದೆ? ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಇದರಲ್ಲಿ ಏನಾದರೂ ಬದಲಾವಣೆ ಮಾಡಬೇಕಾಗಿದ್ದರೆ, ಉತ್ತೇಜನವನ್ನು ಕೊಡಬೇಕಾಗಿದ್ದರೆ ಮಾನ್ಯ ಮಂತ್ರಿಗಳು exportsಗೆ ಉತ್ತೇಜನವನ್ನು ಕೊಡುತ್ತಾರೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ನಮ್ಮ ಮಾನ್ಯ ಕೈಗಾರಿಕಾ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಬಹಳಷ್ಟು ಆಸಕ್ತಿ ವಹಿಸಿ ಕರ್ನಾಟಕದಲ್ಲಿ ವಿಶೇಷ ಆರ್ಥಿಕ ವಲಯ, Special Economic Zone ಅನ್ನು ಸ್ಥಾಪನೆ ಮಾಡಲಿಕ್ಕೆ ಈಗಾಗಲೇ ಇಲ್ಲಿ ರಾಜ್ಯ ಸರ್ಕಾರದಿಂದ ಒಂದು Act ಅನ್ನು ತಂದಿದ್ದಾರೆ ಮತ್ತು ಕೇಂದ್ರ ಸರ್ಕಾರದಿಂದ ಇದಕ್ಕೆ ಒಪ್ಪಿಗೆಯನ್ನು ಪಡೆಯಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮಂಗಳೂರು ಮತ್ತು ಹಾಸನದಲ್ಲಿ Special Economic Zone ಅನ್ನು ನೀವು ಗುರುತಿಸಿ ಈಗಾಗಲೇ ಹಾಸನದಲ್ಲಿ ಜವಳಿ ಪಾರ್ಕ್‌ಗಾಗಿ ಮತ್ತು ಮಂಗಳೂರಿನಲ್ಲಿ export ಸಲುವಾಗಿ Special Economic Zone ಅನ್ನು

ತಾವು ತಂದಿದ್ದೀರಿ. ಮಾನ್ಯ Industries Minister ರವರನ್ನು ನಾನು ಕೇಳುತ್ತೇನೆ, ಈ Special Economic Zone ಅನ್ನು ಕೇವಲ ಮಲೆನಾಡು ಮತ್ತು ಕರಾವಳಿ ಪ್ರದೇಶಕ್ಕೆ ಸೀಮಿತಗೊಳಿಸಿ ಮಾಡಿದರೆ ಆಗುವುದಿಲ್ಲ. ಈಗ ತಾವು ನಮ್ಮ ಭಾಗದ ಅದರಲ್ಲೂ ವಿಶೇಷವಾಗಿ ಆರ್ಥಿಕವಾಗಿ, ಔದ್ಯಮಿಕವಾಗಿ ಹಿಂದುಳಿದಿರುವ ಪ್ರದೇಶಗಳಾದಂಥ ಹೈದರಾಬಾದ್- ಕರ್ನಾಟಕ ಪ್ರದೇಶ, ಉತ್ತರ ಕರ್ನಾಟಕದ ಬಾಂಬೆ ಕರ್ನಾಟಕ ಪ್ರದೇಶದಲ್ಲಿ ಕೂಡ ಕೆಲವೊಂದು area ವನ್ನು Special Economic Zone ಎಂದು ಸರ್ಕಾರದ ಕಡೆಯಿಂದ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ, ಹೊಸಪೇಟೆ ಮತ್ತು ಕೊಪ್ಪಳ ಭಾಗದಲ್ಲಿ mining industry is the major industry. ನಮ್ಮ ರಾಜ್ಯದಲ್ಲಿ ಕಳೆದ ವರ್ಷ major exports ಆಗಿರುವುದೇ mining ನಿಂದ. ನಮ್ಮ ಹೊಸಪೇಟೆ ಮತ್ತು ಕೊಪ್ಪಳ areaದಲ್ಲಿ Steel and Allied Industries ಯ ಒಂದು Special Economic Zone ಅನ್ನು ಸರ್ಕಾರ ಸ್ಥಾಪನೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಹಾಗೆಯೇ ಗುಲ್ಬರ್ಗಾದಲ್ಲಿ Cement Products ಇದೆ. ಈಗಾಗಲೇ ಸುಮಾರು 10-20 Cement Factories ಗುಲ್ಬರ್ಗಾದಲ್ಲಿ ಇವೆ. ಮಾನ್ಯ ಮುಖ್ಯಮಂತ್ರಿಯವರು ಅದೇ ಪ್ರದೇಶದಿಂದ ಬಂದಿರುವುದರಿಂದ ಅವರಿಗೆ ಬಹಳ ಚೆನ್ನಾಗಿ ಗೊತ್ತು. ಈ Cement Industryಯನ್ನು ಕೂಡ ತಾವು ಈ Special Economic Zone ನಲ್ಲಿ ತರಬೇಕು. ರಾಯಚೂರು, ಬಿಜಾಪುರ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಪ್ರದೇಶಗಳೇನಿವೆ. ಈ ಯೋಜನೆಯಲ್ಲಿ ಈಗಾಗಲೇ ಸುಮಾರು 20ರಿಂದ 25 ಲಕ್ಷ ಎಕರೆ ಆ ಪ್ರದೇಶದಲ್ಲಿ ನೀರಾವರಿ ಆಗುತ್ತಿದೆ. ಅದಕ್ಕಾಗಿ Food Processing Units ಗೆ ಕೂಡ ತಾವು ಆ ಭಾಗದಲ್ಲಿ Special Economic Zone ಅನ್ನು ಮಾಡಬೇಕಾಗುತ್ತದೆ. ಅದರ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳು ಹೆಚ್ಚು ಗಮನವನ್ನು ಹರಿಸುತ್ತಾರೆಂದು ನಾನು ಹೇಳಬಯಸಲಿಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು: ಶ್ರೀ ರಾಯರೆಡ್ಡಿಯವರೆ, ಬೇಗ ಮುಗಿಸಿ. ಈಗಾಗಲೇ ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 35 ನಿಮಿಷಗಳಾಯಿತು. ಬಹಳ ಜನ ಮಾತನಾಡುವವರು ಇದ್ದಾರೆ. ದಯಮಾಡಿ ಇನ್ನು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವ ಮಧ್ಯೆ ಸುಮಾರು 20 ನಿಮಿಷಗಳಷ್ಟು ಸಮಯ ಬೇರೆ ಬೇರೆ ಸದಸ್ಯರು ಮಾತನಾಡಲಿಕ್ಕೆ ತೆಗೆದುಕೊಂಡರು. ಆದಷ್ಟು ಬೇಗ ಮುಗಿಸುತ್ತೇನೆ. ಈಗಾಗಲೇ ಹೇಳಿದಂತೆ, ಇವತ್ತು ನಮ್ಮ ರಾಜ್ಯದಲ್ಲಿ ಮಾನ್ಯ ಸಂಪನ್ಮೂಲ ಅಭಿವೃದ್ಧಿ ಮತ್ತು ವಿಶೇಷವಾಗಿ ನಮ್ಮ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಬೇಕಾಗಿದ್ದರೆ, ನಾವು ಮೂಲಭೂತ

ಸೌಕರ್ಯಗಳನ್ನು ಕೊಡಲೇಬೇಕಾಗುತ್ತದೆ. ಇವತ್ತು ಸರಿಯಾದಂಥ ರಸ್ತೆ, ಸರಿಯಾದಂಥ ರೈಲು ಮಾರ್ಗ, ಸರಿಯಾದಂಥ ವಿಮಾನ, ಸರಿಯಾದ ಬೇರೆ ಬೇರೆ ಸಮೂಹ ಸಾರಿಗೆ ವ್ಯವಸ್ಥೆಗಳನ್ನು ನಾವು ಮಾಡದಿದ್ದರೆ, infrastructure ಅನ್ನು ನಾವು ಕೊಡದಿದ್ದರೆ ನಾವು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇವೆಲ್ಲವು ನಮ್ಮ ಕೈಗಾರಿಕೆಗೆ ಪೂರಕವಾದ ಎಲ್ಲ ಅನುಕೂಲತೆಯನ್ನು ಒದಗಿಸುತ್ತವೆ. ಆ ವಿಚಾರದಲ್ಲಿ ಒಳ್ಳೆಯ ಗುಣಮಟ್ಟದ ರಸ್ತೆಗಳನ್ನು ಮಾಡುವುದಕ್ಕೆ ಈ ನಮ್ಮ ಸರ್ಕಾರ ಕೈಗೆತ್ತಿಕೊಂಡಿದೆ ಎಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಸನ್ಮಾನ್ಯ ಧರಂಸಿಂಗ್‌ರವರು ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ 13 Corridor project ಎಂದು ಸುಮಾರು 2000 ಕಿ.ಮೀ. ರಸ್ತೆಗಳನ್ನು International standard ನಲ್ಲಿ ಮಾಡುವಂಥ ಯೋಜನೆಯನ್ನು ಮಾಡಿದ್ದಾರೆ. ಈಗಾಗಲೇ ಹಲವಾರು ಒಳ್ಳೆಯ ರಸ್ತೆ ಕಾಮಗಾರಿಗಳು ಪ್ರಾರಂಭವಾಗಿವೆ. ಅದೇ ತರಹ ಇವತ್ತು ರೈಲು ಮಾರ್ಗಗಳನ್ನು ಕೆಲವು ಕಡೆ ತಾವು ತೆಗೆದುಕೊಂಡಿದ್ದೀರಿ. ಅದರ ಬಗ್ಗೆ ನಾನು ನಂತರ ಮಾತನಾಡುತ್ತೇನೆ. ಅದಕ್ಕಿಂತ ಮುಖ್ಯವಾಗಿ ಈ Bangalore International Airport ಬಗ್ಗೆ ನಾವು ಮಾತನಾಡಬೇಕಾಗುತ್ತದೆ. ನಾನು ಈಗಾಗಲೇ ಹೇಳಿದಂತೆ ಇವತ್ತು ಬೇರೆ ಬೇರೆ ರಾಜ್ಯಗಳಿಂದ, ಬೇರೆ ಬೇರೆ ದೇಶಗಳಿಂದ ನಮ್ಮ ಕರ್ನಾಟಕಕ್ಕೆ ಬೆಂಗಳೂರಿಗೆ ಜನ ಬರಬೇಕಾದರೆ ಒಂದು ಒಳ್ಳೆಯ ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ ಬೇಕಾಗುತ್ತದೆ. ಕಳೆದ 10 ವರ್ಷಗಳಿಂದ ಅಂದರೆ 1995ರಲ್ಲಿ ಬೆಂಗಳೂರಿನಲ್ಲಿ ಒಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಬೇಕೆಂದು ಆವತ್ತಿನ ಸರ್ಕಾರ ತೀರ್ಮಾನವನ್ನು ಮಾಡಿ land ಅನ್ನು ಗುರುತಿಸಿತು. ಆದರೆ ಕಳೆದ 10 ವರ್ಷಗಳಿಂದ ಇವತ್ತಿನವರೆಗೂ ಕೂಡ International Airport ಆಗಲಿಲ್ಲ. ಮೊನ್ನೆ ತಾನೆ financial closure ಆಗಿದೆ. ಕಳೆದ ತಿಂಗಳು International Airport ಸಲುವಾಗಿ financial year closure ಆಯಿತು. ಟಾಟಾ ಅವರ ಜೊತೆ ಒಪ್ಪಂದವಾದದ್ದು 10 ವರ್ಷಗಳ ಹಿಂದೆ. ಅದು ಮುಗಿದು ಬಿದ್ದುಹೋಯಿತು.

ಕೇಂದ್ರ ಸರ್ಕಾರದಲ್ಲಿ ಅವತ್ತಿನ ದಿವಸ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಲಿಲ್ಲ. ಇವತ್ತು ಏನಾಗಿದೆ. ನಮ್ಮವರು ಇಬ್ಬರು ಸಿವಿಲ್ ಏವಿಯೇಷನ್ ಮಿನಿಸ್ಟರ್ ಆದರು. ನಮ್ಮ ರಾಜ್ಯದವರು– ಇಬ್ಬರು ಸಿವಿಲ್ ಏವಿಯೇಷನ್ ಮಿನಿಸ್ಟರ್ ಆದರೂ ಕೂಡ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಕೊಡುವುದರಲ್ಲಿ ವಿಫಲರಾದರು. ಇವತ್ತು ಇಬ್ಬರಾದರಲ್ಲ, ಅನಂತ ಕುಮಾರ್ ಆಗಿದ್ದರು. ಸಿ.ಎಂ. ಇಬ್ರಾಹಿಂ ಆಗಿದ್ದರು. ಆದರೆ, ಇವತ್ತು ನಮ್ಮ....

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು): ರಾಯರೆಡ್ಡಿಯವರೆ, ಮನವಿ

ಮಾಡಿಕೊಳ್ಳುವುದೇನೆಂದರೆ, ಅವರೆಲ್ಲರೂ ಕಳೆದ 9–10 ವರ್ಷಗಳಿಂದ, ಈ ಪ್ರಯತ್ನ ನಡೆದಿದೆ. ಈಗ ಸದನದಲ್ಲಿದ್ದವರ ಹೆಸರನ್ನು ತೆಗೆದುಕೊಂಡು ಅವರನ್ನು ಡಿಫೆಂಡ್ ಮಾಡಿಕೊಳ್ಳಲಾಗುವುದಿಲ್ಲ. ಅವರ ಕಾಲದಲ್ಲಿ ಅವರೇನು ಮಾಡಿದರು ಎಂದು ಹೇಳಿ. ಈಗ ಅದನ್ನು ನನಗೆ ಅನಿಸುವುದು. ನನ್ನ ಸಲಹೆ ನಿಮಗೆ, you want to make out a point that the work has started.

ಅದನ್ನು ಹೇಳಿ. ಬೇರೆಯವರು ಇಬ್ರಾಹಿಂ ಇದ್ದಾಗ ಮಾಡಲಿಲ್ಲ, ಮತ್ತೊಬ್ಬರು ಮಾಡಲಿಲ್ಲವೆಂದು ಹೇಳಿ ಅವರ ಹೆಸರನ್ನು ತೆಗೆದುಕೊಳ್ಳುವುದು ಮತ್ತೆ ನಮ್ಮ ವಿಶ್ವೇಶ್ವರ ಹೆಗಡೆಯವರು ಡಿಫೆಂಡ್ ಮಾಡಿಕೊಳ್ಳಲೇಬೇಕಾಗುತ್ತದೆ. ಇಬ್ರಾಹಿಂರನ್ನು ನಾನು ಡಿಫೆಂಡ್ ಮಾಡಿಕೊಳ್ಳಬೇಕಾಗುತ್ತದೆ. ಆದುದರಿಂದ, ಇದೆಲ್ಲ ಆಗುತ್ತದೆ. ಬೇಡ, ದಯವಿಟ್ಟು.

ಶ್ರೀ ಬಸವರಾಜ ರಾಯರೆಡ್ಡಿ: ಅಲ್ಲ, ನೋಡಿ, ನಾನು ಅವರ ಮೇಲೆ ಅಪಾದನೆ ಮಾಡಲಿಲ್ಲ. ನಾನು ಹೇಳಿದ್ದು, ಅವರು ಸಿವಿಲ್ ಏವಿಯೇಷನ್ ಮಿನಿಸ್ಟರ್ ಆಗಿದ್ದರೂ ಕೂಡ...

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಡೆಲ್ಲಿಯಲ್ಲಿ ತಾವು ಇದ್ದು ಏನೇನು ಸಾಧನೆ ಮಾಡಿದಿರಿ ಎಂದು ದಯವಿಟ್ಟು ತಿಳಿಸಿದರೆ, ನಮಗೆಲ್ಲ ಸಂತೋಷವಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ: ಅಧ್ಯಕ್ಷರೆ, ನಾನೇನು ಅವರ ಮೇಲೆ ಅಪಾದನೆ ಮಾಡಲಿಲ್ಲ. ನಾನು ಹೇಳಿದ್ದು, ಇದನ್ನು ಕೊಡುವುದರಲ್ಲಿ ವಿಫಲರಾದರು ಅಂತ ಅಷ್ಟೇ ಹೇಳಿದ್ದು ನಾನು. ಈಗ ......

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ರಾಯರೆಡ್ಡಿಯವರೆ, ವಿಫಲರಾದರು ಎಂದರೂ ಅಷ್ಟೇನೇ. ಸತ್ಯಕ್ಕೆ ದೂರವಾದ್ದು ಎಂದು ಹೇಳಿದರೂ ಅಷ್ಟೇನೇ.

ಶ್ರೀ ಬಸವರಾಜ ರಾಯರೆಡ್ಡಿ: ಯಾವುದಾದರೂ...

ಅಧ್ಯಕ್ಷರು: ಬೇಗ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ: ಆಯಿತು ಅಧ್ಯಕ್ಷರೆ, ಈಗ ಅದಾಗಲಿ, ಈಗ ಬಹಳ ಸಂತೋಷ. ನಮ್ಮ ಸರ್ಕಾರ, ಧರ್ಮಸಿಂಗ್‌ರವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈಗಾಗಲೇ ನಾನು ಹೇಳಿದಂತೆ, ಫೈನಾನ್ಷಿಯಲ್ ಕ್ಲೋಸರ್ ಆಗಿದೆ. ಇಷ್ಟರಲ್ಲಿ ಪ್ರಧಾನ ಮಂತ್ರಿಗಳೂ ಕೂಡ ಅವರ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇಷ್ಟರಲ್ಲೇ ಕೆಲಸ ಪ್ರಾರಂಭವಾಗುತ್ತದೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಳೆದ 10 ವರ್ಷಗಳಿಂದ ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಪ್ರಾರಂಭವಾಗುತ್ತಿದೆ. ಪ್ರಾರಂಭವಾಗುತ್ತಿದೆ ಎಂದು ಹೇಳಿ, ಆಗಿದೆ ಎಂದು ಹೇಳುತ್ತಾರೆ. ಅದು ಮುಗಿದ ಮೇಲೆ ನಂಬಬೇಕು ಈಗ ಏಕೆ ಈ ಉದಾಹರಣೆ

ಕೊಡುತ್ತೇನೆಂದರೆ, ಹೈದರಾಬಾದ್‌ನಲ್ಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ 2003–04ನಲ್ಲಿ ಪ್ರಾರಂಭ ಮಾಡಿದರು. ಅದೂ 1500 ಕೋಟಿ ರೂಪಾಯಿಗಳಲ್ಲಿ. ಈಗಾಗಲೇ ಜಿ.ಎಂ.ಆರ್. ರಾವ್ ಕಂಪನಿ ಜೊತೆ ಅಗ್ರಿಮೆಂಟ್ ಆಗಿ, ಈಗ ಕೆಲಸ ಪ್ರಾರಂಭ ಆಗಿಹೋಗಿದೆ. ಅಧ್ಯಕ್ಷರೆ, ಅಲ್ಲಿ ಇನ್ನೂ ಫೈನಾನ್ಷಿಯಲ್ ಕ್ಲೋಸರ್ ಆಗಿಲ್ಲ. There is not even the financial closure ಆಗಲೇ ಕೆಲಸವನ್ನು ಪ್ರಾರಂಭ ಮಾಡಿಬಿಟ್ಟಿದ್ದಾರೆ. ಪ್ರಾರಂಭ ಮಾಡಿ, ಈಗ ಹೈದರಾಬಾದ್‌ನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ 1500 ಕೋಟಿಯಲ್ಲಿ ಪ್ರಾರಂಭವಾಗಿದೆ. ನಮ್ಮದು 1200 ಕೋಟಿ. 1200 ಕೋಟಿಯಲ್ಲಿ ಕೂಡ ಇನ್ನೂ ಕೆಲಸ ಮಾಡಲಿಕ್ಕೆ ಈಗ ಪ್ರಾರಂಭವಾಗುತ್ತದೆ ಎನ್ನುವಂಥ ಮಾತನ್ನು ಇಂಡಸ್ಟ್ರಿ ಮಿನಿಸ್ಟರ್ ಹೇಳಿದ್ದಾರೆ. ಬೇಗನೆ ಪ್ರಾರಂಭ...

ಶ್ರೀ ಪಿ.ಜಿ.ಆರ್. ಸಿಂಧ್ಯ: ನನಗನ್ನಿಸುತ್ತದೆ, ರಾಯರೆಡ್ಡಿಯವರು ಒಂದು ಪರ್‌ಫಾರ್ಮೆನ್ಸ್ ರಿಪೋರ್ಟ್ ಬರಲಿಲ್ಲವೆಂದು ಹೇಳಿದರು. ಪರ್‌ಫಾರ್ಮೆನ್ಸ್ ರಿಪೋರ್ಟ್ ಅನ್ನು ನಾವು ನಿನ್ನೆನೇ ಕೊಟ್ಟುಬಿಟ್ಟಿದ್ದೇವೆ. ಅದನ್ನು ಅವರು ಓದಿಕೊಂಡು ಬರುವುದಕ್ಕೆ ಸಮಯದ ಅಭಾವವಿರಬಹುದು, ಏನೋ ಅದು ನನಗೆ ಗೊತ್ತಿಲ್ಲ ಮೊದಲನೆಯದಾಗಿ. ಎರಡನೆಯದಾಗಿ, ಈಗ ಹೈದರಾಬಾದ್ ಏರ್‌ಪೋರ್ಟ್ ಜೊತೆಯಲ್ಲಿ ಖಂಡಿತವಾಗಿ ನಾವು ಕಾಂಪಿಟ್ ಮಾಡುತ್ತಿಲ್ಲ. ಹೈದರಾಬಾದ್‌ನವರು ಹೈದರಾಬಾದ್ ಮಾಡಿದ್ದಾರೆ. ಅಲ್ಲಿಯ ರಾಜ್ಯ ಸರ್ಕಾರದವರು ಏನು ಬೇಕೋ ಅದನ್ನು ಮಾಡಿಕೊಂಡಿದ್ದಾರೆ. As far as our air-port is concerned, ಕೆಲಸ ಪ್ರಾರಂಭವಾಗಿದೆ. ಫೈನಾನ್‌ಷಿಯಲ್ ಕ್ಲೋಸರ್ ಆಗಿದೆ. ಜುಲೈ 1ನೇ.... ಸ್ವಲ್ಪ ಕೇಳಿ. ತಾಳ್ಮೆಯಿಂದ ಕೇಳಿ. ಜುಲೈ 1ನೇ ತಾರೀಖಿನಿಂದ ಕೆಲಸ ಶುರುವಾಗಿದೆ. ನಮ್ಮ ಕನ್ಸಾರ್ಟಿಯಂನವರು ಎಲ್ಲ ಕೆಲಸವನ್ನೂ ಪ್ರಾರಂಭ ಮಾಡಿದ್ದಾರೆ. ತಾವೆಲ್ಲ ಬಯಸೋದಾದಲ್ಲಿ, ನಾನು ಆ ಕಂಪನಿಯವರಿಗೆ ಹೇಳುತ್ತೇನೆ, ಶ್ರೀಮಾನ್ ನಾರಾಯಣಮೂರ್ತಿಯವರು ಅಧ್ಯಕ್ಷರು, ಬಿಐಎಲ್ ಕಂಪನಿಯವರಿಗೆ ಹೇಳುತ್ತೇನೆ, ಶಾಸಕರು ಬಯಸಿದಲ್ಲಿ ಹೋಗಿ ನೋಡಿ. ಕೆಲಸ ಆಗಿದೆಯೋ, ಇಲ್ಲವೋ, ಪ್ರಾರಂಭವಾಗಿರುವುದನ್ನು ನೋಡಬಹುದು. ಬೇಕಾದರೆ I will arrange for a trip also ವ್ಯವಸ್ಥೆ ಮಾಡಿಸೋಣ.

ಶ್ರೀ ಬಸವರಾಜ ರಾಯರೆಡ್ಡಿ: ವ್ಯವಸ್ಥೆ ಮಾಡಿ. ಏಕೆಂದರೆ, ಕೆಲಸ... ತೋಳ ಬಂತು ತೋಳ ಎನ್ನುವ ಹಾಗಾಗಿ ಬಿಟ್ಟಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಒಂದೇ ಅಲ್ಲ. ಬರುವುದು ಬಿಡದಿಯಲ್ಲಿ ಇಲ್ಲ ಈಗ. ಅದೊಂದೇ, ದೇವನಹಳ್ಳಿಯದು. ಬಿಡದಿಯದ್ದು ಕ್ಲೋಸ್ ಆಯಿತಲ್ಲವಾ? ಬಿಡದಿಯದ್ದು ಕ್ಲೋಸ್ ಆಯಿತೀಗ.

ಬಿಡದಿಯದ್ದು ಕ್ಲೋಸ್ ಆಗಿ, ದೇವನಹಳ್ಳಿಯದ್ದು ಓಪನ್ ಆಯಿತೀಗ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಯಾವ ಉದ್ದೇಶದಿಂದ ಬಿಡದಿಯದ್ದು ಪ್ರಸ್ತಾಪ... ಎಂದು ನನಗೆ ಗೊತ್ತಿಲ್ಲ. ಆದರೆ ನಾನು ಇನ್‌ಫ್ರಾಸ್ಟ್ರಕ್ಚರ್ ಮಿನಿಸ್ಟರ್ ಆದ ಮೇಲೆ ಎಲ್ಲಾ ಕಡತಗಳನ್ನೂ ನಾನು ಬಹುತೇಕ ಕಡತಗಳನ್ನು ಮಾನ್ಯ ಹಣಕಾಸಿನ ಸಚಿವರು, ನಾವಿಬ್ಬರು ಸಹ ಪರಿಶೀಲಿಸಿದ್ದೇವೆ. ಎಲ್ಲಿಯೂ ಸಹಿತ ಬಿಡದಿಯಲ್ಲಿ ಏರ್‌ಪೋರ್ಟ್ ಮಾಡಬೇಕು ಎನ್ನತಕ್ಕಂಥ ಪ್ರಸ್ತಾವನೆ ಬಂದಿಲ್ಲ ಸ್ವಾಮಿ. ನಾನು ಖಚಿತವಾಗಿ ಈ ಮಾಹಿತಿಯನ್ನು ತಮಗೆ ಕೊಡಬಹುದು. ಈಗಾಗಲೇ ದೇವನಹಳ್ಳಿಯಲ್ಲಿ ಪ್ರಾರಂಭವಾಗಿದೆ. ಇನ್ನು ಬೇರೆ ಬೇರೆ ಅಪಶಕುನಗಳು ಏಕೆ? ಸುಮ್ಮನೆ ಇದ್ದುಬಿಡಿ. ಕೆಲಸ ಪ್ರಾರಂಭವಾಗಿದೆ–ಆಗಲೇ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಿದ್ದೆ ಮಾಡುವವರನ್ನು ಎಬ್ಬಿಸಬಹುದು. ನಿದ್ದೆ ಮಾಡಿದ ಹಾಗೆ ಮಲಗಿದವರಿಗೆ ಎಬ್ಬಿಸುವುದು ಬಹಳ ಕಷ್ಟ. ಈಗ ಜನತಾ ದಳ ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ನಾವೆಲ್ಲ ಅಲ್ಲಿ ಇದ್ದೀವಿ. ಮಾನ್ಯ ಸಿಂಧ್ಯಾರವರೂ ಅಲ್ಲಿ ಇದ್ದರು. ಯಾವ್ಯಾವುದು, ಏನೇನಾಯಿತು, ಕಾರಣವೇನು ಎಂತೆಲ್ಲ ಗೊತ್ತು. ನಿಧಾನವಾಯಿತು, ನಿಧಾನ ಆಯ್ತು, ಅಲ್ಲಿ ಮೊದಲು ಮಾಡಿಬಿಟ್ಟರು..... ರಿಯಲ್ ಎಸ್ಟೇಟ್ ಮಾಡುವವರು ಇಲ್ಲಿ ಪ್ರಬಲವಾಗಿದ್ದರು. ರಾಜಕೀಯ ವಲಯಗಳಲ್ಲಿ ರಿಯಲ್ ಎಸ್ಟೇಟ್ ಏಜೆಂಟ್ಸ್ ಇದ್ದರು. ಅಲ್ಲಿ ಆಡಳಿತ ನಡೆಸುವವರು ಮಧ್ಯೆ ರಿಯಲ್ ಎಸ್ಟೇಟ್ ಏಜೆಂಟ್ಸ್ ಇರಲಿಲ್ಲ. ಅದಕ್ಕಾಗಿ ಬೇಗ ಆಯಿತು. ಇಲ್ಲಿ ನಿಧಾನ ಆಗುತ್ತಾ ಇದೆ. ಇದು ಹೇಳುವುದಕ್ಕೆ ಧೈರ್ಯ ಇರಬೇಕು. ನಿಮಗೆ ಎಲ್ಲ ಗೊತ್ತಿದ್ದು ಏಕೆ... ನಿಧಾನ ಆಗಿ ಹೋಯ್ತು, ನಿಧಾನ ಆಗಿಹೋಯ್ತು... ಏಕೆ ನಿಧಾನ ಆಯಿತೆಂದು ಜ್ಯೋತಿಷ್ಯ ಕೇಳಿ, ಹೇಳುತ್ತಾರೆ. ಬಿಡದಿಯದ್ದು ರೆಕಾರ್ಡ್ ಇಲ್ಲ. ನಿಜ. ತಮಗೆ ಗೊತ್ತಿಲ್ಲವೆ? ಕನಕಪುರ, ರಾಮನಗರ ಎಲ್ಲ ಪಕ್ಕ ಪಕ್ಕದಲ್ಲಿರುವುದು. ಎಲ್ಲ ನಮ್ಮ ನಮ್ಮ ನರಗಳೆಲ್ಲ ಹೇಗೆ ಹೇಗೆ ಇವೆ ಎಂದು ತಮಗೆ ಅಂದಾಜು ಇಲ್ಲವೇ? ತಾವು ನಗುತ್ತಾ ಉತ್ತರ ಕೊಟ್ಟಾಗಲೇ ನನಗೆ ಗೊತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಖಂಡಿತವಾಗಿ ನಾನು ಹೇಳುತ್ತೇನೆ, ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡಿದ್ದಾರೆ. ಈಗ ಎರಡು ಆಪಾದನೆಯನ್ನು ಮಾನ್ಯ ರಮೇಶ್ ಕುಮಾರ್‌ರವರು ಮಾಡಿದ್ದಾರೆ. ಒಂದು, ಬಿಡದಿಯಲ್ಲಿ ನಾನು ಖಚಿತವಾಗಿ ಹೇಳುತ್ತಿದ್ದೇನೆ, ರೆಕಾರ್ಡ್ಸ್‌ನಲ್ಲಿ ಎಲ್ಲೂ ಸಹಿತ ಇಲ್ಲ. ಇದು ಮೊದಲನೆಯದು. ಎರಡನೆಯದಾಗಿ, ಅಲ್ಲಿ ಪ್ರಸ್ತಾವನೆ ಬಂದೇ ಇಲ್ಲ. ಈಗ ಬೇರೆ ಬೇರೆ ಊಹಾಪೋಹಗಳಿಗೆಲ್ಲ ನಾನು ವಿಧಾನಸಭೆಯಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ ಸ್ವಾಮಿ. ಇನ್ನು, ಎರಡನೆಯದಾಗಿ ಕಳೆದ 12 ತಿಂಗಳಲ್ಲಿ ನಾವೇನು ಕೆಲಸ ಮಾಡಿದ್ದೇವೆ ಎನ್ನುವುದನ್ನು ನಾಳೆ ಉತ್ತರ ಕೊಡುವ ಸಂದರ್ಭದಲ್ಲಿ ಡೇಟ್‌ವೈಜ್ ಧರ್ಮಸಿಂಗ್

ಸಮ್ಮಿಶ್ರ ಸರ್ಕಾರ ಬಂದ ಮೇಲೆ ನಾವು ಯಾವ್ಯಾವ ಫೈಲ್ಸ್ ಅನ್ನು, ಯಾವ್ಯಾವ ಅಗ್ರಿಮೆಂಟ್ ಅನ್ನು, right from the concession agreement from the Airport Authority of India till the financial closer

12 ತಿಂಗಳಲ್ಲಿ ಎಲ್ಲಿ ಡಿಲೇ ಆಗಿದೆ ಅನ್ನುವುದನ್ನು ತೋರಿಸಿ. ನಾನು ಒಪ್ಪಿಕೊಳ್ಳುತ್ತೇನೆ. ನಾನು ಹಿಂದಿನದ್ದು ಮಾತನಾಡುವುದಕ್ಕಾಗುವುದಿಲ್ಲ. ಈ 12 ತಿಂಗಳಲ್ಲಿ ನಾನು ಮಂತ್ರಿಯಾದ ಮೇಲೆ ಏನಾಗಿದೆ ಅನ್ನುವುದನ್ನು ಸದನದ ಮುಂದೆ ಹೇಳುತ್ತೇನೆ. ಆಮೇಲೆ ತಾವು ಅದಕ್ಕೆ ಏನು ಬೇಕಾದರೂ ಮಾತನಾಡಬಹುದು.

ಶ್ರೀ ಬಸವರಾಜ ರಾಯರೆಡ್ಡಿ: we have all appreciation. ಸಿಂಧ್ಯವರೆ, ನಾನು ಹೇಳಿದ್ದು, ಈ ವರ್ಷದಲ್ಲಿ ಫೈನಾನ್ಷಿಯಲ್ ಕ್ಲೋಸರ್ ಆಗಿದೆ. ಕೆಲಸ ಪ್ರಾರಂಭವಾಗಿದೆ ಅನ್ನುವಂಥ ಮಾತನ್ನು ನಾನು ಹೇಳಿದೆ. 10 ವರ್ಷ ಏಕೆ ವಿಳಂಬವಾಯಿತು ಎನ್ನುವ ಬಗ್ಗೆ ನಾನು ಕೇಳಿದೆ ಅಷ್ಟೇನೇ. ಅದಕ್ಕಾಗಿ ಮಾನ್ಯ....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಉತ್ತರ ಏಕೆ ನಿಧಾನವಾಯಿತು ಎನ್ನುವುದಕ್ಕೆ ನೀವೇ ಕೊಡಬೇಕು.

ಶ್ರೀ ಬಸವರಾಜ ರಾಯರೆಡ್ಡಿ: ಮಂತ್ರಿಗಳು ಕೊಡುತ್ತಾರೆ. ನಾನು ಇಂಡಸ್ಟ್ರಿ ಮಿನಿಸ್ಟರ್ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಧಾನ ಆಗತಕ್ಕಂಥ ಪ್ರೋಸೆಸ್‌ನಲ್ಲಿ...

ಅಧ್ಯಕ್ಷರು: ರಾಯರೆಡ್ಡಿಯವರೆ, ದಯಮಾಡಿ ಮುಗಿಸಿ ಎಂದರೆ ಇದೇನಿದು?

ಶ್ರೀ ಬಸವರಾಜ ರಾಯರೆಡ್ಡಿ: ಕೇಳುವುದರಲ್ಲೇ ಇದ್ದೇನೆ, ಅವರು ಹೇಳುವುದರಲ್ಲಿ ಇದ್ದಾರೆ. ಆಗಲಿ, ನಾನು... ಬಹಳ ಸಂತೋಷ. ಈ ಒಂದು ವರ್ಷದಲ್ಲಿ ನಮ್ಮ ಸರ್ಕಾರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಪ್ರಾರಂಭ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದೆ. ನಾನು ಈಗಾಗಲೇ ಹೇಳಿದೆ. ಕೆಲಸ ಏನು ಈಗ ಫೈನಾನ್ಷಿಯಲ್ ಕ್ಲೋಸರ್ ಮಾಡಿ, ಕೆಲಸ ಪ್ರಾರಂಭ ಮಾಡಿದ್ದಾರೆ. ಇದನ್ನು ತ್ವರಿತವಾಗಿ ಮಾಡಿ ತೋರಿಸಿ ಎಂದು ಹೇಳಿ, ನಾನು ಇಲ್ಲಿ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಮತ್ತೆ ಅಧ್ಯಕ್ಷರೆ...

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ: ಸಾರ್... ನನ್ನದೇನು ತಪ್ಪಿದೆ? ಬೇರೆ ಬೇರೆ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಸಿಕ್ಕಿದ್ದರಿಂದ...

ಅಧ್ಯಕ್ಷರು: ಬೇರೆ ಬೇರೆ ಸದಸ್ಯರು ನೀವು ಯೀಲ್ಡ್ ಆಗದಿದ್ದರೆ ಏಕೆ ಮಾತನಾಡುತ್ತಾರೆ?

ಶ್ರೀ ಬಸವರಾಜ ರಾಯರೆಡ್ಡಿ: ಆಯಿತು ಸಾರ್. ನಾನು ಯೀಲ್ಡ್ ಆಗುವುದಿಲ್ಲ.

ಅಧ್ಯಕ್ಷರು: ಪ್ರತಿಯೊಂದಕ್ಕೂ ನೀವು ಯೀಲ್ಡ್ ಆಗುತ್ತೀರಿ. ನಿಮ್ಮ ಸಮಯ ಆಗುತ್ತಿದೆ. 15 ನಿಮಿಷ... ಮುಕ್ಕಾಲು ಗಂಟೆ ಆಯಿತು. ಬೇರೆ ಬೇರೆ ಸದಸ್ಯರು ಮಾತನಾಡಬಾರದೇನು?

ಶ್ರೀ ಬಸವರಾಜ ರಾಯರೆಡ್ಡಿ: ಆಯಿತು ಸಾರ್, ತಮ್ಮ ಸಲಹೆಯನ್ನು ಒಪ್ಪುತ್ತೇನೆ. ಇನ್ನು ಮೇಲೆ ಯೀಲ್ಡ್ ಆಗುವುದಿಲ್ಲ ಸಾರ್.

ಅಧ್ಯಕ್ಷರು: ಏನು, ಅರ್ಥವಾಗುವುದಿಲ್ಲ...

ಶ್ರೀ ಬಸವರಾಜ ರಾಯರೆಡ್ಡಿ: ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಅನ್ನು ಬಹಳ ತ್ವರಿತವಾಗಿ ಮುಗಿಸಲೇಬೇಕಾಗುತ್ತದೆ. ಏಕೆಂದರೆ, ಇಂಟರ್‌ನ್ಯಾಷನಲ್ ಪ್ಯಾಸೆಂಜರ್ ಟ್ರಾಫಿಕ್ ಇನ್ ಬೆಂಗಳೂರು, ಕರ್ನಾಟಕದಿಂದ ಎಷ್ಟಿದೆ? ಅಧ್ಯಕ್ಷರೆ, ಮುಂಬೈನಿಂದ ಹೋಗುವಂಥ ಅಂತರರಾಷ್ಟ್ರೀಯ ಪ್ಯಾಸೆಂಜರ್‌ನಲ್ಲಿ 32 ಪರ್ಸೆಂಟ್ ಜನ ಬೆಂಗಳೂರಿನಿಂದ ಪ್ರಯಾಣ ಮಾಡುತ್ತಾರೆ. ಚೆನ್ನೈನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೋಗುವಂಥ ಪ್ರಯಾಣಿಕರಲ್ಲಿ 21 ಪರ್ಸೆಂಟ್ ಜನ ಬೆಂಗಳೂರಿನಿಂದ ಹೋಗುವಂಥದ್ದು. ಅಂದರೆ ಸಾಕಷ್ಟು ಸಂಖ್ಯೆಯಲ್ಲಿ ಏನು ಇವತ್ತು ಅಂತರರಾಷ್ಟ್ರೀಯ ಪ್ರಯಾಣಿಕರಿದ್ದಾರೆ, ಅವರ ಅನುಕೂಲತೆಗೆ ತ್ವರಿತವಾಗಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆಗಬೇಕು ಮತ್ತು ಅದರ ಜೊತೆಗೆ, ಬೇರೆ ಬೇರೆ ಈಗ ನೇರವಾಗಿ ಐಟಿ ಸೆಕ್ಟರ್‌ನಲ್ಲಿ ಕರ್ನಾಟಕ ನಮ್ಮ ದೇಶದಲ್ಲಿ ಅತ್ಯಂತ ಮುಂದಿದೆ. ಈಗ ಯೂರೋಪ್ ದೇಶ, ಅಮೆರಿಕಾ, ಚೈನಾ ದೇಶಗಳಿಗೆ ಬಹಳಷ್ಟು ಜನ ಐಟಿ ಕಂಪನಿಗಳ ಇಂಜಿನಿಯರ್ಸ್ ಇವರೆಲ್ಲ ಬಹಳಷ್ಟು ಪ್ರಯಾಣ ಮಾಡುತ್ತಿರುತ್ತಾರೆ. ಆದರೆ, ನೇರವಾದಂಥ ವಿಮಾನ ಸೌಕರ್ಯ ಬೆಂಗಳೂರಿನಿಂದ ಇಲ್ಲ. ಅದಕ್ಕೆ ನಮ್ಮ ಸಿಂಧ್ಯಾರವರು, ನಮ್ಮ ಇಂಡಸ್ಟ್ರೀಸ್ ಮಿನಿಸ್ಟರ್‌ರವರು ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಲ್ಯಾಂಡಿಂಗ್ ರೈಟ್ಸ್ ಅನ್ನು ಬೇರೆ ಬೇರೆ ವಿಮಾನ ಕಂಪನಿಗಳು ಇಲ್ಲಿ ಬರಲಿಕ್ಕೆ ಪ್ರಯತ್ನವನ್ನು ತಾವು ಮಾಡಬೇಕಾಗುತ್ತದೆ. ಈಗ ನೇರವಾಗಿ ಅಮೆರಿಕಾಕ್ಕೆ ಹೋಗಲಿಕ್ಕೆ, ಯಾವ ವಿದೇಶೀ ಕಂಪನಿಗಳ ಅಥವಾ ಏರ್ ಇಂಡಿಯಾದ ವಿಮಾನ ನಿಲ್ದಾಣದಲ್ಲಿ ವಿಮಾನಗಳು ಹಾರಾಡದೇ ಇರುವುದರಿಂದ, ತೊಂದರೆಯಾಗಿದೆ. ಕೇವಲ ಯೂರೋಪ್‌ಗೆ ಹೋಗಲಿಕ್ಕೆ ಲುಫ್ತಾನ್ಸ್ ಒಂದೇ ಬಿಟ್ಟರೆ ಬೇರೆ ಯಾವುದೇ ಲ್ಯಾಂಡಿಂಗ್ ರೈಟ್ಸ್ ಅನ್ನು ಈವರೆಗೆ ನೀಡಿಲ್ಲ. ಅದಕ್ಕಾಗಿ ತಾವು ಹೆಚ್ಚು ಪ್ರಯತ್ನವನ್ನು ಮಾಡುತ್ತೀರಿ ಮತ್ತು ಇಲ್ಲಿಂದ ಚೈನಾಗೆ ಹೋಗಲಿಕ್ಕೆ, ಹಾಂಕಾಂಗ್‌ಗೆ ಹೋಗಲಿಕ್ಕೆ ನೇರವಾದಂಥ ಪ್ರಯಾಣ ಇಲ್ಲ. ಅದಕ್ಕೆ ಅದನ್ನು ಕೂಡ ತಾವು ಲ್ಯಾಂಡಿಂಗ್ ರೈಟ್ಸ್ ಅನ್ನು ಬೇರೆ ಬೇರೆ ವಿಮಾನ ಕಂಪನಿಗಳಿಗೆ ಪ್ರಯತ್ನ ಮಾಡಿ ಕೊಡಿಸಿದರೆ ನಮ್ಮ ಎಕ್ಸ್‌ಪೋರ್ಟ್ ಇಂಡಸ್ಟ್ರಿಗೆ ಇದರಿಂದ ಹೆಚ್ಚಿನ ಅನುಕೂಲತೆಯಾಗುತ್ತದೆ. ಮತ್ತು ಕಾರ್ಗೋ ಇಂಡಸ್ಟ್ರಿ ಕೂಡ ನಮ್ಮ ಸ್ನೇಹಿತರು

ಹೇಳಿದ ಹಾಗೆ, ಮಾನವ ಸಂಪನ್ಮೂಲ ಅಭಿವೃದ್ಧಿ... ಕಾರ್ಗೋ ಇಂಡಸ್ಟ್ರಿ ಬಹಳ ಮುಖ್ಯ. ಆ ಕಾರ್ಗೋ ಇಂಡಸ್ಟ್ರಿ ಬಂದರೆ, ಇನ್‌ಡೈರೆಕ್ಟ್ ಆಗಿ ಬಹಳ ಉದ್ಯೋಗಗಳು ಅನುಕೂಲತೆಯಾಗುತ್ತದೆ. ಆ ದೃಷ್ಟಿಯಲ್ಲಿ ತಾವು ಬೇರೆ ಬೇರೆ ಕಂಪನಿಗಳ ಲ್ಯಾಂಡಿಂಗ್ ರೈಟ್ಸ್‌ಅನ್ನು ತಾವು ತೆಗೆದುಕೊಳ್ಳಲಿಕ್ಕೆ ಪ್ರಯತ್ನವನ್ನು ತಾವು ಮಾಡುತ್ತೀರಾ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷರೆ ತಾವು ಟೈಂ ಅನ್ನು ಬಹಳ ಕಡಿಮೆ ಕೊಟ್ಟಿದ್ದರಿಂದ ಇನ್ನೊಂದು ಮೂಲಭೂತ ಸೌಕರ್ಯದ ಬಗ್ಗೆ ಇನ್ನೊಂದು ಮಾತನ್ನು ಹೇಳಬೇಕಾಗುತ್ತದೆ. ದೇಶದಲ್ಲಿ ನಮ್ಮ ರೈಲು ಮಾರ್ಗಗಳು ಕೂಡ ಬಹಳ ಮುಖ್ಯ. ಇವತ್ತು ನಮ್ಮ ಕರ್ನಾಟಕದಲ್ಲಿ ಹಲವಾರು ರೈಲು ಮಾರ್ಗಗಳಿಗೆ ಹಿಂದೆ ಎಸ್.ಎಂ. ಕೃಷ್ಣರವರ ಸರ್ಕಾರ ಒಂದು ರೈಲ್ವೆ ಇಲಾಖೆ ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಉದಾಹರಣೆಗೆ ಹಾಸನ– ಮಂಗಳೂರು, ಹುಬ್ಬಳ್ಳಿ– ಅಂಕೋಲ, ಬಿಜಾಪುರ– ಗದಗ್ ಬ್ರಾಡ್‌ಗೇಜ್, ಕೊಟ್ಟೂರು– ಹರಿಹರ, ಹೊಸಪೇಟೆ– ಗುಂತಕಲ್ಲು ಬ್ರಾಡ್‌ಗೇಜ್, ಇದರಲ್ಲಿ ಈಗಾಗಲೇ ಕೆಲವೊಂದು ಹಾಸನ– ಮಂಗಳೂರು ಮತ್ತು ಹೊಸಪೇಟೆ– ಗುಂತಕಲ್ಲು ಮುಗಿಯುವ ಹಂತದಲ್ಲಿ ಬಂದಿದೆ. ಇನ್ನೊಂದು ವರ್ಷದಲ್ಲಿ ಇವೆರಡು ಮುಗಿಯುತ್ತಾ ಇದೆ. ಬಿಜಾಪುರ– ಗದಗ್ ಬ್ರಾಡ್‌ಗೇಜ್ ಇನ್ನು ಕನ್‌ವರ್ಷನ್ ಆಗಬೇಕು ಅದರ ಬಗ್ಗೆ ಈಗಾಗಲೇ ನಮ್ಮ ಉಪಮುಖ್ಯಮಂತ್ರಿಗಳು ಹಾಗೂ ಇಂಡಸ್ಟ್ರಿ ಮಂತ್ರಿಗಳು, ನಮ್ಮ ಪಾಲಿನ ಹಣವನ್ನು ಈಗಾಗಲೇ ಬಿಡುಗಡೆ ಮಾಡಿದ್ದು ಅದನ್ನು ತ್ವರಿತವಾಗಿ ಮಾಡುತ್ತೇವೆಂದು ಹೇಳಿದರು. ಮತ್ತೊಂದು ಬಹಳ ಮುಖ್ಯವಾಗಿ ಆಗಬೇಕಾದುದು, ರೈಲ್ವೆ ಸೌಲಭ್ಯಗಳಲ್ಲಿ ಕೇವಲ ಹಳೆಯ ಮೈಸೂರು ಮತ್ತು ಬಾಂಬೆ ಕರ್ನಾಟಕಕ್ಕೆ ಮಾತ್ರ ರೈಲ್ವೇ ಮಾರ್ಗಗಳಿಗೆ ಸರ್ಕಾರ ಉತ್ತೇಜನವನ್ನು ಕೊಟ್ಟಿದೆ. ಹೈದರಾಬಾದ್ ಕರ್ನಾಟಕದ ಪ್ರದೇಶದ ಯಾವುದೇ ಒಂದು ರೈಲು ಮಾರ್ಗಕ್ಕೆ ಕರ್ನಾಟಕ ಸರ್ಕಾರ ಉತ್ತೇಜನ ನೀಡಿಲ್ಲ. ಬಹಳ ಮುಖ್ಯವಾದ ಎರಡು ರೈಲು ಲೇನ್‌ಗಳು ಹೈದರಾಬಾದ್– ಕರ್ನಾಟಕದಲ್ಲಿವೆ.

ಶ್ರೀ ಸಿ.ಎಸ್. ನಾಡಗೌಡ: ತಾವೇನು ಹೈದರಾಬಾದ್– ಕರ್ನಾಟಕದ ಭಾಗದಲ್ಲಿ ಎಂದು ಹೇಳಿದಿರಿ, ನಿಮ್ಮಲ್ಲಿ ಬರತಕ್ಕಂಥ ಎಲ್ಲಾ ಬ್ರಾಡ್‌ಗೇಜ್ ಮಾರ್ಗಗಳೇನು ಇವೆ ಎಲ್ಲಾ ಇರುವುದು ಗುಲ್ಬರ್ಗಾ, ರಾಯಚೂರು, ಹೊಸಪೇಟೆ ಮಾರ್ಗವಾಗಿ ರಸ್ತೆಗಳು ಇವೆ. ಉತ್ತೇಜನ ಸಿಕ್ಕಿಲ್ಲ ಎನ್ನುವುದು ಬಿಜಾಪುರಕ್ಕೆ ದಯವಿಟ್ಟು, ರೆಕಾರ್ಡ್ ಸ್ಟ್ರೇಟ್ ಮಾಡುವುದಕ್ಕೆ ನೀವು ಈ ರೀತಿ ಮಾತನಾಡುವುದರಿಂದ ಅದು ಬೇರೆ ರೀತಿಯಾಗುತ್ತದೆ. ಈಗಾಗಲೇ ಕನ್‌ವರ್ಷನ್‌ಗೆ ನೀಡಬೇಕಾದಂತ ದುಡ್ಡು ನಮ್ಮ ರಾಜ್ಯ ಸರ್ಕಾರದಿಂದ ಕೊಡಬೇಕಾದ ವಂತಿಗೆ ಹಣ ಇನ್ನೂವರೆಗೆ ಅಲ್ಲಿ ಜಮಾ ಆಗಿಲ್ಲ. ಗದಗ್– ಬಿಜಾಪುರ್ ಅದು ಜಮಾ ಆಗಲಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಅವರು ಕೊಟ್ಟಿದ್ದಾರೆಂದು ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್: 33 ಕೋಟಿ ಕೊಟ್ಟಿದ್ದಾರೆ ಈಗಾಗಲೇ ಅದರ ಬಗ್ಗೆ ಮಂತ್ರಿಗಳು ಹೇಳಿದ್ದಾರೆ. ಅದರ ಬಗ್ಗೆ ಬೇರೆ ಮಾತು ಬೇಡ.

ಶ್ರೀ ಬಸವರಾಜ ರಾಯರೆಡ್ಡಿ: ಹೈದರಾಬಾದ್ -ಕರ್ನಾಟಕದಲ್ಲಿ ಎರಡು ಪ್ರಮುಖವಾದ ರೈಲ್ವೇ ಲೈನ್, ಒಂದು ಮುನಿರಾಬಾದ್ -ಮೆಹಬೂಬುನಗರ, ಇದು ಬಹಳ ಜನರಿಗೆ ನಮ್ಮ ರಾಜ್ಯದಲ್ಲಿ ಇಲ್ಲ ಎನ್ನುವ ಹಾಗೆ ಇದೆ. ಮುನಿರಾಬಾದ್ ಎಲ್ಲಿದೆ? ಕೊಪ್ಪಳ್, ಗಂಗಾವತಿ, ಸಿಂಧನೂರು, ಮಾನ್ವಿ, ರಾಯಚೂರು, ಅಲ್ಲಿಂದ ಹೈದರಾಬಾದ್‌ಗೆ ನೇರವಾಗಿ ಸಂಪರ್ಕ ಕಲ್ಪಿಸುವಂಥ ಬಹಳ ಪ್ರಮುಖವಾದ ರೈಲ್ವೆ ಲೈನ್ ಇದೆ. ಈ ರೈಲ್ವೆ ಲೈನ್ ಹೈದರಾಬಾದ್- ಕರ್ನಾಟಕ ಮತ್ತು ಬಾಂಬೆ-ಕರ್ನಾಟಕವನ್ನು ನೇರವಾಗಿ ಸಂಪರ್ಕಿಸುವುದರ ಜೊತೆಗೆ ಹುಬ್ಬಳ್ಳಿಯಿಂದ ಹೈದರಾಬಾದ್‌ಗೆ ಸುಮಾರು 200 ಕಿಲೋಮೀಟರ್ ಅಂತರ ಕಡಿಮೆಯಾಗುತ್ತದೆ ಜೊತೆಗೆ ಈ ರಾಯಚೂರು ಜಿಲ್ಲೆಯಲ್ಲಿ ಸುಮಾರು ಆರು ಲಕ್ಷ ಎಕರೆ ನೀರಾವರಿಯಲ್ಲಿ ತುಂಗಭದ್ರ ಎಡದಂಡೆ ಕಾಲುವೆಯಿಂದ ಏನು ಫುಡ್ ಗ್ರೇನ್ಸ್ ಬರುತ್ತದೆ. ರೈತರಿಗೆ ಫರ್ಟಿಲೈಸರ್ ಹಾಕಲಿಕ್ಕೆ ಬಹಳ ದೊಡ್ಡ ಅನುಕೂಲವಾಗುತ್ತದೆ. ರಾಯಚೂರು ಥರ್ಮಲ್ ಪವರ್ ಸ್ಟೇಷನ್‌ಗೆ ಗೋವಾ ಬಂದರಿನಿಂದ ನೇರವಾಗಿ ಕಲ್ಲಿದ್ದಲು ಸಾಗಾಣಿಕೆ ಮಾಡಲಿಕ್ಕೆ ಬಹಳ ಅನುಕೂಲವಾಗುತ್ತದೆ. ವಾಣಿಜ್ಯ ದೃಷ್ಟಿಯಿಂದ ಇದು ಬಹಳ ಅನುಕೂಲವಾಗಿರುವುದರಿಂದ, ಈ ವರ್ಷ ಮಾನ್ಯ ಹಣಕಾಸಿನ ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಇಂಡಸ್ಟ್ರಿ ಮಂತ್ರಿಗಳಲ್ಲಿ ಕೇಳುವುದು ಏನೆಂದರೆ, ಈ ರೈಲ್ವೆ ಲೈನನ್ನು ಕೂಡ ತಾವು ಹೇಗೆ ಬೇರೆ ಬೇರೆ ರೈಲ್ವೇ ಲೈನ್‌ಗಳನ್ನು ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ತೆಗೆದುಕೊಂಡಿದಿರಿ ಅದೇ ರೀತಿಯಲ್ಲಿ ಕೂಡ ಈ ಮುನಿರಾಬಾದ್ – ಮೆಹಬೂಬು ನಗರ ರೈಲ್ವೆ ಲೈನನ್ನು ಕೂಡ ಕರ್ನಾಟಕ ಸರ್ಕಾರ ಸಹಯೋಗದಲ್ಲಿ ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಬೀದರ್- ಗುಲ್ಬರ್ಗಾ ಲೈನ್ ಕೂಡ ಪೆಂಡಿಂಗ್ ಇದೆ.

ಶ್ರೀ ಬಸವರಾಜ ರಾಯರೆಡ್ಡಿ: ಮತ್ತೊಂದು ಬೀದರ್- ಗುಲ್ಬರ್ಗಾ ರೈಲ್ವೆ ಲೈನ್, ಇದಕ್ಕೂ ಕೂಡ ಇದೇ ಗತಿ ಇದೆ. ಈ ಲೈನನ್ನು ಕೂಡ ತಾವು ಕರ್ನಾಟಕ ಸರ್ಕಾರದ ಯಾವುದೇ ಆರ್ಥಿಕ ನೆರವಿನ ಒಪ್ಪಂದವನ್ನು ಮಾಡಿಕೊಂಡಿಲ್ಲ. ಅದಕ್ಕೆ ಈ ಎರಡು, ಹೈದರಾಬಾದ್- ಕರ್ನಾಟಕ ಪ್ರದೇಶದಲ್ಲಿರುವಂಥ ಗುಲ್ಬರ್ಗಾ-ಬೀದರ್, ಮುನಿರಾಬಾದ್- ಮೆಹಬೂಬುನಗರ, ಅಂದರೆ, ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಬೀದರ್, ಈ ನಾಲ್ಕು ಜಿಲ್ಲೆಗಳಿಗೆ ಅನುಕೂಲ ಮಾಡುವುದರ ಜೊತೆಗೆ

ಇಡೀ ಉತ್ತರ ಕರ್ನಾಟಕವನ್ನು ನೇರವಾದ ಸಂಪರ್ಕವನ್ನು ಕಲ್ಪಿಸಿದಂತಾಗುತ್ತದೆ. ಆದುದರಿಂದ ಈ ಎರಡು ರೈಲ್ವೇ ಲೈನ್‌ಗಳನ್ನು ತಾವು ರೈಲ್ವೇ ಇಲಾಖೆಯ ಜೊತೆಗೆ ಒಪ್ಪಂದವನ್ನು ಮಾಡಿಕೊಂಡು ಮಾಡಿಕೊಡಬೇಕು, ತಾವು ಬೇರೆ ಲೈನ್‌ಗಳಿಗೆ ಆರ್ಥಿಕ ಸಹಾಯವನ್ನು ಒಪ್ಪಂದವನ್ನು ಅವರ ಜೊತೆಯಲ್ಲಿ ಮಾಡಿಕೊಂಡಿದಿರಿ ಅದೇ ರೀತಿ ಇದಕ್ಕೂ ಮಾಡಿಕೊಂಡರೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಚಿಸುತ್ತೇನೆ. ಆಯಿತು ಒಂದ್ನಿಮಿಷ.. ನಾನು ಕನ್‌ಕ್ಲೂಡ್ ಮಾಡುತ್ತೇನೆ.

ಅಧ್ಯಕ್ಷರು: ಯು ಟೇಕನ್ 50 ಮಿನಿಟ್ಸ್, ಮುಗಿಸುತ್ತೇನೆ ಎಂದರೆ ಇನ್ನೊಂದು ಐವತ್ತು ನಿಮಿಷ ಬೇಕಾ? ಹಿರಿಯರು ಸದಸ್ಯರೆಂದು ನಾವು ಕಾಲಾವಕಾಶ ಕೊಟ್ಟರೆ ನೀವು ಈ ರೀತಿ ಮಾಡಿದರೆ ಹೇಗೆ? ಆಯಿತು ಒಂದು ನಿಮಿಷದಲ್ಲಿ ಕನ್‌ಕ್ಲೂಡ್ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ: ನಾನು ಸಹಕಾರ ಇಲಾಖೆಯ ಬಗ್ಗೆ ಒಂದೆರಡು ಮಾತು ಹೇಳುವುದಕ್ಕೆ ಇಷ್ಟ ಪಟ್ಟಿದ್ದೆ ತಾವು ಅನುಮತಿ ಕೊಡುತ್ತಿಲ್ಲ.. ನಾನು ಇಷ್ಟೇ ಕಳ ಕಳಿಯ ಮನವಿಯನ್ನು ಮಾನ್ಯ ಇಂಡಸ್ಟ್ರಿ ಮಂತ್ರಿಗಳಿಗೆ ಮಾಡುತ್ತೇನೆ. ತಮಗೆ ಹೈದಾರಾಬಾದ್- ಕರ್ನಾಟಕದ ಬಗ್ಗೆ ಬಹಳ ಚೆನ್ನಾಗಿ ಗೊತ್ತಿದೆ. ಅದಕ್ಕೆ ನಾನು ಈಗಾಗಲೇ ಹೇಳಿದಂತೆ ಈ ಎರಡು ರೈಲ್ವೆ ಲೈನ್‌ಗಳನ್ನು ಯಾವುದೇ ಪರಿಸ್ಥಿತಿಯಲ್ಲಿ ಕರ್ನಾಟಕ ಸರ್ಕಾರ ಮತ್ತು ತಾವು ರೈಲ್ವೇ ಮಂಡಳಿಯ ಜೊತೆಗೆ ಮಾತನಾಡಿ ಈ ವರ್ಷದಲ್ಲಿ ಆರ್ಥಿಕ ಸಹಾಯವನ್ನು ಮಾಡಿ ಅದಕ್ಕೆ ಒಪ್ಪಂದ ಮಾಡಿಕೊಳ್ಳುತ್ತೀರೆಂದು ನಾನು ಹೇಳಲಿಕ್ಕಿಚ್ಚಿಸುತ್ತೇನೆ. ನಂತರದಲ್ಲಿ ಸಹಕಾರಿ ಇಲಾಖೆಯ ಬಗ್ಗೆ ಒಂದೇ ಒಂದು ವಿಚಾರವನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು: ಮುಗಿಸಿ ಮುಗಿಸಿ ನೀವು ಸಹಕಾರ ಇಲಾಖೆ ಅಂದರೆ ಮತ್ತೆ ಅರ್ಧಗಂಟೆ ತೆಗೆದುಕೊಳ್ಳುತ್ತೀರಿ. ಮುಗಿಸಿಬಿಡಿ ಕನ್‌ಕ್ಲೂಡ್ ಮಾಡಿಬಿಡಿ... ರಾಯರೆಡ್ಡಿಯವರೇ ಬಹಳ ಜನ ಮಾತನಾಡುವವರು ಇದ್ದಾರೆ. ನೀವು ಬಹಳ ಹೊತ್ತು ಮಾತನಾಡಿದಿರಿ.

ಶ್ರೀ ಬಸವರಾಜ ರಾಯರೆಡ್ಡಿ: ನಮ್ಮ ಸರ್ಕಾರ ಇವತ್ತು ಅಧಿಕಾರಕ್ಕೆ ಬಂದ ಮೇಲೆ ನಾನು ಮಾನ್ಯ ಸಿದ್ಧರಾಮಯ್ಯನವರನ್ನು ಅಭಿನಂದಿಸುತ್ತೇನೆ. ರೈತರ ಸಲುವಾಗಿ ಈ ಸರಕಾರ ಬಹಳ ಒಳ್ಳೆಯ ಕೆಲಸ ಮಾಡಿದೆ. ರೈತರಿಗೆ ಬಡ್ಡಿ ಮನ್ನಾ ಮಾಡಿ ಬಹಳ ಒಳ್ಳೆಯ ಕೆಲಸ ಮಾಡಿ ಕೊಟ್ಟಿದೆ. ರೈತರಿಗೆ ಸುಮಾರು 450 ಕೋಟಿ ರೂಪಾಯಿಗಳನ್ನು ಈ ವರ್ಷದ ಬಜೆಟ್‌ನಲ್ಲಿ ತಾವು ತೆಗೆದಿರಿಸಿದಿರಿ. ಆದರೆ ನನಗೆ ಗೊತ್ತಾದ ಮಟ್ಟಿಗೆ ನೀವು ರೈತರ ಬಡ್ಡಿ ಮನ್ನಾ ಮಾಡಿದ್ದರಿಂದ ಇದರ ಅನುಕೂಲವನ್ನು ಹೆಚ್ಚಿನ ಜನ ತೆಗೆದುಕೊಳ್ಳುತ್ತಿದ್ದಾರೆ. ಇದಕ್ಕೆ ನಮ್ಮ ಮಾನ್ಯ

ಮುಖ್ಯಮಂತ್ರಿಗಳು ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಇದನ್ನು ಈಗಾಗಲೇ ಇದರ ಅವಧಿಯನ್ನು ಅಕ್ಟೋಬರ್ ಫಸ್ಟ್‌ವರೆಗೆ ವಿಸ್ತರಣೆ ಮಾಡಿದ್ದೀರಿ. ಹೀಗಾಗಿ ರೈತರಿಗೆ ಬಹಳ ಅನುಕೂಲವಾಗಿದೆ. ಬೇಕಾದರೆ ಡಿಸೆಂಬರ್‌ವರೆಗೂ ವಿಸ್ತರಣೆ ಮಾಡಲಿ. ಈ ರೀತಿ ಅನುಕೂಲ ಮಾಡಿದ್ದರಿಂದ ಇವತ್ತು ಹೆಚ್ಚಿನ ಜನರು ಸಾಲವನ್ನು ತುಂಬುತ್ತಿದ್ದಾರೆ. ನನಗೆ ಗೊತ್ತಿದ್ದ ಹಾಗೆ ಇದು ಸುಮಾರು 800 ಕೋಟಿ ರೂಪಾಯಿವರೆಗೆ ಹೋಗುತ್ತದೆ. ಕರ್ನಾಟಕ ಸರ್ಕಾರ ಏನು ಬಜೆಟ್‌ನಲ್ಲಿ ಕೇವಲ 450 ಕೋಟಿ ರೂಪಾಯಿಗಳನ್ನು ಇಟ್ಟಿದಿರಿ. ಇದು ಸಾಕಾಗುವುದಿಲ್ಲ. ಸುಮಾರು 800 ನಿಂದ 900 ಕೋಟಿ ರೂಪಾಯಿಗಳವರೆವಿಗೂ ಹೋಗುತ್ತದೆ. ಹೀಗಾಗಿ ತಾವು ರಿವೈಸ್ ಬಜೆಟ್‌ನ್ನು ಏನು ತರುತ್ತೀರಿ ಅದರಲ್ಲಿ 800 ನಿಂದ 900 ಕೋಟಿ ರೂಪಾಯಿವರೆಗೆ ಹೆಚ್ಚಿಸಿ ನಿಗದಿಪಡಿಸಬೇಕು. ನಾನು ಏಕೆ ಈ ಮಾತು ಹೇಳುತ್ತೇನೆಂದರೆ, ನೀವು ಹಣ ಕೊಡದೇ ಹೋದರೆ ಎಲ್ಲಾ ಸೊಸೈಟಿಗಳು ವಿಫಲವಾಗಿ ಹೋಗಬಿಡುತ್ತವೆ: ಕೊಡದೇ ಇದ್ದರೆ ಅವು ಎಲ್ಲಾ ಬಂದ್ ಆಗಿ ಹೋಗಿಬಿಡುತ್ತವೆ. ಅದಕ್ಕೆ ತಾವು ಹಣವನ್ನು ನಿಗದಿಪಡಿಸಿ ಅವರಿಗೆ ರೀಪೇಮೆಂಟ್‌ನ್ನು ಕೊಟ್ಟರೆ ಸೊಸೈಟಿಗಳು ಉಳಿಯುವುದಕ್ಕೆ ಸಾಧ್ಯವಿದೆ. ಆ ವಿಚಾರದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಆ ಕೆಲಸವನ್ನು ರಿವೈಸ್ ಬಜೆಟ್‌ನಲ್ಲಿ ಮಾಡುತ್ತಾರೆಂದು ನಾನು ಬಯಸಿ, ಕೊನೆಯದಾಗಿ ಈ ಯಶಸ್ವಿನಿ ಕಾರ್ಯಕ್ರಮ ಬಹಳ ಒಳ್ಳೆಯ ಕಾರ್ಯಕ್ರಮ. ವಿಶ್ವದಲ್ಲಿ ಬೇರೆ ಯಾವ ಸರ್ಕಾರಗಳು ಕೃಷಿಕರಿಗೆ ಇಂಥ ಯೋಜನೆಯನ್ನು ಮಾಡಿಲ್ಲ. ಬಹಳ ಒಳ್ಳೆಯ ಉತ್ತಮವಾದ ಕಾರ್ಯಕ್ರಮವನ್ನು ತೆಗೆದುಕೊಂಡು ಬಂದಿದ್ದೀರಿ. ಆದರೆ ಇದರಲ್ಲಿ ಏನಾಗಿದೆ ಎಂದರೆ ಕೆಲವು ಕಂಡೀಷನ್ ಹಾಕಿದಿರಿ. ಏನೆಂದರೆ, 75 ವರ್ಷ ಏಜ್ ಲಿಮಿಟ್ ಆದವರಿಗೆ ಮಾತ್ರ ಮೀಸಲು.

ಯಾರು ಕೃಷಿಕರು 75 ವರ್ಷ ಆಗಿದೆ ಅದರ ಮೇಲೆ ಇದ್ದರೆ ಅವರಿಗೆ ಈ ಯಶಸ್ವಿನಿ ಇಲ್ಲ ಎನ್ನುವ ಕಂಡೀಷನ್ ಹಾಕಿದಿರಿ. ಅಂದರೆ 75 ವರ್ಷ ಮೇಲಿನ ರೈತರಿಗೆ ಹೃದಯಬೇನೆ. ಬೇರೆ ಖಾಯಿಲೆಗಳು ಬಂದರೆ ಅವರು ತೋರಿಸುವ ಹಾಗೆ ಇಲ್ಲವೆ? ಅವರು ಏನು ಮಾಡಬೇಕು? ಆದುದರಿಂದ, ತಾವು ಏಜ್ ಲಿಮಿಟ್ ಅನ್ನು ತೆಗೆದು ಹಾಕಿ. ಅದರ ಜೊತೆಗೆ ಒಂದು ವರ್ಷದಲ್ಲಿ ಒಬ್ಬ ರೈತನಿಗೆ ಹಾರ್ಟ್‌ಅ್ಯಟಾಕ್ ಆಯಿತು. ಒಂದೇ ಲಕ್ಷ ರೂಪಾಯಿ. ಮಾಡಬೇಡಿ. ಡಾ॥ ದೇವಿ ಶೆಟ್ಟಿಯವರ ಹಾಸ್ಪಿಟಲ್‌ನಲ್ಲಿ ನೀವು ಆಪರೇಷನ್ ಮಾಡಿಸಿದರೆ 2 ರಿಂದ 3 ಲಕ್ಷ ರೂಪಾಯಿ ಚಾರ್ಜ್ ಮಾಡುತ್ತಾರೆ. ಅದಕ್ಕೆ ಸಂಪೂರ್ಣವಾಗಿ ಹಣ ಕೊಡುವವರು ಯಾರು? ಎಷ್ಟು ಖರ್ಚಾಗುತ್ತದೆ ಅಷ್ಟು ಹಣವನ್ನು ಸರ್ಕಾರದ ವತಿಯಿಂದ ಕೊಡಲಿಕ್ಕೆ ಮಾಡಿದರೆ ಹೆಚ್ಚಿನ ಅನುಕೂಲತೆ ಆಗುತ್ತದೆ ಆ ದಿಶೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಗಮನ ನೀಡಬೇಕು ಎನ್ನುವ ಮಾತನ್ನು ಹೇಳಿ. ನನಗೆ ಇನ್ನು ಟೈಂ ಕೊಟ್ಟರೆ ಸಹಕಾರ ಇಲಾಖೆಯ ಬಗ್ಗೆ ಮಾತನಾಡುವುದಿತ್ತು.

ಆದಾಗ್ಯೂ ಕೂಡ ಸನ್ಮಾನ್ಯ ಸಭಾಧ್ಯಕ್ಷರು ಹೆಚ್ಚಿನ ಸಮಯವನ್ನು ನನಗೆ ಕೊಟ್ಟಿದ್ದೀರಿ. ಸಹಕಾರಿ ರಂಗದಲ್ಲಿ ವಿಶೇಷವಾಗಿ ಕೃಷಿಕರಿಗೆ ನಮ್ಮ ಸರಕಾರ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿದೆ. ಇನ್ನು ಹೆಚ್ಚು ಪರಿಣಾಮಕಾರಿ ಕೆಲಸ ಆಗಬೇಕಾಗಿದ್ದರೆ ಇನ್ನು ರೈತರಿಗೆ ಅನುಕೂಲತೆಯನ್ನು ಮಾಡಿಕೊಡಬೇಕೆನ್ನುವ ಮಾತನ್ನು ಹೇಳುತ್ತಾ, ಸಮಾಜ ಕಲ್ಯಾಣ, ವಸತಿ ಇಲಾಖೆ, ಇಲಾಖೆಗಳ ಬಗ್ಗೆ ಮಾತನಾಡುವುದಿತ್ತು. ಇವೆಲ್ಲವನ್ನು ಬೆಂಬಲಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ): ಮಾನ್ಯ ಅಧ್ಯಕ್ಷರೆ, ಅನುದಾನ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ನೀಡಿದ್ದಕ್ಕೆ ಮೊದಲನೆಯದಾಗಿ ತಮಗೆ ವಂದಿಸುತ್ತಾ.

ಅಧ್ಯಕ್ಷರು: ನೋಡಿ ತಾವು 15 ನಿಮಿಷದಲ್ಲಿ ದಯಮಾಡಿ ಮುಗಿಸಬೇಕು. ಏಕೆಂದರೆ ಬಹಳ ಜನ ಇದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು: ಆಯಿತು. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಕೆಲವು ವಿಚಾರಗಳನ್ನು ತಮ್ಮ ಮೂಲಕ ಸರಕಾರದ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಸಮಾಜ ಕಲ್ಯಾಣ ಇಲಾಖೆಗೆ ಒಂದು ಒಳ್ಳೆಯ ಹೆಸರನ್ನು ಇಟ್ಟಿದ್ದಾರೆ. ಬಹಳ ಸಾರ್ಥಕವಾದಂಥ ಹೆಸರು. ಸಮಾಜ ನಿಜಕ್ಕೂ ಅಭಿನಂದಿಸಬೇಕಾದಂಥ ಹೆಸರನ್ನು ಇಟ್ಟಿರುವಂಥ ಈ ಸಮಾಜ ಕಲ್ಯಾಣ ಇಲಾಖೆಯ ಮೂಲಕ ದಲಿತರನ್ನು ರಕ್ಷಣೆ ಮಾಡುವಂಥದ್ದು, ದಲಿತರನ್ನು ಕಲ್ಯಾಣಗಳಿಗಾಗಿ ಮಾಡುವಂಥ ಕಾರ್ಯಕ್ರಮಗಳು, ಸರಿಯಾದ ಇದರ ಮೂಲಕ ಅನುಷ್ಠಾನ ಆಗುತ್ತಾ ಇದಿಯೇ ಎನ್ನುವಂಥ ವಿಚಾರವನ್ನು ನಾವು ಏನಾದರೂ ಅವಲೋಕನ ಮಾಡಿದಾಗ ನಿಜಕ್ಕೂ ಬಹಳ ನೋವಾಗುತ್ತದೆ. ಮತ್ತು ಸಮಾಜ ಕಲ್ಯಾಣ ಇಲಾಖೆ ಇದೆ. ಆದರೆ ಅದರ ಮೂಲಕ ಅನುಷ್ಠಾನ ಆಗಬೇಕಾಗಿರುವಂಥ ಕಾರ್ಯಕ್ರಮಗಳು ಎಷ್ಟರ ಮಟ್ಟಿಗೆ ಆಗುತ್ತಿವೆ ಎನ್ನುವುದನ್ನು ಪರಿಶೀಲನೆ ಮಾಡಿದಾಗ ಬಹಳ ನೋವಿನ ಸಂಗತಿ ಇದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಜನಸಂಖ್ಯೆ ಎಷ್ಟಿದೆ ಎಂಬುದನ್ನು ತಾವೆಲ್ಲರೂ ಕೂಡ ಗಮನಿಸಿದ್ದೀರಿ. ಬಹುಶಃ ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಆದರೂ ಕೂಡ ಈ ಸದನದಲ್ಲಿ ಅದನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಒಟ್ಟು 5,28,50.563 ಜನಸಂಖ್ಯೆ ಇದೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ 85,63,930 ಇದೆ. ಅಂದರೆ, ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರು ಶೇಕಡ 16.2ರಷ್ಟು ಇದ್ದಾರೆ. ಅದೇ ರೀತಿಯಾಗಿ ಪರಿಶಿಷ್ಟ ಪಂಗಡದವರ ಜನಸಂಖ್ಯೆ 34,63,986ರಷ್ಟು ಇದ್ದು, ಇವರ ಶೇಕಡವಾರು ಪ್ರಮಾಣ 6.55ರಷ್ಟಿದೆ. ಇಷ್ಟು ಜನರಿಗೆ ಈ ಒಂದು ಇಲಾಖೆಯ ಮೂಲಕ ಆಗುತ್ತಿರುವ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಪ್ರಯೋಜನಕಾರಿಯಾಗಿ

ತಲುಪುತ್ತಿವೆ ಎಂದು ವಿಶ್ಲೇಷಣೆ ಮಾಡಿದಾಗ ಬಹಳ ಆಘಾತಕಾರಿಯಾದಂಥ ಸಂಗತಿಗಳು ಈ ಒಂದು ಇಲಾಖೆಯ ಮೂಲಕ ಆಗುತ್ತಿದೆ ಎನ್ನತಕ್ಕಂಥದ್ದನ್ನು ನಾವು ಈ ಒಂದು ಸದನದಲ್ಲಿ ಹೇಳುವುದಕ್ಕೆ ನಿರ್ಭಯವಾಗಿ ಹೇಳುವುದಕ್ಕೆ ಇಚ್ಚೆಪಡುತ್ತಿದ್ದೇನೆ. ಇವತ್ತಿನ ದಿವಸ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಪರಿಶಿಷ್ಟರಿಗೋಸ್ಕರ ಮೀಸಲಾಗಿರತಕ್ಕಂಥ ಬ್ಯಾಕ್‌ಲಾಗ್ ಹುದ್ದೆಗಳು ಅಂದರೆ, ಸರ್ಕಾರಿ ಅಥವಾ ಅರೆಸರ್ಕಾರಿ ಇಲಾಖೆಗಳಲ್ಲಿರತಕ್ಕಂಥ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಕುಳಿಸುವಂಥ ವ್ಯವಸ್ಥೆಯಲ್ಲಿ ಏನಾದರೂ ಸಮರ್ಪಕವಾಗಿ ಕೆಲಸ ಮಾಡಿದ್ದೇವೆಯೇ ಎಂಬ ಅಂಕಿ-ಅಂಶಗಳನ್ನು ತಾವು ನಿಜವಾಗಿ ನಮಗೆ ಕೊಟ್ಟರೆ ತಾವೂ ಕೂಡ ನೋವಿನಿಂದ ಸರ್ಕಾರ ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತೀರಾ? ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿರತಕ್ಕಂಥ ಸಂಖ್ಯೆಗಳನ್ನು ಗುರುತು ಮಾಡಿದ್ದು, ಇದರ ಪ್ರಕಾರ ಒಟ್ಟು 18,165 ಹುದ್ದೆಗಳು ಖಾಲಿ ಇವೆ ಎಂದು ದಿನಾಂಕ 29:12:2004 ಮಾಹಿತಿ ನೀಡಲಾಗಿತ್ತು. ಆದರೆ, ಇದುವರೆಗೆ ಅಂದರೆ ಈ ದಿನಾಂಕದವರೆಗೆ ತಾವು ಭರ್ತಿ ಮಾಡಿರತಕ್ಕಂಥ ಸಂಖ್ಯೆಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಇದನ್ನು ಹೇಳಿದರೆ ತಾವು ಬಹಳ ಆಶ್ಚರ್ಯ ಪಡಬಹುದು. ಇದರಲ್ಲಿ ಕೇವಲ 12,205 ಹುದ್ದೆಗಳನ್ನು ಮಾತ್ರ ತುಂಬಿದ್ದಾರೆ. ಇನ್ನುಳಿದ 5.860 ಸಂಖ್ಯೆಯ ಹುದ್ದೆಗಳನ್ನು ಭರ್ತಿ ಮಾಡುವುದಕ್ಕಾಗಿ ನಿಮಗೆ ಏನು ಕಷ್ಟ ಇತ್ತೆಂಬುದು ನನಗೆ ಗೊತ್ತಿಲ್ಲ ಮಾನ್ಯ ಉಪಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಅವರು ಕೂಡ ಒಂದು ಸಂದರ್ಭದಲ್ಲಿ ಒಂದು ಆದೇಶ ಕೊಟ್ಟಿದ್ದರು. ಅದೇನೆಂದರೆ, ಯಾವುದೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ನಮ್ಮ ಹಣಕಾಸಿನ ಇಲಾಖೆಯಿಂದ ಅವರಿಗೋಸ್ಕರ ಕೊಡಬೇಕಾಗಿರತಕ್ಕಂಥ ಅನುದಾನವನ್ನು ಕೊಟ್ಟಲ್ಲಿ ಕೊಡುತ್ತೇನೆಂದು ಮತ್ತು ಇದಕ್ಕೋಸ್ಕರ ಕಾಯಬೇಕಾಗಿಲ್ಲ ತಾವು ನೇಮಕ ಮಾಡಿಕೊಳ್ಳಿ ಎಂದು ಹೇಳಿದ್ದರು. ಹಾಗಾದರೆ ಅಧಿಕಾರಿಗಳು ಇನ್ನು ಏಕೆ ಮಾಡುತ್ತಿಲ್ಲ. ಬಾಕಿ ಉಳಿದಿರತಕ್ಕಂಥ 5860 ಸಂಖ್ಯೆಯ ಹುದ್ದೆಗಳನ್ನು ಇನ್ನು ಆ ವರ್ಗದವರಿಗೆ ತಲುಪಿಸಿಲ್ಲ ಅಥವಾ ನೇಮಕ ಮಾಡಿಕೊಂಡಿಲ್ಲವೆಂದರೆ ನಿಮ್ಮ ಕಾಳಜಿ ಎಷ್ಟರಮಟ್ಟಿಗೆ ಇದೆ? ಮಾನ್ಯ ಎನ್.ಎನ್. ಪಾಟೀಲ್‌ರವರು ಈಗ ಇಲ್ಲಿಲ್ಲ. ಏಕೆಂದರೆ, ಅವರು ಇದರ ಬಗ್ಗೆ ಬಹಳ ಹೇಳುತ್ತಿದ್ದರು. ಈ ಅಂಕಿ-ಅಂಶವನ್ನು ಅವರ ಗಮನಕ್ಕೆ ತರಬೇಕು. ಹಾಗೆಯೇ ಎಷ್ಟರಮಟ್ಟಿಗೆ ಸರ್ಕಾರದ ವತಿಯಿಂದ ಕಾಳಜಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಅವರಿಗೆ ಹೇಳಬೇಕು. ಇದು ಹೋಗಲಿ ಬಿಡಿ. ಆದರೆ, ಇವತ್ತಿನ ದಿವಸ ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ಇದುವರೆಗೆ 1951 ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಈ ರೀತಿ ಇರುವಾಗ ನಾವು ಬೇರೆ

ಇಲಾಖೆ ಬಗ್ಗೆ ಮಾತನಾಡುವುದಕ್ಕೆ ಹೋಗುವ ಹಾಗೆ ಇಲ್ಲ. ಇವತ್ತಿನ ದಿವಸ ಸಮಾಜ ಕಲ್ಯಾಣ ಇಲಾಖೆಯಲ್ಲಿರತಕ್ಕಂಥ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದೇ ಇಲ್ಲದೆ ಇರುವುದರಿಂದ ಇನ್ನು ಬೇರೆ ಬೇರೆ ಇಲಾಖೆಯವರು ಭರ್ತಿ ಮಾಡುತ್ತಾರೆಯೆ? ಈಗ ಮಾನ್ಯ ಸಚಿವರಾಗಿರತಕ್ಕಂಥ ಡಾ: ವೈ. ನಾಗಪ್ಪನವರು ಇಲ್ಲಿಗೆ ಬಂದಿರುವುದರಿಂದ ಅವರ ಗಮನಕ್ಕೆ ತರುವುದೇನೆಂದರೆ, ನಾನು ಕೊಡುತ್ತಿರುವ ಅಂಕಿ–ಅಂಶಗಳನ್ನು ತಮ್ಮ ಅವಧಿಯಲ್ಲಿ ಆದರೂ ಕಟ್ಟುನಿಟ್ಟಾಗಿ ಇಂತಿಷ್ಟು ದಿವಸಗಳಲ್ಲಿ ಇದನ್ನು ಮಾಡುತ್ತೇನೆ ಮತ್ತು ಅವರ ಬಗ್ಗೆ ನನಗೆ ಕಾಳಜಿ ಇದೆ. ಆದ್ದರಿಂದ ಈ ಸರ್ಕಾರದ ಮೂಲಕ ಆ ಹುದ್ದೆಗಳಿಗೆ ನೇಮಕ ಮಾಡುತ್ತೇನೆ ಎನ್ನತಕ್ಕಂಥ ಸ್ಪಷ್ಟವಾದ ಉತ್ತರವನ್ನು ನಾನು ಅವರಿಂದ ನಿರೀಕ್ಷೆ ಮಾಡುತ್ತೇನೆ. ಇನ್ನು ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ನೀರಾವರಿ ಇಲಾಖೆಯಲ್ಲಿರತಕ್ಕಂಥ ಸುಮಾರು 1347 ಜನ ಅಭಿಯಂತರರನ್ನು ನೇಮಕ ಮಾಡಿಕೊಳ್ಳುತ್ತೇವೆಂದು ಇದೇ ಸದನದಲ್ಲಿ ದಿನಾಂಕ 30–08–2004ರಂದು ಹೇಳಿದ್ದೀರಿ. ಮತ್ತೆ ಇದಕ್ಕೆ ಕ್ಯಾಬಿನೆಟ್ ತೀರ್ಮಾನ ಕೂಡ ತೆಗೆದುಕೊಂಡಿತು. ಆದರೆ, ಈ ನೇಮಕಾತಿ ಬಗ್ಗೆ ತೆಗೆದುಕೊಂಡಿರತಕ್ಕಂಥ ತೀರ್ಮಾನಗಳು ಮತ್ತು ಈ ಆದೇಶವನ್ನು ಪಾಲನೆ ಮಾಡತಕ್ಕಂಥ ವಿಚಾರಗಳು ನಿಮ್ಮ ಮನಸ್ಸಿನಿಂದ ಎಲ್ಲಿಗೆ ಹೋಯಿತು? ಏಕೆ ಈ ರೀತಿ ಮಾಡಿದ್ದೀರಾ ಎಂದು ನಾವು ಕೇಳಬೇಕಲ್ಲವೇ? ಸಮ್ಮಿಶ್ರ ಸರ್ಕಾರಕ್ಕೆ ಪತ್ರಿಕೆಯಲ್ಲಿ ಒಳ್ಳೆಯ ಪ್ರಚಾರ ಸಿಗಬೇಕೆಂದರೆ, ನಾವು ದಲಿತರಿಗೆ ಒಳ್ಳೆಯದನ್ನು ಮಾಡುತ್ತೇವೆಂದರೆ ಮಾಡಿ. ಇದನ್ನು ನಾವು ಬೇಡ ಎಂದು ಹೇಳುವುದಿಲ್ಲ. ಪತ್ರಿಕಾ ಹುಚ್ಚಿನಿಂದ ನೀವು ಮೊದಲು ಹೊರಬನ್ನಿ. ಮತ್ತೆ ನಿಮ್ಮ ಪ್ರಾಮಾಣಿಕತೆಯ ಮೆರಗನ್ನು ನೀವು ತೋರಿಸಿ. ನಿಜವಾಗಿಯೂ ಕೂಡ ನಾವು ಈ ಒಂದು ವರ್ಗದ ಜನರ ಬಗ್ಗೆ ಕಾಳಜಿ ಇಟ್ಟುಕೊಂಡಿದ್ದೇವೆ. ಆದ್ದರಿಂದ, ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ನಾವೇನು ತೀರ್ಮಾನ ತೆಗೆದುಕೊಂಡಿದ್ದೇವೆ. ಅದನ್ನು ಖಂಡಿತವಾಗಿ ನಾವು ಕಾರ್ಯಗತ ಮಾಡುತ್ತೇವೆಂದು ಹೇಳಬೇಕಲ್ಲವೆ? ಆದರೆ, ಇದನ್ನು ಮಾಡದೇ ಇರತಕ್ಕಂಥದು ಏಕೆ ಎಂಬುದು ನನಗೆ ಗೊತ್ತಿಲ್ಲ. ಆದರೆ, ನಿಮ್ಮ ಕಾಳಜಿ ಮೊಸಳೆ ಕಣ್ಣೀರು ಎಂದು ಸ್ಪಷ್ಟವಾಗಿ ಈ ಭಾಗದ ಕಡೆಯಿಂದ ಸರ್ಕಾರದ ಕಡೆ ಕುಳಿತುಕೊಂಡಿರುವವರಿಗೆ ನಾನು ಹೇಳಲೇಬೇಕಾಗುತ್ತದೆ. ಇವತ್ತು ಅತಂತ್ರ ಸ್ಥಿತಿಯಲ್ಲಿ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕವಾಗಬೇಕಾಗಿರತಕ್ಕಂಥ ಇಂಜಿನಿಯರ್‌ಗಳು ಒದ್ದಾಡುತ್ತಿದ್ದಾರೆ. ಮತ್ತೆ ಪ್ರತಿ ವರ್ಷ ಮತ್ತು ಪ್ರತಿದಿವಸ ಅವರ ವಯಸ್ಸು ಜಾಸ್ತಿಯಾಗುತ್ತಾ ಹೋಗುತ್ತಿದೆ. ಈ ರೀತಿಯಲ್ಲಿ ಅವರ ವಯಸ್ಸು ಜಾಸ್ತಿಯಾಗುತ್ತಾ ಹೋದರೆ ಅವರ ಮುಂದಿನ ಭವಿಷ್ಯ ಏನು? ಇವರ ಬಗ್ಗೆ ತಾವು ಕಾಳಜಿ ಇಟ್ಟುಕೊಂಡು ಒಂದು ದಿವಸವಾದರೂ ಚಿಂತನೆ ಮಾಡಿದ್ದೀರಾ? ನನಗಂತೂ ಕೂಡ ಗೊತ್ತಿಲ್ಲ. ಪತ್ರಿಕಾ ಪ್ರಚಾರ ಈ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಹುಚ್ಚು ಹಿಡಿಸಿದೆ ಎಂದರೆ, ಸರ್ಕಾರಿ ಮತ್ತು ಅರೆ

ಸರ್ಕಾರಿ ಗುತ್ತಿಗೆ ಕೆಲಸಗಳಲ್ಲಿ ಶೇಕಡ 50 ಭಾಗದಷ್ಟು ಗುತ್ತಿಗೆ ಕೆಲಸವನ್ನು ಪರಿಶಿಷ್ಟ ಜಾತಿಯವರಿಗೆ ಕೊಡುತ್ತೇವೆಂದು ಹೇಳಿದರು. ತಾವು ಇವರಿಗೆ ಕೊಟ್ಟಿದ್ದೀರಾ? ಎಷ್ಟು ಕೊಡಲಾಗಿದೆ ಎಂಬ ಅಂಕಿ-ಅಂಶಗಳನ್ನು ತೆಗೆದು ತೋರಿಸಿ? ಕೇವಲ ಪ್ರಚಾರಕ್ಕೋಸ್ಕರ ಈ ರೀತಿಯಾಗಿ ಮಾಡಿಕೊಂಡು ಹೋದರೆ ನಿಜವಾಗಿಯೂ ಕೂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನಿಮ್ಮ ಬಗ್ಗೆ ಒಲವನ್ನು ತೋರಿಸುವುದಿಲ್ಲ. ಈಗಾಗಲೇ ನಮಗೆ ಸ್ವಾತಂತ್ರ್ಯ ಬಂದು ಎಷ್ಟು ವರ್ಷವಾಗಿದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾಗಿದ್ದು, ಈ ಸಂದರ್ಭದಲ್ಲಿ ನಿಜವಾಗಿಯೂ ಕೂಡ ಒಂದು ಮಾತನ್ನು ನಾನು ಹೇಳಬೇಕಾಗುತ್ತದೆ. ಅದೇನೆಂದರೆ, ಕಾಂಗ್ರೆಸ್‌ನ್ನು ಬಹಳಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಬಹಳ ಮೆಚ್ಚುಕೊಂಡಿದ್ದರು. ಇವತ್ತಲ್ಲ ನಾಳೆ ನಮ್ಮ ಕೈ ಹಿಡಿಯುತ್ತಾರೆ ಮತ್ತು ನಮ್ಮನ್ನು ಉದ್ಧಾರ ಮಾಡುತ್ತಾರೆ ಹಾಗೆಯೇ ಯಾವುದಾದರೊಂದು ರಂಗದಲ್ಲಿ ನಮ್ಮನ್ನು ಮೇಲಕ್ಕೆ ಎತ್ತುತ್ತಾರೆ ಮತ್ತು ಸಮಾಜದಲ್ಲಿ ಒಂದು ರೀತಿಯ ಕ್ರಾಂತಿ ತಂದು ಎಲ್ಲಾ ಜನರ ಜೊತೆಯಲ್ಲಿ ಬೆರೆಯುವುದಕ್ಕೆ ಅವಕಾಶ ಮಾಡಿಕೊಡುತ್ತಾರೆಂದು ತಿಳಿದುಕೊಂಡಿದ್ದರು. ಆದರೆ, ನಿಮ್ಮದು ಏನಾಗಿದೆ ಎಂದರೆ, ನಿಮಗೆ ಒಂದು ಪತ್ರಿಕಾ ಹುಚ್ಚು. ಪತ್ರಿಕೆಗಳಲ್ಲಿ ನಿಮಗೆ ಪ್ರಚಾರ ಸಿಗಬೇಕು. ಇದೊಂದನ್ನು ತಾವು ಬಿಡಲಿಲ್ಲ. ಶೇಕಡ 50 ಭಾಗದಷ್ಟು ಗುತ್ತಿಗೆಯನ್ನು ಇವರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂಥ ಅಂಕಿ-ಅಂಶಗಳನ್ನು ನೀವು ಕೊಡುವುದಕ್ಕೆ ಸಾಧ್ಯವಿದೆಯೇ? ಮಾನ್ಯ ಮಂತ್ರಿಯವರು ಇಲ್ಲಿಯೇ ಇದ್ದಾರೆ. ಅದ್ದರಿಂದ, ತಾವು ಬೇಡಿಕೆಯ ಮೇಲೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿರುವ ಬಗ್ಗೆ ಮತ್ತು ಗುತ್ತಿಗೆದಾರರಿಗೆ ಎಷ್ಟರಮಟ್ಟಿಗೆ ಅಂದರೆ 50 ಭಾಗದಷ್ಟು ಗುತ್ತಿಗೆಯನ್ನು ಇವರಿಗೆ ಕೊಟ್ಟಿದ್ದೀರಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಮತ್ತೆ ಮುಂದಕ್ಕೆ ಹೋಗಿ ಹೇಳುವುದಾದರೆ ಸಮಾಜ ಕಲ್ಯಾಣ ಇಲಾಖೆಯಿಂದ ನೀವು ಪರೀಕ್ಷಾ ಪೂರ್ವ ತರಬೇತಿ ಕೇಂದ್ರವನ್ನು ನಡೆಸುತ್ತಿದ್ದೀರಿ. ಈ ಒಂದು ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಲ್ಲಿ ಐ.ಪಿ.ಎಸ್. ಐ.ಎ.ಎಸ್., ಐ.ಎಫ್.ಎಸ್. ಮತ್ತು ಕೆ.ಪಿ.ಸಿ.ಸಿ. ಹೀಗೆ ಬೇಕಾದಷ್ಟು ಪರೀಕ್ಷೆಗಳಿಗೆ ಈ ಒಂದು ತರಬೇತಿ ಕೇಂದ್ರದಲ್ಲಿ ಎಲ್ಲರಿಗೂ ತರಬೇತಿ ನೀಡಲಾಗುತ್ತದೆ. ಪ್ರತಿ ವರ್ಷ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೋಸ್ಕರ 100 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ನಾನೊಂದು ಅಂಕಿ-ಅಂಶವನ್ನು ತಮಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಹಣವನ್ನು ನೀವು ವೆಚ್ಚ ಮಾಡುತ್ತಿದ್ದು, ಇದರಲ್ಲಿ ಎಷ್ಟು ಜನರಿಗೆ ಐ.ಎ.ಎಸ್., ಐ.ಎಫ್.ಎಸ್. ಮತ್ತು ಕೆ.ಎ.ಎಸ್. ಆಫೀಸರ್ ಮಾಡಿದ್ದೀರಿ? ಇದಕ್ಕೆ ಸಂಬಂಧಪಟ್ಟಂತೆ ನಿಮ್ಮ ಹತ್ತಿರ ಅಂಕಿ-ಅಂಶ ಇದೆಯೆ? ಇದು ಇವತ್ತಿನ ದಿವಸ ಏನಾಗಿದೆ ಎಂದರೆ, ಹುಚ್ಚು ಮುಂದೆ ಲಗ್ನದಲ್ಲಿ ಉಂಡವನೆ ಜಾಣ ಎನ್ನುವ ಹಾಗೆ ಇಂಥ ಕೇಂದ್ರಗಳನ್ನು

ತೆಗೆದು ಹಣ ಖರ್ಚು ಮಾಡಿ ಅಲ್ಲಿ, ಇಲ್ಲಿ ಮಾಡಿದ್ದೇವೆಂದು ಹೇಳಲಾಗುತ್ತಿದೆ ಅಷ್ಟೆ. ಆದರೆ, ಇದಕ್ಕೆ ಸಂಬಂಧಪಟ್ಟಂತೆ ನಿಮ್ಮ ಹತ್ತಿರ ಅಂಕಿ-ಅಂಶ ಎಷ್ಟಿದೆ? ಈ ಒಂದು ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಿಂದ ಹೊರಗಡೆಯವರನ್ನು ಎಷ್ಟು ಜನರನ್ನು ಮೇಲಕ್ಕೆ ಎತ್ತಿದ್ದೀರಿ? ನೀವು ಇಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದು, ಈ ಹಣಕ್ಕೆ ಅನುಗುಣವಾಗಿ ಸರ್ಕಾರದ ಯೋಜನೆಯ ಮೂಲಕ ಆ ಒಂದು ವರ್ಗ ಮೇಲಕ್ಕೆ ಬಂದಿದೆಯೇ? ಇದರ ಬಗ್ಗೆ ಯೋಜನೆ ಮಾಡಿ. ಏಕೆಂದರೆ, ಕಾರ್ಯಕ್ರಮ ರೂಪಿಸುವುದು ದೊಡ್ಡ ವಿಚಾರವಲ್ಲ. ಆದರೆ, ಇದನ್ನು ರೂಪಿಸಿದ ಮೇಲೆ ಅದು ಎಷ್ಟರಮಟ್ಟಿಗೆ ಅವರಿಗೆ ತಲುಪುತ್ತದೆ ಮತ್ತು ಆ ವರ್ಗದವರು ಎಷ್ಟರಮಟ್ಟಿಗೆ ಮೇಲಕ್ಕೆ ಬಂದಿದ್ದಾರೆ? ಅವುಗಳ ಒಂದು ಪರಾಮರ್ಶೆಯನ್ನು ನಾವು ಎಲ್ಲಿಯವರೆಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಈ ಒಂದು ವರ್ಗ ಮೇಲಕ್ಕೆ ಬರುವುದಿಲ್ಲ. ಇವರಿಗೆ ಪತ್ರಿಕಾ ಹುಚ್ಚು ಎಷ್ಟೆಂದು ಹೇಳುವುದಕ್ಕೋಸ್ಕರ ಇನ್ನೊಂದು ಉದಾಹರಣೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳು ಇಲ್ಲಿಯೇ ಇರುವುದರಿಂದ ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವರು ಕೌಶಲ್ಯ ಯೋಜನೆಯನ್ನು ಪ್ರಕಟ ಮಾಡಿ ಮಹಿಳೆಯರಿಗೆ ನಾವು ತರಬೇತಿ ಕೊಡುತ್ತೇವೆಂದು ಹೇಳಿದರು. ಇದಕ್ಕಾಗಿ 100 ಲಕ್ಷ ರೂಪಾಯಿ ಹಣ ಮೀಸಲಾಗಿಡುತ್ತೇವೆಂದು ಘೋಷಣೆ ಮಾಡಿದ್ದೀರಿ. ಆದರೆ, ಇವತ್ತಿನ ದಿವಸ ಕೇವಲ ಘೋಷಣೆ ಮಾತ್ರ ಉಳಿಯಿತು. ಪರವಾಗಿಲ್ಲ, ಸರ್ಕಾರ ಯಾವುದೊಂದು ಕೌಶಲ ಯೋಜನೆಯನ್ನು ಪ್ರಕಟ ಮಾಡಿದೆ. ಇದರಿಂದ ನಮಗೆ ಅನುಕೂಲವಾಗುತ್ತದೆಂದು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಮಹಿಳೆಯರು ತಿಳಿದುಕೊಂಡಿದ್ದರು. ಆದರೆ, ತಾವು ಕೊನೆಗೆ ಏನು ಮಾಡಿದ್ದೀರಿ. ಈ ಹಣವನ್ನು ತೆಗೆದು ಗಂಗಾ ಕಲ್ಯಾಣ ಯೋಜನೆಗೆ ಉಪಯೋಗ ಮಾಡಿಕೊಂಡಿದ್ದೀರಿ. ಏಕೆ ಈ ರೀತಿ ಮಾಡಿದ್ದೀರಾ? ಗಂಗಾ ಕಲ್ಯಾಣ ಯೋಜನೆಗೆ ಎಷ್ಟು ಹಣ ಬೇಕಾಗುತ್ತದೆಂದು ನಿಮಗೆ ಗೊತ್ತಿರಲಿಲ್ಲವೇ? ಈ ಯೋಜನೆಯ ಹಣವನ್ನು ಅಲ್ಲಿಗೆ ಹಾಕುವುದಾದರೆ ಈ ಒಂದು ಯೋಜನೆಯನ್ನು ಏಕೆ ಪ್ರಕಟ ಮಾಡಬೇಕಾಗಿತ್ತು? ನಿಮ್ಮ ಉದ್ದೇಶ ಏನಾಗಿತ್ತು?

(ಈ ಹಂತದಲ್ಲಿ ಶ್ರೀ ಎನ್. ಯೋಗೀಶ್‌ಭಟ್‌ರವರು ಪೀಠವನ್ನು ಅಲಂಕರಿಸಿದರು)

ನಾನು ಇವತ್ತು ಒಂದೊಂದಾಗಿ ಹೇಳಿಕೊಳ್ಳುತ್ತಾ ಬಂದರೆ ತಾವು ಕೇವಲ ಪ್ರಚಾರಕೋಸ್ಕರ ಈ ರೀತಿ ಮಾಡಿದ್ದೀರಿ. ಕೇವಲ ಈ ಒಂದು ಕಾಗದಲ್ಲಿಯೇ ದಲಿತರನ್ನು ಉದ್ಧಾರ ಮಾಡುತ್ತೇವೆಂದರೆ ಅವರು ನಿಮಗೆ ನಿಜವಾಗಿಯೂ ಕೂಡ ಬೆಂಬಲ ಕೊಡುತ್ತಾರೆಯೆ? ಬಂದು ರೀತಿಯಲ್ಲಿ ಅಲ್ಲ, ಅವರು ನಿಮಗೆ ಯಾವ ರೀತಿಯಲ್ಲಿಯೂ ಕೂಡ ಬೆಂಬಲ ಕೊಡುವುದಿಲ್ಲ. ಇವತ್ತಿನ ದಿವಸ ಪತ್ರಿಕೆ ಓದುವವರು ಏನು ತಿಳಿದುಕೊಳ್ಳುತ್ತಾರೆಂದರೆ, ಇವತ್ತು ಈ ಸರ್ಕಾರ ಬಂದು ಕೇವಲ ಪ್ರಚಾರ ಮಾತ್ರ ಪತ್ರಿಕೆಗಳಲ್ಲಿ ಮಾಡುತ್ತಿದ್ದಾರೆಂದು ತಿಳಿದುಕೊಳ್ಳುತ್ತಾರೆ ವಿನಃ ಇದರ ಮೇಲೆ

ಅವರು ನಿಮಗೆ ಬೆಂಬಲ ಕೊಡುತ್ತಾರೆಂದು ತಾವು ನಿರೀಕ್ಷೆ ಮಾಡಬೇಡಿ. ಇವತ್ತಿನ ದಿವಸ ಈ ಸದನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಎಷ್ಟು ಜನ ಸದಸ್ಯರು ಯಾವ್ಯಾವ ಪಕ್ಷದಿಂದ ಆಯ್ಕೆ ಮಾಡಿಕೊಂಡು ಬಂದಿದ್ದಾರೆ ಎನ್ನತಕ್ಕಂಥದನ್ನು ವಿಮರ್ಶೆ ಮಾಡಿಕೊಳ್ಳಿ? ಈಗಲಾದರೂ ಈ ವಿಮರ್ಶೆ ಮೂಲಕ ಅಂಕಿ–ಅಂಶಗಳನ್ನು ತಾವು ಗಮನಿಸಿದರೆ, ನಿಜಕ್ಕೂ ಕೂಡ ಈಗಲಾದರೂ ಅವರ ಬಗ್ಗೆ ನಿಜವಾದ ಕಾಳಜಿಯನ್ನು ತೋರಿಸಬಹುದು ಎನ್ನತಕ್ಕಂಥ ಭಾವನೆ ಬರುತ್ತದೆ. ಮತ್ತೊಂದು ವಿಷಯ ಹೇಳುವುದೇನೆಂದರೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ನಿಮಗೆ ದ್ವಂದ್ವ ನೀತಿ ಯಾವಗಿನಿಂದ ಪ್ರಾರಂಭವಾಗಿದೆ? ಸಮಾಜ ಕಲ್ಯಾಣ ಎಂದರೆ ಎರಡು ಜಾತಿಯವರನ್ನು ಸೇರಿಸಿದ್ದೀರಾ? ಅಂತರ್ಜಾತಿ ವಿವಾಹ ಬಂದಾಗ ಇವತ್ತಿನ ದಿವಸ ಪರಿಶಿಷ್ಟ ಜಾತಿಯವರನ್ನು ಮದುವೆ ಮಾಡಿಕೊಂಡರೆ ಮಾತ್ರ 25 ಸಾವಿರ ರೂಪಾಯಿ ಕೊಡುತ್ತಿದ್ದೀರಿ. ಹಾಗಾದರೆ ಪರಿಶಿಷ್ಟ ಪಂಗಡದವರು ಸಮಾಜದಲ್ಲಿ ಬೇರೆ ಜನಾಂಗದವರ ಜೊತೆಯಲ್ಲಿ ಸೇರಬಾರದೆ? ಇವರಿಗೆ ನೀವು ಪ್ರೋತ್ಸಾಹ ಕೊಡಬಾರದೆ? ಈ ರೀತಿಯಾಗಿ ನೀವು ಏಕೆ ಯೋಚನೆ ಮಾಡುತ್ತಿದ್ದೀರಿ? ಸಮಾಜ ಕಲ್ಯಾಣ ಇಲಾಖೆ ಎಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಸಮಾನ ತಕಡಿಯಲ್ಲಿಟ್ಟು ಅವರಿಗೆ ನ್ಯಾಯವನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಇದರ ಬಗ್ಗೆ ಇದುವರೆಗೂ ಯಾರು ಯೋಚನೆ ಮಾಡಿರಲಿಲ್ಲ. ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಇಲ್ಲಿಯೇ ಇರುವುದರಿಂದ ಅವರ ಗಮನಕ್ಕೆ ತರುವುದೇನೆಂದರೆ, ಇದರ ಬಗ್ಗೆ ಅವರು ಖಂಡಿತವಾಗಿ ಯೋಚನೆ ಮಾಡಬೇಕು? ಅಂತರ್ಜಾತಿ ವಿವಾಹ ಕೇವಲ ಪರಿಶಿಷ್ಟ ಜಾತಿಗೆ ಮಾತ್ರ ಮೀಸಲಾಗಕೂಡದು. ಪರಿಶಿಷ್ಟ ಪಂಗಡದವರಿಗೂ ಕೂಡ ಆಗಬೇಕು ಮತ್ತು ಇದಕ್ಕೆ ತಾವೇನು ಪ್ರೋತ್ಸಾಹದನ ಕೊಡುತ್ತಿದ್ದೀರಿ ಇದು ಅವರಿಗೂ ಕೂಡ ತಲುಪುವುದಕ್ಕೆ ಮಾಡಬೇಕಾಗಿರತಕ್ಕಂಥ ಕಾಯಿದೆಯನ್ನು ಮಾಡುವುದಕ್ಕೆ ಮನಸ್ಸು ಇದ್ದರೆ ಖಂಡಿತವಾಗಿ ಮಾಡಿ.

ಆಗ ಮಾತ್ರ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರನ್ನು ಸಮಾನವಾಗಿ ನ್ಯಾಯಯುತವಾಗಿ ಅವರಿಗೆ ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನುವ ಮನಸ್ಸಿನಿಂದ ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ? ನಿನ್ನೆ ದಿವಸ ಡಾ: ವೈ. ನಾಗಪ್ಪನವರು ಇಲ್ಲಿಯೆ ಇದ್ದಾರೆ. ಪೈಲೆಟ್ ತರಬೇತಿ ಕಾರ್ಯಕ್ರಮ ಸ್ವಾಮಿ, ಅದು ಪರಿಶಿಷ್ಟ ಜಾತಿಯವರಿಗೆ ಮಾತ್ರವೆ ಮೀಸಲಾತಿ ದೊಡ್ಡದಾಗಿ ಪತ್ರಿಕೆಯಲ್ಲಿ ಕೊಟ್ಟಿದ್ದೀರಲ್ಲಾ ಪರಿಶಿಷ್ಟ ಜಾತಿಯವರ ಮನಸ್ಸಿಗೆ ಎಷ್ಟು ನೋವಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಿದೀರಾ? ಇಲ್ಲ ಸ್ವಾಮಿ, ಅದು ಇದ್ದಿದ್ದರೆ ನೀವು ಅಲ್ಲಿಯೇ ಕೊಡಬೇಕಾಗಿತ್ತಲ್ಲವೆ? ಅದನ್ನು ನೀವು ಹೇಳಬಹುದಾಗಿತ್ತಲ್ಲವಾ? ನನಗೆ ನೋವಾಗಿದ್ದು ಏನೆಂದರೆ, ನಿಮ್ಮಷ್ಟು ತಿಳುವಳಿಕೆ ನಮಗೆ ಗೊತ್ತಿಲ್ಲ ಸ್ವಾಮಿ. ನಾವು ಪತ್ರಿಕೆಗಳನ್ನು ನೋಡುತ್ತೇವೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) ಮಾನ್ಯ ಛೇರ್ಮನ್‌ರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಇಬ್ಬರಿಗೂ ಮಾಡಿದ್ದೇವೆ. ಒಟ್ಟು ಈ ವರ್ಷ 25 ಜನರನ್ನು ಕಳುಹಿಸುತ್ತಾರೆ. ನೆಕ್ಸ್ಟ್ ಬ್ಯಾಚ್‌ನಲ್ಲಿ ಪರಿಶಿಷ್ಟ ಪಂಗಡದವರು ಇರುತ್ತಾರೆ.

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಛೇರ್ಮನ್‌ರೆ, ಧನ್ಯವಾದಗಳು ಸ್ವಾಮಿ. ನೆಕ್ಸ್ಟ್ ಬ್ಯಾಚ್ ಎಂದು ಮಾಡುವುದಕ್ಕೆ ಹೋಗಬೇಡಿ, ಅವರನ್ನು ಸಮಾನವಾಗಿ ಅದರ ಜೊತೆಯಲ್ಲಿಯೇ ಮಾಡಿಬಿಡಿ. ಅವಾಗ ಏನಾಗುತ್ತದೆ. ಈ ದ್ವಂದ್ವ ನೀತಿ ಅನುಸರಿಸುತ್ತಾರೆ ಎನ್ನುವ ಭಾವನೆ ಹೋಗುತ್ತದೆ. ದಯವಿಟ್ಟು ನೀವು ಮಾಡುವಾಗ ಮುಂದಿನ ದಿವಸಗಳಲ್ಲಿ ಯಾವತ್ತು ಕಾರ್ಯಕ್ರಮವನ್ನು ಹಮ್ಮಿಕೊಂಡರು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರನ್ನು ಒಟ್ಟು ಗೂಡಿಸಿ ಮಾಡಿ. ಆಗ ಮಾತ್ರ ಸಮಾಜ ಕಲ್ಯಾಣ ಇಲಾಖೆಯಲ್ಲಿ ನಮಗೆ ನ್ಯಾಯ ಸಿಗುತ್ತದೆಂದು ಆ ವರ್ಗದವರಿಗೆ ಅನಿಸುತ್ತದೆ. ಪ್ರಗತಿ ಕಾರ್ಯಕ್ರಮಗಳನ್ನು ತಮ್ಮ ಗಮನಕ್ಕೆ ತರಲಿಕ್ಕೆ ನಾನು ಇಚ್ಛೆ ಪಡುತ್ತಿದ್ದೇನೆ. 2004–05ರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದಂಥ ಹಣ 12862. 29 ಲಕ್ಷ ರೂ.ಗಳು ವೆಚ್ಚ ಮಾಡಿದ ಹಣ 8960.30 ಲಕ್ಷ ರೂ.ಗಳು ಇದರಲ್ಲಿ ಇದು ಏನಾಗಿದೆ ಎಂದರೆ, 2004–05ರಲ್ಲಿ ಇಷ್ಟು ಹಣ ಬಿಡುಗಡೆ ಮಾಡಿ ಇಷ್ಟು ವೆಚ್ಚ ಮಾಡಿದರೆ ಅದು ಎಲ್ಲಿಯವರೆಗೆ ಎಂದರೆ ಜನವರಿಯವರೆಗೆ, ಇನ್ನು ಉಳಿದ ಎರಡೆ ಎರಡು ತಿಂಗಳು ಆ ಎರಡು ತಿಂಗಳಲ್ಲಿ 3901 ಲಕ್ಷ ರೂ.ಗಳನ್ನು ನೀವು ಖರ್ಚು ಮಾಡಿದ್ದೀರಾ? ಮಾಡಲಿಕ್ಕೆ ಸಾಧ್ಯವಿದೆಯಾ? ಯೋಚನೆ ಮಾಡಿ, ಈಗ ಹಣ ಹಣಕಾಸು ಮಂತ್ರಿಗಳು ಹಣ ಬಿಡುಗಡೆ ಮಾಡುವಂಥ ಸಂದರ್ಭದಲ್ಲಿ ಯಾವ ಯಾವ ತಿಂಗಳಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದರೆ ಅದು ಲಭ್ಯತೆ ಅನುಸರಿಸಿ ಅವರು ಕಾರ್ಯಗತ ಮಾಡುವುದಕ್ಕೆ ಅನುಕೂಲವಾಗುತ್ತದೆ. ನೀವು ವರ್ಷವಾರು 11 ತಿಂಗಳವರೆಗೆ ಅಷ್ಟನ್ನು ಮಾಡಿ ಇನ್ನು ಎರಡು ತಿಂಗಳಲ್ಲಿ ಎಲ್ಲಾ ಸಾಧನೆ ಮಾಡಿ ಎಂದು ಅಂದರೆ, ಖಂಡಿತವಾಗಿ ಸಾಧ್ಯವಾಗುತ್ತದೆಯೇ? ಖಂಡಿತವಾಗಿ ಅಗುವುದಿಲ್ಲ. ಏನಾಗುತ್ತದೆಂದರೆ, ಅಲ್ಲಿ ಖರ್ಚಾಗದಿರುವ ಹಣವನ್ನೆಲ್ಲಾ ಪೋಲಿಂಗ ಸೆಂಟರ್‌ಗೆ ಕ್ರೋಢೀಕರಣ ಮಾಡೋಣ. ಯಾವುದೊ ಒಂದು ಗುತ್ತಿಗೆದಾರನ ಬಾಕಿ ಇದೆ ಯಾವುದು ಜನರಲ್ ಸೆಕ್ಟರ್‌ನಲ್ಲಿರತಕ್ಕಂಥದ್ದು, ಅವರಿಗೆ ನೀವು ವರ್ಗಾಯಿಸುವಂಥ ಒಂದು ಪದ್ಧತಿ ಇದೆ. ಸ್ವಾಮಿ. ಆ ಪದ್ಧತಿಯನ್ನು ದಯವಿಟ್ಟು ಕೈಬಿಡಬೇಕು. ಕೌಶಲ್ಯ ಯೋಜನೆಯ 100 ಲಕ್ಷ ರೂ.ಗಳನ್ನು ನೀವು ಗಂಗಾ ಕಲ್ಯಾಣ ಯೋಜನೆಗೆ ಡೈವರ್ಟ್ ಮಾಡಲಿಲ್ಲವೇ? ನಾನು ಅಂಕಿ ಅಂಶಗಳನ್ನು ಇಟ್ಟುಕೊಂಡು ಹೇಳುತ್ತಿದ್ದೇನೆ. ನಡೆಯುತ್ತಿದೆ. ಆದರೆ ನಿಮ್ಮ ಅವಧಿಯಲ್ಲಿ ಆಗದಿರಬಹುದು. ಅದಕ್ಕಾಗಿ ನಾನು ಪ್ರಶಂಸೆ ಮಾಡುತ್ತಿದ್ದೇನೆ. ಆದರೆ ಬೇರೆಯವರು ಮಾಡುತ್ತಿದ್ದಾರೆ. ಬೇರೆಯವರು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ.

ಮಾನ್ಯ ಉಪ ಮುಖ್ಯಮಂತ್ರಿಗಳು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವರ್ಗದವರ ಒಂದು ಕಲ್ಯಾಣದ ವಿಚಾರದಲ್ಲಿ ನಿಜವಾಗಲೂ ಕಾಳಜಿ ಇಟ್ಟುಕೊಂಡಿದ್ದಾರೆ ಮತ್ತು ಕಳಕಳಿಯಿಂದ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಎರಡು ಮಾತಿಲ್ಲ. ಅದನ್ನು ನಾನು ಪ್ರಶಂಸಿಸುತ್ತೇನೆ. ಆದರೆ, ಈ ರೀತಿ ಡೈವರ್ಟ್ ಮಾಡುವಂಥ ಯೋಜನೆಗಳನ್ನು ಕ್ಯಾಬಿನೆಟ್ ಮುಂದೆ ಅಥವಾ ತಮ್ಮ ಗಮನಕ್ಕೆ ಬಂದಾಗ ಆ ಸಂದರ್ಭದಲ್ಲಿ ನಿರ್ಧಾಕ್ಷಿಣ್ಯವಾಗಿ ಸಮಾಜ ಕಲ್ಯಾಣ ಇಲಾಖೆಗಳು ಯಾವುದೆ ಕಾರಣಕ್ಕೂ ಕ್ರೋಢೀಕರಣದಲ್ಲಿ ಬರಕೂಡದು ಎನ್ನುವ ಒಂದು ಆದೇಶವನ್ನು ಸಂದೇಶವನ್ನು ತಾವು ಕಳುಹಿಸಿಕೊಡಬೇಕೆಂದು ಕೂಡ ತಮ್ಮಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಇನ್ನೊಂದು, ಈ ಎಸ್.ಸಿ.ಪಿ. ಪ್ರಗತಿಯಲ್ಲಿಯೂ ಕೂಡ ಅದರಲ್ಲಿ ಕೂಡ ಅಂಕಿ ಅಂಶಗಳನ್ನು ಕೊಟ್ಟಾಗ ಸುಮಾರು 9528 ಲಕ್ಷ ರೂ.ಗಳು ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಕೆಲಸ ಆಗಬೇಕು ಎನ್ನತಕ್ಕದ್ದನ್ನು ನೀವು ನಿಮ್ಮ ವರದಿಯಲ್ಲಿ ತಿಳಿಸಿದ್ದೀರಾ? ಆದರೆ 9528 ರೂ.ಗಳ ಕೆಲಸ 28 ಲಕ್ಷ ರೂ.ಗಳ ಹಣಕ್ಕೆ ನೀವು ಎರಡು ತಿಂಗಳಲ್ಲಿ ಎಸ್.ಸಿ.ಪಿ.ನಲ್ಲಿ ವೆಚ್ಚ ಮಾಡುವುದಕ್ಕಾಗುತ್ತದೆಯೆ? ಖಂಡಿತವಾಗಿ ಆಗುವುದಿಲ್ಲ. ಏಕೆಂದರೆ ನಾವು ಅದನ್ನು ಸಿಸ್ಟಾಮೆಟಿಕ್ ಆಗಿ ನೋಡಿದ್ದೇವೆ. ಬೇಕಾದಷ್ಟು ಅನುಭವ ಕೂಡ ತಮಗೂ ಇದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಪ್ರಾಕ್ಟಿಕಲ್ಲಾಗಿ ಇಷ್ಟು ಸಾಧನೆ ಮಾಡಲಿಕ್ಕೆ ಆ ಎರಡು ತಿಂಗಳಲ್ಲಿ ಅಷ್ಟು ಹಣವನ್ನು ಬಿಡುಗಡೆ ಮಾಡಿದರೆ ಸಾಧ್ಯವಾಗುತ್ತದೆಯೇ? ಆಗುವುದಿಲ್ಲ. ಆಗುವುದಿಲ್ಲವೆಂದ ಮೇಲೆ ನಾವು ಅಂಕಿ ಅಂಶಗಳ ಮೇಲೆ ವರದಿಗಳನ್ನು ಕೊಟ್ಟರೆ ಎಷ್ಟರಮಟ್ಟಿಗೆ ಆಗುತ್ತದೆ. ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಕ್ಕೆ ನಾನು ಇಚ್ಛೆ ಪಡುತ್ತೇನೆ. 1951ರಿಂದ 1956ರವರೆಗೆ 10 ಯೋಜನೆಗಳು 2002 ರಿಂದ 2007ರವರೆಗೆ 60218.27 ಲಕ್ಷ ರೂ.ಗಳ ಹಣವನ್ನು ನಾವು ಈ ಒಂದು ಪರಿಶಿಷ್ಟರ ಕಲ್ಯಾಣಕ್ಕೋಸ್ಕರ ಒದಗಿಸಿದ್ದೇವೆಂದು ನೀವು ಹೇಳುತ್ತೀರಾ? ಇದು ನೀವು ವಾರ್ಷಿಕ ವರದಿಯಲ್ಲಿ ಕೊಟ್ಟಿರುವಂಥ ಅಂಕಿ ಅಂಶ ನನ್ನದೇನು ಅಲ್ಲ. ಇದರಲ್ಲಿ ಒದಗಿಸಿದ್ದೇವೆಂದು ಹೇಳಿದಿರೆ ವಿನಹಃ ಆಯವ್ಯಯದಲ್ಲಿ ಮಂಡನೆ ಮಾಡಿರುವಂಥ ಅಂಕಿ ಅಂಶಗಳನ್ನು ಕೊಟ್ಟಿದ್ದೀರೆ ವಿನಹಃ ಇದರಲ್ಲಿ ಎಷ್ಟು ವೆಚ್ಚ ಮಾಡಿದ್ದೇವೆ ಎನ್ನುವಂಥ ಸಮಗ್ರವಾದ ಮಾಹಿತಿಯ ಸ್ಪಷ್ಟೀಕರಣ ಕೊಟ್ಟಿದ್ದೀರಾ? ಪ್ರಾಮಾಣಿಕ ಸತ್ಯವನ್ನು ಹೇಳುವಂಥ ಕೆಲಸವನ್ನು ಮಾಡಿದ್ದೀರಾ? ನಿಮ್ಮ ವರದಿ ಅಪೂರ್ಣ. ಏಕೆಂದರೆ, ನಿಮ್ಮ ವರದಿಯಲ್ಲಿ ಆಯವ್ಯಯದಲ್ಲಿ ಮಂಡನೆ ಮಾಡಿರುವುದು ಇಷ್ಟು ಸ್ವಾಮಿ, ಇಷ್ಟು ಹಣವನ್ನು ನಾವು ಇಟ್ಟಿದ್ದೇವೆ ಎನ್ನುವಂಥ ಹೆಚ್ಚುಗಾರಿಕೆ ಅಂಶ ಇದರಲ್ಲಿ ಸೇರಿದೆಯೆ ವಿನಹಃ ಅದರಲ್ಲಿ ಎಷ್ಟು ವೆಚ್ಚವನ್ನು ಮಾಡಿದ್ದೇವೆ ಎನ್ನುವಂಥದ್ದನ್ನು ನೀವು ಇದರಲ್ಲಿ ತಿಳಿಸಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು

ಖಂಡಿತವಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಕಳುಹಿಸಿ ಈ 10 ಯೋಜನೆಗಳಿಗೆ ಆಯವ್ಯಯದಲ್ಲಿ ಹಣ ಮಂಡನೆಯಾಯಿತು. ಎಷ್ಟು ಬಿಡುಗಡೆಯಾಯಿತು. ಎಷ್ಟು ವೆಚ್ಚ ಮಾಡಿದ್ದೇವೆ, ಇದು ಕರ್ನಾಟಕದ ಸಮಸ್ತ ಪರಿಶಿಷ್ಟ ಜಾತಿ ಜನಾಂಗದವರಿಗೆ ತಿಳುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಸ್ವಾಮಿ ಮೊನ್ನೆ ನಕ್ಸಲೇಟ್‌ರ ಹಾವಳಿಯಾಯಿತು. ನೀವು ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೀರಿ. ಪಶ್ಚಿಮ ಘಟ್ಟದ ಬುಡಕಟ್ಟು ಜನರ ಪುನರ್‌ವಸತಿಗೆ 60 ಕೋಟಿ ರೂ.ಗಳ ಪ್ಯಾಕೇಜ್‌ನ್ನು ಘೋಷಣೆ ಮಾಡಿದಿರಿ.

ಏನಾಯಿತು ಸ್ವಾಮಿ ನಿಮ್ಮ ಪ್ಯಾಕೇಜ್, ನಿಜವಾಗಲೂ ಹೇಳಿ, ಈಗ ನಾನು ಯಾವುದೆ ಒಂದು ಮಾತನಾಡಲಿಕ್ಕೆ ಹೋದರು ಕೂಡ ಪತ್ರಿಕಾ ಪ್ರಚಾರದ ಹುಚ್ಚು ಈ ಸರ್ಕಾರಕ್ಕೆ ಜಾಸ್ತಿ ಎನಿಸಿಬಿಟ್ಟಿದೆ. ಒಂದೊಂದು ಹಂತದಲ್ಲೂ ನಾನು ಇದುವರೆಗೆ ಎಲ್ಲವನ್ನು ಹೇಳಿಕೊಂಡು ಬಂದೆ, ಪ್ರತಿಯೊಂದರಲ್ಲೂ ಸತ್ಯವಾದ ನಡುವಳಿಕೆ ಇದರಲ್ಲಿ ನನಗೆ ಕಾಣಿಸುತ್ತಿಲ್ಲ. ಬರೀ ಘೋಷಣೆ ಬರೀ ಆ ಒಂದು ವರ್ಗದವರ ಅಭಿವೃದ್ಧಿ ಇಷ್ಟು ಹೇಳಿಕೆ ಬಿಟ್ಟರೆ ಈ ಒಂದು 60 ಕೋಟಿ ರೂ. ಗಳ ಹಣ ನೀವು ಪ್ಯಾಕೇಜ್ ಬಿಡುಗಡೆ ಮಾಡುತ್ತೇವೆಂದು ಹೇಳಿದಿರಿಲ್ಲಾ ಅದು ಏನಾಯಿತು? ಅದರ ಅನುಷ್ಠಾನದ ಬಗ್ಗೆ ಸರ್ಕಾರ ಏನಾದರೂ ನಿಜವಾಗಲೂ ಪ್ರಾಮಾಣಿಕವಾಗಿ ಮಾಡಿದ್ದೇವೆಂದು ಹೇಳುತ್ತೀರಾ? ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳುತ್ತೇನೆ. ನೀವು ಈ ಘೋಷಣೆ ಮಾಡಬೇಡಿ, ಪ್ಯಾಕೇಜ್ ಎಂದರೆ ಮುಗಿದು ಹೋಯಿತು ಸರ್ಕಾರದಲ್ಲಿ, ಅದು ಬರದೇ ಇರುವಂಥ ವಿಚಾರ ಆಗಿ ಹೋಗಿ ಬಿಟ್ಟಿದೆ. ಪ್ಯಾಕ್ ಮಾಡಿ ಇಟ್ಟು ಬಿಡುವುದು ಅದೇ ಪ್ಯಾಕೇಜ್. ಅದು ಬಿಡುಗಡೆ ಮಾಡುವುದು ಅಲ್ಲ. ಈ ರೀತಿಯ ಘೋಷಣೆಗಳನ್ನು ಮಾಡಬಾರದೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಘೋಷಣೆ ಇನ್ನು ಮುಂದೆ ಮಾಡಬೇಡಿ. ಮಾಡಿರುವ ಹಣ ಬಿಡುಗಡೆ ಮಾಡಿ ಆ ಒಂದು ಬುಡಕಟ್ಟು ಜನರ ಪುನರ್‌ವಸತಿಗೆ ಅವರ ಅಭಿವೃದ್ಧಿಗೆ 60 ಕೋಟಿ ರೂ.ಗಳ ಪ್ಯಾಕೇಜ್ ಹಣವನ್ನು ನಿಜವಾಗಲು ಬಿಡುಗಡೆ ಮಾಡಿ. ಅದು ಅವರಿಗೆ ತಲುಪುವಂಥ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಸ್ವಾಮಿ ಇವತ್ತು ನಾನು ಒಂದು ಅಂಕಿ ಅಂಶವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬುಡಕಟ್ಟು ಜನರನ್ನು ಹೊಂದಿರುವಂಥ ರಾಜ್ಯಗಳಲ್ಲಿ ಕರ್ನಾಟಕ ಕೂಡ ಒಂದು ಪ್ರಮುಖ ರಾಜ್ಯವಾಗಿದೆ. ಇವತ್ತು ಅತೀ ಹೆಚ್ಚು ಜನರನ್ನು ಹೊಂದಿರುವಂಥ ಒರಿಸ್ಸಾ ರಾಜ್ಯದಲ್ಲಿ ಗ್ರಾಮೀಣ ವಸತಿ ಸೌಕರ್ಯದಲ್ಲಿ ಶೇಕಡಾ 73ರ ಸಾಧನೆಯನ್ನು ಮಾಡಿದ್ದಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಕೇವಲ 37 ಮಾಡಿದ್ದಾರೆ. ಉಲ್ಟಾ 73 ಇದ್ದದ್ದು 37 ಆಗಿದೆ. ಇದು ಏಕೆ ಸ್ವಾಮಿ, ನಾವು ಇಷ್ಟೊಂದು ಹಿಂದೆ ಇದ್ದೇವೆ.

ಮಾನ್ಯ ಮಂತ್ರಿಗಳು ಈ ಒಂದು ವಿಚಾರದಲ್ಲಿ ಸಮಗ್ರವಾಗಿ ಅಧಿಕಾರಿಗಳನ್ನು ಕರೆಸಿ ನಾವು ಕೂಡ ಒಂದು ಹಂತವನ್ನು ತಲುಪುವಂಥದ್ದು ನಾವು ಕೂಡ ಒಂದು ಹಂತವನ್ನು ತಲುಪುವಂಥದ್ದು ನಾವು ಕೂಡ ಈ ದೇಶದಲ್ಲಿ ಬುಡಕಟ್ಟು ಜನರ ಸಮಸ್ಯೆಯನ್ನು ಪರಿಹಾರ ಮಾಡುವಂಥ ವಿಚಾರದಲ್ಲಿ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೇವೆ. ಆ ಕಾರ್ಯಕ್ರಮಗಳು ಯಶಸ್ವಿ ರೀತಿಯಲ್ಲಿ ಅನುಷ್ಠಾನ ಆಗುವಂತೆ ನಾವು ಮಾಡುತ್ತಿದ್ದೇವೆಂದು ನೀವು ಮಾಡಬೇಕೆಂದರೆ ನಿಮ್ಮ ಅಂಕಿ ಅಂಶಗಳಾದರೂ ಇಲ್ಲಿ ಇರಬೇಕಲ್ಲವೇ? ಕೇವಲ 37 ಪರ್ಸೆಂಟ್‌ಗೆ ನಾವು ತೃಪ್ತಿ ಪಟ್ಟುಕೊಂಡರೆ ಸಾಧ್ಯವಾಗುವುದಿಲ್ಲ. ಆ ಬುಡಕಟ್ಟು ಜನರ ಒಂದು ವಿಚಾರದಲ್ಲಿ ನೀವು ಹೆಚ್ಚಿನ ಮಹತ್ವವನ್ನು ಮತ್ತು ಹೆಚ್ಚಿನ ಒತ್ತನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಇವತ್ತು ನಾನು ಒಂದು ಅಂಕಿ ಅಂಶವನ್ನು ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಈ ಬುಡಕಟ್ಟು ಜನರ ಬಗ್ಗೆ 1916ರಲ್ಲಿ 3500 ಜನ ಬುಡಕಟ್ಟು ಜನಾಂಗದ ಜೇನು ಕುರುಬರು. 1991ಕ್ಕೆ, ನಾನು 2001ಕ್ಕೆ ಹೋಗಿಲ್ಲ. 31000 ಜನಸಂಖ್ಯೆಯಾಗಿದೆ. ಅದೇ ರೀತಿ ಕೊರಗ ಜನಾಂಗ ಇವರೆಲ್ಲಾ ಪ್ರಿಮೆಟಿವ್ ಟ್ರೈಬ್ಸ್ ಇವರು ರಾಜ್ಯದಲ್ಲಿ 50 ಜನಾಂಗಗಳು ಪರಿಶಿಷ್ಟ ಪಂಗಡದಲ್ಲಿ ಇದ್ದರು ಪ್ರಿಮೆಟಿವ್ ಟ್ರೈಬ್ಸ್‌ನಲ್ಲಿ ಇರುವವರು ಇಬ್ಬರೆ ಇಬ್ಬರು. ಒಂದು ಜೇನು ಕುರುಬರು ಇನ್ನೊಬ್ಬರು ಕೊರಗರು. ಈ ಕೊರಗರ ಜನಸಂಖ್ಯೆ 1961ರಲ್ಲಿ 6500 ಇದ್ದದ್ದು 1991 ರಲ್ಲಿ 16000 ಜನ ಇವತ್ತು ಜೇನು ಕುರುಬರಂತೆ ಕೊರಗರ ಸ್ಂಖ್ಯೆ ಪ್ರಿಮೆಟಿವ್ ಟ್ರೈಬ್ಸ್ ಆಗಿರುವಂಥ ಬುಡಕಟ್ಟು ಜನಾಂಗದವರಾಗಿರುವಂಥ ಇವರ ಜನಸಂಖ್ಯೆ 46000 ಆಗಿದೆ. ಈ 46000 ಆಗಿರುವ ಇವರ ಬಗ್ಗೆ ಇವರ ಅಭಿವೃದ್ಧಿ ಬಗ್ಗೆ ನಿಮ್ಮ ಚಿಂತನೆ ಏನು? ವಿಶೇಷವಾದ ಕಾಳಜಿ ಈ ಒಂದು ವರ್ಗದವರಿಗೆ ನಾವು ಮಾಡಬೇಕಾಗಿದೆ. ಈ 46000 ಬುಡಕಟ್ಟು ಜನರಿಗೆ ನಮ್ಮ ಒಂದು ಯೋಜನೆ ಏನು? ನಮ್ಮ ಸರ್ಕಾರದ ಕಾಳಜಿ ಏನು? ನಮ್ಮ ಸರ್ಕಾರ ಹಮ್ಮಿಕೊಂಡಿರುವಂಥ ಕಾರ್ಯಕ್ರಮಗಳು ಏನು? ಅದಕ್ಕಾಗಿ ಮೀಸಲಿಟ್ಟಿರುವ ಹಣ ಏನು? ಏನಾದರೂ ನಿಮ್ಮ ಹತ್ತಿರ ಇದೆಯಾ ಸ್ವಾಮಿ? ದಯವಿಟ್ಟು ಈ ಒಂದು ವಿಚಾರದಲ್ಲಿ ಸಮಗ್ರವಾಗಿ ನೀವು ಚಿಂತನೆ ಮಾಡಬೇಕಾಗಿದೆ. ಈ ಹಿಂದೆ ಕೂಡ ಪ್ರಮಾಣದಲ್ಲಿ ಬುಡಕಟ್ಟು ಜನರು ಇರಲಿಲ್ಲ. ನಿಜವಾಗಲೂ ನಿಮಗೆ ಬುಡಕಟ್ಟು ಜನರ ಬಗ್ಗೆ ಕಾಳಜಿ ಇದ್ದರೆ ಈ 46000 ಜನ ಬುಡಕಟ್ಟು ಜನಾಂಗದವರನ್ನು ಮೇಲೆತ್ತುವಂಥ ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ. ಅವರ ಅನುಭವಿಸುತ್ತಿರುವಂಥ ಕಷ್ಟ ಕಾರ್ಪಣ್ಯಗಳನ್ನು ತಿಳಿದುಕೊಳ್ಳುವಂಥ ಅಧ್ಯಯನವನ್ನು ಮಾಡಿ ಎಂದು ತಮಗೆ ನಾನು ಹೇಳುತ್ತಿದ್ದೇನೆ. ಈ ಹಿಂದೆ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಎಸ್.ಎಂ. ಕೃಷ್ಣರವರನ್ನು ನಾನು ಶ್ಲಾಘನೆ ಮಾಡುತ್ತೇನೆ. ಯಾವ ಕಾರಣವೋ ಏನೋ ಗೊತ್ತಿಲ್ಲ. ಕಾರಣ ಗೊತ್ತಿಲ್ಲವೆಂದು

ಹೇಳಿದ್ದು ಶ್ಲಾಘನೆ ಮಾಡುತ್ತಾ ಇರುವಂಥದ್ದು ಶ್ಲಾಘನೆ ಮಾಡಲಿಕ್ಕೆ ನನ್ನ ಒಂದು ಮನಸ್ಸು ಪ್ರೇರೇಪಣೆ ಕೊಟ್ಟಿದ್ದು ಏನು ಎಂದರೆ,

ಈ ಟ್ರೈಬಲ್ ಏರಿಯಾದಲ್ಲಿ ಬುಡಕಟ್ಟು ಜನರು ವಾಸ ಮಾಡುವಂತಹ ಜಾಗದಲ್ಲಿ ಅವರು ಸಂಪುಟ ಸಭೆಗಳನ್ನು ಮಾಡಿದರು. ಅವರ ಕಷ್ಟಕಾರ್ಪಣ್ಯಗಳನ್ನು ತಿಳಿದು ಕೊಳ್ಳುವಂತಹ ಪ್ರಯತ್ನಗಳನ್ನು ಮಾಡಿದರು. ಆದರೆ, ಈ ಸರ್ಕಾರ ಬಂದು ಒಂದು ಕಾಲು ವರ್ಷವಾಯಿತು. ಈಗ ಏನಾಗಿದೆ. ಒಂದು ಸತ್ಸಂಪ್ರದಾಯವನ್ನು ಯಾರೋ ಬೆಳೆಸಿದರೆ ಅದನ್ನು ಮುಂದುವರಿಸಿಕೊಂಡು ಹೋಗುವಂತಹ ಕೆಲಸವನ್ನು ಮಾಡಬೇಕು. ನೀವು ಯಾವುದನ್ನು ಕೂಡ ಮಾಡುತ್ತಿಲ್ಲ. ಹಿಂದೆ ಮುಖ್ಯಮಂತ್ರಿ ಗಳಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ನೇರ ನೇಮಕಾತಿಯನ್ನು ತೆಗೆದುಕೊಂಡು ಬಂದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಿಶ್ವವಿದ್ಯಾನಿಲಯದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಮಾರ್ಕ್ಸ್‌ಗಳನ್ನು ಪಡೆದು ಉತ್ತೀರ್ಣರಾಗಿರುತ್ತಾರೋ ಅಂತವರಿಗೆ ಶೇಕಡ 3ರ ಪ್ರಮಾಣದಲ್ಲಿ ನೇರ ನೇಮಕಾತಿ ಮಾಡುತ್ತೇವೆಂದು ಹೇಳಿದರು. ಅದು ಏನಾಯಿತು? ನನಗೆ ಗೊತ್ತಿಲ್ಲ ಸ್ವಾಮಿ, ಅದು ಯಾವ ನೆನೆಗುದಿಗೆ ಬಿದ್ದಿದೆ ಮಾನ್ಯ ಮಂತ್ರಿಗಳು ಅದಕ್ಕೆ ಮರು ಜೀವವನ್ನು ಕೊಡುವುದರ ಬಗ್ಗೆ ಯೋಚನೆ ಮಾಡಬೇಕು. ಈ ಮೀಸಲಾತಿಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಫಿಲ್‌ಅಪ್ ಮಾಡುವ ಬಗ್ಗೆ ಇಷ್ಟೊಂದು ವಿಳಂಬ ಮಾಡುತ್ತಿರುವವರು ಹಿಂದೆ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಇದ್ದಂತಹ ನೇರ ನೇಮಕಾತಿಯ ಬಗ್ಗೆ ಪುನಶ್ಚೇತನ ಮಾಡುವ ಬಗ್ಗೆ ಅಥವಾ ಕಾಯಕಲ್ಪ ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದೀರಾ? ದಯವಿಟ್ಟು ಅದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಮುಂದೆಯಾದರೂ ಟ್ರೈಬಲ್ ಏರಿಯಾದಲ್ಲಿ ನಿಜವಾಗಲೂ ಕೂಡ ಸಂಪುಟ ಸಮಿತಿಯನ್ನು ನಡೆಸಿ, ಅದನ್ನು ನಡೆಸಿದರೆ ಅಲ್ಲಿರುವಂತಹ ಜನಕ್ಕೆ ನಮ್ಮ ಬಗ್ಗೆ ಕಾಳಜಿ ಇದೆ. ಸರ್ಕಾರ ಏನಾದರೂ ನಮ್ಮ ಒಂದು ಉದ್ಧಾರಕ್ಕೆ ಅನುಕೂಲ ಮಾಡಬಹುದು ಎಂಬ ಭಾವನೆ ಕೂಡ ಬರುತ್ತದೆ. ಹಿಂದೆ ಇದ್ದಂತಹ ಸತ್‌ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುವಂತಹ ಕೆಲಸವನ್ನು ಈ ಸರ್ಕಾರ ಮಾಡಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಕೇಳಿ ಕೊಳ್ಳುತ್ತಿದ್ದೇನೆ. ಇಲ್ಲಿ ಮಂತ್ರಿಗಳು ಮಾಡಿದಂತ ಆದೇಶಕ್ಕೆ ಅಧಿಕಾರಿಗಳು ಮಾಡುತ್ತಿರುವಂತಹ ಕಾರ್ಯವೈಖರಿಯ ಮಾಡಿದಂತಹ ಆದೇಶಕ್ಕೆ: ಯಾವುದೂ ಕೂಡ ಬೆಲೆ ಇಲ್ಲದಂತಾಗಿದೆ. ಹಣಕಾಸಿನ ಮಂತ್ರಿಗಳಾದ ಮಾನ್ಯ ಸಿದ್ದರಾಮ ಯ್ಯನವರು ಇದನ್ನು ಗಮನಿಸಬೇಕು. ಏನೆಂದರೆ, ಹೋದ ಸಾರಿ ಮಳೆ ಬಂದಾಗ ಅರಣ್ಯದಲ್ಲಿರುವಂತಹ ಗಿರಿಜನರ ಪರಿಸ್ಥಿತಿಯ ಬಗ್ಗೆ ನಾನು ಇಲ್ಲಿ ಹೇಳಿದಾಗ ಪುಣ್ಯಾತ್ಮ ಹೆಸರು ಕೂಡ ಹಾಗೆ ಇದೆ ಧರ್ಮಸಿಂಗ್‌ರವರು. 5 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದರು. ಕಾಡಿನಲ್ಲಿ

ವಾಸ ಮಾಡುವಂತಹ ಗಿರಿಜನರಿಗೆ ತಾತ್ಕಾಲಿಕವಾಗಿ ಅವರುಗಳಿಗೆ ಮನೆ ಇಲ್ಲದೆ ಇರುವುದರಿಂದ ಗುಡಿಸಲುಗಳಿಗೆ ಪ್ಲಾಸ್ಟಿಕ್ ಹೊದಿಕೆ ಹಾಕುವುದಕ್ಕೆ ಬೆಚ್ಚಗಿನ ಹೊದಿಕೆಯನ್ನು ಕೊಡುವ ಬಗ್ಗೆ ಬ್ಲಾಂಕೆಟ್ ಕೊಡುವ ಬಗ್ಗೆ ಈ ಸದನದಲ್ಲಿಯೇ 5 ಲಕ್ಷ ರೂಪಾಯಿಗಳನ್ನು ಮಂಜೂರಾತಿಯನ್ನು ಮಾಡಿದರು. ಅದು ಮಾಡಿ ಒಂದು ವರ್ಷದ ಮೇಲಾಯಿತು. ಇದುವರೆವಿಗೂ ಒಂದು ನಯಾಪೈಸೆಯೂ ಕೂಡ ಬಿಡುಗಡೆಯಾಗಲಿಲ್ಲ. ಇದೇನು ಹುಚ್ಚಾ. ಅಧಿಕಾರಿಗಳ ವೈಖರಿಯ ಬಗ್ಗೆ ನನಗೆ ಏನು ಕೂಡ ಅರ್ಥವಾಗಲಿಲ್ಲ. ಅಧಿಕಾರಿಯಾಗಿರುವಂತಹ ಸೆಕ್ರೆಟರಿಯ ಬಳಿ ಹೋದಾಗ ಅವರು ಖಾಯಂ ವ್ಯವಸ್ಥೆಯಲ್ಲಿ ಗಿರಿಜನರಿಗೆ ಏನೋ ಮಾಡುತ್ತೇವೆಂದು ಹೇಳಿದರು. ಇದುವರೆಗೂ ಒಂದು ವರ್ಷವಾಯಿತು ಒಂದು ನಯಾ ಪೈಸೆ ಕೂಡ ಬಿಡುಗಡೆ ಮಾಡಿಲ್ಲ. ಖಾಯಂ ವ್ಯವಸ್ಥೆ ಏನು ಮಾಡಿದ್ದಾರೆ? ದಯವಿಟ್ಟು ಈ ರೀತಿ ಅಧಿಕಾರಿಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳದೆ ಅವರ ಇಚ್ಛಾನುಸಾರ ಅವರು ಕೆಲಸಗಳನ್ನು ಮಾಡುವುದಕ್ಕೆ ನೀವು ಅನುಮತಿಯನ್ನು ಕೊಟ್ಟರೆ ನಿಮ್ಮ ಆದೇಶಗಳು ಪಾಲನೆಯಾಗುವುದಿಲ್ಲ. ಇವತ್ತು ಈ ಸದನದಲ್ಲಿ ತೆಗೆದುಕೊಂಡ ನಿರ್ಣಯಗಳು ಅನುಷ್ಠಾನ ಆಗಲಿಲ್ಲವೆಂದರೆ ಸದನದ ಹೊರಗಡೆ ಇರುವಂತಹ ಜನರಿಗೆ ಈ ಸದನದ ಮೇಲೆ ಗೌರವ ಇರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಇದನ್ನು ಗಮನಿಸಬೇಕು. ಆ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡಬೇಕು. ಇಲ್ಲವೆಂದರೆ ಈ ಆದೇಶಗಳಿಗೆ ಯಾವುದು ಒಂದು ಜವಾಬ್ದಾರರಲ್ಲ ಎಂದು ಹೇಳುವಂತಹ ಅಧಿಕಾರಿಗಳು ಹೆಚ್ಚಾಗುತ್ತಾರೆ. ಎಂದು ನನ್ನ ಅನುಭವ. ಅಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಹೇಳುವುದಾದರೆ, ಮತ್ತೆ ಮುಂದುವರಿದು ಅವರ ಬಗ್ಗೆ ಹೇಳುತ್ತಿದ್ದೇನೆ. ಬೇಕಾದಷ್ಟು ಜನರು ಇದ್ದಾರೆ. ಒಬ್ಬರೆ ಅಂತ ಅಲ್ಲ. ಸಮಾಜಕಲ್ಯಾಣ ಇಲಾಖೆಯಲ್ಲಿ ಏನೋ ಒಂದು ರೀತಿಯಲ್ಲಿ ದಲಿತರ ಹಣವನ್ನು ದೋಚಿಕೊಂಡು ಹೋಗಬೇಕು. ತಿಂದುಕೊಂಡು ಹೋಗಬೇಕು ಎಂದು ಬರುವವರೇ ಜಾಸ್ತಿ ಇದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ನಮ್ಮಲ್ಲಿ ಐ.ಟಿ.ಡಿ.ಪಿ. ಆಫೀಸರ್ ಇದ್ದಾರೆ. ಆ ವ್ಯಕ್ತಿಯ ಹೆಸರನ್ನು ಇಲ್ಲಿ ಹೇಳಿ ದೊಡ್ಡ ವ್ಯಕ್ತಿಯನ್ನಾಗಿ ಮಾಡಬೇಕೆಂದು ಅಲ್ಲ, ಆ ವ್ಯಕ್ತಿಯ ಅವ್ಯವಹಾರ ಎಷ್ಟರಮಟ್ಟಿಗೆ ಇದೆ ಎಂದರೆ ಲೋಕಾಯುಕ್ತಕ್ಕೆ ಹೋಯಿತು ಎಂದರೆ ಅವನನ್ನು ಮಾರನೇ ದಿವಸವೇ ಜೈಲಿಗೆ ಹಾಕಿ ಎನ್ನುವಂತಹ ಮಟ್ಟಿಗೆ ಅವ್ಯವಹಾರವನ್ನು ಮಾಡಿದ್ದಾನೆ. ಬಿತ್ತನೆ ಶುಂಠಿಗೆ 50 ಕೆ.ಜಿ.ಗೆ 3000 ರೂ. ಗಳನ್ನು ಕೊಟ್ಟಿದ್ದಾರೆ ಸ್ವಾಮಿ. ಅದು ಯಾರ ಹಣ ಸ್ವಾಮಿ. ಬಿತ್ತನೆ ಶುಂಠಿಗೆ ಎಲ್ಲಿಯಾದರೂ 3 ಸಾವಿರ ರೂಪಾಯಿಗಳನ್ನು ಕೊಟ್ಟು ಒಂದು ಬ್ಯಾಗ್‌ನ್ನು ಖರೀದಿ ಮಾಡುತ್ತಾರಾ? ಮಾನ್ಯ ಕೃಷಿ ಮಂತ್ರಿಗಳು

ಇಲ್ಲಿ ಇದ್ದಾರೆ. ಕೇಳಿ ಅವರಾದರೂ ಕೂಡ ಒಪ್ಪಿಕೊಳ್ಳಲಿ. ಬಿತ್ತನೆ ಶುಂಠಿಗೆ 3 ಸಾವಿರ ರೂಪಾಯಿ ಎಲ್ಲಿಯಾದರೂ ಇದೆಯಾ, ಇದನ್ನು ಖರೀದಿ ಮಾಡಿ ಆ ಗಿರಿಜನರಿಗೆ ಕೊಟ್ಟಿದ್ದಾರೆ. ನಮ್ಮ ಜಿಲ್ಲಾ ಮಂತ್ರಿಗಳು ಇಲ್ಲಿ ಇದ್ದಾರೆ. ನಮ್ಮಲ್ಲಿರುವ ಐ.ಟಿ.ಡಿ.ಪಿ. ಆಫೀಸರ್ 3000 ರೂಪಾಯಿಗೆ ಬಿತ್ತನೆ ಬೀಜ ಶುಂಠಿಯನ್ನು ಖರೀದಿ ಮಾಡಿ ಗಿರಿಜನರಿಗೆ ಹಂಚಿದ್ದಾರೆ. ಇದು ಸಾಧ್ಯನಾ? ಅವರು 3 ಟಿಲ್ಲರ್ ಹಂಚಿದರು ಅದಕ್ಕೆ ನನ್ನನ್ನು ಸಭೆಗೆ ಬನ್ನಿ ಎಂದು ಕರೆದರು. ನಾನು ಅವರು ಏನೋ ದೊಡ್ಡದಾಗಿ ಕೆಲಸವನ್ನು ಮಾಡುತ್ತಿದ್ದಾರೆಂದು ಹೋದೆ. ಆ 3 ಟಿಲ್ಲರ್‌ನಲ್ಲಿ ಒಂದು ಟಿಲ್ಲರ್ ಕೆಲಸವನ್ನೇ ಮಾಡುವುದಿಲ್ಲ. ಅದನ್ನು ಹೊಸದಾಗಿ ಖರೀದಿ ಮಾಡಿ ಒಂದು ವಾರ ಕೂಡ ಆಗಿರುವುದಿಲ್ಲ. ಅಂತಹದ್ದೆಲ್ಲವನ್ನು ಕೃಷಿ ಉಪಕರಣಗಳನ್ನು ಕೂಡ ಖರೀದಿ ಮಾಡಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿಮಂತ್ರಿಗಳು): ಮಾನ್ಯ ಛೇರ್ಮನ್‌ರವರೆ, ಟ್ರಾಕ್ಟರ್ ಹಾಗೂ ಟಿಲ್ಲರ್‌ಗಳನ್ನು ಸರ್ಕಾರ ಇವತ್ತು ಕೊಳ್ಳುತ್ತಿಲ್ಲ. ರೈತನು ಒಪ್ಪಿಕೊಂಡರೆ 50 ಪರ್ಸೆಂಟ್ ಸಬ್ಸಿಡಿಯನ್ನು ಕೊಡುತ್ತೇವೆಯೋ ವಿನಃ ನಾವು ಸರ್ಕಾರದವರು ಯಾವುದನ್ನು ಕೊಂಡು ಕೊಡುವುದಿಲ್ಲ. ಏಕೆಂದರೆ ಮಾನ್ಯ ಗೌರವಾನ್ವಿತ ಸದಸ್ಯರು ನಾವೇ ಸರ್ಕಾರವೇ ಕೊಟ್ಟಿದೆ ಎಂಬ ಭಾವನೆ ಇದೆ. ನಾವು 50 ಪರ್ಸೆಂಟ್ ಸಬ್ಸಿಡಿ. ಏನು 50 ಭಾಗ ಕೊಡುತ್ತೇವೆ ಏನು ಪವರ್ ಟಿಲ್ಲರ್‌ಗಳಿಗೆ ಅಷ್ಟು ಮಾತ್ರ ಕೊಡುತ್ತೇವೆ. ನಾವು ಕೊಂಡು ಕೊಡುವಂತಹದ್ದು ಅದು ರೈತರಿಗೆ ಬಿಟ್ಟಿರುವಂತಹ ವಿಚಾರ. ಯಾವ ಕಂಪನಿಯ ಟ್ರಾಕ್ಟರ್ ಬೇಕಾದರೂ ಅವನೆ ಪರ್ಚೇಸ್ ಮಾಡುವಂತಹ ಅಧಿಕಾರ ರೈತರಿಗೆ ಬಿಟ್ಟಿದ್ದೇವೆ. ಎನ್ನುವಂತಹ ಮಾತನ್ನು ನಾನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ ಚಿಕ್ಕನಾಯಕನಹಳ್ಳಿ: ಮಾನ್ಯ ಛೇರ್ಮನ್‌ರವರೆ, ಟಿಲ್ಲರ್ ಪರ್ಚೇಸ್ ಮಾಡುವ ಕಡೆ ಇವರು ಒಂದು ಆದೇಶವನ್ನು ಹಾಕಿದ್ದಾರೆ. ವಿತ್ ಸ್ಟ್ರಿಂಗಾ ಅಥವಾ ವಿತ್ ಔಟ್ ಸ್ಟ್ರಿಂಗಾ ಎಂದು ಹೇಳಿ ಕನ್‌ಫ್ಯೂಶನ್ ಮಾಡಿ ವಿತೌಟ್ ಸ್ಟ್ರಿಂಗ್ ಕಲ್ಟಿವೇಟ್ ಟಿಲ್ಲರ್ ತೆಗೆದುಕೊಳ್ಳಬೇಕೆಂದು ಇವತ್ತು ನೀವು ಯೂಸ್ ಲೆಸ್ ಟಿಲ್ಲರನ್ನು ಕೊಡುತ್ತಿರುವುದು. ಅದರಲ್ಲಿ ಏನು ಅನುಮಾನ ಇಲ್ಲ. ಈ ವರ್ಷ ಏನೋ ಸ್ಟ್ರಿಂಗ್ ಇರುವುದನ್ನು ತೆಗೆದುಕೊಳ್ಳಬಹುದು. ನೀವು ರೈತರಿಗೆ ಏನೂ ಕೊಟ್ಟಿರುವುದಿಲ್ಲ. ವಿತ್‌ಔಟ್ ಸ್ಟ್ರಿಂಗ್ ಪರ್ಚೇಸ್ ಮಾಡಬೇಕೆಂದು ಯಾರೂ ತೆಗೆದುಕೊಳ್ಳುತ್ತಿಲ್ಲ. 8 ಸಾವಿರ ಸಬ್ಸಿಡಿಯನ್ನು ನಿಮ್ಮ ಹತ್ತಿರ ಯಾರು ಕೇಳುವುದಕ್ಕೆ ಬರುತ್ತಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ: ಯಾವುದೇ ಕಂಪನಿಯ ಪವರ್ ಟಿಲ್ಲರ್‌ಗಳನ್ನು ಕೊಂಡುಕೊಳ್ಳುವುದಕ್ಕೆ ನಾವು ಅನುಮತಿಯನ್ನು ಕೊಟ್ಟಿದ್ದೇವೆ. ಅದಕ್ಕೆ 50 ಪರ್ಸೆಂಟ್ ಸಬ್ಸಿಡಿಯನ್ನು ಕೊಡುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಶ್ರೀನಿವಾಸಗೌಡರ ಗಮನಕ್ಕೆ ಒಂದು ಅಂಶವನ್ನು ತರುತ್ತಿದ್ದೇನೆ. ನಿಮ್ಮ ಇಲಾಖೆಯಲ್ಲಿ ಇರಬಹುದು. ಆದರೆ ನಾನು ಸಮಾಜಕಲ್ಯಾಣ ಇಲಾಖೆಯ ಬಗ್ಗೆ ಹೇಳುತ್ತಿದ್ದೇನೆ. ಗಿರಿಜನರಿಗೆ ಉಚಿತವಾಗಿ....

ಶ್ರೀ ಸಿದ್ದುಸಾವದಿ (ಜಮಖಂಡಿ): ಮಾನ್ಯ ಛೇರ್ಮನ್‌ರವರೆ, ಗಂಗಾಕಲ್ಯಾಣ ಯೋಜನೆಯಲ್ಲಿ ಕಳಪೆ ದರ್ಜೆಯ ಪಂಪುಸೆಟ್ಟುಗಳನ್ನು ಸರ್ಕಾರವೇ ಖರೀದಿ ಮಾಡಿ ಇಲಾಖೆಗಳಿಗೆ ಕಳುಹಿಸಿದೆ. ಅದು ಯಾವುದಕ್ಕೂ ಕೂಡ ಬರುವುದಿಲ್ಲ. ಅವುಗಳು ಒಂದು ವರ್ಷದಲ್ಲಿ ಹಾಳಾಗಿ ಹೋಗುತ್ತದೆ. ಸ್ಟಾಂಡರ್ಡ್ ಕಂಪನಿಯ ಜೊತೆಯಲ್ಲಿ ಇದನ್ನು ಮಾರಾಟ ಮಾಡುತ್ತಿದ್ದಾರೆ. ಡೂಪ್ಲಿಕೇಟ್ ಬಜಾರ್‌ದೊಳಗೆ 5 ರಿಂದ 6 ಸಾವಿರ ರೂಪಾಯಿಗಳಿಗೆ ಸಿಗುವಂತಹ ಪಂಪುಸೆಟ್ಟುಗಳನ್ನು 20 ರಿಂದ 30 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕೊಂಡುಕೊಳ್ಳುತ್ತಿದ್ದಾರೆ. ಆ ರೀತಿಯಾಗಿ ರೈತರಿಗೆ ಆಯ್ಕೆ ಮಾಡಿಕೊಳ್ಳುವುದಕ್ಕೆ ಬಿಡುವುದಿಲ್ಲ. ಅವುಗಳು ಒಂದು ವರ್ಷದಲ್ಲಿ ಹಾಳಾಗಿ ಹೋಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ತೀರ್ಥಹಳ್ಳಿ: ಮಾನ್ಯ ಛೇರ್ಮನ್‌ರವರೆ, ಇವರ ಇಲಾಖೆಯವರು ಕಿರ್ಲೋಸ್ಕರ್ 2–2 ಕ್ವಿಂಟಾಲ್ ತೂಕ ಬರುವಂತಹ ಡೀಸೆಲ್ ಪಂಪುಸೆಟ್ಟುಗಳನ್ನು ನಮ್ಮ ಹರಿಜನ ಮತ್ತು ಗಿರಿಜನರಿಗೆ ಕೊಟ್ಟು ಬಿಟ್ಟಿದ್ದಾರೆ. ಅವರದು ಅಲ್ಲಿಯೆ ಬಿದ್ದಿದೆ. ಯಾವ ಮನುಷ್ಯ ಅದಕ್ಕೆ ಡೀಸೆಲನ್ನು ಹಾಕಿ ಬೆಳೆ ಬೆಳೆಯುತ್ತಾನೆ. ಅವನು ಬೆಳೆಯನ್ನು ಬೆಳೆದರೆ ಅದು ವರ್ಕ್‌ಔಟ್ ಆಗುತ್ತದಾ? ಅವರಿಗೆ ಏನಾದರೂ ಕರೆಂಟ್ ಕನೆಕ್ಷನ್ ಕೊಡಿಸಿ ಹೇಳಬೇಕೇ ಹೊರತು ಇಲಾಖೆಯು ಒಟ್ಟು ಕಾರ್ಯಕ್ರಮ ಆಗಬೇಕು. ಅದು ಆಗುವುದಿಷ್ಟೆ. ಅವರು ಉದ್ಧಾರವಾಗಬೇಕೆಂದು ಯಾರು ಕೂಡ ಮಾಡುವುದಿಲ್ಲ. 2 ಕ್ವಿಂಟಾಲ್ ಹೋಯಿತು. ನಾನು ಅಧಿಕಾರಿಗಳಿಗೆ ಕೇಳಿದರೆ, ಅವರು ಗದ್ದೆಯ ಹತ್ತಿರ ಅದನ್ನು ಇಡುತ್ತಾರೆ. ಅದನ್ನು ಹೊತ್ತುಕೊಂಡು ಹೋಗಬಾರದು ಎಂದು ವೈಟ್‌ನ್ನು ತಂದು ಇಡುತ್ತೇವೆ. ಇವರಿಗೆ ಏನು ಹೇಳುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕ ನಾಯಕನಹಳ್ಳಿ): ಮಾನ್ಯ ಛೇರ್ಮನ್‌ರವರೆ, ಅದು ಇಷ್ಟೇ ಗಹನವಾದುದು, ಕೃಷಿ ಮಂತ್ರಿಗಳೇ, ಮೈನಾರಿಟೀಸ್‌ಗೆ ಏನು ಕೊಟ್ಟಿದ್ದಾರೆ ಮುಸ್ಲಿಂ ಇರಿಗೇಷನ್ ಪಂಪುಸೆಟ್ಟು ಮತ್ತು ಪೈಪ್ ಅವರಿಗೆ ಇವತ್ತು ಬೋರ್ ಒಳಗಡೆ ಬಿಡುವುದಕ್ಕೆ ಅಸ್ತಿ ಪೈಪ್‌ನ್ನು ಹಾಕಿಕೊಟ್ಟುಬಿಟ್ಟಿದ್ದಾರೆ. ಇಲ್ಲಿ ಬೆಂಗಳೂರಿನಲ್ಲಿ ನ್ಯಾಷನಲ್ ಎಂದು ಹೇಳಿ ಫ್ಯಾಬ್ರಿಕೇಟ್ ಮಾಡುವಂತಹ ಒಂದು ಲೋಕಲ್ ಕಂಪನಿಯ ತೆಗೆದುಕೊಂಡು ಜನರು ಬೊಂಬಡ ಬಡಿದುಕೊಳ್ಳುತ್ತಿದ್ದಾರೆ. ಅವರಿಗೆ 5 ಹೆಚ್‌ಪಿ ಮೇಲೆ ನಿಗದಿ ಮಾಡಿಲ್ಲ. 5 ಹೆಚ್‌ಪಿ 6–7 ಸ್ಟೇಜ್‌ನ ಮೋಟಾರನ್ನು ಕೊಡುವುದು 600 ರಿಂದ 700 ಅಡಿಯಿಂದ ನೀರನ್ನು ಲಿಫ್ಟ್ ಮಾಡಿ ಎಂದು ಹೇಳುವುದು. ಅದು ಅಸ್ತಿಪೈಪ್, ಜಿ.ಐ. ಪೈಪ್ ಇಲ್ಲ ಅಸ್ತಿಪೈಪನ್ನು ಬಿಡಿಸುವುದಕ್ಕೆ

ಸರ್ಕಾರ ಕಿತ್ತುಕೊಂಡುಬಿಟ್ಟಿದ್ದಾರೆ. ಮಾನ್ಯ ಶ್ರೀನಿವಾಸಗೌಡರೆ, ಅವರ ರಕ್ಷಣೆಗೆ ಯಾರು ಬರುತ್ತಾರೆ. ಇದನ್ನು ತಾವು ಸ್ವಲ್ಪ ನೋಡಬೇಕು. ಮೊದಲು ಅದನ್ನು ಚೇಂಜ್ ಮಾಡಬೇಕು. ಅವರಿಗೆ ರೆಪ್ಯೂಟೆಡ್ ಕಂಪನಿಯಲ್ಲಿ ಮೋಟಾರುಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ರಾಜೇಂದ್ರ ವರ್ಮ(ಹುಲಸೂರು): ಮಾನ್ಯ ಛೇರ್ಮನ್‌ರವರೆ, ಬಾವಿಗಳಿಗೆ ಮೋಟಾರುಗಳನ್ನು ಡೆವಲಪ್‌ಮೆಂಟ್ ಕಾರ್ಪೋರೇಷನ್‌ರವರು ಕೊಡುತ್ತಾರಲ್ಲ. ಅವನ್ನು ಇಲ್ಲಿರುವ ಒಂದು ಏಜೆನ್ಸಿಗೆ ಫಿಕ್ಸ್ ಮಾಡಿದ್ದಾರೆ. ಅದು ಒರಿಜಿನಲ್ ಅಥವಾ ಡೂಪ್ಲಿಕೇಟೋ ಎಂದು ಯಾರಿಗೂ ಕೂಡ ಗೊತ್ತಾಗುವುದಿಲ್ಲ. ಅದಕ್ಕಾಗಿ ದಯವಿಟ್ಟು ಸಂಬಂಧಪಟ್ಟ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಒತ್ತಾಯ ಮಾಡುವುದೇನೆಂದರೆ, ದಯವಿಟ್ಟು ಆ ಯೋಜನೆಯಲ್ಲಿ ಅಂತಹವುಗಳಿಗೆ ಅವಕಾಶ ಮಾಡಿಕೊಡದೆ ಲೋಕಲ್‌ನಲ್ಲಿರುವಂತಹ ಐಎಸ್‌ಐ ಮಾರ್ಕ್ ಮೋಟಾರುಗಳು ಇರುತ್ತವೆ. ಅದನ್ನು ಡೈರಕ್ಟಾಗಿ ನೇರವಾಗಿ ಅದನ್ನೆ ಪರ್ಚೇಸ್ ಮಾಡುವಂತಹದ್ದು ಮಾಡಿದರೆ ಬಹಳ ಒಳ್ಳೆಯದು ಎಂದು ನನ್ನ ಅಭಿಪ್ರಾಯವಾಗಿರುತ್ತದೆ.

ಶ್ರೀ ಹೆಚ್.ಡಿ. ಬಸವರಾಜು: ಆ ಟಿಲ್ಲರ್‌ಗೆ ಒಂದು ಲಕ್ಷ ರೂಪಾಯಿಗಳು ಅದನ್ನು ಗಿರಿಜನರಿಗೆ ಕೊಟ್ಟಿರುವಂತಹದ್ದು, ಆ ಟಿಲ್ಲರ್‌ನ್ನು ತೆಗೆದುಕೊಂಡು ಬರುತ್ತಿರುವಾಗಲೇ ಆ ವಾರದಲ್ಲಿಯೇ ಅದು ಕೆಲಸ ಮಾಡುವುದಿಲ್ಲವೆಂದರೆ, ಅಮಾಯಕರಾದ ಗಿರಿಜನರು ಯಾರ ಹತ್ತಿರ ಹೋಗಬೇಕು. ಇದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಮಂತ್ರಿಗಳೆ, ಇಂತಹ ವ್ಯಕ್ತಿಗಳನ್ನು ವರ್ಗಾವಣೆ ಮಾಡಿ ಎಂದು ಇವರ ಮೇಲೆ ತನಿಖೆ ಮಾಡಿ ಎಂದು ಕೊಟ್ಟರೆ ಮಾನ್ಯ ಮುಖ್ಯಮಂತ್ರಿ ಕಚೇರಿಯಿಂದ ಇವರನ್ನು ಅಲ್ಲಿಯೆ ಮುಂದುವರಿಸಿ ಎಂದು ಫ್ಯಾಕ್ಸ್ ಹೋಗುತ್ತದೆ ಸ್ವಾಮಿ. ಆ ಅಧಿಕಾರಿ ಇನ್ನೆಷ್ಟು ಬಲಿಷ್ಟರಾಗಿರಬಹುದು. ಆ ಅಧಿಕಾರಿ ಎಷ್ಟು ಹಣವನ್ನು ಮಾಡಿಕೊಂಡಿರಬಹುದು. ಆ ಅಧಿಕಾರಿ ನನ್ನನ್ನು ಎಷ್ಟು ಜಗ್ಗಾಡಿಸಬಹುದು. ಇದು ಈ ಅಧಿಕಾರಿಗಳಲ್ಲಿ ಸಾಧ್ಯವಾಗಿರುವಂತಹದ್ದು. ದಯವಿಟ್ಟು ಇದರ ಬಗ್ಗೆ ತನಿಖೆ ಮಾಡಿಸಿ ಆ ಅಧಿಕಾರಿ ಯಾರು? ರಾಜ್ಯ ಸರ್ಕಾರದವರಲ್ಲ ಸ್ವಾಮಿ. ರಾಜ್ಯ ಸರ್ಕಾರದವರು ಒಂದು ಸ್ವಲ್ಪ ಹೆಚ್ಚು ಕಡಿಮೆಯಾದರೆ ಭಯ ಇರುತ್ತದೆ. ಇವರು ಕೇಂದ್ರ ಸರ್ಕಾರದವರು, ಇದಕ್ಕೋಸ್ಕರ ಕೇಂದ್ರ ಸರ್ಕಾರವನ್ನು ಕರೆದುಕೊಳ್ಳಬೇಕಾ? ಅವರನ್ನು ಕಳುಹಿಸಿ ಸ್ವಾಮಿ. ಅಂತಹ ಅಧಿಕಾರಿಗಳು ಕೇಂದ್ರದಿಂದ ಬಂದರೆ ಅವರು ನಮಗೆ ಬೇಡ. ರಾಜ್ಯ ಸರ್ಕಾರದವರಿಗೆ ಅವಕಾಶವನ್ನು ಕೊಡಿ. ಅಂತಹವರನ್ನು ಮೊದಲು ಕಳುಹಿಸಿ. ಅವರನ್ನು ಕಳುಹಿಸಿ ಎಂದರೆ ಸುಮ್ಮನೆ ಕಳುಹಿಸುವುದಕ್ಕೆ ಹೋಗಬೇಡಿ. ಆ ವರ್ಗದವರು ಮಾಡಿರುವಂತಹ ಅಮಾಯಕರು ಕೊಟ್ಟಿರುವಂತಹ ಹಣವನ್ನು ತಿನ್ನುವಂತಹ ಅಧಿಕಾರಿಯನ್ನು ನೀವು ಏನಾದರೂ

ಕ್ರಮ ಕೈಗೊಳ್ಳದಿದ್ದರೆ ದೇವರು ಕೂಡ ನಮ್ಮನ್ನು ಕ್ಷಮಿಸುವುದಿಲ್ಲ. ದಯವಿಟ್ಟು ಇದರ ಬಗ್ಗೆ ವಿಶೇಷವಾದ ತನಿಖೆಯನ್ನು ತೆಗೆದುಕೊಂಡು ಇಮಿಡಿಯೇಟ್ ಆಗಿ ಅವರನ್ನು ವರ್ಗಾವಣೆ ಮಾಡಬೇಕು.

ಯಾವುದೇ ಕಾರಣಕ್ಕೂ ಒಂದು ದಿವಸ ಕೂಡ ಆತ ಮುಂದುವರಿಯಬಾರದು, ಇಷ್ಟೆಲ್ಲಾ ಅವ್ಯವಹಾರ ಮಾಡಿದ ವ್ಯಕ್ತಿ ಅಲ್ಲೇ ಇರಬೇಕು, ಆ ಗಿರಿಜನರ ಬಗ್ಗೆ ನಿಜವಾಗಿ ಕಾಳಜಿ ಸರ್ಕಾರಕ್ಕಿದ್ದರೆ ನಿಜವಾದ ಫಲಾನುಭವಿಗಳನ್ನು ಗುರುತಿಸಿ, ಅವರಿಗೆ ಕೊಟ್ಟಂತಹ ಸವಲತ್ತುಗಳನ್ನು ಅವರಿಗೆ ತಲುಪಿಸುವಲ್ಲಿ ವಿಫಲವಾಗಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತದೆಂದು ಒಂದು ತೀರ್ಮಾನವನ್ನು ಈ ಸದನದಲ್ಲಿ ಮಾಡುತ್ತಿದ್ದೇವೆಂಬ ಸಂದೇಶ ನಮ್ಮ ರಾಜ್ಯದಲ್ಲಿ ಹೋಗಬೇಕು. ದಯವಿಟ್ಟು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇನ್ನು ಹಾಸ್ಟೆಲ್ ವ್ಯವಸ್ಥೆ ಬಗ್ಗೆ ಬೆಳಗಿನಿಂದ ಸಾಕಷ್ಟು ಚರ್ಚೆಯಾಗಿದೆ, ಹಾಗಾಗಿ ನಾನು ಅದರ ಬಗ್ಗೆ ಅಷ್ಟು ಹೆಚ್ಚಾಗಿ ಹೇಳಲಿಕ್ಕೆ ಹೋಗುವುದಿಲ್ಲ, ಕಳಪೆ ಆಹಾರ, ಹುಳು ಬಿದ್ದಿರುವ ಅದೇ ಅನ್ನ ಇವುಗಳ ಬಗ್ಗೆ ನನಗೂ ಹೇಳಿ ಹೇಳಿ ಸಾಕಾಗಿದೆ. ಸುಮಾರು 132 ತಾಲೂಕು ಅಧಿಕಾರಿಗಳು, 4 ಜನ ಜಿಲ್ಲಾಧಿಕಾರಿಗಳು ಸೇರಿದಂತೆ ಒಟ್ಟು 134 ಅಧಿಕಾರಿಗಳನ್ನು ಅವರ ಕಾರ್ಯ ವೈಖರಿ ಸರಿಯಿಲ್ಲವೆಂದು, ಅವರು ಮಕ್ಕಳನ್ನು ಸರಿಯಾಗಿ ಗಮನಿಸುತ್ತಿಲ್ಲ, ಹಾಸ್ಟೆಲ್ ವೈಖರಿ ಸರಿಯಿಲ್ಲವೆಂದು ಅವರನ್ನು ಸಸ್ಪೆಂಡ್ ಮಾಡಿದ್ದಿರಿ, ಆದರೆ ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಂಡಿರುವಿರಲ್ಲಾ ಇದು ಯಾವ ನ್ಯಾಯ? ಹಾಗಿದ್ದಲ್ಲಿ ನೀವು ಯಾವ ಕಾರಣಕ್ಕೋಸ್ಕರ ಅವರನ್ನು ಅಮಾನತ್ತು ಮಾಡಿದಿರಿ? ಮತ್ತೆ ಯಾವ ಕಾರಣಕ್ಕೋಸ್ಕರ ಅವರನ್ನು ಕೆಲಸಕ್ಕೆ ತೆಗೆದುಕೊಂಡಿರಿ? ಅಂದರೆ ಅಮಾನತ್ತು ಅವರಿಗೆ ಬೋನಸ್ ಪಾಯಿಂಟ್ ಕೊಟ್ಟು ಮತ್ತೆ ಅವರ ಬೆನ್ನು ತಟ್ಟುವಂತಹ ಕೆಲಸವೇ? ನೀವು ಈಗ ಅಮಾನತುಗೊಳಿಸಿರುವ 132 ಜನ ತಾಲೂಕು ಅಧಿಕಾರಿಗಳನ್ನು ಯಾರ್ಯಾರ ಮೇಲೆ ನೀವು ಅಮಾನತ್ತು ಮಾಡಿದ್ದೀರಿ ಅವರ ಮೇಲೆ ಕ್ರಮವನ್ನು ಕೈಗೊಂಡು ಅವರನ್ನು ಸರ್ಕಾರಿ ಸೇವೆಯಿಂದ ವಿಮುಕ್ತಿಗೊಳಿಸುವುದರ ಬಗ್ಗೆ ಏನಾದರೂ ನಿಜವಾಗಿ ಕ್ರಮ ಕೈಗೊಳ್ಳುವುದರ ಬಗ್ಗೆ ನೀವು ಯೋಚನೆ ಮಾಡಿದರೆ, ನಿಜಕ್ಕೂ ಅವರನ್ನು ಅಮಾನತ್ತು ಮಾಡಿದ್ದಕ್ಕೆ ಒಳ್ಳೆಯದಾಗುತ್ತದೆ, ಇಲ್ಲವಾದರೆ ಮತ್ತೆ ಮೇಯುವಂತಹ ಜನರನ್ನು ಅದೇ ಹಾಸ್ಟೆಲ್‌ಗಳಿಗೆ ತಾವು ನೇಮಿಸಿದರೆ ಖಂಡಿತವಾಗಿ ಆ ದಲಿತರ ಮಕ್ಕಳು ಹಾಸ್ಟೆಲ್‌ನಲ್ಲಿ ಆಗುತ್ತಿರುವ ಅನ್ಯಾಯದ ಬಗ್ಗೆ ಯಾರ ಹತ್ತಿರವೂ ಹೇಳಲಿಕ್ಕೆ ಆಗುವುದಿಲ್ಲ.

ಶ್ರೀ ಎ.ಎಸ್. ಬಸವರಾಜು(ಅರಸೀಕೆರೆ): ಮಾನ್ಯ ಸಮಾಜ ಕಲ್ಯಾಣ ಸಚಿವರ ಬಳಿ ನಾವು ಒಂದು ಅಪೀಲು ನೀಡಲಿಕ್ಕೆ ಹೋಗಿದ್ದೆವು. ಸಮಾಜ ಕಲ್ಯಾಣ ಇಲಾಖೆಯಲ್ಲಿರತಕ್ಕಂಥ ಒಬ್ಬ ವ್ಯಕ್ತಿ ಅವನ ಅವ್ಯವಹಾರದಿಂದ ಒಂದು ಕಣ್ಣು

ಕಳೆದಿದ್ದಾನೆ. ಆತನನ್ನು ಅಲ್ಲಿ ಮುಂದುವರಿಸಬಾರದು, ಆತನನ್ನು ಟ್ರಾನ್ಸ್‌ಫರ್ ಮಾಡಿ ಎಂದು ಕೇಳಿದಾಗ ಆತನನ್ನು ಟ್ರಾನ್ಸ್‌ಫರ್ ಮಾಡಿರುವಂತಾದ್ದು, ನಂತರ ಒತ್ತಡ ತಂದು ಪುನಃ ನನ್ನ ಕ್ಷೇತ್ರಕ್ಕೆ ಬಂದಿದ್ದಾನೆ. 12 ವರ್ಷಗಳಿಂದ ನನ್ನ ಕ್ಷೇತ್ರದಲ್ಲಿಯೇ ಇದ್ದಾನೆಂದರೆ ಆತ ಇನ್ನೆಷ್ಟು ಪ್ರಭಾವಶಾಲಿಯಾದ ವ್ಯಕ್ತಿಯಾಗಿರಬಹುದು, ಆ ಹಾಸ್ಟೆಲ್‌ನಲ್ಲಿರುವ ಅನೇಕರಿಗೆ ಕಣ್ಣುಗಳು ಹೋಗಿವೆ, ಅವರಿಗೆ ಕಣ್ಣುಗಳನ್ನು ಕೊಡಲಿಕ್ಕೆ ಸಾಧ್ಯವಿಲ್ಲ, ಆದರೆ ಆ ಬಡವರಿಗೆ ಸರಿಯಾದಂತಹ ಊಟವನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. 12 ವರ್ಷದಿಂದ ಅಲ್ಲೇ ಕೆಲಸ ಮಾಡುತ್ತಿದ್ದ ಆ ನೌಕರನನ್ನು ವರ್ಗಾವಣೆ ಮಾಡಿದ್ದಿರಿ. ಆದರೂ ಚಿಂತೆಯಿಲ್ಲ, ವರ್ಗಾವಣೆಯಾಗಲಿ, ಆದರೂ ಕೂಡ ಅನೇಕರ ಸಹಕಾರ ತೆಗೆದುಕೊಂಡು ಬಂದು ಮಾನ್ಯ ಮಂತ್ರಿಗಳಿಂದ ಸಹ ಆತನನ್ನು ರೀಟೇನ್ ಮಾಡಲಿಕ್ಕೆ ಆದೇಶವನ್ನು ಪಡೆದುಕೊಂಡಿದ್ದಾರೆ. ನಿಜವಾಗಿಯೂ ಕೂಡ ಇಂಥ ವ್ಯಕ್ತಿಗಳ ಅವಶ್ಯಕತೆ ನಮಗಿಲ್ಲ, ಅವರು ಹೊರಗಡೆ ಹೋಗಬೇಕು ಎಂದು ಹೇಳಿ ನಾನು ಕೂಡ ಬಸವರಾಜು ಅವರ ಹೇಳಿಕೆಗೆ ಸಹಮತ ವ್ಯಕ್ತಪಡಿಸಿ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಮಂತ್ರಿಗಳು ನಿಜವಾಗಿಯೂ ಈ ಹಾಸ್ಟೆಲ್ ವ್ಯವಸ್ಥೆಯಲ್ಲಿ ತಾವು ಕಾಳಜಿ ತೋರಿಸಿದ್ದೀರಿ.

ಚೇರ್‌ಮನ್: ಬಸವರಾಜು ಅವರೇ ಇನ್ನು ಕೇವಲ 2 ನಿಮಿಷದಲ್ಲಿ ಮಾತನ್ನು ಮುಗಿಸಬೇಕು.

ಶ್ರೀ ಹೆಚ್.ಡಿ. ಬಸವರಾಜು: ಇನ್ನೆರಡೇ ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಸರ್ಕಾರದ ವತಿಯಿಂದ ಈ ರೀತಿ ಅವ್ಯವಹಾರವಾಗುತ್ತಿದೆ. ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಹಾಸ್ಟೆಲ್ ವ್ಯವಸ್ಥೆ ಸಿಗುತ್ತಿಲ್ಲ. ಅದಕ್ಕಾಗಿ ಕಮೀಷನರ್ ನೇತೃತ್ವದಲ್ಲಿ ಒಂದು ವಿಶೇಷ ದಳವನ್ನು ನೇಮಕ ಮಾಡುತ್ತೇನೆಂದು ಘೋಷಣೆ ಮಾಡಿದ್ದಿರಲ್ಲ, ನಿಮ್ಮ ಘೋಷಣೆ ಏನಾಯಿತು? ಏನಾದರೂ ಹೇಳಿದರೆ ಪತ್ರಿಕಾ ಪ್ರಚಾರ, ಬಸವರಾಜು ಟೀಕೆ ಮಾಡುತ್ತಾನೆಂದು ಹೇಳುತ್ತೀರಿ. ಪತ್ರಿಕಾ ಪ್ರಚಾರಕ್ಕೋಸ್ಕರ ಈ ರೀತಿ ಘೋಷಣೆಯನ್ನು ಮಾಡಿದಿರಾ? ಏತಕ್ಕೆ ಹೀಗೆ ಮಾಡಿದಿರಿ, ನೀವು ಅಲ್ಲಿ ಹೋಗಿ ಭೇಟಿ ನೀಡಿ ಕಾಳಜಿ ವಹಿಸುತ್ತೀರಾ? ಅಥವಾ ನಿಮಗೆ ಪತ್ರಿಕಾ ಪ್ರಚಾರದ ಹುಚ್ಚು ಏನಾದರೂ ಇದೆಯೇ ಇಲ್ಲವೋ ಗೊತ್ತಿಲ್ಲ. ದಯವಿಟ್ಟು ನೀವು ತೋರಿಸಿರುವ ಕಾಳಜಿಯಂತೆ ವಿಶೇಷ ದಳವನ್ನು ನೇಮಿಸುವ ಮೂಲಕ ಆ ಹಾಸ್ಟೆಲ್ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಿದ್ದರಾಮಯ್ಯನವರೇ, ಈ ಇಲಾಖೆ ಏನು ಮಾಡದಿದ್ದರೂ ಪರವಾಗಿಲ್ಲ, ಈ ಹಾಸ್ಟೆಲ್‌ಗಳಿಗೆ 10–15 ಸೀಟುಗಳನ್ನು ಹೆಚ್ಚಿಗೆ

ಮಾಡಬೇಕು, ನಾವೇನು ಊರಲ್ಲಿ ಇರಲಿಕ್ಕಾಗುತ್ತಿಲ್ಲ. ಬಹಳ ಡಿಮ್ಯಾಂಡ್ ಆಗಿದೆ, ಎಲ್ಲಿ ಹೋದರೂ ನಮಗೆ ಅಡ್ಮಿಷನ್ಸ್ ಇಲ್ಲ ಎಂದು ಹೇಳುತ್ತಾರೆ, ಬಹಳ ಗೋಳಾಗಿಬಿಟ್ಟಿದೆ, ಅವರನ್ನು ನೂರಾರು ಸಲ ಕೇಳಿಕೊಂಡಿದ್ದೇವೆ. ಹೈಸ್ಕೂಲ್‌ನಿಂದ ಹಿಡಿದು ಕಾಲೇಜಿನವರೆಗೂ ಹಾಸ್ಟೆಲ್‌ಗಳಿಗೆ ಭಾರಿ ಡಿಮ್ಯಾಂಡ್ ಇದೆ. ಹಾಗಾಗಿ ಏನಾದರೂ ಮಾಡಿ ಸೀಟುಗಳನ್ನು ಹೆಚ್ಚಿಗೆ ಮಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಒಂದೊಂದು ಹಾಸ್ಟೆಲ್‌ಗಳಿಗೆ 50 ಸೀಟುಗಳನ್ನು ಹೆಚ್ಚಿಗೆ ಮಾಡಿ, ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಒಂದು ಪ್ರತ್ಯೇಕವಾದ ಹಾಸ್ಟೆಲ್ ಬೇಕು. ಇಲ್ಲವಾದರೆ ವಿದ್ಯಾರ್ಥಿಗಳಿಗೆ ಓದಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಜಾಗವಿದೆ. ಊಟದ ವ್ಯವಸ್ಥೆ ಕೂಡ ಆಗಬೇಕು.

ಶ್ರೀ ಹೆಚ್.ಡಿ. ಬಸವರಾಜು: ಹಾಸ್ಟೆಲ್‌ಗಳನ್ನು ಕಟ್ಟುವಂತಹ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಬಗ್ಗೆ ಕೂಡ ಒಂದು ಮಾತನ್ನು ಹೇಳಬೇಕಾಗಿದೆ. ಬೇರೆಯವರು ಕಟ್ಟಿದರೆ ಸರಿಹೋಗುವುದಿಲ್ಲವೆಂದು ತಾವೇ 1999ರಲ್ಲಿ ಒಂದು ಸಂಘವನ್ನು ಸ್ಥಾಪಿಸಿದ್ದೀರಿ, ಅದು ಎಷ್ಟರ ಮಟ್ಟಿಗೆ ಕೆಲಸವನ್ನು ನಿರ್ವಹಿಸುತ್ತಿದೆ ಎಂಬ ಬಗ್ಗೆ ತಾವೇನಾದರೂ ಅವರನ್ನು ಒಂದು ದಿವಸ ಕರೆಸಿ ಪರಿಶೀಲಿಸಿರುವಿರಾ? ಬಾಳುಗೋಡಿನಲ್ಲಿ ಏಕಲವ್ಯ ಶಾಲೆಯಲ್ಲಿ ಆಗಿರುವ ಕಾಮಗಾರಿಯಲ್ಲಿ ನ್ಯೂನತೆಯಿದೆ, ಅದನ್ನು ಸರಿಪಡಿಸುವವರೆಗೆ ಮಕ್ಕಳನ್ನು ಅಲ್ಲಿಗೆ ಸ್ಥಳಾಂತರ ಮಾಡುವುದು ಬೇಡವೆಂದು ನಾನು ಹೇಳಿದ್ದೆ. ಆದರೂ ಕೂಡ ತಾವೇ ಒಂದು ಆದೇಶವನ್ನು ಕೊಟ್ಟಿದ್ದೀರಿ, ಏನೆಂದರೆ ಬಸವರಾಜು ಅವರೇ ನಾನೇ ನಿಮ್ಮ ಕ್ಷೇತ್ರಕ್ಕೆ ಬರುತ್ತೇನೆ. ನಾವಿಬ್ಬರೂ ಜಂಟಿಯಾಗಿ ತಪಾಸಣೆಯನ್ನು ಮಾಡೋಣ. ಸರಿಯಿಲ್ಲವೆಂದರೆ ಅದನ್ನು ಸರಿಪಡಿಸೋಣ, ಆಮೇಲೆ ವಿದ್ಯಾರ್ಥಿಗಳನ್ನು ನಾವು ಅಲ್ಲಿಗೆ ಸ್ಥಳಾಂತರಿಸೋಣವೆಂದು ಆದೇಶ ಮಾಡಿದ್ದಿರಿ. ನಿಮ್ಮ ಆದೇಶಕ್ಕೇನಾದರೂ ಮಾನ್ಯತೆಯಿದೆಯೇ? ಈ ಸದನದಲ್ಲಿ ಇದು ಎರಡನೆಯದು, ಮಾನ್ಯ ಮುಖ್ಯಮಂತ್ರಿಗಳ ಆದೇಶಕ್ಕೆ ಮಾನ್ಯತೆಯಿಲ್ಲ, ಇನ್ನು ಮಂತ್ರಿಗಳ ಆದೇಶಕ್ಕೆ ಮಾನ್ಯತೆಯಿಲ್ಲವೆನ್ನುವುದಕ್ಕೆ ಇದು ಇನ್ನೊಂದು ನಿದರ್ಶನ. ಈ ಸದನದಲ್ಲಿ ತಾವೇ ಹೇಳಿರುವಂತಹುದು, ರೆಕಾರ್ಡ್ ಆಗಿರುವಂತಹದು, ಇದನ್ನು ಮತ್ತೆ ನಾನು ಪ್ರಸ್ತಾಪಿಸುತ್ತಿದ್ದೇನೆ. ಆದರೆ ಏನಾಗಿದೆಯೆಂದರೆ ಅಲ್ಲಿರುವ ಸಿ.ಇ.ಒ. ಗಳೆಲ್ಲಾ ಶಾಮೀಲಾಗಿ ಅಲ್ಲಿರುವ ಮಕ್ಕಳನ್ನು ಸ್ಥಳಾಂತರ ಮಾಡಿದ್ದಾರೆ. ನಾನು ಆಗ ನಿಮ್ಮ ಮಕ್ಕಳಾಗಿದ್ದರೆ ಈ ರೀತಿ ಅಲ್ಲಿಗೆ ಸ್ಥಳಾಂತರ ಮಾಡುತ್ತಿದ್ದೀರಾ ಎಂದು ಅವರನ್ನು ನೇರವಾಗಿ ಕೇಳಿದೆ. ಆ ಮಕ್ಕಳು ಚಳಿಯಿಂದ ಒದ್ದಾಡುತ್ತಿದ್ದಾರೆ, ಅಲ್ಲಿರುವ ಪ್ರದೇಶದಲ್ಲಿ ಜಿಗಣೆಗಳಿಂದ ತುಂಬಿದೆ. ಆ ಕಟ್ಟಡದಲ್ಲಿ ಮಳೆ ನೀರು ಸೋರುತ್ತಿದೆ. ಅವರಿಗೆ ವ್ಯವಸ್ಥೆ ಸರಿಯಿಲ್ಲ, ಯಾವತ್ತು ಆ ಕಟ್ಟಡ ಬೀಳುತ್ತದೆಯೋ ಗೊತ್ತಿಲ್ಲವೆಂದು ಹೇಳಿದರೂ ಸಹ ಅಧಿಕಾರಿಗಳು ಶಾಮೀಲಾಗಿ ಈ ಎಲ್ಲಾ ವಿಷಯಗಳನ್ನು ಗಾಳಿಗೆ

ತೂರಿ, ಆ ಮಕ್ಕಳನ್ನು ಸ್ಥಳಾಂತರ ಮಾಡಿದ್ದಾರೆ, ತಮ್ಮ ಆದೇಶವನ್ನು ಧಿಕ್ಕರಿಸಿದ್ದಾರೆ. ಇದು ನೋವಿನ ಸಂಗತಿ, ನಿಮ್ಮ ಆದೇಶವನ್ನು ಧಿಕ್ಕರಿಸಿದ ಮೇಲೆ ಶಾಸಕರು ಅಲ್ಲಿಗೆ ಹೋಗಿ ಏನು ಹೇಳಲಿಕ್ಕಾಗುತ್ತದೆ? ಈ ಸಂಸ್ಥೆಯಲ್ಲಿರುವವರು ಎಷ್ಟರ ಮಟ್ಟಿಗೆ ಆ ಕಟ್ಟಡಗಳನ್ನು ಯಾರ್ಯಾರಿಗೆ ಕೊಡಬೇಕು. ಯಾವ್ಯಾವ ರೀತಿಯಲ್ಲಿ ಹಣವನ್ನು ವಸೂಲು ಮಾಡಬೇಕೆಂಬ ವಿಚಾರವೊಂದು ಬಿಟ್ಟರೆ ಇದಕ್ಕೆ ಹಣವನ್ನು ಯಾರು ಕೊಡುತ್ತಾರೆ? ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ, ಆದರೆ ಇವರು ಆ ಹಣವನ್ನು ಯಾವ ರೀತಿ ದುರ್ಬಳಕೆ ಮಾಡಿಕೊಂಡು ಕಳಪೆಯ ಕಟ್ಟಡಗಳನ್ನು ಕಟ್ಟಿಸುತ್ತಿದ್ದಾರೆ. ಇದರ ಬಗ್ಗೆ ನೀವು ತನಿಖೆಯನ್ನು ಮಾಡಬೇಕು. ಹಾಗೂ ಇವರ ಮೂಲಕ ಕಟ್ಟಿಸಿರುವ ಎಲ್ಲಾ ಕಟ್ಟಡಗಳನ್ನು ಕೂಡ ತಾವು ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಛೇರ್‌ಮನ್: ಬಸವರಾಜು ಸಮಯ ಆಗುತ್ತಿದೆ.

ಶ್ರೀ ಹೆಚ್.ಡಿ. ಬಸವರಾಜು: ಒಂದೇ ಒಂದು ಸೆಕೆಂಡ್ ಮುಗಿಸುತ್ತೇನೆ. ನಿನ್ನೆ ದಿವಸ ಮಾನ್ಯ ಸದಸ್ಯರು ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಹಾಗೂ ಬುಡಕಟ್ಟುಗಳ ಜನಾಂಗದ ಆಯೋಗ 10.10.2002 ರಲ್ಲಿ ರಚನೆಯಾಗಿದ್ದರ ಬಗ್ಗೆ ಹೇಳಿದರು, ತದನಂತರ 1.4.2004 ಆಗಿದೆ ಅಲ್ಲಿಂದ ಇಲ್ಲಿಯವರೆಗೆ ಒಂದೇ ಒಂದು ಮೀಟಿಂಗ್ ನಡೆದಿಲ್ಲ. ಅಧ್ಯಕ್ಷರ ನೇಮಕವಾಗಲಿಲ್ಲ. ಹೀಗಿರುವಾಗ ಈ ಆಯೋಗವನ್ನು ರಚನೆ ಏಕೆ ಮಾಡಿದಿರಿ? ಇದನ್ನು ನಾನು ಹೇಳಿದರೆ ಘೋಷಣೆಯೆಂದಾಗುತ್ತದೆ. ಸರ್ಕಾರ ಈ ಆಯೋಗವನ್ನು ರಚನೆ ಮಾಡಿದೆಯೆಂದು ಘೋಷಣೆಯನ್ನು ಮಾಡಿಕೊಂಡು ಅವರಿಗೆ ಯಾವುದೇ ಸೌಲಭ್ಯವನ್ನು ಮಾಡಿಕೊಡುವುದಿಲ್ಲ, ಆಯಿತಲ್ಲಪ್ಪ ನಿನ್ನ ಆಯೋಗ ಇನ್ನು ಹೋಗು ಎನ್ನುವ ರೀತಿಯಲ್ಲಿ ಮಾಡಿದ್ದಾರೆ. ಹಾಗಾಗಿ ಆ ಆಯೋಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಬೇಕು. ಕೊನೆಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಈ ಮಾತು ಹೇಳಲಿಲ್ಲವೆಂದರೆ ತುಂಬಾ ತಪ್ಪಾಗುತ್ತದೆ. ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ. ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು. ಏನೆಂದರೆ ಇವತ್ತು ನಿಗಮದ ಯೋಜನೆಗಳು ಫಲಾನುಭವಿಗಳಿಗೆ ಸರಿಯಾಗಿ ತಲುಪುತ್ತಿಲ್ಲ, ಅದಕ್ಕೆ ನಾನು ಒಂದು ಹೊಸ ಕಾಯಕಲ್ಪ, ಹೊಸ ಸ್ವರೂಪವನ್ನು ಕೊಡುತ್ತೇನೆಂದು ಮೇ ತಿಂಗಳಿನ 16ರಂದು ಒಂದು ಹೇಳಿಕೆಯನ್ನು ಕೊಟ್ಟರು. ಕೊನೆಗೆ ಅದಕ್ಕೆ ಒಂದು ಹೊಸ ಸ್ವರೂಪವನ್ನು ಕೊಡಲಿಕ್ಕೆ 15.00 ಲಕ್ಷ ರೂಪಾಯಿಗಳನ್ನು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನವರಿಗೆ ಪಾವತಿ ಮಾಡಿದರು, ಮಾಡಲಿ ಬೇಡವೆನ್ನುವುದಿಲ್ಲ. ಆ ಮೇ ತಿಂಗಳಿನಲ್ಲಿ ನೀವು ಹಣ ಪಾವತಿಸಿದ ನಂತರ ಆ ಹೊಸ ಸ್ವರೂಪವೇನು, ಫಲಾನುಭವಿಗಳಿಗೆ ಯೋಜನೆಗಳನ್ನು ಸರಿಯಾಗಿ ತಲುಪಿಸಲಿಕ್ಕೆ

ಏನೇನು ರೆಕ್ಮೆಂಡ್, ಶಿಫಾರಸ್ಸುಗಳನ್ನು ಮಾಡಿದರು. ಅದರ ಬಗ್ಗೆ ಸರ್ಕಾರಕ್ಕೇನಾದರೂ ಬಂದಿದೆಯೇ? ಏಕೆಂದರೆ ಈ ವರ್ಗಕ್ಕೆ ನಾವು ಹಣವನ್ನು ಒದಗಿಸುವುದೇ ಕಷ್ಟವಾಗಿದೆ, ಇಂಡಿಯನ್ ಇನ್ಸಿಟಿಟ್ಯೂಟ್ ಮ್ಯಾನೇಜ್‌ಮೆಂಟಿಗೆ 15.00 ಲಕ್ಷ ಹಣ ಒದಗಿಸಿದ ಮೇಲೆ ನಮಗೆ ಫಲ ಸಿಗಲಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ, ನಾವು ಕೇಳಿಕೊಂಡಿದ್ದರೆ ಅವರು ಹಾಗೆ ಮಾಡುತ್ತಿದ್ದರೇನೋ ಗೊತ್ತಿಲ್ಲ. ಕೊನೆಯದಾಗಿ ಭ್ರಷ್ಟಾಚಾರದ ಹಗರಣದ ಬಗ್ಗೆ ಹೇಳುತ್ತಿದ್ದೇನೆ, ಲೋಕಾಯುಕ್ತರು ಈ ಕಛೇರಿಗೆ ದಾಳಿ ಮಾಡಿ, ಎಲ್ಲಾ ಕಡತಗಳನ್ನು ನೋಡಿದರು, 30 ವರ್ಷಗಳಲ್ಲಿ 6.00 ಲಕ್ಷ ಫಲಾನುಭವಿಗಳ ಅಭಿವೃದ್ಧಿಗಾಗಿ ಅವರ ಹೆಸರಿನಲ್ಲಿ 770 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆಯೆಂದು ದಾಖಲೆಯನ್ನು ತೋರಿಸಲಾಗಿದೆ. ಈ 770 ಕೋಟಿ ರೂಪಾಯಿಗಳ ವೆಚ್ಚ ನಿಜವಾಗಿಯೂ ಅವರಿಗೆ ತಲುಪಿದೆಯೇ ಅಂದರೆ ಅಲ್ಲಿರುವ ಒಬ್ಬ ಪ್ರಾಮಾಣಿಕ ಅಧಿಕಾರಿಯಾಗಿರುವ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಡಾ: ಬಾಬುರಾವ್ ಮುಡಬಿಯವರು 770 ಕೋಟಿ ರೂಪಾಯಿಗಳಲ್ಲಿ ಸುಮಾರು 620 ಕೋಟಿ ರೂಪಾಯಿಗಳಷ್ಟು ಅವ್ಯವಹಾರವಾಗಿದೆ ಎನ್ನುವ ಒಂದು ಹೇಳಿಕೆಯನ್ನು ಕೊಡುತ್ತಾರೆ, ಇಂತಹವರು ನಮಗೆ ಬೇಕು. ಇಂತಹ ಅಧಿಕಾರಿಗಳಿಗೆ ನಾವು ಒಳ್ಳೊಳ್ಳೆಯ ಸ್ಥಾನಗಳನ್ನು ಕೊಟ್ಟು ಅವರಿಗೆ ಪ್ರೋತ್ಸಾಹವನ್ನು ನೀಡಬೇಕು. ಈ ರೀತಿಯಾಗಿ ಹಣ ದುರುಪಯೋಗವಾಗುತ್ತಿದ್ದರೆ ದಲಿತರು, ಪರಿಶಿಷ್ಟ ಜಾತಿ ಹಾಗೂ ಪಂಗಡದವರು ನಿಜವಾಗಲೂ ಈ ನಿಗಮದ ಮೂಲಕ ಉದ್ಧಾರವಾಗುತ್ತಾರೆಯೇ? ಸುಮಾರು ಒಂದು ಲಕ್ಷ ಫಲಾನುಭವಿಗಳಿಗೆ ಮಾತ್ರವೇ ಈ 770 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಫಲ ದೊರೆತಿದೆ. ಇದರಲ್ಲಿ ಸುಮಾರು ಮೂರರಿಂದ ನಾಲ್ಕು ಲಕ್ಷ ಕುಟುಂಬಗಳಿಗೆ ದೊರೆಯಬೇಕಾದ ಅನುಕೂಲ ಅವರಿಗೆ ದೊರೆಯದೆ ಅದರಿಂದ ವಂಚಿತರಾಗಿದ್ದಾರೆ. 770 ಕೋಟಿ ರೂಪಾಯಿಗಳ ಸರ್ಕಾರಿ ಹಣ ಯಾರ್‍ಯಾರದೋ ಶಾಮೀಲಿನಲ್ಲಿ ಯಾರ್‍ಯಾರಿಗೋ ಸಿಕ್ಕಿ ಏನೇನೋ ಆಗಿದೆ. ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕು. ಯಾವುದೇ ತಪ್ಪಿತಸ್ಥ ಅಧಿಕಾರಿಗಳು ಆ ಹುದ್ದೆಯಿಂದ ನಿವೃತ್ತರಾಗಿದ್ದರೂ ಸಹಿತ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಇನ್ನೊಂದು ಸಣ್ಣ ಉದಾಹರಣೆ, ಏಕೆಂದರೆ ಇಂತಹ ಹಗರಣಗಳನ್ನು ನಾನು ಹೇಳಲಿಲ್ಲವೆಂದರೆ ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಲ್ಲವೆಂದರೆ ಕಷ್ಟವಾಗುತ್ತದೆ, ಇತ್ತೀಚೆಗೆ ಮೂರು ಆಟೋಗಳನ್ನು ವಿತರಿಸಿದರು. 113 ಆಟೋಗಳ ವಿತರಣೆಯಲ್ಲಿ ಕೇವಲ 30 ಆಟೋಗಳಿಗೆ ಮಾತ್ರ ಅಕೌಂಟ್ಸ್ ಸಿಕ್ಕಿದೆ. ಉಳಿದವು ಏನಾದವೋ ಗೊತ್ತಿಲ್ಲ. ಈ ಉಳಿಕೆ ಆಟೋಗಳಿಗೆ 113ರಲ್ಲಿ 30 ಮಾತ್ರ ಹೊರತುಪಡಿಸಿ ಇನ್ನು ಉಳಿಕೆ ಆಟೋಗಳ ಕತೆ ಏನು? ಆ ಭ್ರಷ್ಟಾಚಾರದಲ್ಲಿ ಯಾವ ಯಾವ ಅಧಿಕಾರಿಗಳೂ ಶಾಮೀಲಾಗಿದ್ದಾರೆ. ಯಾರ್‍ಯಾರ ಹೆಸರಿನಲ್ಲಿ ಆಟೋಗಳನ್ನು ವಿತರಣೆ ಮಾಡುವುದರ ಮೂಲಕ ಅದರ

ಲಾಭವನ್ನು ಪಡೆದಿದ್ದಾರೆ. ಎನ್ನುವುದನ್ನು ತನಿಖೆ ಮಾಡಬೇಕು. ಆಮೇಲೆ ಇನ್ನೊಂದು ಅಧ್ಯಕ್ಷರೇ, ಇದೊಂದು ನಿಜವಾಗಿಯೂ ಸೋಜಿಗದ ಕತೆ. ಕೋಲಾರ ಜಿಲ್ಲೆಯದು, ಇಲ್ಲೇ ಇದ್ದಾರೆ ನಮ್ಮ ಸ್ನೇಹಿತರು ಕೋಲಾರ ಜಿಲ್ಲೆಯವರು. ಹೇಗೆ ಅಧಿಕಾರಿಗಳು ಶಾಮೀಲಾಗಿ ಎಸ್‌ಸಿ ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಹಣ ಹೊಡೆಯುತ್ತಾರೆ ಎನ್ನುವುದಕ್ಕೆ ಒಂದೇ ಒಂದು ಚೂರು ಹೇಳಿ ಬಿಡುತ್ತೇನೆ. ಅವರ ಒಂದು ವ್ಯವಹಾರ ಎಷ್ಟರಮಟ್ಟಿಗೆ ಇರುತ್ತದೆ ಅಂದರೆ ಯಾರೋ ಒಂದು ಬೇತಮಂಗಲದಲ್ಲಿ ಕೋಲಾರ, ಬಾವಿ ಕಳೆದಿದೆ ಎನ್ನುವ ಹೆಸರಿನಲ್ಲಿ ಯಾರದೋ ಹೆಸರು ಯಾರಿಗೋ ಮೋಟಾರ್, ಅಭಿವೃದ್ಧಿ ನಿಗಮದ ಪ್ಯಾಕೇಜ್, ಇದರಲ್ಲಿ ಮುನಿಯಪ್ಪ ಎನ್ನುವವರು ತಮ್ಮ ಸ್ವಂತ ಜಮೀನಿನಲ್ಲಿ ಒಂದು ಕೊಳವೇ ಬಾವಿಯನ್ನು ತೆಗೆದರು. ಪಂಪ್‌ಸೆಟ್ ಜೋಡಣೆ ಮಾಡಿದರು. ಆಮೇಲೆ ಏನು ಮಾಡಿದರು ಅವರ ಪಾಡಿಗೆ ಅವರು ತಮ್ಮ ಕೃಷಿ ಕಾರ್ಯದಲ್ಲಿ ತೊಡಗಿಕೊಂಡರು. ಅದೇ ಊರಿನವರು ಸ್ವಾಮಿ, ಅದೇ ಹೆಸರಿನಲ್ಲಿ ಒಂದು ಅವರಿಗೆ ಇರುವ ಪಹಣಿಯನ್ನು ಡೂಪ್ಲಿಕೇಟ್ ಪಹಣಿಯನ್ನು ತೆಗೆದುಕೊಂಡು ಬಂದು ಈ ನಿಗಮದಲ್ಲಿ ಅಪ್ಲೈ ಮಾಡಿದರು. ಅದೇ ಹೆಸರಿನಲ್ಲಿ, ಅದೇ ಊರಿನವರು ಒಬ್ಬರು. ನಾನು ಈ ತರಹ ಕೊಳವೆ ಬಾಯಿಯನ್ನು ತೆಗೆದಿದ್ದೇನೆ ನನಗೆ ಒಂದು ಪಂಪ್‌ಸೆಟ್ ಕೊಡಿ ಅಂತ ನಿಗಮದವರು ಏನೂ ನೋಡಲಿಲ್ಲ. ಆಯಿತು ಅವರಲ್ಲಿ ಅಂಡರ್‌ಸ್ಟ್ಯಾಂಡಿಗ್ ಇತ್ತಲ್ಲ ಅದಕ್ಕೆ ಮಂಜೂರಾತಿಯನ್ನು ಕೂಡ ಕೊಟ್ಟುಬಿಟ್ಟರು. ಮಂಜೂರಾತಿ ಕೊಟ್ಟು ಹಣವನ್ನು ಬಿಡುಗಡೆ ಮಾಡಿದರು. ಪಂಪ್‌ಸೆಟ್ ಅವನಿಗೆ ಸಂದಾಯವಾಯಿತು. ಇದು ನಿಜವಾದಂತಹ ವ್ಯಕ್ತಿ ಯಾರು ಪ್ರಾಮಾಣಿಕವಾಗಿ ತನ್ನದೇ ಆದ ಹಣದಲ್ಲಿ ತೆಗೆದಿದ್ದನೋ ಅವನಿಗೆ ಗೊತ್ತಾಗಲಿಲ್ಲ, ಸ್ವಲ್ಪ ಎರಡು ವರ್ಷವಾಯಿತು ಅಂತ ಕಾಣಿಸುತ್ತದೆ. ಅದರ ನಂತರ ಅದು ಏನಾಯಿತು ಪಂಪ್‌ಸೆಟ್ ಕೆಟ್ಟು ಹೋಗಿತ್ತು. ಅದನ್ನು ಅವರು ರಿಪೇರಿ ಮಾಡಿಸಿದರು. ಈ ಬುದ್ಧಿವಂತ ಅಲ್ಲಿಗೂ ಬಿಡಲಿಲ್ಲ. ರಿಪೇರಿಯಾದಂತಹ ಸಂದರ್ಭದಲ್ಲಿ ಅದರಲ್ಲಿ ಏಕೆ ಇನ್ನೊಂದಷ್ಟು ಹಣ ಹೊಡೆಯಬಾರದು ಅಂತ ನಿಗಮಕ್ಕೆ ಒಂದು ಅರ್ಜಿ ಹಾಕಿದ ಸ್ವಾಮಿ ನೀವು ಕೊಟ್ಟಂತಹ ಪಂಪ್‌ಸೆಟ್ ಕೆಟ್ಟು ಹೋಗಿದೆ. ಅದಕ್ಕೆ ಬೇರೆ ಒಂದು ಪಂಪ್‌ಸೆಟ್ ಕೊಡಿ, ಇಲ್ಲ ಅಂದರೆ ನಾನು ಜೀವನ ಮಾಡುವುದಕ್ಕೆ ದುಸ್ತರವಾಗುತ್ತದೆ ಅಂತ. ಸರಿ ಅರ್ಜಿ ಇಲ್ಲಿಗೆ ಬಂತು, ಅರ್ಜಿ ಬಂದಾಗ ಇವನ ಜೊತೆ ಶಾಮೀಲಾಗಿ ಹಣ ಎಲ್ಲಾ ತಿಂದಿದ್ದರಲ್ಲ ಅವರೆಲ್ಲಾ ವರ್ಗ ಆಗಿ ಹೋಗಿದ್ದರು. ಹೊಸಬರು ಬಂದಿದ್ದರು ಅವರಿಗೆ ಇದೆಲ್ಲಾ ಗೊತ್ತಿಲ್ಲ. ಅವರು ಏನು ಮಾಡಿದರು ನೀವು ಹೊಸ ಪಂಪ್ ಸೆಟ್ ಕೇಳಿದ್ದೀರಿ ಕೊಡುವುದಕ್ಕೆ ಆಗುವುದಿಲ್ಲ ಅದನ್ನೇ ನಾವು ರಿಪೇರಿ ಮಾಡಿಸಿಕೊಡುತ್ತೇನೆ ಅಂತ ಇಲ್ಲಿಂದ ಒಂದು ಪತ್ರವನ್ನು ಅವರಿಗೆ ಹಾಕಿದರು. ಆ ಪತ್ರ ಯಾರಿಗೆ ತಲುಪಿತು ಅಂದರೆ ನಿಜವಾಗಿ ತನ್ನ ಸ್ವಂತ ದುಡ್ಡಿನಿಂದ ಮುನಿಯಪ್ಪ

ಎನ್ನುವವರು ಯಾರು ಹಾಕಿಕೊಂಡಿದ್ದರು. ಆ ನಕಲಿ ವ್ಯಕ್ತಿ ಹೆಸರಿನಲ್ಲಿ ಈ ತರಹ ಏನು ಭ್ರಷ್ಟಾಚಾರ ಮಾಡಿದ್ದರು ಅವರನ್ನು ಬಿಟ್ಟು ನಿಜವಾದ ವ್ಯಕ್ತಿಗೆ ಇದು ತಲುಪಿತು. ನಿಜವಾದ ವ್ಯಕ್ತಿಗೆ ಆಶ್ಚರ್ಯವಾಯಿತು ಇದೇನು ಅಪ್ಲಿಕೇಶನ್ ಹಾಕಿಲ್ಲ. ರಿಪೇರಿ ಬಗ್ಗೆ ಕೇಳಿಲ್ಲ ಇದೇನು ನನಗೆ ಈ ರೀತಿ ಲೆಟರ್ ಬಂದಿದೆ ಅಂತ ಹೇಳಿ ನಿಗಮಕ್ಕೆ ಹೋಗಿ ಅವರು ಆ ಪತ್ರವನ್ನು ತೋರಿಸಿ ಕೇಳಿದರು. ಆಗ ಗೊತ್ತಾಯಿತು, ಈ ರೀತಿ ಅಧಿಕಾರಿಗಳು ಬೇರೆಯವರ ಹೆಸರಿನಲ್ಲಿ ಬಂದಂತಹ ಅರ್ಜಿಗಳನ್ನು ಆಫೀಸ್‌ನಲ್ಲಿಯೇ ಕುಳಿತುಕೊಂಡು ಹಣವನ್ನು ವಸೂಲಿ ಮಾಡಿಕೊಂಡು ಇದನ್ನು ಅವರಿಗೆ ತಲುಪಿಸಿದ್ದೇವೆ ಎನ್ನತಕ್ಕಂಥ ನಾಟಕ ಮಾಡುತ್ತಿದ್ದಾರೆ. ಇದರ ಬಗ್ಗೆ ಕೂಡ ಸರ್ಕಾರ ತನಿಖೆ ಮಾಡಬೇಕು.

ಛೇರ್‌ಮನ್: ಶ್ರೀ ರಾಜೇಂದ್ರ ತಾವು ಮಾತನಾಡಿ...

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಅಧ್ಯಕ್ಷರೇ ಇನ್ನು ಒಂದೇ ಒಂದು, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಏನು ಆಗಿದೆ ಎನ್ನುವಂತಹ ವಿಚಾರದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಲೋಕಾಯುಕ್ತರು ದಾಳಿ ಮಾಡಿದರು.

ಛೇರ್‌ಮನ್: ಶ್ರೀ ಬಸವರಾಜುರವರೇ ಇಲ್ಲಿ ಸಾಕಷ್ಟು ಜನ ಸದಸ್ಯರ ಹೆಸರು ಇದೆ. ಅವರಿಗೆ ಅವಕಾಶ ಮಾಡಿಕೊಡಬೇಕು. ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು: ತಾವು ಅವಕಾಶ ಕೊಟ್ಟಿದ್ದೀರಿ ಇಲ್ಲ ಎಂದು ಹೇಳುವುದಿಲ್ಲ. ಇದರಲ್ಲಿ ಲೋಕಾಯುಕ್ತ ದಾಳಿ ನಡೆಸಿದ ನಂತರ ಡಿ.ಸಿ.ಎಂ. ಅವರು ಒಂದು ಆದೇಶ ಕೊಟ್ಟರು. ಅದನ್ನು ತಕ್ಷಣ ನೀವು ಹಿಂದುಳಿದ ಮತ್ತು ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದವರಿಗೆ ಅವ್ಯವಹಾರ ಆಗಿದೆ ಇದರಲ್ಲಿ ಬೇಕಾದಷ್ಟು ಹಣ ಭ್ರಷ್ಟಾಚಾರದಲ್ಲಿ ತನಿಖೆಗೆ ಒಳಪಡುವಂತಾದ್ದು ಇದೆ ಅದನ್ನು ಮಾಡಿ ಅಂತ, ಇದುವರೆಗೂ ಅದು ಏನಾಗಿದೆ ಅಂತ ಗೊತ್ತಾಗಲಿಲ್ಲ. ಅದೇ ರೀತಿ ಇನ್ನೂ ಬೇಕಾದಷ್ಟು ಭ್ರಷ್ಟಾಚಾರಗಳು ಇವೆ, ಬಹುಶಃ ಸಮಯದ ಅಭಾವದಿಂದ ನಾನು ಇಲ್ಲಿ ಪ್ರಸ್ತಾವನೆ ಮಾಡುವುದಕ್ಕೆ ಆಗಲಿಲ್ಲ. ನನ್ನ ಸ್ನೇಹಿತರು ಮುಂದೆ ಮಾತನಾಡುವಂತಹವರು ಬಹುಶಃ ಈ ಭ್ರಷ್ಟಚಾರಗಳ ಬಗ್ಗೆ ಈ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದು ಇನ್ನು ಮುಂದಾದರೂ ಈ ಭ್ರಷ್ಟಾಚಾರಗಳು ಈ ನಿಗಮದಲ್ಲಿ ನಡೆಯದೇ ಇರುವಂತಹ ಒಂದು ವ್ಯವಸ್ಥೆಯನ್ನು ಮಾಡುತ್ತಾರೆ ಅಂತ ಭಾವಿಸಿ, ಇದುವರೆಗೂ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ ಜಿ ಎಫ್): ಮಾನ್ಯ ಅಧ್ಯಕ್ಷರೇ, ಒಂದು ಹತ್ತು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ನನ್ನ

ಸ್ನೇಹಿತರೆಲ್ಲಾ ಇದುವರೆಗೂ ಮಾತನಾಡಿದ್ದಾರೆ. ನಮ್ಮ ಮಂತ್ರಿಗಳಿಗೆ ಬೇಕಾದಷ್ಟು ಜನ ಸಲಹೆಗಳನ್ನು ಕೊಟ್ಟರೆ ಅವರು ಪಾಪ confuse ಆಗಿ ಬಿಡುತ್ತಾರೋ ಏನೋ ಗೊತ್ತಿಲ್ಲ. ಎಲ್ಲರೂ ಅದೇ 18 ಪರ್ಸೆಂಟ್, 22 ಪರ್ಸೆಂಟ್, ಪಾಪ ಅವರು ಎಷ್ಟು ಜನ ಅಂತ ಗೊತ್ತಾಗಬೇಕಲ್ಲ. ಈಗ Residential School- ಎಷ್ಟು ಕೊಟ್ಟಿದ್ದಾರೆ ಯಾವ ಯಾವ ಏರಿಯಾದಲ್ಲಿ ಕೊಟ್ಟಿದ್ದಾರೆ reserved constituency ಎಷ್ಟು importance ಕೊಟ್ಟಿದ್ದಾರೆ ಎನ್ನುವ ಮಾಹಿತಿ ಖಂಡಿತವಾಗಿ ಅವರ ಹತ್ತಿರ ಇರುವುದಿಲ್ಲ. ಇದ್ದರೂ ಅದನ್ನು ಚೆಕ್ ಮಾಡಿದರೆ ಅನ್ಯಾಯ ಆಗಿರುವುದು ಶೆಡ್ಯೂಲ್ ಕ್ಯಾಸ್ಟ್ ಏರಿಯಾ ಜನರಿಗೆ ಮಾತ್ರ. Higher education ಅಂತ ಹೇಳುತ್ತಾರೆ. ಶೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಹೊರಗಡೆ ಹೋಗಿ ಓದಬೇಕು. transparency ಇಲ್ಲ ಅದರಲ್ಲಿ ಎಷ್ಟು ಜನ ಸೆಲೆಕ್ಟ್ ಮಾಡುತ್ತೀರಿ. ಯಾವ ಬಡವರನ್ನು ಸೆಲೆಕ್ಟ್ ಮಾಡಿದಿರಿ. ಸಾಹುಕಾರರನ್ನು ಸೆಲೆಕ್ಟ್ ಮಾಡಿದ್ದೀರಾ ಶೆಡ್ಯೂಲ್ಡ್ ಕ್ಯಾಸ್ಟ್‌ನಲ್ಲೂ ಇದ್ದಾರೆ. ಐಪಿಎಸ್ ಮಗ ಬಡವರೇ? ಐಎಎಸ್ ಆಫೀಸರ್ ಶೆಡ್ಯೂಲ್ಡ್ ಕ್ಯಾಸ್ಟ್ ಅವರ ಮಗ ಬಡವನಾ? ನೀವು ಸೆಲೆಕ್ಟ್ ಮಾಡುವುದು ಹೇಗೆ ಅಂದರೆ ಶೆಡ್ಯೂಲ್ಡ್ ಕ್ಯಾಸ್ಟ್ ಯಾರು ಶೆಡ್ಯೂಲ್ಡ್ ಕ್ಯಾಸ್ಟ್ ಐಪಿಎಸ್ ಓದಿ, ಐಎಎಸ್ ಓದಿ, ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡಿರುವವರು ಷಡ್ಯೂಲ್ಡ್ ಕ್ಯಾಸ್ಟ್‌ನೇ He may be Scheduled Caste. But, economically he is not weak.

ಯಾರನ್ನು ಸೆಲೆಕ್ಟ್ ಮಾಡಿದಿರಿ? ಎಷ್ಟು ಜನರನ್ನು ಸೆಲೆಕ್ಟ್ ಮಾಡಿದಿರಿ ಸರ್ಟಿಫಿಕೇಟ್? ಎಲ್ಲಾ ಶೆಡ್ಯೂಲ್ಡ್ ಕ್ಯಾಸ್ಟ್. ಈಗ ನಾನು ಒಬ್ಬ ಶೆಡ್ಯೂಲ್ಡ್ ಕ್ಯಾಸ್ಟ್. Unfortunately, I have no children. ಇದ್ದರೆ ನಾನು ಗೊತ್ತಿಲ್ಲ ಅಂತ ಹೇಳಬಹುದು ಪಾಪ ಆಶ್ಚರ್ಯವಾಗಿದೆ ಪಾಪ. ಬೇಡ ಎಕ್ಸ್‌ಚೇಂಜ್ ಮಾಡಿಕೊಳ್ಳೋಣ. ಈ ತರಹ ಶೆಡ್ಯೂಲ್ ಕ್ಯಾಸ್ಟ್ ಜನಕ್ಕೆ ಶೆಡ್ಯೂಲ್ಡ್ ಕ್ಯಾಸ್ಟ್ ಜನರಿಂದಲೇ ಅನ್ಯಾಯವಾಗಿದೆ. Supressing the fact, they are not transparent in this education.

ಇನ್ ಟೈಮ್‌ಗೆ ಇವರು ಸ್ಕಾಲರ್‌ಶಿಪ್‌ಗಳನ್ನು ಕಳುಹಿಸುವುದೇ ಇಲ್ಲ. ಆ ಸ್ಟೂಡೆಂಟ್‌ಗಳು ಪೋರ್ಸ್ ಮಾಡುವುದೇ ಇಲ್ಲ. ಕಂಪಲ್‌ಸರಿಯಾಗಿ ನೀವು ಫಾರಂಗಳನ್ನು ಕೊಟ್ಟು ಫಿಲ್ಲಪ್ ಮಾಡಿ ನೀವು ಸ್ಕಾಲರ್‌ಷಿಪ್ ತೆಗೆದುಕೊಳ್ಳಬೇಕು ಎನ್ನುವ ಚಿಂತನೆ ಕೂಡ ಮಾಡುವುದಿಲ್ಲ. ಅವನು ಎಸ್ ಎಸ್ ಎಲ್ ಸಿ ಪಾಸಾಗಿ ಕಾಲೇಜಿಗೆ ಹೋದ ತಕ್ಷಣ ಇವರು ಸ್ಕಾಲರ್‌ಷಿಪ್ ಕಳುಹಿಸುತ್ತಾರೆ. ಆ ಸ್ಟೂಡೆಂಟ್‌ಗೆ ಸ್ಕಾಲರ್‌ಷಿಪ್ ಸಿಗುತ್ತದೆಯೋ, ಇಲ್ಲವೋ ಎನ್ನುವುದು ಗೊತ್ತಾಗುವುದಿಲ್ಲ. ಸೆಕೆಂಡ್ ಇಯರ್ ಪಿಯುಸಿಯವನು ಇಂಜಿನಿಯರಿಂಗ್‌ಗೆ ಹೋಗುತ್ತಾನೆ. ಆಮೇಲೆ ಇವರು ಕಳೆದ ಎರಡು ವರ್ಷಗಳದ್ದನೆಲ್ಲ ಈಗ ಕಳುಹಿಸುತ್ತೇವೆಂದು ಹೇಳುತ್ತಾರೆ. Care-

lessness and negligency in the administration. ಆಮೇಲೆ ಷಡ್ಯೂಲ್ಡ್ ಕ್ಯಾಸ್ಟ್ ಜನಗಳ ಮೇಲೆ ಚಿಂತನೆ ಇಲ್ಲ. ಅದಕ್ಕೆ ಒಂದು ಇಲಾಖೆ ಅದಕ್ಕೆ ಒಂದು ಕಮೀಷನರ್ ಅದಕ್ಕೆ ಒಂದು ಸೆಕ್ರೆಟರಿ, ಪ್ರಿನ್ಸಿಪಲ್ ಸೆಕ್ರೆಟರಿ ಎಂ.ಡಿ.ಗಳು, ಡೈರೆಕ್ಟರ್‌ಗಳು ಜಾಯಿಂಟ್ ಡೈರೆಕ್ಟರ್, ಬೇಕಾದಷ್ಟು ಪಟ್ಟಿ ಇದೆ. But who is monitoring all these things? Nobody is monitoring. ಇದರ ಮೇಲೆ ನಾನು ಸುಮಾರು ಸಲ ಮಾತನಾಡಿದ್ದೇನೆ. ಈಗ ನಮ್ಮ ಹೊಸ ಮಂತ್ರಿ ಏನು ಮಾಡುತ್ತಾರೋ ನಮಗೆ ಇನ್ನೂ ಗೊತ್ತಿಲ್ಲ. ಅವರ ಆಕ್ಷನ್ ಒಂದು ವರ್ಷ ಆಗಿದೆ ಇನ್ನೂ ನಾನು ನೋಡಿಲ್ಲ. ಏನು ಆಕ್ಷನ್? ತಕ್ಷಣ ಎಷ್ಟು ಜನರನ್ನು ಸಸ್ಪೆಂಡ್ ಮಾಡುತ್ತಾರೆ? ಯಾರ ಮೇಲೆ ಎನ್‌ಕ್ವೈರಿ ಮಾಡುತ್ತಾರೆ. ಕೋಪ ಮಾತ್ರ ತೆಗೆದುಕೊಳ್ಳಬಾರದು ಸ್ವಾಮಿ? ನಾನು ಮಾತನಾಡಿದರಲ್ಲಿ ಏನಾದರೂ ತಪ್ಪಿದ್ದರೆ ತಕ್ಷಣ ಅದು ರಾಂಗ್ ಅಂತ ನನಗೆ ಹೇಳಿ. I can get the information from you. Because I have regards of you. ತಮಗೆ ಅಷ್ಟು ಅನುಭವ ಇಲ್ಲ. ಈ ಲೂಟಿ ಮಾಡುವವರ ಹಿಂದಗಡೆ ನೀವು ಇನ್ನೂ ಹೋಗಿಲ್ಲ. ಸ್ವಲ್ಪ ಹೋಗಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇಲ್ಲ ಇಲ್ಲ ಪಾಪ ಅವರು ಕ್ರಮ ತೆಗೆದುಕೊಳ್ಳುವುದಕ್ಕೆ ಅವರು ಶಿಫಾರಸ್ಸು ಮಾಡಿದರೂ ಕೂಡ ಅವರ ಮಾತು ಯಾರೂ ಕೇಳುತ್ತಿಲ್ಲ. ಏನು ಮಾಡುವುದು ಪಾಪ. ಅವರು ಶಿಫಾರಸ್ಸು ಮಾಡಿದರು. ಇಂತಹವರ ಮೇಲೆ ಲೋಕಾಯುಕ್ತರು ಚಾರ್ಜ್ ಮಾಡಿದ್ದಾರೆ ಕ್ರಮ ತೆಗೆದುಕೊಳ್ಳಿ ಅಂತ ಹೇಳಿ ಪಾಪ ಶಿಫಾರಸ್ಸು ಮಾಡಿದರು ಯಾರು ತೆಗೆದುಕೊಂಡರು ಕ್ರಮ.

ಶ್ರೀ ಎಸ್ ರಾಜೇಂದ್ರನ್: ಆಮೇಲೆ ತಾವು ವಾರ್ಷಿಕ ಬಜೆಟ್‌ನಲ್ಲಿ ಏನು ಕೊಟ್ಟಿದ್ದೀರಿ ಅಂದರೆ ಷಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಅವರಿಗೆ ಜಾಗ ಇಲ್ಲ ಅಂತ ಹೇಳಿ burial grounds purchase ಮಾಡಬೇಕು ಅದಕ್ಕೆ ಹಣ ಬಿಡುಗಡೆ ಮಾಡುತ್ತೇವೆ. ಏನು ಅಂದರೆ ಅದರಲ್ಲಿ ನೋಡಿ ಎಷ್ಟು ಚೆನ್ನಾಗಿ ಬರೆದಿದ್ದಾರೆ. 0.40 ಲಕ್ಷ ಓದುವವರಿಗೆ ಏನೆಂದರೆ 40 ಲಕ್ಷ ಕೊಟ್ಟಿದ್ದಾರೆ ಎನ್ನುವುದು. ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ಷಡ್ಯೂಲ್ಡ್ ಕ್ಯಾಸ್ಟ್ ಜನರಿಗೆ burial ground purchase ಮಾಡುವುದಕ್ಕೆ, ಅದೇ ಸಿಂಪಲ್ ಆಗಿ 4 ಸಾವಿರ 40 ಸಾವಿರ ಅಂತ ಕೊಟ್ಟಿರಬೇಕು. ಅವರ ಸ್ಟೈಲ್ ನೋಡಿ ಹೇಗಿದೆ. 0.40 lakhs ಹುಡುಕಿ ನೋಡಿದರೆ ಅದು 40 ಸಾವಿರ Through out karnataka State ನಲ್ಲಿ ಇರುವ ಜನಕ್ಕೆ more than 36 M.L.A's are here.

ಬಜೆಟ್ ಎಷ್ಟು ಅಂದರೆ 0.40 lakhs. Are they not directly cheating us? ಎಷ್ಟು 0.40 ಲಕ್ಷ ಅಂದರೆ 40 ಸಾವಿರ 40 ಸಾವಿರಕ್ಕೆ ಒಂದು

ಟಾಯಲೆಟ್ ಪರ್ಚೇಜ್ ಮಾಡುವುದಕ್ಕೆ ಆಗುವುದಿಲ್ಲ ಸ್ವಾಮಿ. 10 ಲಕ್ಷ ಒಂದು ಟಾಯಲೇಟ್ ಕನ್‌ಸ್ಟ್ರಕ್ಷನ್ ಮಾಡುತ್ತಿದ್ದಾರೆ ಮುನಿಸಿಪಾಲಿಟಿಯವರು 10 ಲಕ್ಷ ನಿರ್ಮಲ್ ನಗರ ಅಂತ ಕನಿಷ್ಟ ಪಕ್ಷ ನಿರ್ಮಲ್ ನಗರದಲ್ಲಿ ಕನ್‌ಸ್ಟ್ರಕ್ಷನ್ ಮಾಡುತ್ತಿರುವ ಟಾಯಲೆಟ್ ವ್ಯಾಲ್ಯು ಕೂಡ ಷಡ್ಯೂಲ್ಡ್ ಕ್ಯಾಸ್ಟ್‌ಗೆ ಇಲ್ಲ ಅಂದರೆ what for this department? You must take into task. Let it go to that Budget Sedtion. Let you speak to that Finance Department. Don't you feel shame? ಓಟು ಬೇಕಾದರೆ ಷಡ್ಯೂಲ್ ಕ್ಯಾಸ್ಟ್ ಜನ ಬೇಕು. Are they vote bankers? ಅವರ ಓಟು ಮಾತ್ರ ಬೇಕಾ? ಅದಕ್ಕೋಸ್ಕರ ಇಂತಹವರನ್ನು ಮಾಡಬೇಕು ಅಂತಹವರನ್ನು ಮಾಡಬೇಕು ಇವರು ಬಂದರೆ ಜನರ ಓಟೆಲ್ಲ ಬರುತ್ತದೆ. ಬರೀ ಓಟು ಹಾಕುವುದಕ್ಕೆ ನಾವು ಅದು ತಪ್ಪು. You must take more initial interest from the beginning, what type of support we are giving to the scheduled Caste.

ಶ್ರೀ ಎಸ್.ರಾಜೇಂದ್ರನ್: ಈ ಕ್ಯಾಸ್ಟ್ ಸರ್ಟಿಫಿಕೇಟ್ ಬಗ್ಗೆ ಪೊಲಿ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುತ್ತಾರೆ. ಡುಪ್ಲಿಕೇಟ್ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುತ್ತಾರೆಂದು ಮಾತನಾಡುತ್ತಾರೆ. ಈ ಕ್ಯಾಸ್ಟ್ ಸರ್ಟಿಫಿಕೇಟ್ ಸಂಬಂಧಿಸಿದಂತೆ ನಿಮ್ಮ ಅಧಿಕಾರಿಗಳು ಏನು ಮಾಡುತ್ತಾರೆಂದರೆ, ನನ್ನ ಕ್ಷೇತ್ರವನ್ನು ಉದಾಹರಣೆಗೆ ತೆಗೆದುಕೊಂಡರೆ, ಮನೆಗಳಿಗೆ ಹೋಗುತ್ತಾರೆ. ಹೋದ ತಕ್ಷಣ ಅಲ್ಲಿ ಜೀಸಸ್ ಕ್ರೈಸ್ಟ್ ಫೋಟೊ ಇರುತ್ತದೆ. ನೋಡಿದ ತಕ್ಷಣ ಅಧಿಕಾರಿಯೇ ಇವನು ಷಡ್ಯೂಲ್ಡ್ ಕ್ಯಾಸ್ಟ್ ಅಲ್ಲ ಎಂದು ಡಿಸೈಡ್ ಮಾಡುತ್ತಾನೆ. ಪಕ್ಕದ ಮನೆಯಲ್ಲಿ, ಇವನ ಹೆಸರು ಏನೆಂದು ಕೇಳುತ್ತಾನೆ. ಅವನು ಕೆನಡಿ ಎಂದು ಹೇಳುತ್ತಾನೆ. ಹಾಗೆಯೇ, ಇವನು ಶೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿಲ್ಲವೆಂದು ಡಿಸೈಡ್ ಮಾಡುತ್ತಾನೆ. ಇದನ್ನು ನಾನು ನಿಮ್ಮ ಅಧಿಕಾರಿಗಳ ನೋಟಿಸ್‌ಗೆ ತೆಗೆದುಕೊಂಡು ಬಂದಿದ್ದೇನೆ. ಹೆಸರಿನ ಮೇಲೆ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುತ್ತೀರಾ? ಒಬ್ಬ ತನ್ನ ಹೆಸರು ಮುಟ್ಟಾಳ ಎಂದು ಹೆಸರು ಇಟ್ಟುಕೊಂಡಿರುತ್ತಾನೆ. ಅವನಿಗೆ ಏನು ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುತ್ತೀರಿ? See, you must understand struggling this with your inefficient, foolish officers, who are not understanding to issue a Caste Certificate. ಅವನು (ಅಧಿಕಾರಿ) ಏನು ಹೇಳುತ್ತಾನೆಂದರೆ, ಸರ್ ಅವನ ಹೆಸರು ಕೆನಡಿ ಎಂದು ಹೇಳುತ್ತಾನೆ. ಜಾನ್ ಎಂದು ಹೇಳುತ್ತಾನೆ ಸರ್, ಜಾನ್ ಕೆನಡಿ ಎಂದು ಹೇಳುತ್ತಾನೆ ಸರ್ ಎಂದು ಹೇಳುತ್ತಾನೆ. ಅವನು ಪಿಗ್ ಎಂದು ಹೇಳುತ್ತಾನ್ರಿ, ನೀವು ಹೇಗೆ ಜಾತಿಯ ಮೇಲೆ ಕ್ಯಾಸ್ಟ್ ಸರ್ಟಿಫಿಕೇಟ್ ಇಶ್ಯು ಮಾಡುತ್ತೀರೆಂದರೆ, ಕ್ರಿಶ್ಚಿಯನ್ ಹೆಸರು ಎಂದು ಹೇಳುತ್ತಾನೆ. ಉದಾಹರಣೆಗೆ, ಜಾನ್ ಎಫ್ ಕೆನಡಿ ಬಹಳ ಒಳ್ಳೆಯ ಮನುಷ್ಯ,

ನಮ್ಮ ದೇಶಕ್ಕೆ ಬಹಳ ಸಪೋರ್ಟ್ ಮಾಡಿದ್ದಾರೆ. ನಮ್ಮ ಕೆಜಿಎಫ್‌ನಲ್ಲಿ ಸ್ವಲ್ಪ ಇಂಗ್ಲಿಷ್ ಸ್ಟೈಲ್, ಅವನೇನು ಮಾಡಿದ್ದಾನೆಂದರೆ, ಅವನ ಮಗನಿಗೆ ಜಾನ್ ಕೆನಡಿ ಎಂದು ಹೆಸರು ಇಟ್ಟುಬಿಟ್ಟಿದ್ದಾನೆ. ನಮ್ಮ ಊರಿನಲ್ಲಿ ಸ್ಟಾಲಿನ್ ಎಂಬ ಹೆಸರು ಇಟ್ಟಿದ್ದಾನೆ. ಇಂತಹ ಹೆಸರುಗಳನ್ನು ಇಟ್ಟುಕೊಂಡು, ತಹಸೀಲ್ದಾರ್, ರೆವಿನ್ಯೂ ಆಫೀಸರ್ ಏನು ಹೇಳುತ್ತಾನೆಂದರೆ, ಇಲ್ಲ ಹೆಸರು ನೋಡಿ ಸರ್, ನಾನು ನೋಡಬೇಕಾ? ಇವನು ಅಧಿಕಾರಿ, ತಾಲ್ಲೂಕು ಆಫೀಸರ್, ಹೆಸರು ನೋಡಿ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುವುದೇನಿದೆ? ಒಬ್ಬ ಮಡ್ ಎಂದು ಹೆಸರು ಇಟ್ಟುಕೊಳ್ಳುತ್ತಾನೆ. ದೇವರಿಗೆಲ್ಲಾ ಕೇಳಿಕೊಂಡು, ನನಗೆ ಮಗನೆ ಹುಟ್ಟಿಲ್ಲ ಸ್ವಾಮಿ, ಫಸ್ಟ್ ಹುಟ್ಟಿದ ತಕ್ಷಣ ಮಡ್‌ನಲ್ಲಿ ಹಾಕಿ ನಾನು ತೆಗೆದುಕೊಂಡು ಬರುತ್ತೇನೆ ದೇವರೆ ಎಂದು ಪ್ರಾರ್ಥನೆ ಮಾಡಿಕೊಂಡು ಆ ಮಗುವಿನ ಹೆಸರೆ ಮಡ್ ಎಂದು ಇಟ್ಟು ಬಿಡುತ್ತಾನೆ. ಅವನು ಹೆಸರು ಮಣ್ಣು, ವಣ್ಣು ಎನ್ನುವುದಕ್ಕೆ ಯಾವ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುತ್ತೀರಿ? ಏನ್ರಿ ನಾನು ಇದಕ್ಕೂ ಡಿ.ಸಿ. ಹತ್ತಿರ ಹೋಗಬೇಕಾ? ಡಿಸಿಯವರು ಬಹಳ ಯೋಗ್ಯ ಐಎಎಸ್ ಆಫೀಸರ್ ಏನು ಹೇಳುವರೆಂದರೆ, ಆ ಬಗ್ಗೆ ನಾನು ವಿಚಾರಣೆ, ಅವನ ಹೆಸರು ಬೇರೆ ರೀತಿ ಇದೆ ಎಂದು ಹೇಳುತ್ತಾರೆ. ನನಗೆ ಒಬ್ಬ ಮುಸ್ಲಿಂ ಫ್ರೆಂಡ್ ಇರುತ್ತಾರೆಂದು ಇಟ್ಟುಕೊಳ್ಳಿ, ಅವನ ಹೆಸರನ್ನು ನನ್ನ ಮಗನಿಗೆ ಇಡುತ್ತೇನೆ ಏನು ತಪ್ಪು? You must find out what is his father? You must find out his grand- father ನೋಡಿದ್ದೀರಾ? ಇಲ್ಲ. ನೀವೇನಾದರೂ ಒಂದು ಲೋನ್ ಕೊಟ್ಟುಬಿಟ್ಟರೆ ಅವನು ಇಲ್ಲವೆಂದರೆ ಅವನ ತಮ್ಮನನ್ನು ಸೀಜ್ ಮಾಡುತ್ತೀರಿ. ಅವನ ತಂದೆ ಮೇಲೆ ಹೋಗುತ್ತೀರಿ, ಅವನ ಗ್ರಾಂಡ್ ಫಾದರ್ ಪ್ರಾಪರ್ಟಿ ಸೀಜ್ ಮಾಡಿ ಎಂದು ಹೇಳುತ್ತೀರಿ, ಇದಕ್ಕೆ ಮಾತ್ರ ಇಲ್ಲವಾ? You tell me. ಇದಕ್ಕೆ ನಿಮ್ಮ ಅಧಿಕಾರಿಗಳ ಸ್ಟೈಲ್‌ಗಳಿವೆ. ಹಾ ಹಾ, ಅದೇನು ಕಾರ್‌ಗಳನ್ನು ಕೊಟ್ಟುಬಿಟ್ಟಿದ್ದೀರೊ ರೆಡ್ ಲೈಟ್ ಕಾರಿನೊಳಗೆ ಅವರು ಕುಳಿತುಕೊಂಡು ಬಿಟ್ಟರೆ ಅವರಿಗೆ ಅದರ ಚಿಂತನೆಯೆ ಬರುವುದಿಲ್ಲ. According to the– ತಹಸಿಲ್ದಾರ್ ಏನು ಹೇಳುತ್ತಾರೋ, ರೆವಿನ್ಯೂ ಇನ್ಸ್‌ಪೆಕ್ಟರ್ ಏನು ಹೇಳುತ್ತಾರೊ ಅಷ್ಟನ್ನೆ ನೋಡುವುದು, ಜನರನ್ನು ಯಾರು ಕೇಳುತ್ತಾರೆ? ನಾನು ಷಡ್ಯೂಲ್ಡ್ ಕ್ಯಾಸ್ಟ್ ಸರ್, ನನ್ನ ತಂದೆ ಹೆಸರು ಪೆರುಮಾಳ್, ಸರ್ ನನ್ನ ಮಗನ ಹೆಸರು ಬೇರೆ ಇದೆ ಎಂದರೆ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುವುದಿಲ್ಲವೆಂದು ಹೇಳುತ್ತಾನೆ. ಯಾರು ಹೋಗಿ ಕೇಳಬೇಕು,? ನಾನು ಹೋಗಿ ಕೇಳಿದರೆ ಅವನ ಉತ್ತರವೇನೆಂದರೆ, Sir his name is not suitable.

ಹೆಸರಿಗೂ ಸರ್ಟಿಫಿಕೇಟಿಗೂ ಏನು ಸಂಬಂಧವಿದೆ?

ಸರ್ಕಾರದ .... ಹೀಗೆ ಹೇಳಿದರೆ ನನಗೆ ನಾಚಿಕೆಯಾಗುತ್ತದೆ. Therefore

you must take this seriously. Call all the Deputy Commissioners ask them as to where is the way to issue caste Certificates immediately to the children. ಒಂದು ತಿಂಗಳು ತೆಗೆದುಕೊಳ್ಳುತ್ತಾನೆ. ಮೂರು ತಿಂಗಳು ತೆಗೆದುಕೊಳ್ಳುತ್ತಾನೆ, ಕ್ಯಾಸ್ಟ್ ಸರ್ಟಿಫಿಕೇಟ್‌ಗೆ ನಾನು ನನ್ನ ಜಾತಿಯನ್ನು ಬರೆದುಕೊಟ್ಟು ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂದರೆ, ನಾನು ಐನೂರು ರೂಪಾಯಿಗಳನ್ನು ಕೊಡಬೇಕು. ನಾನು ಖುದ್ದಾಗಿ ಹೋಗಿ ಕುಳಿತುಕೊಂಡು ಏನ್ರಿ ಐನೂರು ರೂಪಾಯಿಗಳನ್ನು ತೆಗೆದುಕೊಂಡಿದ್ದೀರೆಂದರೆ, ನಮ್ಮ ಊರಿನ ಒಬ್ಬ ಆಫೀಸರ್, ಇಲ್ಲ ಸರ್, ಮುನ್ನೂರು ರೂಪಾಯಿಗಳನ್ನು ತೆಗೆದುಕೊಂಡಿದ್ದೇನೆಂದು ಹೇಳುತ್ತಾನೆ. ಅದು ತಹಸೀಲ್ದಾರ್ ಮುಂದೆ ಹೇಳುತ್ತಾನೆ. You must take into task. ನೀವು ಯಾರ ಮೇಲೆ ರೈಡ್‌ಗೆ ಬಿಡುತ್ತೀರಿ, ಯಾರ್‍ಯಾರು ಷೆಡ್ಯೂಲ್ಡ್ ಕ್ಯಾಸ್ಟ್ ಜನರಿದ್ದಾರೋ ಅವರಿಗೆ ಮಾತ್ರ ರೈಡ್ ಮಾಡುತ್ತೀರಿ. ನೀವು ಲೋಕಾಯುಕ್ತ ರೈಡ್‌ಗಳನ್ನೆಲ್ಲಾ ನೋಡಿ, ಐಪಿಎಸ್ ಆಫೀಸರ್ಸ್ ಆಗಿರಲಿ ಐಎಎಸ್ ಆಫೀಸರ್ಸ್ ಆಗಿರಲಿ ಎಲ್ಲೆಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಆಫೀಸರ್ಸ್ ಇದ್ದಾರೋ ಅವರ ಮೇಲೆ ಮಾತ್ರ ಲೋಕಾಯುಕ್ತ ರೈಡ್, You find out ಬರಿ ಷೆಡ್ಯೂಲ್ಡ್ ಕ್ಯಾಸ್ಟ್ ಐಎಎಸ್: ಐಪಿಎಸ್ ಅಧಿಕಾರಿಗಳನ್ನು ಮಾತ್ರ, ಬೇರೆ ಐಎಎಸ್: ಐಪಿಎಸ್ ಅಧಿಕಾರಿಗಳು ತಪ್ಪೆ ಮಾಡುವುದಿಲ್ಲವೇನು? where is the social justice in this Government? ನಮ್ಮ ಇನ್‌ಚಾರ್ಜ್ ಮಿನಿಸ್ಟರ್ ಇಲ್ಲ, ತಾವಿದ್ದೀರಿ ಚಿಂತನೆ ಮಾಡಿ, A Scheduled caste officer, just an example, I am bringing to you. ಯಲ್ಲಿ ಕೆಲಸ ಮಾಡುತ್ತಿದ್ದರು. ಅವರೇನು ಗೊಂದಲ ಮಾಡಿದ್ದಾರೆಂದರೆ, ಕೋಲಾರ ಮುನಿಸಿಪಾಲಿಟಿಯಲ್ಲಿ ಕೋರ್ಟ್‌ನವರು ಅವರಿಗೆ ಇನ್‌ಸ್ಟ್ರಕ್ಟ್ ಮಾಡಿದ್ದಾರೆ. within three months, you shift him from Kolar ಅವರನ್ನು ಯಾರು ಮಾಡಬೇಕು? ನಿಮ್ಮ ಸೆಕ್ರೆಟರಿ ಮಾಡಬೇಕು. ನಿಮ್ಮ ಸೆಕ್ರೆಟರಿ ಮಾಡಿದ್ದಾರಾ? ಮಾಡಿಲ್ಲ ಅಂತಹ ಅಧಿಕಾರಿಯನ್ನು ಮೂರು ತಿಂಗಳವರೆಗೂ ಮಾಡಿಲ್ಲ, ಕೊನೆಗೆ somebody went against to the Court. ಕಂಟೆಂಪ್ಟ್ ಆಫ್ ದಿ ಕೋರ್ಟ್ ಎಂದು ಹೋಗಿ, ಕೋರ್ಟ್ ಇನ್‌ಸ್ಟ್ರಕ್ಟ್ ಮಾಡಿದೆ, ಮುಖ್ಯಮಂತ್ರಿಗಳಿಗೆ ಹಾಗೂ ಉಸ್ತುವಾರಿ ಮಂತ್ರಿಗಳಿಗೆ ನೋಟಿಸ್ ಇಶ್ಯು ಮಾಡಿದ್ದಾರೆ.

ಶ್ರೀ. ಗೋವಿಂದ ಎಂ ಕಾರಜೋಳ: ಸನ್ಮಾನ್ಯ ಅಧ್ಯಕ್ಷರೆ, ಈ ಸರ್ಕಾರದಲ್ಲಿ ಇನ್ನೊಂದು ಹೊಸ ಸ್ಟೈಲ್ ಶುರುವಾಗಿದೆ. ಕೆಲವೊಂದು ಇಲಾಖೆಗಳಲ್ಲಿ ನೇರವಾಗಿ ಪ್ರಮೋಷನ್ ಆಗಿ ಬರತಕ್ಕಂಥ ಹುದ್ದೆಗಳಿವೆ. ಉದಾಹರಣೆಗೆ ವಾರ್ತಾ ಮತ್ತು ಪ್ರಚಾರ ಇಲಾಖೆಯ, ನಿರ್ದೇಶಕರ ಹುದ್ದೆ, ಟ್ರಜರಿ ಇಲಾಖೆಯ ನಿರ್ದೇಶಕರ

ಹುದ್ದೆ, ಇದು ಕೆಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿರತಕ್ಕಂಥ ಪ್ರಾವಿಷನ್. ಷೆಡ್ಯೂಲ್ಡ್ ಕ್ಯಾಸ್ಟ್ ಅಧಿಕಾರಿ ಆ ಹುದ್ದೆಗೆ ಎಲಿಜಿಬಲ್ ಆದಾಗ, ಆ ಹುದ್ದೆಯನ್ನು ಕಮಿಷನರ್ ಪೋಸ್ಟ್‌ಗೆ ನಾವು ಅಪ್‌ಗ್ರೇಡ್ ಮಾಡಿದ್ದೇವೆ, ಐಎಎಸ್ ಅಧಿಕಾರಿಯನ್ನೆ ಹಾಕಬೇಕು. ಇವರೆಲ್ಲಾ ಐಎಎಸ್‌ನವರಲ್ಲವೆಂದು ಈಗ ತಪ್ಪಿಸುತ್ತಿದ್ದಾರೆ. ಇದೊಂದು ಹೊಸ ಸ್ಟೈಲ್ ಈ ಸರ್ಕಾರದಲ್ಲಿ ಶುರುವಾಗಿದೆ. ಧರ್ಮಸಿಂಗ್‌ರವರು, ನಾನು ಹಿಂದುಳಿದ ವರ್ಗದವನು ಎಂದು ಹೇಳಿಕೊಳ್ಳುತ್ತಾರೆ. ಸಿದ್ಧರಾಮಯ್ಯನವರು ನಾನು ಹಿಂದುಳಿದ ವರ್ಗದವನು ಅವರ ಪರವಾಗಿರುವವರು, ಅವರ ಕಲ್ಯಾಣಕ್ಕಾಗಿಯೇ ನಾವು ಹುಟ್ಟಿದ್ದೇವೆಂದು ಎಂದು ಹೇಳಿಕೊಳ್ಳುತ್ತಾರೆ. ನಾನು ಕೇಳುವುದು, ಈ ಸ್ಟೈಲ್ ಏತಕ್ಕೆ ನಡೆದಿದೆ? ಹಿಂದೆ, ಜನರಲ್ ಅಧಿಕಾರಿ ಬಂದಾಗ ಅದನ್ನು ನೀವು ಮಾಡಲಿಲ್ಲ, ನಿಮ್ಮ ಕೈಯಿಂದ ಅಪ್‌ಗ್ರೇಡ್ ಮಾಡಲಾಗಲಿಲ್ಲ. ಇವತ್ತು ಏತಕ್ಕೆ ಮಾಡುತ್ತಿದ್ದೀರಿ? ಅಂದರೆ, ಈ ಜನಾಂಗದವರಿಗೆ ಅದನ್ನು ತಪ್ಪಿಸಬೇಕು. ಈ ಜನಾಂಗದವರಿಗೆ ಹುದ್ದೆಗಳನ್ನು ಕೊಡಬಾರದು, ಇದು ಈ ಸರ್ಕಾರದಲ್ಲಿ ನಡೆಯುತ್ತಿರತಕ್ಕಂಥ ಕುತಂತ್ರ.

ಶ್ರೀ ಎಸ್. ರಾಜೇಂದ್ರನ್: ಅಂತಹ ಅಧಿಕಾರಿಯನ್ನು, ಕೋರ್ಟ್ ಆದೇಶ ಮಾಡಿದರು. ಚೀಫ್ ಸೆಕ್ರೆಟರಿ, ಮುಖ್ಯಮಂತ್ರಿ, ಉಸ್ತುವಾರಿ ಮಂತ್ರಿಗಳಿಗೆ ನೋಟಿಸ್ ಸರ್ವ್ ಮಾಡಿದರು. ಕೊನೆಗೆ ಆ ಆಫೀಸರ್ ಅನ್ನು ಸಸ್ಪೆಂಡ್ ಮಾಡಿದರು. ಆ ಷೆಡ್ಯೂಲ್ಡ್ ಕಾಸ್ಟ್ ಅಧಿಕಾರಿ ಎಲ್ಲಿ ತಪ್ಪು ಮಾಡಿದ್ದಾನೆ ಹೇಳಿ? ಅವರು ಬೇಕೆಂದು ಕೇಳಿದ್ದು ಇನ್‌ಚಾರ್ಜ್ ಮಿನಿಸ್ಟರ್, ಅವರನ್ನು ಹಾಕಿದ್ದು ಮುಖ್ಯಮಂತ್ರಿ, ಸಿಕ್ಕಿ ಹಾಕಿಕೊಂಡವನು, ಷಡ್ಯೂಲ್ಡ್ ಕಾಸ್ಟ್ ಅಧಿಕಾರಿ, Is it not shame on the part of the Government? ಏನು ಷಡ್ಯೂಲ್ಡ್ ಕಾಸ್ಟ್ ಅಂದರೆ ಅಷ್ಟು ಈಸಿಯಾಗಿ ಆಗುತ್ತದೆ. ಈಗ ಅವನಿಗೆ ಸಪೋರ್ಟ್ ಮಾಡುವವರ್‍ಯಾರು? ಅವನೇನು ತಪ್ಪು ಮಾಡಿದ್ದಾನೆ. ನಾನು ಎನ್‌ಕ್ವೈರಿ ಮಾಡಿದ್ದೇನೆ. ಅವನ ಪೋಸ್ಟಿಂಗ್ ಅನ್ನೆ ಮೂರು ತಿಂಗಳೊಳಗೆ ಶಿಫ್ಟ್ ಮಾಡಿ ಎಂದು ಹೇಳಿದರೆ, ನಿಮ್ಮ ಪ್ರಿನ್ಸಿಪಾಲ್ ಸೆಕ್ರೆಟರಿ, ಸೆಕ್ರೆಟರಿ ಕ್ರಮ ತೆಗೆದುಕೊಂಡಿಲ್ಲ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ. Because they are not blank scheduled caste. No asker, no teller for schedule caste. ಅವರಿಗೆ ಗಾಡ್ ಫಾದರ್ಸ್ ಇದ್ದಾರೆ, ಗಾಡ್ ಮದರ್ಸ್ ಇದ್ದಾರೆ, ಆದುದರಿಂದ ಆ ಸೆಕ್ರೆಟರಿಯನ್ನು ಬಿಟ್ಟಿದ್ದೀರಿ, ಇವರಿಂದ ಮುಖ್ಯಮಂತ್ರಿಗಳಿಗೆ ಎಷ್ಟು ಅವಮಾನ, ಈ ಸರ್ಕಾರಕ್ಕೆ ಎಷ್ಟು ಗೌರವ ಕಡಿಮೆಯಾಗಿದೆ? ಇವರ ಇನ್‌ಎಫಿಸಿಯೆನ್ಸಿಯಿಂದ ಮುಖ್ಯಮಂತ್ರಿಗಳು ಹಾಗೂ ಇನ್‌ಚಾರ್ಜ್ ಮಿನಿಸ್ಟರ್‌ಗೆ ಕೋರ್ಟ್ ನೋಟಿಸ್ ಇಸ್ಯು ಮಾಡಿದೆ. Suspend the Secretary immediately. Take him to task. ನಿಮಗೆ ಸಿಕ್ಕಿರುವುದು ಬರಿ ಶೆಡ್ಯೂಲ್ಡ್ ಕಾಸ್ಟ್ ಆಫೀಸರ್ಸ್?

ಐಪಿಎಸ್: ಐಎಎಸ್ ಅಧಿಕಾರಿಗಳಾಗಿರಲಿ ಸರಿ, Let him be a peon, but justice should be there. Where is the social justice for schedule caste? where you have given opportunity for them? ಲೋಕಾಯುಕ್ತರು ಬರಿ ಶೆಡ್ಯೂಲ್ಡ್ ಕಾಸ್ಟ್, ಶೆಡ್ಯೂಲ್ಡ್ ಟ್ರೈಬ್ ಅಧಿಕಾರಿಗಳ ಮೇಲೆ ಕೇಸ್ ಹಾಕುವುದು, ಅವರು ಹೋಗಿ ರೈಡ್ ಮಾಡುವುದು, ಕೊನೆಗೆ ಏನು ಸಿಗುವುದಿಲ್ಲ. ರೈಡ್ ಮಾಡಿ, ರೈಡ್ ಮಾಡಿ ಕೇಸು ಇರುವುದಿಲ್ಲ. ಸಸ್ಪೆಂಡ್ ಮಾಡುವುದು, ಪೆಂಡಿಂಗ್ ಇಡುವುದು, ಹತ್ತು ವರ್ಷವಾದರೂ ಅವರ ಕೇಸ್ ಅನ್ನು ಡಿಸ್‌ಪೋಸ್ ಮಾಡುವುದಿಲ್ಲ. why this discrimination? ತಾವು ಅದೆಲ್ಲಾ ಸ್ವಲ್ಪ ಚಿಂತಿಸಿ ಇಟ್ಟುಕೊಂಡು ಪ್ರಶ್ನಿಸಲೇಬೇಕು. You must support us. we are not parasites. But we are seeking justice.

ಎಸ್‌ಸಿ: ಎಸ್‌ಟಿ ಕಾರ್ಪೋರೇಷನ್‌ನಲ್ಲಿ ಏನು ನಡೆಯುತ್ತಿದೆ ಎಂಬುದು ತಮಗೆ ಗೊತ್ತಿದೆ. ಆ ಕಾರ್ಪೋರೇಷನ್‌ನಲ್ಲಿ 350 ಆಟೋ ಇಶ್ಯು ಮಾಡಿದ್ದಾರೆ. ordered is for 350.ಹಣ ಬಿಡುಗಡೆ ಮಾಡಿದ್ದು 350ಕ್ಕೆ, ಮಾಕ್ಸಿಮಂ ಬೆನಿಫಿಷರಿಗೆ ಇಸ್ಯು ಮಾಡಿರುವುದು ಬರಿ 17, ಆ ದುಡ್ಡು ಎಲ್ಲಿ ಹೋಗಿದೆ, ಯಾರು ತಿಂದಿದ್ದಾರೋ, ಯಾರು ಅದರಲ್ಲಿ ಶಾಮೀಲಾಗಿದ್ದಾರೆ? ಎಂತಹ ಅಧಿಕಾರಿ ಅದರಲ್ಲಿ ಇನ್‌ವಾಲ್ವ್ ಆಗಿದ್ದಾರೋ? ತಮಗೆ ಪಟ್ಟಿ ಬಂದಿರಬಹುದು. In that no influence should be used ಷೆಡ್ಯುಲ್ಡ್ ಕ್ಯಾಸ್ಟ್ ದುಡ್ಡನ್ನು ಅನ್ಯಾಯವಾಗಿ ಅವನು ತಿನ್ನುತ್ತಿದ್ದಾನೆಂದರೆ, ನೀವು ಅವರ ಜೊತೆಗೆ ಸೇರಿದರೆ, There is no social justice in the social welfare Department ಅದನ್ನು ಸ್ವಲ್ಪ ಸರಿಪಡಿಸಿ. ಇದು ನಿಜ, ಟಿಪ್ಪುಸುಲ್ತಾನ್ ಕಾಲದಲ್ಲಿ ಏನು ಸ್ಕೀಂ ಮಾಡಿದರೊ ಅದನ್ನೆ ಈಗ ಎಸ್‌ಸಿ: ಎಸ್‌ಟಿ ಕಾರ್ಪೊರೇಷನ್‌ನಲ್ಲಿ ಮುಂದುವರೆಸಿಕೊಂಡು ಬರಲಾಗುತ್ತಿದೆ. ಬ್ಯಾಂಕ್ ಲೋನ್ ಕೊಡುತ್ತೇವೆಂದು ನೀವು ಯಮಾರಿಸುತ್ತಿರಿ ಹಸು ಲೋನ್, ಹಸು ಲೋನ್ ಏನ್ರಿ? ಬ್ಯಾಂಕ್‌ಗೆ ಹೋದರೆ ಅದಕ್ಕೆ ಇಂಟ್ರವ್ಯೂ, ಒಂದು ಹಸುವನ್ನು ಸಾಕುವುದಕ್ಕೆ ನಮ್ಮ ಜಿಲ್ಲೆಯಲ್ಲಿ ಟ್ರೈನಿಂಗ್ ಕೊಡುತ್ತಾರೆ, ಹಸು, ಕುರಿ ಸಾಕುವುದಕ್ಕೆ ಪ್ರತಿಯೊಂದು ಜಿಲ್ಲೆಯಲ್ಲಿ ಟ್ರೈನಿಂಗ್ ಕೊಡುತ್ತಿದ್ದಾರೆ. ಇವರಿಗೆಲ್ಲಾ ಟ್ರೈನಿಂಗ್ ಕೊಟ್ಟು, ಪಾಪಾ ಫಲಾನುಭವಿ 7 ದಿವಸಗಳ ಟ್ರೈನಿಂಗ್ ಅಟೆಂಡ್ ಮಾಡಿ ಅವನು ನಮಗೆ ಲೋನ್ ಬೇಕೆಂದು ಬ್ಯಾಂಕ್‌ಗೆ ಹೋಗುತ್ತಾನೆ. ಲೋನ್ ಕೊಟ್ಟಿದ್ದೀರಾ ಬ್ಯಾಂಕ್‌ಗೆ ಕಳುಹಿಸಿದ್ದೇವೆಂದು ಹೇಳುತ್ತೀರಿ. ಬ್ಯಾಂಕ್‌ನವರು ಏನು ಹೇಳುತ್ತಾರೆಂದರೆ, next month, another two months, finally he is not getting any benefit.

ಶ್ರೀ ಎಸ್ ರಾಜೇಂದ್ರನ್: ಅಂತಹ ಸಬ್ಸಿಡಿ ಲೋನ್ ಬ್ಯಾಂಕಿನಲ್ಲಿ ಇದುವರೆಗೂ ಎಷ್ಟು ಅಮೌಂಟಿದೆ? ಆ ಬ್ಯಾಂಕ್‌ನವರು ಏನು ಪ್ರಶ್ನೆ ಮಾಡುತ್ತಾನೆ ಕೇಳಿ, ಒಂದು

ಹಸು ಕೊಡುತ್ತೇವೆ. ಅದನ್ನು ಬೆಳೆಸುವುದಕ್ಕೆ ಜಾಗ ಇದೆಯಾ? ಎಷ್ಟು ಜಾಗ ಅಂದರೆ ಎರಡು ಎಕರೆ ಬೇಕು ಅಂತ ಹೇಳುತ್ತಾನೆ. ಎರಡು ಎಕರೆ ಅವನ ಕಡೆ ಇದ್ದರೆ ಅವನ್ಯಾಕೆ ಹತ್ತು ಸಾವಿರಕ್ಕೆ ಹಸು ಲೋನ್‌ಗೆ ಹೋಗುತ್ತಿದ್ದ? ಅದಕ್ಕೆ ನೀರೆಲ್ಲ ಕೊಡಬೇಕು- ಅದಕ್ಕೆ ಟ್ಯಾಂಕ್ ಮಾಡಿದ್ದೀರಾ? ಕೇವಲ ಪುಟಗೋಸಿ ಹತ್ತು ಸಾವಿರ ಲೋನ್ ಕೊಡುವುದಕ್ಕೆ ಆ ಬ್ಯಾಂಕ್‌ನವರು ಇಷ್ಟೊ ಕೇಳುತ್ತಾನೆ. ಎರಡೆಕರೆ ಜಮೀನಿರಬೇಕು. ನೀರಿಗೆ ಒಂದು ಟ್ಯಾಂಕಿರಬೇಕು ಅದರ ಮೇಲೆ ಒಂದು ಶೂರಿಟಿ ಕೊಟ್ಟರೆ ಹತ್ತು ಸಾವಿರ ಕೊಡುತ್ತಾನೆ. ಇದು ಲೋನಾ? ಇದು ನಿಗಮನಾ? ಇದಕ್ಕೆ ನಾವು ಬರಬೇಕಾ? ಇದಕ್ಕೆ ಅಧಿಕಾರಿಗಳು ಇರಬೇಕು- ತಾವು ಚಿಂತನೆ ಮಾಡಿ. ಹತ್ತು ಲಕ್ಷ ಕೊಟ್ಟಿದ್ದೀರಾ? ರೈತರ ಡಿಮಾಂಡ್ ಏನಿದೆ ಈಗ, ವಜಾ ಮಾಡಿರಿ ಅನ್ನುತ್ತಿದ್ದಾರೆ. ಹಾಗಾದರೆ ಪರಿಶಿಷ್ಟಜಾತಿಯವರಿಗೆ ಏನೇನು ಲೋನ್ ಕೊಟ್ಟಿದ್ದೀರೋ ಅದರ ಬಡ್ಡಿಯೆಲ್ಲಾ ಮನ್ನಾ ಮಾಡಿಸಿ. ಮಾಡುತ್ತೀರಾ? ಮಾಡುವುದಿಲ್ಲ. ಆಟೋ ಸೀಜ್ ಮಾಡಿದ್ದೀರಾ? pick and choose policy, you are using it, ಇವರು ದುಡ್ಡು ಕೊಟ್ಟರೆ ಅವರದನ್ನು ಹಾಗೇ ಇಟ್ಟುಕೊಳ್ಳುತ್ತಾರೆ. ಯಾರು ದುಡ್ಡು ಕೊಟ್ಟಿಲ್ಲ ಅಂದರೆ ಅವನದನ್ನು ಸೀಜ್ ಮಾಡುತ್ತಾರೆ. ಹೇಗೆ ಸಾರ್, ಅವನು ಶೆಡ್ಯೂಲ್ಡ್ ಕ್ಯಾಸ್ಟ್, ಅವನಿಗೆ ಸಾಲ ಕೊಡುವುದೇ 10, 20 ಸಾವಿರ, ಹಸು ಕುರಿ ಇದೇನಾ?

ಶ್ರೀ ಜೆ ಸಿ ಮಾಧುಸ್ವಾಮಿ: ಒಂದು ತಾಲೂಕಿಗೆ 7 ಜನಕ್ಕೆ ಲೋನ್ ಕೊಡಬಹುದು. ಅಂತ ಮಾಡಿಬಿಟ್ಟರೆ ಅಲ್ಲಿ ಯಾರಾದರೂ ಕೆಲಸ ಮಾಡುವುದಕ್ಕೆ ಆಗುತ್ತದೆಯೇ? 70 ಸಾವಿರ ರೂ. ಗ್ರಾಂಟ್ ಇರುವುದು ಇವರದು. ಒಂದು ತಾಲೂಕಿಗೆ ಹತ್ತು ಸಾವಿರದಂತೆ ಎಷ್ಟು ಜನಕ್ಕೆ ಕೊಡಬಹುದು? ಸಮಾಜ ಕಲ್ಯಾಣ ಇಲಾಖೆಯವರೇ 9 ಆದರೂ ಮಾಡಿ ಗ್ರಹಗಳನ್ನಾದರೂ ಒಂದೊಂದು ಗುರ್ತಿಸಿ ಕೊಡುತ್ತೀವಿ.

ಶ್ರೀ ಎಸ್ ರಾಜೇಂದ್ರನ್: Sir, I am bringing to the notice of the Honble Minister very important points. ನಮ್ಮ ಊರಿನಲ್ಲಿ ಬಿಜಿಎಂಎಲ್ ಮುಚ್ಚಿದೆ. ಬೇಕಾದಷ್ಟು ಶೆಡ್ಯೂಲ್ಡ್ ಕ್ಯಾಸ್ಟ್ ಜನ. ಅವರಿಗೆ ಲೋನ್ ಕೊಡಬೇಕು ಅಂತ ಎಸ್‌ಸಿಎಸ್‌ಟಿ ನಿಗಮದಿಂದ ಒಂದು ಸಭೆ ಮಾಡಿದ್ದಾರೆ. ಹೇಳಿರುವುದು ನನ್ನ ಜನಾನೇ, ಸಬ್ಸಿಡಿ ಗ್ರಾಂಟ್ ತರುವುದು ಕೇಂದ್ರ ಸರ್ಕಾರದ್ದು ಎಷ್ಟು ಜನಕ್ಕೆ? 5 ಸಾವಿರ ಜನಕ್ಕೆ. ಈ ಐದು ಸಾವಿರ ನನ್ನವರೇ ಇವರಿಗೆಲ್ಲ ಹಸು ಕೊಡಬೇಕು ಅಂತ ಹೇಳಿ ಲೋನ್ ಕೊಡುವುದು ಒಂದು ಸಾವಿರ ಜನಕ್ಕೆ ಮಾತ್ರ ಮಿಕ್ಕಿದ್ದನ್ನು ಕೋಲಾರ ಜಿಲ್ಲೆಗೆ ಕೊಡಬೇಕು ಅಂತ It is wrong. ಯೋಜನೆ ಮಾಡಿದ್ದರೆ, ನಿಮ್ಮ ಕಾರ್ಪೊರೇಷನ್‌ನಲ್ಲಿ ಸಾವಿರ ಜನಕ್ಕೆ ಕೊಟ್ಟರೆ ಇನ್ನೂ ಮೂರು ಸಾವಿರ ಜನರಿದ್ದಾರೆ ಅವರಿಗೆ ಯಾರು ಕೊಡೋದು? ನೀವೇ Law and order ಮಾಡುವುದು

ಆ ಮೂರು ಸಾವಿರ ಜನ ಸುಮ್ಮನಿರುತ್ತಾರಾ? ನಾವೇನ್ರಿ ಬ್ಲಫ್ ಮಾಡಿದೆವು. Pick and choose Policy ಯಲ್ಲಿ ಮಾಡಿದ್ದೀರಿ ನಾವು ಸುಮ್ಮನೆ ನಾಲ್ಕೈದು ವರ್ಷ ಸಂಬಳ ಇಲ್ಲಾಂತ ಕುಂತುಕೊಂಡಿದ್ದೆವು. ಯಾಕ್ರೀ ಹೀಗೆ ಮಾಡುತ್ತೀರಿ ಅಂದರೆ ಆಗ ಲಾ ಅಂಡ್ ಆರ್ಡರ್, ಆಮೇಲೆ ಪೋಲಿಸರು ಬರುವುದು. ಕೆಜಿಎಫ್ ಜನ ತಪ್ಪು ಮಾಡಿದ್ದಾರೆ ಅವರಿಗೆ ಹೊಡೆಯಬೇಕು. ತಪ್ಪು ಮಾಡುವುದು ನೀವು, ಚಿಂತನೆ ಮಾಡಿಕೊಳ್ಳಿ ನಿಮ್ಮ ಅಧಿಕಾರಿಗಳು should not take advantage. Purchase ಮಾಡುವುದು ಎಲ್ಲಿ? ತಮಿಳುನಾಡಿನಲ್ಲಿ, ಮಾತುಗಳೇನು? ಮಣ್ಣಿನಮಗ, ಈ ರಾಜ್ಯದ ಜನ, ಕನ್ನಡ ಜನ ಇಷ್ಟೆಲ್ಲ ಮಾತನಾಡಿ ಎಲ್ರೀ ಪರ್ಜೇಸ್ ಮಾಡ್ತೀರಿ ಅಂದರೆ ಸೇಲಂಗೆ ಹೋಗುತ್ತೇವೆ ಅನ್ನುತ್ತಾರೆ ಕಾಯಂಬತೂರ್‌ಗೆ ಹೋಗುತ್ತೀನಿ ಅನ್ನುತ್ತಾರೆ. ನಾಚಿಕೆಯಾಗುವುದಿಲ್ಲವಾ? Can't you purchase within the State? ಆ ಹಣ ನಮ್ಮ ರಾಜ್ಯದಲ್ಲಿರುವುದಿಲ್ಲವೇ? ಕೇಳಿ ನಿಮ್ಮ ಅಧಿಕಾರಿಗಳನ್ನು, ಎಲ್ರೀ ಪರ್ಚೇಸ್ ಮಾಡುತ್ತೀರ್ರಿ ಅಂದರೆ ಕೃಷ್ಣಗಿರಿ ಸಾಳರ್ ತಮಿಳುನಾಡು ಅಲ್ಲವ ಅದು? ಆಂಧ್ರ ರಾಜ್ಯ ಹೇಳುತ್ತಾರೆ. ತಮಿಳುನಾಡು ಸ್ಟೇಟ್ ಹೇಳುತ್ತಾರೆ. ಯಾಕ್ ಕರ್ನಾಟಕದಲ್ಲಿ ಹಸುಗಳಿಲ್ವ? ಬರೀ ಹಸುಗಳನ್ನು ಕೊಡುವುದಾ? ಹಸುಗಳನ್ನು ಕೊಟ್ಟ ತಕ್ಷಣ ಇವನು ಕೋಟ್ಯಾಂತರ ರೂ. ಸಂಪಾದನೆ ಮಾಡಿಬಿಡುತ್ತಾನ? ಚಿಂತನೆ ಮಾಡಿ ನೋಡಿ. ಆಟೊ ಕೇಳಿದರೆ ಏನು ಮಾಡುತ್ತೀರಿ? ಅಲ್ಲಿ ಬೇಕಾದಷ್ಟು ಆಟೋ ಇವೆ. ಇಲ್ಲಿಲ್ಲ, ಹಾಗಾದರೆ ಇಲಾಖೆಯನ್ನು ಮುಚ್ಚಿಬಿಡಿ. ಕಾರ್ ಕೇಳಿ ಅದು ವಯಬಲ್ ಇಲ್ಲ, ಏನು ವಯಬಲೆ Where is your Transparency Act in that? ಇಲ್ಲವೇ? Irrigation Department, biggest department, ಆ ಇಲಾಖೆಯಲ್ಲಿ ಹತ್ತು ವರ್ಷ ತಗೊಳಿ ಸ್ವಾಮಿ, 18 ಪರ್ಸೆಂಟ್‌ನ್ನು ಜನಕ್ಕೇನು ಬೆನಿಫಿಟಾಗಿದೆ. ಇಲ್ಲ, ಇವನಿಟ್ಟು ಕೊಂಡಿರುವುದು ಕ್ವಾಟ್ರ್ ಎಕರೆ ಅರ್ಧ ಎಕರೆ ಒಂದು ಎಕರೆ No benefit. You must take more from the Government. Social welfare Department should utilise it for Schdduled castes. ಇಲ್ಲ ನೀವು ಫಂಡೂ ತಗೊಳೋದಿಲ್ಲ ಬಜೆಟ್ಟನ್ನೂ ದೊಡ್ಡದು ಹಾಕಿಕೊಳ್ಳೋದಿಲ್ಲ ಇರೋದು ಹಂಗೇ ಇದ್ದುಕೊಂಡು ಹೋಗಬೇಕ? Growth of population is going on. 22%ಗೆ ಬಂದಿದೆ. ಏನು ಅಭಿವೃದ್ಧಿ ಮಾಡಿಕೊಂಡಿದ್ದೀರಿ. 18 ಪರ್ಸೆಂಟ್ ಈಗ 22 ಪರ್ಸೆಂಟಾಗಿದೆ. ಪ್ರತಿಯೊಂದು ಇಲಾಖೆಯಲ್ಲಿ ಅದನ್ನು ಫಿಲ್ ಮಾಡಿಕೊಂಡು ಬರಬೇಕು. ಇಂಥ ಇಲಾಖೆಯಲ್ಲಿ ಇಷ್ಟಿಷ್ಟು ಜನ ಇರಬೇಕು ಅಂತ. ಸರ್ಕಾರದಲ್ಲೇನೋ ಎಲ್ಲ ಇಲಾಖೆಗಳಿವೆ. ಪಿಡಬ್ಲ್ಯೂಡಿ, ಎಲೆಕ್ಟ್ರಿಸಿಟಿ, ಕೆಯುಡಬ್ಲ್ಯೂಎಸ್ So many departments. ಎಲ್ಲ 22 ಪರ್ಸೆಂಟ್ ಅದಕ್ಕೆ ಕಾನೂನಿನಲ್ಲಿದೆ ಮಾಡಬೇಕು ಅಂತ ಮುಜರಾಯಿ ಇಲಾಖೆ

ಬಂದಿದೆ ಅದರಲ್ಲಿ ಯಾರನ್ನು ನೇಮಕ ಮಾಡಬೇಕು? ಪೂಜಾರಿಗಳನ್ನು ನೇಮಕ ಮಾಡಿಕೊಳ್ಳಬೇಕು. 22 ಪರ್ಸೆಂಟ್ ಪೂಜಾರಿಗಳನ್ನು ನೇಮಕಾತಿ ಮಾಡಿಕೊಂಡಿದ್ದೀರ? ಯಾವ್ಯಾವ ಟೆಂಪಲ್‌ನಲ್ಲಿದ್ದಾರೆ ಅಂತ ಹೇಳ್ತೀರ? ಏನೇನು ವ್ಯವಸ್ಥೆಗಳನ್ನು ಅವರಿಗೆ ಮಾಡಿದ್ದೀರ ಅಂತ ಹೇಳ್ತೀರ? ಯಾತಕ್ ಮಾಡಿಲ್ಲ ಆ ಇಲಾಖೆಯಲ್ಲಿ? ಇವರು ಮಾತನಾಡುವುದು ಏನೆಂದರೆ casteless, colourless, creedless, ಎಲ್ಲಿದೆ ಲೆಸ್? ಎಲ್ಲ ಲೆಸ್ ಮಾಡಿಬಿಟ್ಟರು ನಮ್ಮನ್ನು ಅಲ್ಲ ಪ್ರತಿಯೊಂದರಲ್ಲೂ ಲೆಸ್ ಮಾಡಿದ್ದಾರೆ. Social welfare Minister ಅಂದರೆ ಬಹಳ ಗೌರವ ಇಟ್ಟುಕೊಂಡು ಕೆಲಸ ಮಾಡಬೇಕು. ಚಿಂತನೆ ಮಾಡಬೇಕು, You have so many departments. ಎಲ್ಲಿ ಬರುತ್ತಾ ಇದೆ. ಕೆಲವು backward classes ನಲ್ಲಿ top richest people are there. Scheduled Castes ನಲ್ಲಿ ಹಾಗಿಲ್ಲ ಜಾಸ್ತಿ poorest people ಏನು ಅಭಿವೃದ್ಧಿ ಮಾಡಿಕೊಟ್ಟಿದ್ದೀರಿ? ಕೊಟ್ಟಿಲ್ಲ ಅದ್ದರಿಂದ the Social welfare Minister, you must take very serious ಸಾವಿರ ಹಸು ಕೊಟ್ಟು ಲೂಟಿ ಮಾಡುವುದನ್ನು ಕ್ರಮ ತಗೊಳಬೇಕು. action in this ಆ ಬೆನಿಫಿಶರೀಸನ್ನು ಯಾರು ಸೆಲೆಕ್ಟ್ ಮಾಡಿದ್ದು? ಹೇಗೆ ಸೆಲೆಕ್ಟ್ ಮಾಡುತ್ತೀರಿ? Which we you are going to give benefit to the real beneficiares? ಬರೀ 5, 6, 8 ಸಾವಿರ ಪರ್ಚೇಸ್ ಮಾಡುವುದು ಲೂಟಿ ಮಾಡುವುದು ಸಾವಿರ ಜನಕ್ಕೆ ನಾವು ಹಸುಗಳನ್ನು ಕೊಟ್ಟಿದ್ದೇವೆ ಅಂದರೆ ಅದೆಲ್ಲಿ ಮೇಯಿಸುತ್ತೀರಿ? Where is grass? It is a dry area. People are starving for water. ಕುಡಿಯುವನೀರಿಗಾಗಿ ಸಾಯ್ತಾ ಇದ್ದಾರಲ್ಲಿ. ನೀವು ಹಸುಗಳನ್ನು ಕೊಟ್ಟರೆ ಅವನ್ನೇನು ಮಾಡುವುದು? You must make such a plan. ಬರೀ ಒಂದು ಸಾವಿರ ಹಸುಗಳನ್ನು ಕೊಟ್ಟಿದ್ದೆವು ಶೆಡ್ಯೂಲ್ಡ್ ಕ್ಯಾಸ್ಟನ್ನೆಲ್ಲ ನಾವು ಲಿಸ್ಟ್ ಮಾಡುತ್ತೇವೆ ಅಂದರೆ that is important. ಹಸುಗಳು ಕೊಟ್ಟರೆ You must find out what is the background, how people will develop, what is the area, running river, benefits ಇದೆಲ್ಲ ಪೂರ್ತಿ ಚಿಂತನೆ ಮಾಡಿ ನೀವು ಇಲಾಖೆಗೆ ಹೇಳಿ. ಜೊತೆಗೆ ಸಿಆರ್‌ಇ ಸೆಲ್, ತಾವು ಹೇಳಬೇಕು, ಲಕ್ಷಾಂತರ ರೂ. ಸಂಬಳ ಅವರಿಗೆ 50 lakhs you are spending per month. ಎಷ್ಟು ಜನರ ಮೇಲೆ ಅವರು atrocity case book ಮಾಡಿದ್ದಾರೆ ಎಷ್ಟು ಜನರಿಗೆ ಶಿಕ್ಷೆ ಕೊಡಿಸಿದ್ದಾರೆ ಎಷ್ಟು ಜನರನ್ನು ಜೈಲಿಗೆ ಕಳಿಸಿದ್ದಾರೆ ಎಷ್ಟು ಜನ ಬೋಗಸ್ ಸರ್ಟಿಫಿಕೇಟ್ ಇಟ್ಟುಕೊಂಡು ಬಂದಿರೋರನ್ನು ಡಿಸ್ಮಿಸ್ ಮಾಡಿದ್ದಾರೆ ಅನ್ನುವುದನ್ನು ತಾವು ಹೇಳಬೇಕು. ಬೋಗಸ್ ಸರ್ಟಿಫಿಕೇಟ್ ಎಷ್ಟು ಅಧಿಕಾರಿಗಳನ್ನು ಸಿಆರ್‌ಇ ಸೆಲ್‌ನವರು ಅವರನ್ನಿಟ್ಟುಕೊಂಡು ವಿಚಾರಣೆ ಮಾಡಿ ವರದಿ ಮಾಡಿದ್ದಾರೆ ಅವರನ್ನೆಲ್ಲ

ನೀವು ಡಿಸ್ಮಿಸ್ ಮಾಡಿದಿರಿ? ಎಷ್ಟು ಜನ ಮಾಡಿದ್ದೀರಿ? ಅದು ಖಂಡಿತವಾಗಿ ತಾವು ಹೇಳಲೇಬೇಕು. ಈಗ ಅಂಬೇಡ್ಕರ್ ಆಶ್ರಯ ಯೋಜನೆ ಅಂತ ಇದೆ ತಾವು ಹೇಳಿದಿರಿ ಬಾಬಾಸಾಹೇಬ್ ಅಂಬೇಡ್ಕರ್ ಮೇಲೆ ಅಪಾರ ಪ್ರೀತಿ ಇಟ್ಟುಕೊಂಡು ಸೆಂಟಿನರಿಯಲ್ಲಿ ಒಂದು ಲಕ್ಷ ಶೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಮನೆ ಕಟ್ಟಿಕೊಡುತ್ತೇವೆ ಅಂತ. ಈಗ 7 ವರ್ಷವಾಗಿದೆ. ಎಷ್ಟು ಮನೆಗಳನ್ನು ಕಂಪ್ಲೀಟ್ ಮಾಡಿದ್ದೀರಿ? ಒಂದು ಲಕ್ಷದಲ್ಲಿ ಪಾಯದ ಹಂತದಲ್ಲಿ ಎಷ್ಟಿವೆ ಪಾಯ ಹಾಕಿ ಎಷ್ಟು ಜನ ಸತ್ತು ಹೋಗಿಬಿಟ್ಟಿದ್ದಾರೋ ಅಂತ ಗೊತ್ತಿಲ್ಲ ಲಿಂಟಲ್‌ವರೆಗೆ ಎಷ್ಟಿದೆ? ಮೌಲ್ಡ್‌ವರೆಗೆ ಎಷ್ಟು ಹಾಕಿದ್ದೀರಿ? ಎಷ್ಟು ಮನೆಗಳಿವೆ. How many beneficiaries you have listed? ಒಂದು ಲಕ್ಷ ಮನೆಗಳನ್ನು ಇಡೀ ರಾಜ್ಯದಲ್ಲಿ ಒಂದು ತಿಂಗಳಲ್ಲಿ ಕಂಪ್ಲೀಟ್ ಮಾಡಬಹುದು. ಸ್ಲಂ ಬೋರ್ಡಿನಲ್ಲಿ ನೋಡಿ, ಹೌಸಿಂಗ್ ಬೋರ್ಡಿನಲ್ಲಿ ನೋಡಿ. ಒಂದು ಲಕ್ಷವನ್ನು ಒಂದು ವಾರದಲ್ಲೇ ಕಟ್ಟಿಬಿಡುತ್ತಾರೆ. ಲೂಟಿ ಮಾಡುತ್ತೀರಿ. we are not the authority. we can only bring it to your notice. ಆಗಿದೆಯೋ ಇಲ್ಲವೋ ನಾವು ಹೇಳುವುದಕ್ಕೆ ಆಗುವುದಿಲ್ಲ ಆಗಿದೆ ಸ್ವಾಮಿ ಅಂತ ತಂದರೂ ನೀವು ಕ್ರಮ ತಗೊಳ್ಳೊಲ್ಲ ನಾವು ಅಂದಾಜು ಮೇಲೆ ಹೇಳಿದರೆ ನೀವು ಕ್ರಮ ತಗೊಳ್ಳೋಕೆ ಸಾಧ್ಯವೇ ಇಲ್ಲ. ಅಂಬೇಡ್ಕರ್ ಯೋಜನೆಯಲ್ಲಿ ನಿಜವಾಗೂ ಶೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಮನೆ ಕೊಡಬೇಕು. ಕೊಟ್ಟಿದ್ದೀರ? ಕೆಲವು ಕಡೆ ಅಂಬೇಡ್ಕರ್ ಮನೆಯನ್ನು ರೆಂಟಿಗೆ ಬಿಟ್ಟಿದ್ದಾರೆ. ಅದು ಡಿಸಿ ನೋಟಿಸಿಗೆ ಬಂದರೂ ಸರಿ ಅವರ ಅಧಿಕಾರಿಗಳ ನೋಟಿಸಿಗೆ ಬಂದರೂ, ಸರಿ ಸರಿಪಡಿಸುತ್ತೇವೆ ಅಂತ ಹೇಳಿ ಹತ್ತು ವರ್ಷವಾಯಿತು. ಅಂಬೇಡ್ಕರ್ ಮನೇನೆ ರೆಂಟಿಗೆ ಬಿಟ್ಟಿದ್ದಾರೆ ಯಾರು ರೆಂಟಿಗಿರುವುದು, ಶೆಡ್ಯೂಲ್ಡ್ ಕ್ಯಾಸ್ಟ್ ಜನ. ಹಾಗಾದರೆ ಅಲಾಟಾಗಿರುವುದು ಯಾರಿಗೆ? Not for a schduled caste, but to somebody else. You must take him to task. ಅದಕ್ಕೇ ನಿಮ್ಮ ಸಿಆರ್‌ಇ ಸೆಲ್ ಎಲ್ಲ ಇರುವುದು, ಪ್ರಯೋಜನ ಏನಿದೆ? ದೊಡ್ಡ ದೊಡ್ಡ ಪೋಸ್ಟ್‌ಗಳಿಗೆ ಬೋಗಸ್ ಸರ್ಟಿಫಿಕೇಟ್ ಕೊಟ್ಟಿರುವುದನ್ನು ಸಿಆರ್‌ಇ ಸೆಲ್‌ನವರು ಎನ್‌ಕ್ವೈರಿಯನ್ನು ಮಾಡಿದ್ದಾರಾ? Don't wait for them, throw them out. But you have not done it. why you are waiting for them? ನನ್ನ ಹಕ್ಕನ್ನು ಬೇರೆಯವರು ಉಪಯೋಗ ಮಾಡುತ್ತಿದ್ದಾರೆಂದು ನಿಮ್ಮ ನೋಟಿಸ್‌ಗೆ ಬಂದರೂ ಕೂಡ you have not taken any action against them. are you favouring others? ನಮಗೆ 50 ಪರ್‌ಸೆಂಟನ್ನು ಕೊಟ್ಟಿಲ್ಲವೇ? 60 ಪರ್‌ಸೆಂಟ್ ಕೊಡುವುದಿಲ್ಲವೇ? .Coaching classes for IPS-IAS posts. ಅದರ ಪಟ್ಟಿಯನ್ನು ಮಾಡಿ ಕೊಡಬೇಕು. ಎಷ್ಟು ಜನರಿಗೆ ಕಲಿಸಿದ್ದೀರಿ?

ಎಷ್ಟು ಜನರು ಐಪಿಎಸ್ ಆಗಿದ್ದಾರೆ? ಎಷ್ಟು ಜನರು ಐಎಎಸ್ ಆಗಿದ್ದಾರೆ? ಎಷ್ಟು ಜನ ಕೆಎಎಸ್ ಆಫೀಸರ್ಸ್ ಆಗಿದ್ದಾರೆ? ಇವೆಲ್ಲಾ ನೋಡಬೇಕು. ಅದು ಯಾರಿಗೂ ಗೊತ್ತಾಗುವುದಿಲ್ಲ. ಏನು ನಡೆಯುತ್ತಿದೆ ಎನ್ನುವುದು ಗೊತ್ತಾಗುವುದಿಲ್ಲ. ಪಟ್ಟಿಯಲ್ಲಿ ಖರ್ಚು ಮಾತ್ರ ಇದೆ. ಇಷ್ಟು ಖರ್ಚು ಮಾಡಿದ್ದೀರಿ ಎಂದು ನಮ್ಮ ಕಮ್ಯುನಿಟಿಗೆ ಎಷ್ಟು ಕೊಟ್ಟಿದ್ದೇವೆ?

ಹೌಸಿಂಗ್ ಸೊಸೈಟಿಗಳು ಇವೆ. ಹೌಸಿಂಗ್ ಸೊಸೈಟಿಯಲ್ಲಿ ಹತ್ತು ಸೊಸೈಟಿಯಲ್ಲೂ ಒಬ್ಬರೇ ಮೆಂಬರ್. ಇಲ್ಲಿ ಒಂದು ಮೆಂಬರ್, ಅಲ್ಲಿ ಒಂದು ಮೆಂಬರ್. ಹಾಗಾದರೆ ಅವರಿಗೆ ಹತ್ತು ಮನೆಗಳನ್ನು ಕೊಡಬೇಕಾ? ಅವನಿಗೆ ಹತ್ತು ಜಾಗದಲ್ಲಿ ಬೆನಿಫಿಟ್‌ನ್ನು ಕೊಡಬೇಕಾ? That you should find out. ಆ ಸೊಸೈಟಿಯಲ್ಲಿ ಇದ್ದುಕೊಂಡು ಏನು ಲೂಟಿ ಮಾಡುತ್ತಿದ್ದಾರೋ ಅಲ್ಲೆಲ್ಲಾ ಏನು ಪಾರದರ್ಶಕತೆಯೇನೂ ಇರುವುದಿಲ್ಲ. 20 ಸೊಸೈಟಿ ಇದ್ದರೆ ಇಪ್ಪತ್ತು ಸೊಸೈಟಿಗೂ ಒಬ್ಬರೇ ಮೆಂಬರ್. Duplication should be curtailed. you are not doing it. ಕೊನೆಗೆ ನಾನು ಇಂಡಸ್ಟ್ರಿ ಬಗ್ಗೆ ನಾನು ಏನು ಹೇಳುವುದಕ್ಕಾಗುವುದಿಲ್ಲ. ಹೇಳಬಾರದು ಎಂದರೆ ಮಾತನಾಡುವುದೇ ಇಲ್ಲ. ಸತ್ಯಾಂಶ ಮಾತುಗಳನ್ನೇ ಇಂಡಸ್ಟ್ರಿ ಮಿನಿಸ್ಟರ್ ಹೇಳಿದರು. I can only plead: I cannot fight. ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಐರನ್ ಸ್ಟೀಲ್ ಇಂಡಸ್ಟ್ರಿ, ಸ್ಮಾಲ್ ಇಂಡಸ್ಟ್ರೀಸ್‌ಗಳನ್ನು ಕೊಡುತ್ತೇವೆಂದು ಹೇಳಿದಿರಿ. ತಮ್ಮ ಅಧಿಕಾರಿಗಳ ಹತ್ತಿರ ನಾನು ಮಾತನಾಡಿದ್ದೇನೆ. ತಾವೇನು ಹೇಳುತ್ತೀರಿ ಎಂದರೆ ಅಲ್ಲಿ ಜಮೀನು ಸಿಕ್ಕುವುದಿಲ್ಲ ಎಂದು ಹೇಳುತ್ತೀರಿ. ಕೇಂದ್ರ ಸರ್ಕಾರ ಜಮೀನ್ನು ಕೊಟ್ಟಿಲ್ಲ. ನನ್ನ ಕ್ಷೇತ್ರ ಬಿಟ್ಟು ಬೇರೆ ಜಾಗದಲ್ಲಿ ಎಲ್ಲಾ ಇಂಡಸ್ಟ್ರಿ ಬರುತ್ತದೆ ಎಂದು ಪೇಪರನ್ನು ನೋಡಿದ ತಕ್ಷಣ ನಾನು ಜನರಿಗೆ ಎಕ್ಸ್‌ಪ್ಲೈನ್ ಮಾಡುವುದಕ್ಕಾಗುತ್ತದೆಯೇ ನಮಗೆ ಕೇಂದ್ರ ಸರ್ಕಾರ ಜಮೀನನ್ನು ಕೊಟ್ಟಿಲ್ಲವೆಂದರೆ ಅವರ ಕಡೆಗೆಲ್ಲಾ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಏನು ಸುಳ್ಳು ಹೇಳುತ್ತೀರಿ ಎಂದು ನನ್ನನ್ನು ಕೇಳುತ್ತಾರೆ. You are purchasing ಅಲ್ಲಿ ಸಾವಿರ ಕೋಟಿಯಾದರೂ ಒಂದು ಲಕ್ಷ ಕೋಟಿಯಾದರೂ ಪರ್ಚೇಸ್ ಮಾಡಿ ಇಂಡಸ್ಟ್ರಿ ಆಗುತ್ತದೆ. ಕೇಂದ್ರ ಸರ್ಕಾರ ಮಾಡಿಲ್ಲವೆಂದರೆ as a legislator what can I do. I can only go for Dharna. Protests, Bundh. ಇನ್‌ಫ್ರಾಸ್ಟ್ರಕ್ಚರನ್ನು ಎಲ್ಲಿ ಮಾಡಬೇಕೆಂದರೆ ನಿಜವಾಗಿ ಎಲ್ಲೆಲ್ಲಿ ಇನ್‌ಫ್ರಾಸ್ಟ್ರಕ್ಚರ್ಸ್ ಇಲ್ಲವೋ ಅಲ್ಲಲ್ಲಿ ಮಾಡಿ ಡೆವಲಪ್ ಮಾಡಬೇಕು. That is economic growth. Whatever, micro or macro industries ಎಕನಾಮಿಕ್ ಪಾಲಿಸಿಯಲ್ಲಿ ಎಲ್ಲೆಲ್ಲಿ ಗ್ರೋಥ್ ಇಲ್ಲವೋ ಅಲ್ಲಲ್ಲಿ ಗ್ರೋಥ್ ಸೆಂಟರನ್ನು ಮಾಡಬೇಕು. ಎಲ್ಲೆಲ್ಲಿ ಗ್ರೋಥ್ ಆಗಿ ಅದು ಕಡಿಮೆಯಾಗಿ ಬರುತ್ತದೆ. the city is destroyed. That should be

uplifted ಮಾಡಿದ್ದೀರಾ? ನಾನು ಇದನ್ನು ಸುಮಾರು ಮೊದಲ ಬಾರಿಗೆ ಎಂಎಲ್‌ಎ ಆದಾಗಿನಿಂದಲೂ ಕೇಳುತ್ತಿದ್ದೇನೆ. ನಮಗೆ ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಅಧಿಕಾರಿಗಳೇನು ಕೊಟ್ಟಿದ್ದಾರೋ ನಮ್ಮ ಮಂತ್ರಿಗಳಿಗೆ ಗೊತ್ತಿಲ್ಲ. ಅದರ ಬಗ್ಗೆ ನಾನು ಒಂದು ಪ್ರಶ್ನೆಯನ್ನೂ ಕೂಡ ಕೇಳಿದ್ದೆ. ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ನೀವು ಎಷ್ಟು ಜನರಿಗೆ ಎಸ್‌ಸಿಗಳಿಗೆ ಸೈಟನ್ನು ಕೊಟ್ಟಿದ್ದೀರಿ? 94 ಜಾಗದಲ್ಲಿ ಸುಮಾರು 9867 ಸೈಟುಗಳನ್ನು ಮಾಡಿದ್ದಾರೆ. without measurement. There is no measurement 94 ಜಾಗದಲ್ಲಿ ಅದರಲ್ಲಿ ಎಸ್‌ಸಿಗಳಿಗೆ ಕೊಟ್ಟಿರುವುದು ಎಷ್ಟೆಂದರೆ 196. Not even 2%. ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಷಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಕೊಟ್ಟಿರುವ ಜಾಗ ಎಷ್ಟೆಂದರೆ not even 2% ಆದರೆ ಸೈಟುಗಳನ್ನು ಮಾಡಿರುವುದು ಎಷ್ಟು 9867 ಕೊಟ್ಟಿರುವುದೆಷ್ಟು 196. ಇದೇ ಷೆಡ್ಯೂಲ್ಡ್ ಕ್ಯಾಸ್ಟ್ ಜನರ ಪರಿಸ್ಥಿತಿ. ಆದರೆ ನಮ್ಮ ಮಾತುಗಳೇನು? Our Government is a supporter of SC/St. Our Government is always like this. ಇದರ ಮೇಲೆ ನಾನು ನಮ್ಮ ಇನ್‌ಚಾರ್ಜ್ ಮಿನಿಸ್ಟರ್‌ಗೆ ಹೇಳಿದ್ದೇನೆ. ನಮ್ಮ ಇಂಡಸ್ಟ್ರಿ ಮಿನಿಸ್ಟರ್‌ಗೂ ನಾನು ಹೇಳಿದ್ದೇನೆ. ಮುಖ್ಯಮಂತ್ರಿಗೂ ನಾವು ಹೇಳಿದ್ದೇವೆ. ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಬ್ಬರು ಮೇಸ್ಟ್ರು ಇದ್ದಾರೆ. ಆ ಮೇಸ್ಟ್ರು ಸ್ಟೂಡೆಂಟ್‌ಗೆ ಪಾಠವನ್ನು ಹೇಳಿಕೊಟ್ಟು ಎಲೆಕ್ಟ್ರಿಸಿಟಿ ಎಂದು ಹೇಳಿಕೊಟ್ಟಿದ್ದಾರೆ. ಅದನ್ನೇ ಮತ್ತೆ ಆ ಸ್ಟೂಡೆಂಟ್ ಹೇಳಬೇಕು. ಅವನೇನು ಹೇಳುತ್ತಾನೆ ಎಂದರೆ ಎಲೆಕ್ಟ್ರಿಕಿಟಿ ಎಂದು ಹೇಳುತ್ತಿದ್ದಾನೆ. ಎಲೆಕ್ಟ್ರಿಸಿಟಿ ಎಂದು ಸ್ಟೂಡೆಂಟ್ ಬಾಯಲ್ಲಿ ಬಂದೇ ಇಲ್ಲ. ಎಲೆಕ್ಟ್ರಿಸಿಟಿ ಎಂದು ಹೇಳುತ್ತಿದ್ದಾನೆ. ಕೊನೆಗೆ ಆ ಮಾಸ್ತರಿಗೆ ಕೋಪ ಬಂದು ನಿಮ್ಮ ತಂದೆಯನ್ನು ಕರೆದುಕೊಂಡು ಬಾ ಎಂದು ಹೇಳಿದರು. ತಂದೆ ಬಂದಿದ್ದಾರೆ. ಏನಪ್ಪ, ನಿನ್ನ ಮಗ ಎಷ್ಟು ಹೇಳಿದರೂ ಎಲೆಕ್ಟ್ರಿಸಿಟಿ ಎಂದು ಹೇಳುತ್ತಿದ್ದಾನೆ. ಅವನು ಫೇಲಾದರೆ ನಾನು ಅದಕ್ಕೆ ಸಂಬಂಧ ಇಲ್ಲ ಸ್ವಲ್ಪ ಹೇಳಿ ಕೊಡಿಯಪ್ಪಾ ಏಕೆ ಹಾಗೆ ಹೇಳುತ್ತಿದ್ದಾನೆ? ಎಂದರೆ ಅವನು ಆಯಿತು ಸಾರ್, ತಪ್ಪಾಗಿದೆ, ಅವನ ಕೆಪಾಕಿಟಿ ಅಷ್ಟೇನೆ ಎಂದು ಹೇಳಿದ್ದಾನೆ. ಕೆಪಾಸಿಟಿ ಮಾಸ್ತರಿಗೆ ಬೇಜಾರಾಯಿತು. ಏನಪ್ಪ ನಿನ್ನ ಮಗನೇ ಬೆಟರ್. ಅವನು ಎಲೆಕ್ಟ್ರಿಸಿಟಿ ಎಂದರೆ ನೀವು ಕೆಪಾಕಿಟಿ ಎನ್ನುತ್ತೀಯ ಎಂದು ಬೇಜಾರಾಗಿ ಈ ಫೌಂಡರ್ ಎಲ್ಲಾ ಇದ್ದರು. ನಿಮ್ಮ ತಾತ ಅವರು ನಮ್ಮ ಮೇಲೆ ತಪ್ಪು ತಿಳಿದುಕೊಳ್ಳಬಾರದು. ಅವರನ್ನು ನಾಳೆ ಸ್ವಲ್ಪ ಕರೆದುಕೊಂಡು ಬನ್ನಿ ಎಂದು ಹೇಳಿದಾಗ ಅವರ ತಾತನನ್ನು ಕರೆದುಕೊಂಡು ಬಂದಿದ್ದರು. ಅವರು ಎಲ್ಲಾ ಕೇಳಿಬಿಟ್ಟು ಮಾಸ್ತರೇ ತಪ್ಪಾಗಿದೆ, ನನ್ನ ಗ್ರಾಂಡ್ ಸನ್ ಕೂಡ ತಪ್ಪು ಮಾಡಿದ್ದಾನೆ.

ನನ್ನ ಮಗನೂ ತಪ್ಪು ಮಾಡಿದ್ದಾನೆ. ತಗೋ ಈ ನೂರು ರೂಪಾಯಿಯನ್ನು ಇಟ್ಟುಕೊಂಡು ಯಾರಿಗೂ ಪಬ್ಲಿಸಿಟಿ ಮಾಡಬಾರದು ಎಂದಿದ್ದಾರೆ. ಪಬ್ಲಿಕಿಟಿ ಹೇಗಿದೆ? ಆ ತರಹ ನಮ್ಮ ಇನ್‌ಛಾರ್ಜ್ ಮಿನಿಸ್ಟರ್ ಹೇಳಿದರು. ಇಂಡಸ್ಟ್ರಿ ಮಿನಿಸ್ಟರ್ ನೋಟೀಸ್‌ಗೂ ತೆಗೆದುಕೊಂಡು ಬಂದಿದ್ದೆವು. ಸಿಎಂ ನೋಟೀಸ್‌ಗೂ ತೆಗೆದುಕೊಂಡು ಬಂದಿದ್ದೇವೆ ಸ್ವಾಮಿ. ಕಿಟೀನ್ ಇಲ್ಲ. My position is that. ಕೆಜಿಎಫ್, ಭಾರತ್ ಗೋಲ್ಡ್ ಮೈನ್ಸ್ ಅದು ಮುಖ್ಯವಲ್ಲ. ಕೇಂದ್ರ ಸರ್ಕಾರಕ್ಕೂ ನಾವು ಹೇಳಿದ್ದೇವೆ. Industry is must and should. ಅದಕ್ಕೇನಾದರೂ ಕ್ರಮ ತೆಗೆದುಕೊಳ್ಳಲೇಬೇಕು. Simply they are saying that. ಅಲ್ಲಿ ಜಾಗ ಸಿಗಲಿಲ್ಲವೆಂದರೆ ನಾವೇನು ಮಾಡುವುದಕ್ಕಾಗುತ್ತದೆ? ಅದಕ್ಕೆ ಮಂತ್ರಿಗಳು ಏನಾದರೂ ಕ್ರಮವನ್ನು ತೆಗೆದುಕೊಳ್ಳಲೇಬೇಕು. You must definitely know what assurance he has given on the floor of the house. ನಾವು ಅಲ್ಲಿ ಇಂಡಸ್ಟ್ರಿ ಹಾಕಿಯೇ ಹಾಕುತ್ತೇವೆ. ತೋಟಗಾರಿಕಾ ಮಂತ್ರಿಗಳೂ ಹೇಳಿದರು. ಏನು ಹೇಳಿದ್ದೀರಿ 2000 ಎಕರೆ ಜಮೀನನ್ನು ತೆಗೆದುಕೊಳ್ಳುತ್ತೇವೆ, ಎರಡು ಸಾವಿರ ಎಕರೆ ಜಮೀನಿನಲ್ಲಿ ಸಾವಿರ–ಎರಡು ಸಾವಿರ ಜನರಿಗೆ ನಾವು ಕೆಲಸವನ್ನು ಕೊಡುತ್ತೇವೆ. ಯಾವಾಗ ಕೊಡುವುದು? False assurance on the floor of the House, no use.

ಛೇರ್ಮನ್: ರಾಜೇಂದ್ರನ್ ಅವರೇ, ಅರ್ಧ ಗಂಟೆ ಆಯಿತು.

ಶ್ರೀ ಎಸ್. ರಾಜೇಂದ್ರನ್: ಆಮೇಲೆ ಸಾರಿಗೆ ಸಚಿವರ ಬಗ್ಗೆ ಬರುತ್ತೇನೆ. ಗೋಲ್ಡನ್ ಸಫಾರಿ ಕೊಡುತ್ತೇವೆಂದು ಹೇಳಿದ್ದಾರೋ? ತಾವು ಖಂಡಿತಾ ಕೊಡಲೇಬೇಕು. ಅಟ್‌ಲೀಸ್ಟ್ any one of the Ministers should come forward to help this Reserved constituency ಪಾಪ, ನಾವು ಬಡವರನ್ನೆಲ್ಲಾ ಕೇಳಲಿಲ್ಲ. Once upon a time ಅವತ್ತು ನಾವು ನಿಮ್ಮ ಸರ್ಕಾರವನ್ನು ಡಿಫೆಂಡ್ ಮಾಡಿಲ್ಲ. entire ಕೇಂದ್ರ ಸರ್ಕಾರ has taken care ಹೀಗೆ ಯಾವ ರೂಪದಲ್ಲಾದರೂ utilise ತಾವು ತಮ್ಮ ಸಮಾಜಕಲ್ಯಾಣ ಇಲಾಖೆಯ ಆಯುಕ್ತರಿಗೆ ಹೇಳಬಹುದು. ನಾಲ್ಕೈದು ಕೋಟಿ ರೂ.ನಲ್ಲಿ ಏನಾದರೂ ಮಾಡಬೇಕಾದರೆ ಕೋಟಿಗಳನ್ನು ಲೂಟಿ ಮಾಡುವುದಕ್ಕೆ ಮಾತ್ರ ನಿಮ್ಮ ಇಲಾಖೆ ಇರುವುದು?

ಮೂರು–ನಾಲ್ಕು ಕೋಟಿ ರೂ.ಗಳ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲವೇ? either from the Social welfare department Social Welfare Commissioner ಒಬ್ಬರು ಪ್ರೈವೇಟ್ ಇಂಟೆಲಿಜೆನ್ಸನ್ನು ಅಪಾಯಿಂಟ್ ಮಾಡಿ. ಯಾರ್‍ಯಾರು ಎಷ್ಟೆಷ್ಟು ಲೂಟಿ ಮಾಡಿದ್ದಾರೆಂದು ಸಭೆಗೆ ತೆಗೆದುಕೊಂಡು ಬರಲಿ. ನನ್ನ ಊರಿಗೆ ಮಾತ್ರ ಹತ್ತು ಕೋಟಿ, 50 ಕೋಟಿ, 100 ಕೋಟಿ ರೂ. ಗಳ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ನಿಮ್ಮ ಸರ್ಕಾರಕ್ಕೆ, ನಿಜವಾಗಿಯೂ ಹೇಳುತ್ತೇನೆ.

ಕೋಟ್ಯಾಂತರ ರೂಪಾಯಿಗಳನ್ನು ತಿಂದು ಬಿಟ್ಟು ಈಗ ಮಹಾರಾಜರ ತರಹ ಕುಳಿತುಕೊಂಡಿದ್ದಾರೆ. ಒಂದು ಪ್ರೈವೇಟ್ ಇಂಟೆಲಿಜೆನ್ಸನ್ನು ಮಾಡಿ. ಸಿಬಿಐ ತರಹ ವರದಿಯನ್ನು ತೆಗೆದುಕೊಂಡು ಬರಲಿ ಅವರ ಭವಿಷ್ಯ ಏನೆಂದು ಗೊತ್ತಾಗುತ್ತದೆ. ಇದನ್ನೆಲ್ಲಾ ಯಾರು ಮಾಡಬೇಕೆಂದರೆ ಸರ್ಕಾರದವರು ಮಾಡಬೇಕು. The Minister should come forward. ಅಷ್ಟು ನೋವಾಗಿದೆ. ಊಟದ ವ್ಯವಸ್ಥೆ ಇಲ್ಲ. ದಿನವೂ ಹತ್ತು ಸಾವಿರ ಜನರು ಬೆಂಗಳೂರಿಗೆ ಟ್ರಾವಲ್ ಮಾಡುತ್ತಿದ್ದಾರೆ. ಟ್ರೈನ್ ಫೆಸಿಲಿಟೀಸ್ ಇಲ್ಲ ಸ್ವಾಮಿ. ಯಾವ ರೀತಿಯಲ್ಲಿ ಅವರು ಬೆಂಗಳೂರಿಗೆ ಬರಬೇಕು? ಒಂದು ಟ್ರೈನ್ ಬೇಡವೇ? ಹತ್ತು ಸಾವಿರ ಜನರು ಟ್ರಾವಲ್ ಮಾಡುತ್ತಾರೆ. No courtesy for this Government ಹ್ಯೂಮನ್ ಕರ್ಟಸಿಯೇ ಇಲ್ಲ. ತಾವು ಇದನ್ನು ಬಂದು ನೋಡಿದ್ದೀರಿ. What a nice place it is. ಊಟಿಗಿಂತ ಬೆಟರ್ ಪ್ಲೇಸ್. ಎಲ್ಲಿ ಹೋಗಿದ್ದಾರೆ ನಿಮ್ಮ ಅಧಿಕಾರಿಗಳು. ನಿಮ್ಮ ಅಧಿಕಾರಿಗಳಿಗೆ ಕಣ್ಣಿಲ್ಲವೇ? ಅವರು ಬರೀ ಸಿಟಿಯಲ್ಲಿ ಮಹಾರಾಜರ ತರಹ ಹೋಗಿ ಬರಬೇಕೇನು? ಡೆವಲಪ್ ಮಾಡಿ ಅದು ಸುಂದರವಾದ ಸಿಟಿಯಾಗಿರುತ್ತದೆ. It is a matter of two house. Bangalore to KGF. Can't you develop? ಬಿಡದಿ ಡೆವಲಪ್‌ಮೆಂಟ್ ಮಾಡುತ್ತೀರಿ. ಕೆಜಿಎಫ್ ಡೆವಲಪ್ ಮಾಡುವುದಕ್ಕಾಗುವುದಿಲ್ಲವೇ? Because your main theme ಷೆಡ್ಯೂಲ್ಡ್ ಕ್ಯಾಸ್ಟ್ ಜನರನ್ನು ಅವರನ್ನು ಏನಾದರೂ ಬೆಳೆಸಬಾರದು ಎಂದು ಇದ್ದರೆ declare it openly, I will not raise this issue on the floor of the House. You must have courtesy. ಜಾತಿ ಮೇಲೆ ನೀವು ಕೆಲಸ ಮಾಡಬಾರದು. ಹ್ಯೂಮಾನಿಟಿ ಮೇಲೆ ಕೆಲಸ ಮಾಡಬೇಕು. ಇಷ್ಟೆಲ್ಲಾ ನಾನು ಕೇಳಿ ಕೂಗಾಡಿಯೂ ನೀವು ಅದರ ಮೇಲೆ ಚಿಂತನೆ ಮಾಡಿಲ್ಲವೆಂದರೆ today or tomorrow, one fine day I will become Minister. I can bring my city's upliftment. ಅಷ್ಟು ಧೈರ್ಯ ನನಗೆ ಇದೆ. ಇರುವವನು ಬಿಟ್ಟರೆ ಇನ್ನೊಬ್ಬನು ಬರುತ್ತಾನೆ. ಅಷ್ಟು ಮಾತ್ರ ನಾವು ಚಿಂತನೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಆ ಕನಸು ನನಸಾಗಬೇಕು ಎಂದರೆ ಖಂಡಿತವಾಗಿ ಇಂಡಸ್ಟ್ರಿ ಮಿನಿಸ್ಟರ್, ಮತ್ತು ಸೋಷಿಯಲ್ ಮಿನಿಸ್ಟರ್, ಗೋಲ್ಡನ್ ಸಫಾರಿ ಮಿನಿಸ್ಟರ್, kindly come forward. ಟೂರಿಸಂ ಡೆವಲಪ್‌ಮೆಂಟ್ ಅದೊಂದು ಪೆಟ್ ನೇಮ್. ತಾವು ಕೊಟ್ಟು ಚೆನ್ನಾಗಿ ಮಾಡಿದರೆ ಒಳ್ಳೆಯದು. ಅದರಲ್ಲೂ ಇಂಡಸ್ಟ್ರಿ ಮಿನಿಸ್ಟರ್‌ಗೆ ಕೆಲವು ರಾಂಗ್ ಮಾಹಿತಿಗಳನ್ನು ಕೊಟ್ಟಿರಬಹುದು. Sir, I am bringing this to your notice. ಕೊನೆಗೆ ಮುಗಿಸುತ್ತಿದ್ದೇನೆ. ಆಸ್ಟ್ರೇಲಿಯನ್ ಕಂಪನಿ ಏನಾದರೂ ಬಂದು ಕೆಲಸ ಮಾಡುತ್ತಾರೆ ಎಂದರೆ ಅದೊಂದು ರಾಂಗ್ ಇನ್‌ಫರ್ಮೇಷನ್. ಆಸ್ಟ್ರೇಲಿಯನ್ ಕಂಪನಿ ಅವರೇನು ಆಸ್ಟ್ರೇಲಿಯಾದಲ್ಲಿ

ಇದ್ದಾರೋ ಅದೊಂದು ಸಣ್ಣ ಫರ್ಮ್ not the biggest company. very small firm. ಅವರು ಬಂದು ಮಾಡುತ್ತಿದ್ದಾರೊ ಸೈಡರ್‌ದನ್ನೆಲ್ಲಾ. ಅದನ್ನು ಎಲ್ಲಿ ತೆಗೆದುಕೊಂಡು ಹೋಗಿ ಟೇಲಿಂಗ್ ಹಾಕುತ್ತಾರೆ. ಪುನಃ ಮತ್ತೆ ಅಲ್ಲಿ ಪಾಯಿಸನ್ ಆಗುತ್ತದೆ. ಇರುವ ಅಗ್ರಿಕಲ್ಚರಲ್ ಲ್ಯಾಂಡ್ ಸ್ಪಾಯಿಲ್ ಮಾಡುತ್ತಾನೆ. ಅವನು throughout world, without global tender, he cannot take it. without global tender, Government of India's property, he cannot takeit. Minimum more than Rs. 250 Crore scrap material is there in the BGML. ಅವನ ಶೇರು ಎಷ್ಟು? ಬರೇ 13ರಿಂದ 50 ಕೋಟಿ ರೂಪಾಯಿ. ಒಂದು ಮೂರು ವರ್ಷ ಬರುತ್ತಾರೆ. ಸ್ಕ್ರಾಪನ್ನು ಸೇಲ್ ಮಾಡಿಕೊಳ್ಳುತ್ತಾನೆ. 100 ಅಥವಾ 150 ಕೋಟಿ ಲಾಭ ಬರುತ್ತದೆ. ಓಪನ್ ಕಾಸ್ಟ್ ಮಾಡುತ್ತಾನೋ ಏನೋ ಒಂದು ಮಾಡಿ ಗೋಲ್ಡ್‌ನಲ್ಲಿ not viable ಎಂದು ಮತ್ತೆ ಅವನು ಹೋಗಿ ಬಿಡುತ್ತಾನೆ. who is the spoiler ? ಆದರೆ ತಮಗೆ ಏನು ಒಂದು ಆಸೆ ಎಂದರೆ ಆಸ್ಟ್ರೇಲಿಯನ್ ಕಂಪನಿ ಬಂದರೆ ಅದು ಕೆಜಿಎಫ್‌ಗೆ ಏನಾದರೂ ಒಂದು ಅನುಕೂಲ ಆಗಲಿ ಎಂದು ತಾವು ನಿಜವಾಗಿಯೂ ಮಾನಸಿಕವಾಗಿ ಸಪೋರ್ಟ್ ಮಾಡಿದಿರಿ. ಒಳಗಡೆ ಏನು ಇದೆ ಅಂದರೆ they cannot again go deeply and get the gold. It is the deepest mine in the world. ಮೈನ್ ಮೇಲೆ ಅವನು ತೆಗೆದುಕೊಳ್ಳಬೇಕು ಎಂದರೆ ಓಪನ್ ಕಾಸ್ಟ್ ಮಾಡಬೇಕು. ಓಪನ್ ಕಾಸ್ಟ್ ಮಾಡುವಂತಹ ಸಂದರ್ಭದಲ್ಲಿ ಗೋಲ್ಡ್ ಸಿಗಲಿಲ್ಲ ಎಂದರೆ ಅವನು ಹಾಗೆಯೇ ಬಿಟ್ಟು ಹೋಗುತ್ತಾನೆ. ಅದು ಒಂದು ನದಿ ತರಹ ಆಗಿ ಬಿಡುತ್ತದೆ. ಆ ತರಹ ಒಂದು ಹತ್ತು ಜಾಗದಲ್ಲಿ ಮಾಡಿದರೆ ಇರುವ ಅಗ್ರಿಕಲ್ಚರಲ್ ಫರ್ಟೈಲ್‌ಲ್ಯಾಂಡ್ ಸಹ ಸ್ಪಾಯಿಲ್ ಆಗುತ್ತದೆ. ಮೂರು ವರ್ಷ, ಆರು ವರ್ಷ ಅವನು ವಯಬಲ್ ಅಲ್ಲ ಎಂದು ಹೋದರೆ ಅವನನ್ನು ಯಾರು ಕ್ವೆಶ್ಚನ್ ಮಾಡುವುದು?

ಇನ್ನೂ ಇರುವ ಜನ ಇನ್ನೂ ತೀರಿ ಹೋಗಿ ಬಿಡುತ್ತಾರೆ. ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಆ ಅಂಡರ್ ಗ್ರೌಂಡ್ ಮತ್ತೆ ಅದನ್ನು ಸ್ಟಾರ್ಟ್ ಮಾಡಿದರೆ ಈಗಲೇ ಸಿಲಿಸಿಸ್ ಡಿಸೀಸ್ ಇದೆ. ಒಬ್ಬೊಬ್ಬರಿಗೆ 40–50 ಹೋಲ್ಸ್ ಲಂಗ್ಸ್‌ನಲ್ಲಿದೆ. It's name is called silicosis disease. ಅದು ಎಲ್ಲೆಲ್ಲಿ ಅಂಡರ್‌ಗ್ರೌಂಡ್ ಮೈನ್ಸ್ ಇದೆ? ಅಲ್ಲಿ ಬರುವುದು ಅದು. ಪುನಃ ಮತ್ತೆ ಮಾಡಿದರೆ future young generation will get spoiled. ಆದ್ದರಿಂದ ತಾವು ಏನಾದರೂ ಮನಸ್ಸು ಇಟ್ಟು ಐರನ್ ಅಂಡ್ ಸ್ಟೀಲ್ ಸ್ಪಾಂಜ್, ಗೋಲ್ಡನ್ ಸಫಾರಿ, ಫುಡ್ ಪ್ರೋಸೆಸಿಂಗ್ ಹೀಗೆ ಬೇಕಾದಷ್ಟು ಇದೆ. ಅದನ್ನೆಲ್ಲಾ ಒಂದು ಸ್ಮಾಲ್ ಸ್ಮಾಲ್ ಇಂಡಸ್ಟ್ರಿ ಮಾಡಿಕೊಟ್ಟರೆ ನನ್ನ ಊರಿಗೆ ಅದು ಅನುಕೂಲ ಆಗುತ್ತದೆ ಎಂದು ಕೇಳಿಕೊಂಡು ತಾವು ಜೊತೆಗೆ

ಸೀನಿಯರ್ ಮೋಸ್ಟ್ ಮಿನಿಸ್ಟರ್ ಇದ್ದೀರಿ. ತಾವೆಲ್ಲ ಒಂದು ಮಾತು ಇಂಡಸ್ಟ್ರಿ ಮಿನಿಸ್ಟರ್‌ಗೆ ಹೇಳಲೇಬೇಕು. ಕೆಜಿಎಫ್ ಪರಿಸ್ಥಿತಿ ಹೀಗೆ ಇದೆ ಎಂದು ಹೇಳಬೇಕು. ನಿಜವಾಗಿ ಹೇಳಬೇಕು. because you belong to my community. I can only appeal to my community Minister to come forward and kindly they should do the needful to KGF.

ಛೇರ್ಮನ್: ಮಾನ್ಯ ರಾಜೇಂದ್ರ ಅವರೇ ಕನ್‌ಕ್ಲೂಡ್ ಮಾಡಿ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಇಷ್ಟು ಹೊತ್ತು ಅವಕಾಶ ಕೊಟ್ಟಿದ್ದಕ್ಕೆ ಬಹಳ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು. ಧನ್ಯವಾದಗಳು..

ಛೇರ್ಮನ್: ಮಾನ್ಯ ಆರ್.ವಿ. ದೇಶ್‌ಪಾಂಡೆ, ಸಹಕಾರ ಸಚಿವರ ಭೋಜನ ಕೂಟಕ್ಕೆ ಆಮಂತ್ರಣ ಇದೆ. ಮತ್ತೆ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಗಿದೆ.

(ಸದನದ ಕಾರ್ಯಕಲಾಪವು ಮಧ್ಯಾಹ್ನ 2 ಗಂಟೆ 3 ನಿಮಿಷಕ್ಕೆ ಮುಕ್ತಾಯವಾಗಿ ಭೋಜನ ವಿರಾಮದ ನಂತರ ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3.20 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಒಂದು ನಿಮಿಷ ಅವಕಾಶ ಮಾಡಿಕೊಡಬೇಕು. ಕೆಲವೊಂದು ಗಂಭೀರವಾದಂತಹ ಸಮಸ್ಯೆಗಳನ್ನು ಮುಂದಿಟ್ಟುಕೊಂಡು, ಕಳೆದ ತಿಂಗಳು 27ನೇ ತಾರೀಖಿನಿಂದ ಜುಲೈ 6ನೇ ತಾರೀಖಿನವರೆಗೂ ಪಾದಯಾತ್ರೆ ಮಾಡಿದೆವು. ಆದಿವಾಸಿ ರೈತರನ್ನು ಒಕ್ಕಲೆಬ್ಬಿಸಬಾರದು, ಸಾಗುವಳಿ ಮಾಡುತ್ತಿರತಕ್ಕಂಥ ರೈತರನ್ನು ಅಲ್ಲೇ ಉಳಿಸಬೇಕು. ಇದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು ಅನ್ನತಕ್ಕಂಥ ಬೇಡಿಕೆಯನ್ನು ಮುಂದಿಟ್ಟುಕೊಂಡು ಮತ್ತು ಜಿಲ್ಲೆಯ ಐದು ಏತ ನೀರಾವರಿ ಯೋಜನೆಗಳನ್ನು ಮುಂದಿಟ್ಟುಕೊಂಡು, 10 ದಿನಗಳ ಕಾಲ ಚಿಕ್ಕಮಗಳೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡಿ ಬಂದೆವು. 6ನೇ ತಾರೀಖು ನಾವು ಹೋಗಿ ಅವರಿಗೆ ಮನವಿ ಕೊಟ್ಟಾಗ, 10ನೇ ತಾರೀಖಿನ ನಂತರ joint meeting ಮಾಡಿಸುತ್ತೇನೆ, ಆದಿವಾಸಿ ರೈತರಿಗೆ ಯಾರಿಗೂ ತೊಂದರೆಯಾಗುವುದಕ್ಕೆ ಬಿಡುವುದಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. 10ನೇ ತಾರೀಖು ಕಳೆದ ನಂತರ ಐದು ಸಲ ನಾವು remainder ಮಾಡಿದ್ದೇವೆ. ಇವತ್ತಿನವರೆಗೂ ನಮ್ಮ ಸಮಸ್ಯೆಯನ್ನು ಕೇಳಿಲ್ಲ. ಸಮಸ್ಯೆಯ ಪರಿಹಾರಕ್ಕೆ ಮತ್ತು ಸಾರ್ವಜನಿಕವಾಗಿ ಗಮನ ಸೆಳೆಯಲಿಕ್ಕೆ

ಇದಕ್ಕಿಂತ ಗಂಭೀರವಾದ ಪ್ರಯತ್ನ ಏನು ಮಾಡಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ. ಪ್ರಜಾಸತ್ತಾತ್ಮಕ ರೀತಿಯಲ್ಲೇ ಪ್ರಯತ್ನ ಮಾಡಿ

ಅಧ್ಯಕ್ಷರು: ಮಾನ್ಯ ರವಿಯವರೆ, ದಯವಿಟ್ಟು ಕೇಳಿ. 4-5 ಗಂಟೆಗೆ CM houseಗೆ ಬರುತ್ತಾರೆ. ಅವರು ಬಂದ ಮೇಲೆ ಅದರ ಬಗ್ಗೆ ತಾವು ಪ್ರಸ್ತಾಪ ಮಾಡಿ. ಆಗ ಅವರು ಅದಕ್ಕೆ ಉತ್ತರ ಹೇಳುತ್ತಾರೆ. ಈಗ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿ.ಟಿ.ರವಿಯವರು ಚಿಕ್ಕಮಗಳೂರಿನ ಐದು ಏತ ನೀರಾವರಿ ಯೋಜನೆಗಳ ಬಗ್ಗೆ ಅರಣ್ಯ ಒತ್ತುವರಿ ಮಾಡಿಕೊಂಡು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವಂತಹವರ ಬಗ್ಗೆ ಮತ್ತು ನಕ್ಸಲೀಯರ ಹಾವಳಿ ಜಾಸ್ತಿ ಆಗಿದೆ, ಇದಕ್ಕೇನಾದರೂ ಪರಿಹಾರ ಸಿಗಬೇಕೆಂದು ಆಗ್ರಹಿಸಿ, 10 ದಿನಗಳ ಕಾಲ ಪಾದಯಾತ್ರೆಯೊಂದನ್ನು ಮಾಡಿದರು. ಸದನದಲ್ಲಿ ಅದರ ಬಗ್ಗೆ ಗಂಭೀರವಾದಂತಹ ಚಿಂತನೆ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಅದಕ್ಕೇನಾದರೂ ಆಗಬೇಕಾಗಿತ್ತು. ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದಾಗ, ಅವರು ಅದಕ್ಕಾಗಿ ಸಭೆಯೊಂದನ್ನು ಕರೆಯುತ್ತೇನೆ ಎಂದು ಭರವಸೆ ಕೊಟ್ಟಿದ್ದರು. ಆದರೆ ಅದು ಇದುವರೆಗೂ ಆಗಲಿಲ್ಲ. ಅದಕ್ಕೆ ಮಾನ್ಯ ಅಧ್ಯಕ್ಷರು ಸಿ.ಎಂ. ಬಂದ ತಕ್ಷಣ ಇದರ ಬಗ್ಗೆ ಪ್ರಸ್ತಾಪ ಮಾಡಿ, ಅದಕ್ಕೇನಾದರೂ ಒಂದು ಪರಿಹಾರ ಹುಡುಕೋಣ ಎಂದು ಹೇಳುತ್ತಿದ್ದಾರೆ. ಇದು ಕೇವಲ ಚಿಕ್ಕಮಗಳೂರು ಜಿಲ್ಲೆಯ ದೃಷ್ಟಿಯಿಂದ ಮಾತ್ರವಲ್ಲ, ಇಡೀ ರಾಜ್ಯದಲ್ಲಿರುವಂತಹ ಜ್ವಲಂತ ಸಮಸ್ಯೆಯ ಬಗ್ಗೆ ಅವರು ಪ್ರಸ್ತಾಪ ಮಾಡಿ, ಪಾದಯಾತ್ರೆ ಮಾಡಿ, ಇಡೀ ರಾಜ್ಯದ ಜನರನ್ನು, ಸರ್ಕಾರದ ಗಮನ ಸೆಳೆಯುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಇದು ಅತ್ಯಂತ ಪ್ರಮುಖವಾದಂತಹ ವಿಚಾರವಾಗಿದೆ. ಸಿ.ಎಂ. ಬಂದ ಮೇಲೆ ಅದಕ್ಕೊಂದು ಪರಿಹಾರ ಮತ್ತು ಉತ್ತರ ಪಡೆಯೋಣ.

ಅಧ್ಯಕ್ಷರು: ಮಾನ್ಯ ಎ.ಎಸ್. ಬಸವರಾಜ್‌ರವರೆ, ತಾವು ಬೇಡಿಕೆಗಳ ಮೇಲೆ ಮಾತನಾಡುತ್ತೀರಾ?

ಶ್ರೀ ಎ.ಎಸ್.ಬಸವರಾಜ್: ನಾನು ನೀರಾವರಿ ಇಲಾಖೆ ಬೇಡಿಕೆ ಬಂದಾಗ ಮಾತನಾಡುತ್ತೇನೆ.

ಅಧ್ಯಕ್ಷರು: ಆಯಿತು, ನೀರಾವರಿ ಬೇಡಿಕೆ ಮಂಡಿಸಿದಾಗ ತಾವು ಮಾತನಾಡುವಿರಂತೆ. ಈಗ ತಾವು ಕುಳಿತುಕೊಳ್ಳಿ. ಮಾನ್ಯ ಪ್ರಭಾಕರ ಬಂಗೇರಾರವರು ಸದನದಲ್ಲಿ ಇಲ್ಲ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಬಹಳ ಗಂಭೀರವಾದಂತಹ ವಿಷಯವನ್ನು ಪ್ರಸ್ತಾಪ ಮಾಡಲು ನಾನು ನಿಂತಿದ್ದೇನೆ. ಅದನ್ನು ನಾನು ಒಂದೇ ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ.

ಅಧ್ಯಕ್ಷರು: ಮಾನ್ಯ ಜೀವರಾಜ್‌ರವರೆ, ತಾವು ಹಿರಿಯ ಸದಸ್ಯರು. ಈ ತರಹ ಮಾಡಿದರೆ ಹೇಗೆ? No, No. ಅದಕ್ಕೆಲ್ಲಾ ಈಗ ಅವಕಾಶ ಇಲ್ಲ. ಮಾನ್ಯ ಸಿ.ಟಿ.ರವಿಯರು ಈಗ ಬೇಡಿಕೆಗಳ ಮೇಲೆ ಮಾತನಾಡಿ. ದಯಮಾಡಿ 10 ನಿಮಿಷಗಳಲ್ಲಿ ಮುಗಿಸಬೇಕು. ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ.

2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ:–

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಸನ್ಮಾನ್ಯ ಅಧ್ಯಕ್ಷರೆ, ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಹುಶಃ ಸ್ವತಂತ್ರ್ಯ ನಂತರ ಕೈಗಾರಿಕಾ ನೀತಿ ಎಂದರೆ, ಜನರನ್ನು ಮೂಲ ಉದ್ಯೋಗದಿಂದ ವಂಚಿತರನ್ನಾಗಿ ಮಾಡತಕ್ಕಂಥದ್ದೇ ಕೈಗಾರಿಕಾ ನೀತಿ ಎನಿಸಿಕೊಂಡಿದೆ. ಸಭಾಧ್ಯಕ್ಷರೆ, ಗಮನಿಸಬೇಕು. ನಮ್ಮ ದೇಶದಲ್ಲಿ ಯಾವುದೇ ಉದ್ಯೋಗ ಇಲ್ಲದಂತಹ ಜನ ಇರಲಿಲ್ಲ. ಬಡತನ ಇತ್ತು ನಿಜ. ಸಾಮಾಜಿಕ ಅಸಮತೋಲನ ಇತ್ತು. ಆದರೆ ಯಾವುದೇ ಜನರಿಗೆ ನಿರ್ದಿಷ್ಟವಾದ ಉದ್ಯೋಗ ಇರಲಿಲ್ಲ ಅನ್ನತಕ್ಕಂಥ ಪರಿಸ್ಥಿತಿ ಇರಲಿಲ್ಲ. ಆಮೇಲೆ ನಾವು ಏನು ಮಾಡಬೇಕಾಗಿತ್ತು. ಜನರಿಗೆ ಇದ್ದಂತಹ ವೃತ್ತಿ ಗೌರವವನ್ನು ಕೊಡಿಸತಕ್ಕಂಥ ಕೆಲಸ ಮಾಡಿ, ಇದ್ದ ವೃತ್ತಿಯಲ್ಲಿ ಇನ್ನಷ್ಟು ಪರಿಣಿತರನ್ನಾಗಿ ಮಾಡಿ, ಆ ವೃತ್ತಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿಕೊಡತಕ್ಕ ಯೋಜನೆ ಅಷ್ಟೇ ಮಾಡಿದ್ದರೆ ಸಾಕಾಗಿತ್ತು. ಹೊಸ ನೀತಿಯೊಂದರ ಅವಶ್ಯಕತೆ ನಮಗೆ ಇರಲಿಲ್ಲ. ದುರ್ದೈವದ ಸಂಗತಿ. ವೃತ್ತಿ ಗೌರವವನ್ನು ತಂದು ಕೊಡತಕ್ಕಂಥ ಕೆಲಸ ಆಗಲಿಲ್ಲ. ವೃತ್ತಿಯಲ್ಲಿ ಕೀಳರಿಮೆಯನ್ನು ಬೆಳೆಸಿ, ಮೂಲ ಉದ್ಯೋಗದಿಂದ ವಂಚಿತರನ್ನಾಗಿ ಮಾಡಿ, ಮತ್ತೆ ಕೈಗಾರಿಕಾ ನೀತಿ ಎಂದು ಹಿಡಿದುಕೊಳ್ಳಲಿಕ್ಕೆ ನಾವು ಇವತ್ತು ಹೊರಟ್ಟಿದ್ದೇವೆ. ಈ ಹಿನ್ನೆಲೆಯಲ್ಲಿ ಇವತ್ತು 90ಕ್ಕೂ ಹೆಚ್ಚು ಸಾರ್ವಜನಿಕ ಉದ್ದಿಮೆಗಳು ರೋಗಗ್ರಸ್ತವಾಗಿವೆ ಎಂದು ಸರ್ಕಾರಿ ವರದಿಯೇ ಹೇಳುತ್ತಿದೆ. ಯಾವುದನ್ನು ಸದುದ್ದೇಶದಿಂದ, ಒಂದು ಒಳ್ಳೆಯ ಉದ್ಯೋಗ ಲಭಿಸಬೇಕು ಎನ್ನುವ ಕಾರಣಕ್ಕೋಸ್ಕರ, ಮತ್ತು ಹೆಚ್ಚು ಜನರಿಗೆ ಉದ್ಯೋಗ ಕೊಡುವುದರ ಜೊತೆಗೆ, ಆರ್ಥಿಕವಾಗಿಯೂ ಕೂಡ ಸ್ಥಿತಿವಂತರನ್ನಾಗಿ ಮಾಡಬೇಕು ಎಂದು ಯಾವೊಂದು ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಲಾಯಿತೋ, ಆ ಉದ್ದಿಮೆಗಳು ಇವತ್ತು ರೋಗಗ್ರಸ್ತವಾಗಿವೆ. ಏಕೆ ಅವು ರೋಗಗ್ರಸ್ಥವಾಗಿವೆ? ರೋಗಗ್ರಸ್ತ ಆಗಲಿಕ್ಕೆ ಒಂದು ರೀತಿಯಲ್ಲಿ ಭ್ರಷ್ಟರನ್ನು ಆ ಸಾರ್ವಜನಿಕ ಉದ್ದಿಮೆಗಳಿಗೆ ಮುಖ್ಯಸ್ಥರನ್ನಾಗಿ, ಆಡಳಿತ ಮಂಡಳಿಯನ್ನು ರಚನೆ ಮಾಡಿ, ಆ ರಚನೆ ಮಾಡುವುದರ ಮೂಲಕ, ಅಲ್ಲೊಂದು ರೀತಿಯ ಬೇಜವಾಬ್ದಾರಿಯನ್ನು ಬೆಳೆಸಿ, ಭ್ರಷ್ಟತನಕ್ಕೆ ಅವಕಾಶ ಮಾಡಿಕೊಟ್ಟಿದ್ದೇ, ಈ ಒಂದು ಸಾರ್ವಜನಿಕ ಉದ್ದಿಮೆಗಳು ರೋಗಗ್ರಸ್ತವಾಗಲಿಕ್ಕೆ

ಬಹಳ ಮೂಲ ಕಾರಣವಾಗಿದೆ. ಮೈಸೂರ್ ಲ್ಯಾಂಪ್ಸ್ ಒಂದು ದೊಡ್ಡ ಕಾರ್ಖಾನೆಯಾಗಿತ್ತು. ಒಂದು ಕಾಲದಲ್ಲಿ ಇಡೀ ದೇಶವ್ಯಾಪ್ತಿ ಹೆಸರಾಗಿದ್ದಂತಹ, ವಿದೇಶಕ್ಕೂ ರಫ್ತು ಮಾಡುತ್ತಿದ್ದಂತಹ ಕಾರ್ಖಾನೆಯಾಗಿತ್ತು. ಅಲ್ಲಿಯ ಕಾರ್ಮಿಕರು ನಮಗೆ ದುಡಿಮೆ ಬಂಡವಾಳ ಕೊಡಿ ಎಂದು ಕೇಳುತ್ತಿದ್ದಾರೆ. ಅವರು ಬೇರೆ ಏನನ್ನೂ ಕೇಳುತ್ತಿಲ್ಲ. ನಮಗೆ ದುಡಿಮೆ ಬಂಡವಾಳ ಕೊಡಿ, ಮತ್ತೆ ನಾವು ಇದನ್ನು ಸ್ವಾವಲಂಬಿಯಾಗಿ, ಲಾಭದಾಯಕವಾಗಿ ಮಾಡತಕ್ಕಂಥ ಶಕ್ತಿ ನಮಗೆ ಇದೆ ಎಂದು ಕೇಳುತ್ತಿದ್ದಾರೆ.

ಕಾರ್ಮಿಕರೇ ನಾವು ಇದನ್ನು ಲಾಭದೆಡೆಗೆ ಕೊಂಡೊಯ್ಯುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಆ ಕಡೆಗೆ ಸರ್ಕಾರ ಯೋಚನೆ ಮಾಡುತ್ತಿದೆಯೇ? ಅವರ ಬೇಡಿಕೆಗೆ ಪೂರಕವಾಗಿ ಸ್ಪಂದಿಸಿ, ಮತ್ತೊಮ್ಮೆ ಆ ಮೈಸೂರ್ ಲ್ಯಾಂಪ್ಸ್ ಸ್ವಾವಲಂಬನೆಯಿಂದ ತಲೆ ಎತ್ತಿ ನಿಂತು, ದೇಶದ ಒಂದು ಹೆಮ್ಮೆಯ ಕಾರ್ಖಾನೆಯಾಗಿ ಮಾಡಲಿಕ್ಕೆ ಸಾಧ್ಯ ಇಲ್ಲವೇ? ನಷ್ಟ ಇದೆ ಎನ್ನುವ ಕಾರಣವನ್ನು ಮುಂದಿಟ್ಟುಕೊಂಡು, ಈ ಒಂದು ಸಾರ್ವಜನಿಕ ಉದ್ದಿಮೆಗಳಿಗೆ ಬಾಗಿಲು ಹಾಕುವಂತಾದ್ದೇ ಪರಿಹಾರವೇ? ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇನ್ನೊಂದು NGEF ಕಾರ್ಖಾನೆ. ಅದೂ ಕೂಡ ಪ್ರತಿಷ್ಠಿತ ಕಾರ್ಖಾನೆಯಾಗಿತ್ತು. ದುರ್ದೈವದ ಸಂಗತಿ ಎಂದರೆ, ಭೂಮಿ ಬೆಲೆ ಜಾಸ್ತಿಯಾಗುತ್ತಿದ್ದಂತೆ, ಭೂ ಮಾಫಿಯಾದ ಕಣ್ಣು ಈ ಕಾರ್ಖಾನೆ ಜಾಗದ ಮೇಲೆ ಬಿದ್ದು ಬಿಟ್ಟಿದೆ. ಆ ಭೂ ಮಾಫಿಯಾದ ಕಣ್ಣು ಯಾವಾಗ ಇದರ ಮೇಲೆ ಬಿತ್ತೋ, ನಷ್ಟದ ಕಡೆಗೆ ತೆಗೆದುಕೊಂಡು ಹೋಗತಕ್ಕಂಥ ಎಲ್ಲಾ ಪ್ರಯತ್ನಗಳೂ ನಡೆಯುವುದಕ್ಕೆ ಶುರುವಾಗಿ ಬಿಡುತ್ತವೆ. ಆ ನಡೆಯುವುದಕ್ಕೆ ಶುರುವಾಗಿ ಇವತ್ತು ಆ ಭೂ ಮಾಫಿಯಾ ಕಣ್ಣು NGEF ಮೇಲೆ ಬಿದ್ದಿದೆ. ನಮ್ಮ ಕೈಗಾರಿಕಾ ಸಚಿವರು ಕಳಕಳಿ ಇರತಕ್ಕಂಥವರು ಇದ್ದಾರೆ. ದಯಮಾಡಿ ಆ ಭೂ ಮಾಫಿಯಾದ ಕಣ್ಣು ಈ NGEF ಮೇಲೆ ಬೀಳದಂತೆ ಆ NGEF ಕಾರ್ಖಾನೆಯನ್ನು ರಕ್ಷಣೆ ಮಾಡಬಲ್ಲಿರಾ? ಈ ಸರ್ಕಾರಕ್ಕೆ ಮಾಡತಕ್ಕಂಥ ಇಚ್ಛಾಶಕ್ತಿ ಇದೆಯಾ? ಅನ್ನತಕ್ಕಂಥ ಮಾತನ್ನು ಇಲ್ಲಿ ಕೇಳಲಿಕ್ಕೆ ಇಚ್ಛೆಸುತ್ತೇನೆ. ಇನ್ನು MPM ಕಾರ್ಖಾನೆ, ಒಳ್ಳೆಯ ಛೇರ್ಮನ್, ಒಳ್ಳೆಯ ಆಡಳಿತಗಾರರನ್ನು ಅಲ್ಲಿ ಹಾಕಿದಾಗಲೆಲ್ಲಾ. MPM ಲಾಭದ ಕಡೆ ಹೋಯಿತು. ಯಾವಾಗ ಭ್ರಷ್ಟರನ್ನು ತೆಗೆದುಕೊಂಡು ಬಂದು ಪ್ರತಿಷ್ಠಾಪನೆ ಮಾಡಿದಿರೋ, ಈಗ ಮತ್ತೆ ಅದು ನಷ್ಟದ ಕಡೆಗೆ ಜಾರುತ್ತಿದೆ. ಲಾಭದ ಉದ್ದಿಮೆಗಳನ್ನು ರಾಜಕೀಯ ಕಾರಣದ ನೇಮಕವನ್ನು ಮುಂದಿಟ್ಟುಕೊಂಡು, ಭ್ರಷ್ಟರನ್ನು ಅದಕ್ಷರನ್ನು ಛೇರ್ಮನ್ ಮಾಡಿದರೆ, ಕಾರ್ಖಾನೆ ಉಳಿಯುತ್ತದೆಯೇ? ಯಾವುದಾದರೂ ಕಾರ್ಖಾನೆ ಉಳಿಯಲಿಕ್ಕೆ ಸಾಧ್ಯವೇ? ಆತನಿಗೆ ಏನಾದರೂ ಒಂದಷ್ಟು ಕಾಳಜಿ, ಅದರ ಮಾರುಕಟ್ಟೆ ವಿಸ್ತರಣೆ ಮಾಡತಕ್ಕಂಥದ್ದು ಅದನ್ನು ಹೆಚ್ಚೆಚ್ಚು ಶಕ್ತಿಶಾಲಿ ಮಾಡತಕ್ಕಂಥ, ಯೋಜನೆ

ಇರತಕ್ಕಂಥ ಭ್ರಷ್ಟರನ್ನು ಛೇರ್ಮನ್ ಮಾಡಿದರೆ ಹೇಗೆ ಇರುತ್ತದೆ? ಯಾವುದೋ ರಾಜಕೀಯ ನೇಮಕ, ಯಾರದೋ influence ತೆಗೆದುಕೊಂಡು ಬಂದರು, ಹೈಕಮಾಂಡ್ ಹೇಳಿತು, ತೆಗೆದುಕೊಂಡು ಹೋಗಿ ನೇಮಕ ಮಾಡಿಬಿಟ್ಟರು. ನೇಮಕ ಮಾಡಿ, ಲಾಭದಲ್ಲಿ ಇದ್ದಂತಹ MPM ನಷ್ಟದ ಕಡೆಗೆ ಹೋಗುವಂತಾಯಿತು. ಹೀಗಾದರೆ ಕಾರ್ಖಾನೆ ಉಳಿಯುತ್ತದೆಯೇ? ನಾವು ಕೈಗಾರಿಕಾ ನೀತಿ ಏನು ಮಾಡಿ, ಏನು ಪ್ರಯೋಜನ? ಅದನ್ನು ನಂಬಿದಂತಹ ಕಾರ್ಮಿಕರು ಬೀದಿ ಪಾಲಾಗುತ್ತಾರೆ. ಅದನ್ನು ನಂಬಿದಂತಹ ಸಣ್ಣ ಪುಟ್ಟ ಉದ್ದಿಮೆಗಳು ಮುಚ್ಚಿಕೊಂಡು ಹೋಗಬೇಕಾಗುತ್ತದೆ. ಅದರ ಬದಲಿಗೆ, ದಕ್ಷರನ್ನು, ಯೋಗ್ಯರನ್ನು ಅಲ್ಲಿಗೆ ಮ್ಯಾನೇಜಿಂಗ್ ಡೈರೆಕ್ಟರ್‌ರನ್ನಾಗಿ ಮಾಡತಕ್ಕಂಥ ಅಥವಾ ಛೇರ್ಮನ್ ಮಾಡತಕ್ಕಂಥ ನಿಜವಾದ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿದರೆ ಮಾತ್ರ ನಮ್ಮ ಕೈಗಾರಿಕೆಗಳು ಉಳಿಯುತ್ತವೆ. ಇಲ್ಲದಿದ್ದರೆ, ಕೈಗಾರಿಕಾ ನೀತಿಯೆಲ್ಲಾ ಪುಸ್ತಕದ ಬದನೇಕಾಯಿ ಆಗಿ ಬಿಡುತ್ತದೆ. ಪುಸ್ತಕದ ಬದನೇಕಾಯಿ ಸಾರಿಗೂ ಬರುವುದಿಲ್ಲ. ಪಲ್ಯಕ್ಕೂ ಬರುವುದಿಲ್ಲ. ಆ ಪರಿಸ್ಥಿತಿ ಆಗಿ ಬಿಡುತ್ತದೆ. ನೀತಿ ಒಳ್ಳೆಯದು ಇದ್ದರೂ ಕೂಡ, ಈ ಯೋಜನೆ ಅನುಷ್ಠಾನದಲ್ಲಿ ವೈಫಲ್ಯವಾಗಿ, ಇವತ್ತು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಕಳೆದುಕೊಳ್ಳಬೇಕಾದಂತಹ ಸ್ಥಿತಿಗೆ ಲಾಭದಲ್ಲಿದ್ದಂತಹ ಕೈಗಾರಿಕೆಗಳನ್ನು ನಷ್ಟದ ಕಡೆಗೆ ತೆಗೆದುಕೊಂಡು ಹೋಗತಕ್ಕಂಥ ಪರಿಸ್ಥಿತಿಗೆ ಇವತ್ತು ಬಂದಿದ್ದೇವೆ. ಸಣ್ಣ ಕೈಗಾರಿಕೆ, ಮುಂಚೆಯೇ ನಾನು ಹೇಳಿದಂತೆ, ನಮ್ಮ ದೇಶವೇ ಒಂದು ರೀತಿಯಲ್ಲಿ ಕೈಗಾರಿಕಾಮಯ ಆಗಿತ್ತು. ಹಿಂದೆ ಉತ್ಕೃಷ್ಟವಾದ ಉಕ್ಕನ್ನು ತಯಾರಿಸುತ್ತಿದ್ದುದು ಎಲ್ಲಿ ಎಂದು ಕೇಳಿದರೆ, ನಮ್ಮ ದೇಶದಲ್ಲಿ ಎನ್ನುತ್ತಿದ್ದರು. ಅದು ನಮ್ಮ ದೇಶದಲ್ಲಿ ಎಲ್ಲಿ ತಯಾರಾಗುತ್ತದೆ? ಎಂದು ವಿದೇಶಿಯರೆಲ್ಲಾ ಬಂದು ನೋಡಿದರೆ, ಇಲ್ಲಿ ಸಣ್ಣ ಸಣ್ಣ ಕುಲುಮೆ ಮೂಲಕ, ಉತ್ಕೃಷ್ಟವಾದ ಉಕ್ಕು ತಯಾರಾಗಿ, ವಿದೇಶಕ್ಕೆ ರಫ್ತಾಗುತ್ತಿತ್ತಂತೆ. ಇಂತಹ ಉತ್ಕೃಷ್ಟವಾದ ಉಕ್ಕನ್ನು ನಾವು 300–400 ವರ್ಷಗಳ ಹಿಂದೆ ತಯಾರಿಸಿ, ವಿದೇಶಕ್ಕೆ ರಫ್ತು ಮಾಡುತ್ತಿದ್ದಂತಹ ಹಿನ್ನೆಲೆ ಇರತಕ್ಕಂಥ ಜನ ಇರತಕ್ಕಂಥ ಇಲ್ಲಿ, ನಾವು ಸಣ್ಣ ಕೈಗಾರಿಕೆಗಳಿಗೆ ಒತ್ತು ಕೊಟ್ಟಿರುವುದು ಹೇಗೆ? ನಮ್ಮ ಊರಿನಲ್ಲಿ ಒಂದು ಸಣ್ಣ ಕೈಗಾರಿಕೆ ಸ್ಥಾಪನೆ ಮಾಡಿದರು. ಕೃತಕ ವಜ್ರಕ್ಕೆ ಸಾಣೆ ಹಿಡಿಯತಕ್ಕಂಥ ಘಟಕವಂತೆ. ಅದಕ್ಕೆ ಮಾರುಕಟ್ಟೆಯೂ ಇಲ್ಲ, ಏನು ಇಲ್ಲ. 10–20 ಲಕ್ಷ ರೂಪಾಯಿಗಳು ತಂದರು. DIC ಮೂಲಕ ಒಂದು ಟ್ರೈನಿಂಗ್ ಸೆಂಟರ್‌ನ್ನೂ ಸಹ ಮಾಡಿದರು. ಮಾಡಿ, ಕಾರ್ಪೋರೇಷನ್ ಬ್ಯಾಂಕ್ ಮತ್ತು DIC ಎರಡೂ ಸೇರಿ, ಕೃತಕ ವಜ್ರಕ್ಕೆ ಸಾಣೆ ಹಿಡಿಯತಕ್ಕಂಥ ಘಟಕವೆಂದು ಪ್ರಾರಂಭ ಮಾಡಿದರು. ಆ ಕೃತಕ ವಜ್ರವನ್ನು ಏನು ಮಾಡುವುದು? ಎಂದು ಯೋಚನೆ ಮಾಡಲೇ ಇಲ್ಲ. ಅದು ಒಂದೆರಡು ತಿಂಗಳಿಗೇ ಮುಚ್ಚಿ ಹೋಯಿತು.

ಈ ತರಬೇತಿಗೆ ಹೋಗಿ, ಏನಾದರೂ ಸ್ವಂತ ಉದ್ಯೋಗ ಹಿಡಿಯಬಹುದು ಎಂದು ಕನಸು ಕಂಡು ಯಾವ ನಿರುದ್ಯೋಗಿಗಳು ಹೋಗಿದ್ದರೋ, ಅವರಿಗೆಲ್ಲಾ ಬ್ಯಾಂಕಿನಿಂದ ನೋಟೀಸ್ ಬರಲಿಕ್ಕೆ ಶುರುವಾಯಿತು. ನಿಮಗೆ ಸಾಲ ಕೊಟ್ಟಿದ್ದೇವೆ. ಸಾಲ ತೀರಿಸಿ ಎಂದು ಬ್ಯಾಂಕಿನಿಂದ ನೋಟಿಸ್‌ಗಳು ಬರುವುದಕ್ಕೆ ಶುರುವಾಯಿತು. ಹೀಗಿದೆ ನಮ್ಮ ಕೈಗಾರಿಕಾ ನೀತಿ. ಖಾದಿ ಸ್ವಾತಂತ್ರ್ಯ ಹೋರಾಟಗಾರರಿಗೆ ಹೋರಾಟಕ್ಕೆ ಪ್ರೇರಣೆ ಕೊಟ್ಟಂತಹ ಒಂದು ಸಂಗತಿಯಾಗಿತ್ತು. ಖಾದಿ ಎಂದರೆ, ಸ್ವಾವಲಂಬನೆಯ ಸಂಕೇತವಾಗಿತ್ತು. ಆದರೆ ಇವತ್ತು ಆ ಖಾದಿ ಸಂಘಗಳಿಗೆ ಬಾಕಿ ಇದ್ದಂತಹ 8 ಕೋಟಿ 91 ಲಕ್ಷ ರೂಪಾಯಿಗಳನ್ನು ಕೊಟ್ಟು ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರೆ ಇವತ್ತು ಖಾದಿಯನ್ನು ಇವತ್ತಿನ ಯೋಜನೆಗೆ ತಕ್ಕಂತೆ ವಿನ್ಯಾಸಗೊಳಿಸಿ, ಅದನ್ನು ಇನ್ನಷ್ಟು ಹೆಚ್ಚು ಜನಪ್ರಿಯಗೊಳಿಸಲಿಕ್ಕೆ ಸಾಧ್ಯವಿಲ್ಲವೇ? ಇವತ್ತು ನಾವು ಶಾಲಾ ಸಮವಸ್ತ್ರಗಳನ್ನು ಕೊಡುತ್ತಿದ್ದೇವೆ. ಶಾಲಾ ಸಮವಸ್ತ್ರಗಳನ್ನೆಲ್ಲಾ ಖಾದಿಯ ಮೂಲಕವೇ ಕೊಡುವಂತದ್ದು. ಆದರೆ, ಆ ಖಾದಿಯೇ ಒಂದು ಸಂಕೇತವಾಗಿ ಏನು ಒಂದು ಕಾಲದಲ್ಲಿ ದೇಶಾಭಿಮಾನಕ್ಕೆ ಪ್ರೇರಣೆ ಕೊಟ್ಟಿತ್ತೋ, ಆ ಸಂಕೇತವೂ ಉಳಿಯುತ್ತದೆ ಮತ್ತು ಖಾದಿ ಉದ್ದಿಮೆಗಳೂ ಬದುಕುತ್ತವೆ. ಖಾದಿ ಹೆಚ್ಚು ಬಾಳಿಕೆ ಬರುತ್ತದೆ. ನೀವು ಬೇರೆ ಮಿಲ್ ಬಟ್ಟೆ ತೆಗೆದುಕೊಂಡರೆ, ಅವು ಒಂದು ವರ್ಷವೂ ಕೂಡ ಇರುತ್ತವೆ ಎನ್ನತಕ್ಕಂಥ ಗ್ಯಾರಂಟಿ ಇಲ್ಲ. ಆದರೆ ಖಾದಿ ಬಟ್ಟೆಗಳನ್ನು ನಾವು ಬೇಜಾರಾಗಿ ಬಿಸಾಕಬೇಕಷ್ಟೆ. ಅವುಗಳು ಹರಿದು ಹೋಗುವ ಪ್ರಶ್ನೆಯೇ ಇಲ್ಲ. ಅಷ್ಟು ಕೈಮಗ್ಗದಲ್ಲಿ ತಯಾರಾದಂತಹ ಖಾದಿ ಇವತ್ತು ಗಟ್ಟಿಮುಟ್ಟಾಗಿ ಇರುತ್ತದೆ. ಆದ್ದರಿಂದ, ಏಕೆ ಶಾಲಾ ಸಮವಸ್ತ್ರಗಳಿಗೆ ಖಾದಿಯನ್ನೇ ಕೊಡತಕ್ಕಂಥ ಕೆಲಸ ಮಾಡಬಾರದು? ಆ ರೀತಿ ಯೋಚನೆ ಮಾಡಬೇಕು ಅನ್ನತಕ್ಕಂಥ ಮಾತನ್ನು ಹೇಳುತ್ತೇನೆ. ನಾನು ಪತ್ರಿಕೆಯಲ್ಲಿ ವರದಿಯೊಂದನ್ನು ಓದಿದೆ. ಐದು ವರ್ಷಗಳ ಹಿಂದೆ ಪೀಣ್ಯಾದಲ್ಲಿ 35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೈಗಾರಿಕಾ ಸಂಕೀರ್ಣವೊಂದನ್ನು ಕಟ್ಟಿದ್ದಾರಂತೆ. ಆ ಕೈಗಾರಿಕಾ ಸಂಕೀರ್ಣ ಹಾಳು ಬಿದ್ದಿದೆ. ಕಟ್ಟುವುದೇನೋ ಕಟ್ಟಿ ಬಿಟ್ಟರು. ಯಾವುದೋ ಸ್ಕೀಮ್ ಇತ್ತು ಎಂದು ಕಾಣುತ್ತದೆ. Percentage ಸಹ ಚೆನ್ನಾಗಿಯೇ ಸಿಕ್ಕರಬೇಕು. ಚೆನ್ನಾಗಿಯೇ ಕಟ್ಟಿ ಬಿಟ್ಟರು. ಅದನ್ನು ಕಟ್ಟಿದ ನಂತರ ಅದನ್ನು ಏನು ಮಾಡಬೇಕು ಅನ್ನತಕ್ಕಂಥ ಯೋಜನೆ ಇಲ್ಲ. ಹಾಳು ಬಿದ್ದು ಹಂದಿ ನಾಯಿ ಕತ್ತೆ ಅಲ್ಲದೆ ಮನುಷ್ಯರು ಕೂಡ ಏನು ಮಾಡಬಾರದೋ ಅದನ್ನು ಮಾಡುವುದಕ್ಕೆ ಪೀಣ್ಯದ ಕೈಗಾರಿಕಾ ಸಂಕೀರ್ಣ ಘಟಕವನ್ನು ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಹಾಗಾಗಿ ಅಕ್ರಮ ಕೆಲಸಗಳಿಗೆ ಆಶ್ರಯ ತಾಣವಾಗಿ ಇವತ್ತು 38 ಕೋಟಿ ರೂಪಾಯಿಗಳ ಕೈಗಾರಿಕಾ ಸಂಕೀರ್ಣ ಹಾಳು ಬಿದ್ದಿದೆ ಎಂದು ನಾನು ಪತ್ರಿಕಾ ವರದಿ ಓದಿ ನನಗೆ ಆಘಾತವಾಯಿತು. ನಾವು

ಏನು ಕೈಗಾರಿಕಾ ನೀತಿ ಮಾಡಿದರೂ ಈ ರೀತಿ ಹಣ ಪೋಲಾಗುವುದಕ್ಕೆ ಅವಕಾಶ ಮಾಡಿ ಕೊಟ್ಟರೆ ಯಾವ ಕೈಗಾರಿಕೆ ನಮ್ಮ ದೇಶದಲ್ಲಿ ಉದ್ಧಾರ ಆಗುವುದಕ್ಕೆ ಸಾಧ್ಯವಾಗುತ್ತದೆ? ಹಾಗಾಗಿ ಈ ಕಡೆ ಗಮನ ಹರಿಸಬೇಕಾಗುತ್ತದೆ. ರಾಯಚೂರಿನಲ್ಲಿ ಹಾರು ಬೂದಿ ಘಟಕ ಇದೆ. ಹಾರು ಬೂದಿ ಕಲ್ಲಿದ್ದಲಿನಿಂದ ವಿದ್ಯುತ್ ಉತ್ಪಾದನೆ ಮಾಡಿ ಅದರ ವೇಸ್ಟ್ ಆಗಿ ಬಂದ ಹಾರು ಬೂದಿ ಏನು ಒಂದು ಸಮಸ್ಯೆಯಾಗಿತ್ತು. ಈಗ ಏನೋ ಸಿಮೆಂಟ್‌ಗೆ ಮಿಕ್ಸ್ ಮಾಡುವುದರಿಂದ ಸಿಮೆಂಟ್ ಬಳಕೆಗೆ ಅನುಕೂಲವಾಗುತ್ತದೆ ಎಂದು ಬ್ಲೆಂಡ್ ಮಾಡುವುದು ಕಂಡುಹಿಡಿದಿರುವುದರಿಂದ ಹಾರು ಬೂದಿಗೆ ಡಿಮಾಂಡ್ ಜಾಸ್ತಿಯಾಗಿದೆ. ಡಿಮಾಂಡ್ ಜಾಸ್ತಿಯಾಗಿ ಈಗ ಸಣ್ಣ ಸಣ್ಣ ಘಟಕಗಳು ಏನು ಹಾರು ಬೂದಿಯನ್ನು ಉಪಯೋಗಿಸುತ್ತಿದ್ದರು. ಅದು ಇಲ್ಲವೇ ಇಲ್ಲ. ದೊಡ್ಡ ದೊಡ್ಡ ಎಸಿಸಿ ಕಂಪನಿಗಳು ಮತ್ತು ವಾಸವದತ್ತ ಸಿಮೆಂಟ್ ಎಂದು ದೊಡ್ಡ ದೊಡ್ಡ ಕಂಪನಿಗಳು ಎಲ್ಲ ಪೂರ್ತಿ ಅವರೇ ತೆಗೆದುಕೊಂಡು ಬಿಡುತ್ತಾರೆ. ಅವರನ್ನೇ ನಂಬಿಕೊಂಡಿರುವಂತಹ ಸಣ್ಣ ಸಣ್ಣ ಘಟಕಗಳಿಗೆ ಇವತ್ತು ಹಾರು ಬೂದಿ ಇಲ್ಲ. ಇದನ್ನೇ ನಂಬಿದಂತಹ ಸಣ್ಣ ಪುಟ್ಟ ಚಿಕ್ಕ ಕೈಗಾರಿಕಾ ಘಟಕಗಳು ಮುಚ್ಚುವ ಸ್ಥಿತಿಯಲ್ಲಿ ಇವೆ. ಹಾಗಾಗಿ ಕೈಗಾರಿಕಾ ಸಚಿವರು ಆ ಮುಚ್ಚುವ ಸ್ಥಿತಿಯಲ್ಲಿರುವ ಚಿಕ್ಕ ಪುಟ್ಟ ಘಟಕಗಳಿಗೆ ಕೂಡ ಹಾರು ಬೂದಿ ದೊರಕುವ ರೀತಿಯಲ್ಲಿ ತಾವು ವ್ಯವಸ್ಥೆ ಮಾಡಬೇಕು. ಆ ಘಟಕಗಳು ಉಳಿಯುವಂತೆ ನೋಡಿಕೊಳ್ಳಬೇಕು. ಎಂಬ ವಿನಂತಿಯನ್ನು ಅಧ್ಯಕ್ಷರ ಮೂಲಕ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ನಾನು ನಮ್ಮ ಜಿಲ್ಲೆಯಲ್ಲಿ ಕೇಳಿದೆ. ನಮ್ಮ ಜಿಲ್ಲೆ ಹೇಗಿದೆ ಎಂದರೆ, ಬಲಕ್ಕೆ ಹಾಸನ ಮತ್ತು ಎಡಕ್ಕೆ ಶಿವಮೊಗ್ಗ, ನಡುವೆ ಒಂದು ತರಹ ತಬ್ಬಲಿ ಇರುವಂತಹ ಸ್ಥಿತಿಯಲ್ಲಿ ಚಿಕ್ಕಮಗಳೂರು ಜಿಲ್ಲೆ ಇದೆ. ಆ ಪುಸ್ತಕ ಓದಿ ನಮ್ಮ ಜಿಲ್ಲೆಗೆ ಏನಾದರೂ ವಿಶೇಷವಾಗಿ ಅರ್ಥ ಸಚಿವರು ಕೈಗಾರಿಕೆಗಳಿಗೆ ಕೊಡುಗೆ ಕೊಟ್ಟಿದ್ದಾರೆ ಎಂದು ನೋಡಿದೆ. ಎಲ್ಲಿ ನೋಡಿದರೂ ಚಿಕ್ಕಮಗಳೂರು ಜಿಲ್ಲೆ ಹೆಸರು ಕಾಣಲಿಲ್ಲ. ಹಾಸನ ಇತ್ತು, ಶಿವಮೊಗ್ಗ ಇತ್ತು, ಕರಾವಳಿ ಇತ್ತು, ಉತ್ತರ ಕರ್ನಾಟಕ ನೋಡಿದರೆ ಹಳೆಯ ಮೈಸೂರು ಪ್ರಾಂತ್ಯ ಎಂದು ಹೇಳುತ್ತಾರೆ. ಇದರಲ್ಲಿ ಹಳೆಯ ಮೈಸೂರು ಪ್ರಾಂತ್ಯದಲ್ಲಿ ಚಿಕ್ಕಮಗಳೂರು ಎಲ್ಲಿ ಇದೆ ಎಂದು ಹುಡುಕಬೇಕಾಗಿದೆ. ನಮ್ಮ ಊರು ಕೈಗಾರಿಕಾ ವಲಯದಲ್ಲಿ ಬರುತ್ತದೆ ಇಲ್ಲವೆಂದು ಹೇಳುವ ಒಂದು ಸಂಶಯ ನನಗೆ ಕಾಡುವುದಕ್ಕೆ ಪ್ರಾರಂಭವಾಯಿತು. ಅದಕ್ಕೆ ನಾವು ಒಂದು ಕಾಲದಲ್ಲಿ ಕಾಫಿಯನ್ನು ಎಕ್ಸ್‌ಪೋರ್ಟ್ ಮಾಡಿ ದೇಶಕ್ಕೆ ಒಂದು ಆದಾಯ ತಂದುಕೊಡುತ್ತಿದ್ದೇವೆ. ವಾಣಿಜ್ಯ ಬೆಳೆಯಾಗಿ ಬೆಳೆಯುವ ಕಾಫಿ ಬೆಳೆ ಪ್ರದೇಶದಿಂದ ಬಂದಿರತಕ್ಕಂಥ ಪ್ರತಿನಿಧಿ ನಾನು. ಒಂದು ಕಾಲದಲ್ಲಿ ಕಾಫಿ ಬೆಳೆ ಬೆಳೆಯುತ್ತಾರೆ ಎಂದರೆ ಸಾಕು ರಾಜ ಮರ್ಯಾದೆ ಹೆಣ್ಣು ಕೊಡುವವರು ಕೂಡ ಬೇರೆ ಏನೂ ನೋಡುತ್ತಿರಲಿಲ್ಲ.

ಕಾಫಿ ಪ್ಲ್ಯಾಂಟರ್ ಎಂದರೆ ಏನೂ ಚಿಂತೆ ಇಲ್ಲದೆ ಹೆಣ್ಣು ಕೊಡುತ್ತಿದ್ದರು. ಈಗ ಕಾಫಿ ಪ್ಲ್ಯಾಂಟರ್ ಎಂದು ಹೇಳಿ ನೀವು ಹೋಗಿ ಹೆಣ್ಣು ಕೇಳಿದರೆ ಬಾಗಿಲು ಹಾಕಿ ಹಾಗೆಯೇ ಓಡಿಸುತ್ತಾರೆ. ಆ ಪರಿಸ್ಥಿತಿ ಒಳಗೆ ಇವತ್ತು ಬೆಳೆಗಾರರು ಇದ್ದೇವೆ. ಅದಕ್ಕಾಗಿ ನಾನು ಕೈಗಾರಿಕಾ ಸಚಿವರಿಗೆ ಅವರು ಕರೆದ ಸಭೆಯಲ್ಲಿ ವಿನಂತಿ ಮಾಡಿಕೊಂಡಿದ್ದೆ. ನಮ್ಮ ಕಾಫಿ ಉದ್ದಿಮೆ ಸಂಕಷ್ಟದಲ್ಲಿ ಇದೆ. ಚಿಕ್ಕಮಗಳೂರಿಗೆ ಕಾಫಿ ಟೆಕ್ನಾಲಜಿ ಪಾರ್ಕ್ ತೆರೆಯಿರಿ. ಆ ಕಾಫಿ ಟೆಕ್ನಾಲಜಿ ಪಾರ್ಕ್‌ನಲ್ಲಿ ಸಂಶೋಧನೆ ಗುಣಮಟ್ಟ ಮತ್ತು ಮಾರುಕಟ್ಟೆ ಇವೆಲ್ಲವೂ ಕೂಡ ಒಂದಾಗಿರತಕ್ಕಂತಹ ಒಂದು ಸೆಂಟರ್ ಮೂಲಕ ನೀವು ಕಾಫಿ ಉದ್ದಿಮೆ ಸಂಕಷ್ಟದಲ್ಲಿ ಇದೆ. ಆ ಸಂಕಷ್ಟದಿಂದ ಮೇಲಕ್ಕೆತ್ತಬೇಕು ಎನ್ನತಕ್ಕಂತಹ ವಿನಂತಿಯನ್ನು ಕೈಗಾರಿಕಾ ಸಚಿವರಿಗೆ ಮಾಡಿಕೊಳ್ಳುತ್ತಾ, ಕಾಫಿಯಲ್ಲಿ ನಾವು ಬೆಂಗಳೂರಿಗೆ ಬಂದ ಮೇಲೆ ಗೊತ್ತಾಯಿತು. ಐಸ್‌ಕ್ರೀಂ ಮಾಡಬಹುದು. ಕೋಲ್ಡ್ ಕಾಫಿ ಮಾಡಬಹುದು. ಇವೆಲ್ಲಾ ಯಾರು ಮಾಡಿದ್ದು ಎಂದರೆ ಖಾಸಗಿಯವರು. ಖಾಸಗಿಯವರು ಯಾವುದೋ ಜರ್ಮನ್ ಕಂಪನಿಯವರು ಬೇರೆ ಬೇರೆಯವರು ಮತ್ತು ಎಪಿಸಿ ಎನ್ನುವ ಕಂಪನಿಯವರು ಬಂದು ಆತ ಚಾಕೋಲೇಟ್ ಮಾಡಬಹುದು. ಚುಯಿಂಗಂ ಮಾಡಬಹುದು. ಕೋಲ್ಡ್ ಕಾಫಿ ಮಾಡಬಹುದು. ವೆರೈಟ್ ಕಾಫಿ ಮತ್ತು ಬ್ಲಂಡ್ ಕಾಫಿ ಎಂದು ಮಾಡಬಹುದು ಎಂದು ಗೊತ್ತಾಯಿತು. ಆದರೆ ನಮ್ಮ ಕಾಫಿ ಬೋರ್ಡ್ ಆಗಲಿ, ಕಾಫಿ ಕೈಗಾರಿಕೆ ಕಡೆಯಿಂದಾಗಲಿ ಈ ರೀತಿ ಯೋಚನೆ ಮಾಡಲಿಲ್ಲ. ಹಾಗಾಗಿ ಕಾಫಿ ಟೆಕ್ನಾಲಜಿ ಪಾರ್ಕ್ ತೆರೆಯಿರಿ. ನೀವು ಎಕ್ಸ್‌ಪೋರ್ಟ್ ಮಾಡತಕ್ಕಂತಹ ಕಾಫಿಯ ಹೆಚ್ಚಿನ ಪಾಲು ಅಲ್ಲಿಗೆ ನಮಗೆ ಮಾರುಕಟ್ಟೆ ವ್ಯವಸ್ಥೆ ಬೇಕಾಗಿದೆ. ಇವತ್ತು ಲಂಡನ್‌ನಲ್ಲಿ ಏನು ಪ್ರೈಸ್ ಇದೆ. ಕಾಫಿ ಮಾರುವುದು ಹೇಗೆ, ನೇರವಾಗಿ ನಾವು ಟ್ರೇಡ್ ಮಾಡಿ ಮಾರತಕ್ಕಂಥದ್ದು ಹೇಗೆ? ಇವೆಲ್ಲವನ್ನು ತಿಳಿಸತಕ್ಕಂತಹ ಕಾಫಿ ಟೆಕ್ನಾಲಜಿ ಪಾರ್ಕ್ ತೆಗೆಯಬೇಕೆಂದು ವಿನಂತಿ ಮಾಡಿಕೊಳ್ಳುತ್ತಾ, ಇನ್ನು ಒಂದು ಅಧ್ಯಕ್ಷರೆ, ಯಾವುದೇ ದೇಶದಲ್ಲಿ ಕಚ್ಚಾ ವಸ್ತು ರಫ್ತು ಮಾಡುತ್ತೇವೆಂದರೆ, ಆ ದೇಶಕ್ಕೆ ಹಿಡಿದ ದರಿದ್ರ ಎಂದು ಅರ್ಥ. ನಾವು ಏನು ಕಚ್ಚಾ ವಸ್ತುಗಳನ್ನು ರಫ್ತು ಮಾಡುತ್ತೇವೆಂದು ಹೆಮ್ಮೆಯಿಂದ ಬೆನ್ನು ತಟ್ಟಿಕೊಳ್ಳುವುದು ಅಲ್ಲ, ಎಲ್ಲಿ ಕಚ್ಚಾ ವಸ್ತು ರಫ್ತು ಮಾಡುತ್ತೇವೆ ನಿಜಕ್ಕೂ ಆ ದೇಶಕ್ಕೆ ದರಿದ್ರ ಹಿಡಿಯಿತು ಎಂದು ಅರ್ಥ. ಏಕೆಂದರೆ, ಆಕಚ್ಚಾ ವಸ್ತು ತೆಗೆದುಕೊಂಡು ಹೋದವನು ಅದನ್ನು ಸಿದ್ಧವಸ್ತುವನ್ನಾಗಿ ಮಾಡಿ 10 ಪಟ್ಟು 100 ಪಟ್ಟು ಬೆಳೆ ಹೆಚ್ಚು ಮಾಡಿ ನಮ್ಮ ದೇಶಕ್ಕೆ ವಾಪಸ್ ಎಕ್ಸ್‌ಪೋರ್ಟ್ ಮಾಡುತ್ತಾನೆ. ನಾವು ಅದನ್ನು ದುಬಾರಿ ಬೆಳೆ ಕೊಟ್ಟು ಫಾರೀನ್ ಮಾಲು ಎಂದು ಕೊಂಡು ಕೊಳ್ಳುತ್ತೇವೆ. ಯಾವ ಕಚ್ಚಾ ವಸ್ತುವಿನಲ್ಲಿ ಅವನು ತಯಾರು ಮಾಡುತ್ತಾನೆ. ಅದೇ ಮಾಲನ್ನು ನಾವು ಇಲ್ಲಿ ಕೈಗಾರಿಕೆ ಸ್ಥಾಪನೆ

ಮಾಡಿ ತಯಾರಿಸಿದರೆ ಅದು ಬಳ್ಳಾರಿಯಿಂದ ಹೋಗತಕ್ಕಂತಹ ಅದಿರು ಇರಬಹುದು. ಅಥವಾ ಕುದುರೆಮುಖದಿಂದ ಕಳೆದ 40 ವರ್ಷಗಳಿಂದ ಕುದುರೆಮುಖ ಸಹ್ಯಾದ್ರಿ ಗುಡ್ಡವನ್ನು ಬರಿದು ಮಾಡಿ ಕಳುಹಿಸಿದಂತಹ ಅದಿರು ಇರಬಹುದು. ಲಾಭ ಲಾಭ ಎಂದು ನಾವು ಬೆನ್ನು ತಟ್ಟಿಕೊಳ್ಳುತ್ತೇವೆ. ಆ ಲಾಭಕ್ಕಿಂತ ನಷ್ಟವೇ ನಮಗೆ ದರಿದ್ರ ಹಿಡಿದಿದ್ದು, ಹಾಗಾಗಿ ಇಲ್ಲಿ ಅದಕ್ಕೆ ಆಧಾರಿತ ಗಣಿ ಮೂಲಕ ಸಿಗುವಂತಹ ವಸ್ತುಗಳನ್ನು ಉಪಯೋಗಿಸುವ ಹಾಗೆ ಪೂರಕ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಯೋಚನೆ ಮಾಡಬೇಕು ಎನ್ನತಕ್ಕಂತಹ ವಿನಂತಿಯನ್ನು ಮಾಡಿಕೊಳ್ಳುತ್ತಾ, ಸುಪ್ರೀಂಕೋರ್ಟಿನ ತೀರ್ಪಿನ ಪ್ರಕಾರ 2005 ಡಿಸೆಂಬರ್‌ಗೆ ಕುದುರೆಮುಖ ಕಂಪನಿಯ ವಾಯಿದೆ ಮುಗಿಯುತ್ತದೆ ಎಂದರೆ 2005ಕ್ಕೆ ಮುಗಿಯುತ್ತದೆ. ಎಂದರೆ, ಇನ್ನು ನಾಲ್ಕು ತಿಂಗಳುಗಳಿಗೆ ಕುದುರೆ ಮುಖದಂತಹ ದೊಡ್ಡ ಕಂಪನಿ ಅಲ್ಲಿ ಇನ್ನು ಗಣಿಗಾರಿಕೆ ನಡೆಸುವ ಹಾಗಿಲ್ಲ ಎಂದು ಹೇಳಿದೆ. ನಾಲ್ಕು ತಿಂಗಳುಗಳಿಗೆ ಮುಚ್ಚತಕ್ಕಂತಹ ಕೈಗಾರಿಕೆ, ಅಲ್ಲಿ ಮೂರುವರೆ ಸಾವಿರಕ್ಕೂ ಹೆಚ್ಚು ಜನ ಕಾರ್ಮಿಕರು ಇದ್ದಾರೆ ಅವರಿಗೆ ಪರ್ಯಾಯವಾಗಿ ಒಂದು ಯೋಚನೆ ಮಾಡಬೇಕು. ಕುದುರೆಮುಖ ಕಂಪನಿ ಅಂತೂ ಮುಚ್ಚಬೇಕು. ಆ ಕಾರಣಕ್ಕಾಗಿ ಮತ್ತೆ ಗಣಿಗಾರಿಕೆ ಮುಂದುವರೆಸಿ ಎಂದು ಹೇಳತಕ್ಕಂತಹ ಸ್ಥಿತಿಯಲ್ಲಿ ಮಲೆನಾಡಿನ ಜನ ಯಾರೂ ಇಲ್ಲ. ಒಂದು ಕಾಲದಲ್ಲಿ 100 ರಿಂದ 120 ಇಂಚು ಮಳೆ ಆಗುತ್ತಿದ್ದ ನಮ್ಮ ಊರಿನಲ್ಲಿ ಇವತ್ತು ನಾವು ಮುಂಗಾರಿನಲ್ಲಿಯೂ ಮಳೆ ಇಲ್ಲದೆ ಇರುವಂತಹ ಸ್ಥಿತಿಗೆ ಬಂದಿದ್ದೇವೆ. ಗುಡ್ಡ ಎಲ್ಲ ಬರಿದು ಮಾಡಿರುವುದರಿಂದ ಮಲೆನಾಡಿನಲ್ಲಿಯೇ ಮಳೆ ಇಲ್ಲ. ಅಂತಹ ಸ್ಥಿತಿಗೆ ನಾವು ಬಂದು ಬಿಟ್ಟಿದ್ದೇವೆ. ಮಳೆ ಕಾಣಬೇಕೆಂದರೆ ನಾವು ಬೆಂಗಳೂರಿಗೆ ಬರಬೇಕು. ಎನ್ನುವ ಸ್ಥಿತಿಯಲ್ಲಿ ಮಲೆನಾಡಿನವರು ಬಂದಿದ್ದೇವೆ. ಹಾಗಾಗಿ ಮತ್ತೆ ಅದನ್ನು ಮುಂದುವರೆಸಿ ಎಂದು ಹೇಳುವ ಸ್ಥಿತಿಯಲ್ಲಿ ನಾವು ಇಲ್ಲ. ಆದರೆ ಆ ಕಾರ್ಮಿಕರು ಬೀದಿ ಪಾಲಾಗಬಾರದು. ಅದಕ್ಕೆ ಪರಿಹಾರ ಏನು ಅದರ ಯೋಚನೆ ಏನಾದರೂ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆ ಸಹಯೋಗದಿಂದ ಮಾಡತಕ್ಕಂತಹ ಯೋಚನೆ ಮಾಡಿದ್ದಾರಾ? ಮಾಡಿದ್ದರೆ ಅದನ್ನು ಈಗಿಂದೀಗಲೇ ಇಂಪ್ಲಿಮೆಂಟ್ ಮಾಡಬೇಕು. ಏಕೆಂದರೆ, ಡಿಸೆಂಬರ್‌ಗೆ ಮುಗಿಯುತ್ತದೆ ಅಂದ ತಕ್ಷಣ ಬೆಳಗಾರ ಅವರನ್ನು ಶಿಫ್ಟ್ ಮಾಡಿ ಇನ್ನೊಂದು ಕಡೆ ಕಾರ್ಯಾಚರಣೆ ಮಾಡುವುದಕ್ಕಾಗುವುದಿಲ್ಲ. ಈಗಿನಿಂದಲೇ ಸಿದ್ಧತೆ ಮಾಡಬೇಕು. ಅದೂ ಈಗಲೂ ತಡವಾಯಿತು. ಈಗಿನಿಂದ ಸಿದ್ಧತೆ ಮಾಡಿದರೆ ಮಾತ್ರ ಏನಾದರೂ ಮಾಡುವುದಕ್ಕೆ ಸಾಧ್ಯ. ಆ ರೀತಿ ಏನಾದರೂ ಮಾಡಿದ್ದರೆ ಅದನ್ನು ಜನರಿಗೆ ತಿಳಿಸತಕ್ಕಂತಹ ಕೆಲಸವಾಗಬೇಕು. ಇಲ್ಲದಿದ್ದರೆ ಈಗಲೇ ಭಾರತ ಸರ್ಕಾರದ ಜೊತೆಯಲ್ಲಿ ಸಮಲೋಚನೆ ನಡೆಸಿ ಪರ್ಯಾಯವಾದ ಪರಿಹಾರದ ಯೋಚನೆ ಮಾಡಬೇಕೆಂದು

ವಿನಂತಿಯನ್ನು ಮಾಡಿಕೊಳ್ಳುತ್ತಾ, ನಾನು ಬೀದರ್ ಜಿಲ್ಲೆಗೆ ಪ್ರವಾಸಕ್ಕೆ ಹೋದಾಗ ಒಂದು ಪಳಿಯುಳಿಕೆಗಳ ಸಂಕೀರ್ಣ ನೋಡಿದೆ. ಬೀದರ್ ಜಿಲ್ಲೆಯ ಶಾಸಕರೂ ಇಲ್ಲಿದ್ದಾರೆ. ಏನೆಂದು ಕೇಳಿದೆ, ಇದು ಎಲ್ಲ ಇಂಡಸ್ಟ್ರಿಯಲ್ ಸೈಟ್, ಇಲ್ಲಿ ಎಲ್ಲ ಮುಂಚೆ ಬಹಳ ಸಬ್ಸಿಡಿ ಕೊಟ್ಟರು. ಅದಕ್ಕೆ ಆಂಧ್ರದವರು ಮತ್ತು ಮಹಾರಾಷ್ಟ್ರದವರು ಇಲ್ಲಿ ಬಂದು ಇನ್‌ಸ್ಟಾಲ್ ಮಾಡಿ, ಸಬ್ಸಿಡಿ ಸಾಲ ತೆಗೆದುಕೊಂಡು ಮೆಷಿನರಿ ಎಲ್ಲ ಒಳಗಿಂದೊಳಗೆ ಪಾರ್ಸಲ್ ಮಾಡಿ, ಬೇಗ ಹಾಕಿ ಈಗ ಪಳಿಯುಳಿಕೆಗಳು ಮಾತ್ರ ಉಳಿದಿವೆ ಎಂದು ಹೇಳಿದರು. ಎಲ್ಲಾದರೂ ಸಬ್ಸಿಡಿ ಕೊಡುತ್ತೇವೆ ಎಂದರೆ, ಯಾವ ಯಾವ ಊರಿನವರೋ ಬಂದು ಬಿಡುತ್ತಾರೆ. ಬಂದು ಸಾಲ ಸಬ್ಸಿಡಿ ತೆಗೆದುಕೊಳ್ಳುತ್ತಾರೆ. ಊರಿನವರಿಗೆ ಏನೂ ಇಲ್ಲ, ಸಾಲವೂ ಇಲ್ಲ, ಸಬ್ಸಿಡಿಯೂ ಇಲ್ಲ, ಏಕೆಂದರೆ ಅವರು ಕೊಡುವಷ್ಟು ಪರ್ಸೆಂಟ್ ಕೊಡುವ ತಾಕತ್ತು ಊರಿನವರಿಗೆ ಇರುವುದಿಲ್ಲ. ಬಂಡವಾಳ ಹಾಕುವುದಕ್ಕಾಗುವುದಿಲ್ಲ. ಅವರು ಎಲ್ಲ ಬರುತ್ತಲೇ ಯಾವ್ಯಾವುದೋ ಡಿಗ್ರಿ ಮತ್ತು ಬ್ಯಾಂಕ್ ಮ್ಯಾನೇಜರ್‌ಗಳನ್ನು ಬರುವಾಗಲೇ ಬುಕ್‌ಮಾಡಿಕೊಂಡು ಬರುತ್ತಾರೆ. ಸಾಲ ತೆಗೆದುಕೊಳ್ಳುತ್ತಾರೆ. ಸಬ್ಸಿಡಿ ತಿನ್ನುತ್ತಾರೆ, ಬಾಗಿಲು ಹಾಕುತ್ತಾರೆ. ಹೆಸರಿಗೆ ಅಷ್ಟೇ ನಾವು ಇಷ್ಟು ಇನ್‌ವೆಸ್ಟ್ ಮಾಡಿದ್ದೇವೆ, ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ಕೈಗಾರಿಕಾ ಕೃತಕ ವಲಯದಲ್ಲಿ ಹಿಂದುಳಿದಿರತಕ್ಕಂತಹ ಪ್ರದೇಶಕ್ಕೆ ಇನ್‌ವೆಸ್ಟ್ ಮಾಡಿದ್ದೇವೆ ಎಂದು ಪುಸ್ತಕದಲ್ಲಿ ಅಷ್ಟೇ ನಮೂದಾಗುತ್ತದೆ. ಆದರೆ ಯಾವುದೇ ಕೈಗಾರಿಕೆ ಕಾರ್ಯಾಚರಣೆ ನಡೆಸುತ್ತಾ? ಹಾಗೆ ಸಾಲ ತೆಗೆದುಕೊಂಡು ಊರು ಬಿಟ್ಟು ಗಂಟು ಮುಳುಗಿಸಿ, ಸಬ್ಸಿಡಿ ತಿಂದು ಹೋದವರ ಸಾಲ ವಸೂಲಿ ಮಾಡುವುದಕ್ಕೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯಾ? ಕೈಗೊಂಡಿಲ್ಲ ಎಂದರೆ ನೀವು ಏನೇ ವಿಶೇಷ ವಲಯ ಎಂದು ಮಾಡಿದರೂ ಕೂಡ ಈ ರೀತಿ ಸಬ್ಸಿಡಿ ತಿಂದು ಮುಳುಗಿಸಿ ಹೋಗುವುದು ಬಿಟ್ಟರೆ ಕೈಗಾರಿಕೆ ಅಂತೂ ಯಾವ ಊರುಗಳಲ್ಲಿಯೂ ಉದ್ಧಾರವಾಗುತ್ತಿಲ್ಲ. ಹಾಗಾಗಿ ಪಳೆಯುಳಿಕೆಗಳು ನಾನು ಬೀದರ್‌ನಲ್ಲಿ ಗಮನಿಸಿದಷ್ಟೇ ಅಲ್ಲ, ಎಲ್ಲಾ ಜಿಲ್ಲೆಗಳಲ್ಲಿಯೂ ಇರಬಹುದು. ಈ ರೀತಿ ಎಲ್ಲೆಲ್ಲಿ ಸಾಲ ತೆಗೆದುಕೊಂಡು ಸಬ್ಸಿಡಿ ತಿಂದು ಬಾಗಿಲು ಮುಚ್ಚಿ ಹೋಗಿದ್ದಾರೆ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಮತ್ತು ಉತ್ಪಾದನೆ ಮಾಡಿದೆ ಸಬ್ಸಿಡಿ ತಿಂದವರ ಸಬ್ಸಿಡಿಯನ್ನು ವಾಪಸ್ ತೆಗೆದುಕೊಳ್ಳುವ ಕೆಲಸಗಳನ್ನು ಮಾಡಬೇಕೆಂದು ಒತ್ತಾಯ ಮಾಡುತ್ತಾ, ಚಿಕ್ಕಮಗಳೂರು ರಾಜಕೀಯವಾಗಿ ಬಹಳ ಪ್ರಾಮುಖ್ಯವಾದ ಜಿಲ್ಲೆ. 1979ನೇ ಇಸವಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರಿಗೆ ರಾಜಕೀಯ ಪುನರ್ಜನ್ಮ ನೀಡಿದ ಜಿಲ್ಲೆ. ನಾವು ಆಗ ಎಲ್ಲಾ ಸಣ್ಣ ಹುಡುಗರು. ಆಗ ಏನು ಭಾಷಣ ಮಾಡಿದರು ಎಂದರೆ, ಚಿಕ್ಕಮಗಳೂರಿಗೆ ರೈಲು ಬರುತ್ತದೆ ಎಂದು ಹೇಳಿದರು. ಈಗ ಕಂಬಿ ಇಲ್ಲದೆ ಇರುವ ರೈಲು ಕಳೆದ 1979ನೇ ಇಸವಿಯಿಂದ ಓಡುತ್ತಿದೆ. ನಮಗೆ ಈಗ ಕಂಬಿ ಇರುವ ರೈಲು ಬೇಕು. ಕಂಬಿ ಇಲ್ಲದೆ ಇರತಕ್ಕಂತಹ

ರೈಲು ಓಡಿಸುತ್ತಾ ಬಂದರು, ಶ್ರೀಮತಿ ಇಂದಿರಾಗಾಂಧಿಯವರಿಗೆ ಗೆಲ್ಲಿಸಿ ಕಳಿಸಿದಾಗ ಇನ್ನೇನು ರೈಲು ಆಗಿ ಹೋಯಿತು. ರೈಲು ಚಿಕ್ಕಮಗಳೂರಿಗೆ ಬಂದಿತು, ಚಿಕ್ಕಮಗಳೂರು ಎಲ್ಲಾ ಊರುಗಳ ಹಾಗೆ ಉದ್ಧಾರವಾಗುತ್ತದೆ. ನಿಮಗೇನು ತಲೆ ಬಿಸಿ ಇಲ್ಲ, ರಾತ್ರಿ ಚಿಕ್ಕಮಗಳೂರಿನಲ್ಲಿ ಮಲಗಿಕೊಂಡರೆ, ಬೆಳಿಗ್ಗೆ ಬೆಂಗಳೂರಿಗೆ ಬಂದು ಏಳಬಹುದು ಎಂದು ಹೇಳುವರು. ಆದರೆ ಇವತ್ತಿನವರೆಗೆ ನಮಗೆ ಅದು ಕಾಣಲಿಲ್ಲ. ಹಾಗಾಗಿ ಈಗ ಏನೋ ಒಂದು ನಿರ್ಮಾಣ ಮಾಡುವುದು, ಅವು ಇವು ಕೆಲಸ ನಡೆಯುತ್ತಿದೆ.

ಆದರೆ ಇನ್ನೂ ಎಷ್ಟು ವರ್ಷಕ್ಕೆ ನಮ್ಮ ಚಿಕ್ಕಮಗಳೂರಿಗೆ ರೈಲು ಬರುವುದು ಇನ್ನೂ ಎಷ್ಟು ವರ್ಷಕ್ಕೆ? ಹಾಗಾಗಿ ಕಂಬಿ ಮೇಲೆ ಬಿಡತಕ್ಕಂಥ ರೈಲು ಓಡುವಂತೆ ರಾಜ್ಯ ಸರ್ಕಾರ ವಿಶೇಷವಾಗಿ ಒತ್ತು ಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ಒಂದೇ ಒಂದು ಮಾತನ್ನು ಹೇಳಬಯಸುತ್ತೇನೆ. ನಮ್ಮದು ನಕ್ಸಲ್ ಪೀಡಿತ ಜಿಲ್ಲೆ, ನೀವೇನು ಇಲ್ಲಿ 1982ನೇಯ ಇಸವಿಯಲ್ಲಿ ಹಾಸ್ಟೆಲ್ ಸೀಟ್ ರಿಸರ್ವ್ ಮಾಡಿಟ್ಟಿದ್ದೀರಿ ಈಗಲೂ ಕೂಡ ಅದೇ ಪರ್ಸೆಂಟೇಜ್ ಹಾಸ್ಟೆಲ್ ಸೀಟ್ ಕೊಟ್ಟಿದ್ದೀರಿ. ನಮಗೇನಾದರೂ ಈ ಗಿರಿಜನ ಮಕ್ಕಳಿಗೆ, ಹರಿಜನ ಮಕ್ಕಳಿಗೆ ಮತ್ತು ಹಿಂದುಳಿದ ವರ್ಗದ. ಮಕ್ಕಳಿಗೆ ನೀವು ವಿಶೇಷವಾಗಿ ಹಾಸ್ಟೆಲ್ ಸೀಟ್ ಕೊಡದಿದ್ದರೆ ಆ ಮಕ್ಕಳು ಓದುವುದಕ್ಕಾಗುವುದಿಲ್ಲ. ಓದಕ್ಕಾಗುವುದಿಲ್ಲ ಎಂದರೆ ಅವರ ಕೈಗೆ ಯಾರ್‍ಯಾರೋ ಬಂದು ಅವರ ತಲೆ ತಿರುಗಿಸಿ ನಾವು ನಿಮಗೆ ಬಂದೂಕು ಕೊಡುತ್ತೇವೆ. ನಿಮ್ಮ ರಾಜ್ಯವನ್ನು ನೀವೇ ಆಳುವಿರಂತೆ ಎಂದು ಹೇಳಿ ಅವರ ತಲೆ ತಿರುಗಿಸುತ್ತಾರೆ. ಅದಕ್ಕೆ ಅವಕಾಶ ಆಗಬಾರದು ಎಂದರೆ ನೀವು ಹಾಸ್ಟೆಲ್‌ಗಳಲ್ಲಿ ಹೆಚ್ಚುವರಿ ಸೀಟ್ ಕೊಡಬೇಕು. ಹೆಚ್ಚುವರಿ ಸೀಟ್ ಕೊಡಬೇಕು ಮತ್ತು ಆ ಮೂಲಕ ಎಲ್ಲಾ ಬಡ ಹಿಂದುಳಿದ ವರ್ಗದ ಗಿರಿಜನ ಮಕ್ಕಳು ಓದುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವ ಒತ್ತಾಯವನ್ನು, ವಿನಂತಿಯನ್ನು ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ವಾಟಾಳ್ ನಾಗರಾಜ್‌ರವರು ಮಾತನಾಡಬೇಕು. ಮಾತನಾಡುತ್ತೇನೆ ಎಂದು ತಾವು ಮನವಿಯನ್ನು ಕಳುಹಿಸಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ಡಿಮ್ಯಾಂಡ್ ಮೇಲೆ ನಾನು ಆಮೇಲೆ ಮಾತನಾಡುತ್ತೇನೆ. ಅದಕ್ಕಿಂತಲೂ ಮುಂಚೆ ಬಹಳ ಪ್ರಾಮುಖ್ಯವಾದ ವಿಷಯದ ಬಗ್ಗೆ ತಮಗೆ ಈಗಾಗಲೇ ಹೇಳಿ ತಮ್ಮ ಗಮನಕ್ಕೆ ತಂದಿದ್ದೇನೆ. ಜಲಸಂಪನ್ಮೂಲ ಸಚಿವರೂ ಕೂಡ ಬಂದಿದ್ದಾರೆ.

ಅಧ್ಯಕ್ಷರು: ಆ ವಿಷಯವನ್ನು ನೀವು ಆಮೇಲೆ ಮಾತನಾಡಲು ತಮಗೆ ಅವಕಾಶ ಮಾಡಿಕೊಡುತ್ತೇನೆ. ಈಗ ನಾಗರಾಜಶೆಟ್ಟಿರವರು ಮಾತನಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ವಾಟಾಳ್ ನಾಗರಾಜ್‌ರವರನ್ನು ಯಾವುದೇ ವಿಷಯದ ಮೇಲೆ ಮಾತನಾಡಲು ಯಾವಾಗ ಬೇಕಾದರೂ ಕರೆದರೂ ಅವರು ಎರಡು ಗಂಟೆಗಳ ಕಾಲ ಮಾತನಾಡುತ್ತಾರೆ. ಅದರ ಬಗ್ಗೆ ತಾವು ಏನೂ ಚಿಂತೆ ಮಾಡಬೇಡಿ. ಆದರೆ ಈಗ ಡಿಮ್ಯಾಂಡ್ ಮೇಲೆ ನಾಗರಾಜಶೆಟ್ಟಿರವರು ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಯಡಿಯೂರಪ್ಪನವರೆ, ಆದರೆ ಇವತ್ತು ವಾಟಾಳ್‌ರವರು ಏಕೋ ಇವೊತ್ತು ಸುಮ್ಮನೆ ಕುಳಿತುಬಿಟ್ಟಿದ್ದಾರೆ. ಜ್ವರ ಬಂದುಬಿಟ್ಟಿದೆಯೇನೋ ಗೊತ್ತಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಬೇಡಿಕೆ ಮೇಲೆ ಮಾತನಾಡಲೇಬೇಕು. ಅದು ಈಗಾಗಲೇ ಸ್ಪಷ್ಟವಾಗಿದೆ. ತಮಗೆ ಹೇಳಿಯೂ ಇದ್ದೇನೆ. ಆದರೆ ಮತ್ತೊಂದು ವಿಚಾರ ತಮ್ಮ ಗಮನಕ್ಕೆ ತರುವುದೇನೆಂದರೆ...

ಅಧ್ಯಕ್ಷರು: ಆಮೇಲೆ ಅವಕಾಶ ಕೊಡುತ್ತೇನೆ. ಜಲ ಸಂಪನ್ಮೂಲ ಸಚಿವರು ಇದ್ದಾರೆ. ಮೊದಲು ಡಿಮ್ಯಾಂಡ್ ಮೇಲಿನ ಚರ್ಚೆ ಆಗಲಿ.

ಶ್ರೀ ವಾಟಾಳ್ ನಾಗರಾಜ್ : ಆಯಿತು ಅಧ್ಯಕ್ಷರೆ,

ಅಧ್ಯಕ್ಷರು: ನಾಗರಾಜಶೆಟ್ಟರೆ ತಾವು ಮಾತನಾಡಿ.

ಶ್ರೀ ಬಿ. ನಾಗರಾಜಶೆಟ್ಟಿ (ಬಂಟ್ವಾಳ) : ಮಾನ್ಯ ಅಧ್ಯಕ್ಷರೆ, ಬೇಡಿಕೆ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟ ತಮಗೆ ವಂದಿಸುತ್ತಾ ಪ್ರಮುಖವಾಗಿ ಉದ್ದಿಮೆಗಳ ಬಗ್ಗೆ ಒಂದೆರಡು ವಿಚಾರಗಳನ್ನು ಮಂಡನೆ ಮಾಡುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಪ್ರಮುಖವಾಗಿ ನಮ್ಮ ಸನ್ಮಾನ್ಯ ಹಿರಿಯ ಮಂತ್ರಿಗಳು ಇಲ್ಲಿ ಇದ್ದಾರೆ. ಈಗಾಗಲೇ ಮಹತ್ತರ ಬದಲಾವಣೆಯನ್ನು ತರುವಂಥ ವ್ಯವಸ್ಥೆಗೆ ಅನೇಕ ವಿಚಾರಗಳ ಮಂಡನೆಯಾಗಿದೆ. ಆದರೂ ಕೂಡ ಈಗಾಗಲೇ ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ಅನೇಕ ವಿಮಾನ ನಿಲ್ದಾಣಗಳ ಬೆಳವಣಿಗೆಯ ಕಾರ್ಯದಲ್ಲಿ ನಮ್ಮ ಮಂಗಳೂರು ವಿಮಾನ ನಿಲ್ದಾಣ ಕೂಡ ಒಂದು. ಇದು ಬಹಳಷ್ಟು ಹಳೆಯ ವಿಮಾನ ನಿಲ್ದಾಣ. ಕೇರಳದಲ್ಲಿ ಮತ್ತು ಅಕ್ಕಪಕ್ಕದ ರಾಜ್ಯಗಳಲ್ಲಿ ಇತ್ತೀಚೆಗೆ ಆದಂಥ ವಿಮಾನ ನಿಲ್ದಾಣಗಳು ಇಂಟರ್‌ನ್ಯಾಶನಲ್ ಮಟ್ಟಕ್ಕೆ ಹೋಗಿದೆ. ಆದರೆ ಮಂಗಳೂರಿನ ವಿಮಾನ ನಿಲ್ದಾಣ ಇನ್ನೂ ಕೆಳಮಟ್ಟದಲ್ಲಿದೆ. ಆದರೆ ಇತ್ತೀಚೆಗೆ ಅದರ ಅಭಿವೃದ್ಧಿ ಕಾರ್ಯ ಬಹಳ ಜೋರಾಗಿ ನಡೆಯುತ್ತಿದೆ. ಆ ದೃಷ್ಟಿಯಿಂದ ಆ ವಿಮಾನ ನಿಲ್ದಾಣಕ್ಕೆ ಸುಮಾರು 11 ಕೋಟಿ ರೂಪಾಯಿಗಳನ್ನು ಕರ್ನಾಟಕ ಸರ್ಕಾರ ಕೊಡಬೇಕಾದದ್ದು ಇದೆ. ಏಕೆಂದರೆ ಅಕ್ವಿಸಿಶನ್ ಆಫ್ ದಿ ಲ್ಯಾಂಡ್ ಮತ್ತು ನಮ್ಮ ನಿರಾಶ್ರಿತರಿಗೆ ಪರಿಹಾರ ಕಾರ್ಯಕ್ಕಾಗಿ. ಅದರಲ್ಲಿ 3 ಕೋಟಿ ರೂಪಾಯಿಗಳು ಸಂಬಂಧಪಟ್ಟ ಮಂತ್ರಿಗಳ ಇಲಾಖೆಗೆ ಬಿಡುಗಡೆ ಆಗಿದೆ ಎಂದು ತಿಳಿದುಬಂದಿದೆ. ಇನ್ನು ಉಳಿದಂಥ 8 ಕೋಟಿ ರೂಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒಂದು ವಿಚಾರ. ಅಷ್ಟೇ ಅಲ್ಲದೇ ಈಗಾಗಲೇ

ಹೇಳಿದ ಹಾಗೆ ಕಾರ್ಯ ಬಹಳ ಜೋರಾಗಿ ನಡೆಯುತ್ತಿದೆ. ಅದಕ್ಕೆ ಬೇಕಾದಂಥ ಟರ್ಮಿನಲ್ ಬಿಲ್ಡಿಂಗ್ ಮಾತ್ರ ಸ್ವಲ್ಪ ತಡವಾಗುತ್ತದೆ ಎನ್ನುವ ವಿಚಾರವಿದೆ. ಆದರೆ ಈ ಟರ್ಮಿನಲ್ ಬಿಲ್ಡಿಂಗ್ ತಡವಾದರೂ ಚಿಂತೆಯಿಲ್ಲ. ಈಗ ಇದ್ದಂಥ ಬಿಲ್ಡಿಂಗ್‌ನಲ್ಲಿಯೇ ನಾವು ಸುಧಾರಿಸಬಹುದು. ಅದು ಬರುವ ಡಿಸೆಂಬರ್- ಜನವರಿ ತಿಂಗಳಿನಲ್ಲಿ ರನ್‌ವೇ ಕಂಪ್ಲೀಟ್ ಆದರೆ ಅಲ್ಲಿ ಜನವರಿ ತಿಂಗಳಿನಿಂದ ಇಂಟರ್‌ನ್ಯಾಶನಲ್ ಫ್ಲೈಟ್‌ನ್ನು ಇಳಿಸುವಂಥ ಕಾರ್ಯಕ್ರಮ ಮಾಡಬೇಕಾದರೆ ಎರಡು ಮೂರು ತಿಂಗಳ ಹಿಂದೆಯೇ ಅದಕ್ಕೆ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳ ಮುಖೇನ ಹಾಗೂ ಬೇರೆ ಬೇರೆ ಫ್ಲೈಟ್ ಕಂಪನಿಗಳ ಮುಖೇನ ಮಾತನಾಡುವುದಕ್ಕೆ ಬೇಕಾದಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಸ್ಪಂದಿಸಬೇಕು. ಜನವರಿ ತಿಂಗಳಿನಲ್ಲಿ ನಮ್ಮ ಮಂಗಳೂರು ಏರ್‌ಪೋರ್ಟ್ ಇಂಟರ್‌ನ್ಯಾಶನಲ್ ಏರ್‌ಪೋರ್ಟ್ ಆಗಿ ಪರಿವರ್ತನೆ ಆಗಬೇಕು. ಇಂಟರ್‌ನ್ಯಾಶನಲ್ ಫ್ಲೈಟ್ಸ್‌ಗಳು ಅಲ್ಲಿ ಇಳಿಯಬೇಕೆಂದು ತಮ್ಮ ಮುಖೇನ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎನ್. ಯೋಗಿಶ್‌ಭಟ್ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ್ದು 110 ಕೋಟಿ ರೂಪಾಯಿಗಳ ಪ್ಯಾಕೇಜ್ ರೆಡಿ ಇದೆ. ನಮ್ಮ ಕಡೆಯಿಂದ 8 ಕೋಟಿ ರೂಪಾಯಿ ರಿಲೀಸ್ ಆದ ತಕ್ಷಣ ರನ್‌ವೇ ನಿರ್ಮಾಣಕ್ಕೆ ಸಂಬಂಧಪಟ್ಟಂಥ ಅಕ್ವಿಸಿಶನ್ ಕೆಲಸ ಮುಕ್ತಾಯಗೊಳ್ಳುತ್ತದೆ. ದಯವಿಟ್ಟು 8 ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ನಾಗರಾಜಶೆಟ್ಟಿ: ಎರಡನೆಯದಾಗಿ ರಾಯರೆಡ್ಡಿಯವರು ಬೆಳಿಗ್ಗೆ ಮಾತನಾಡುವಾಗ ಹೇಳಿದರು, ನಮ್ಮ ರಾಜ್ಯದಲ್ಲಿ ಕೈಗಾರಿಕಾ ನೀತಿಯ ಬಗ್ಗೆ ಹಾಗೂ ಲೈಸೆನ್ಸಿನ ವಿಚಾರದಲ್ಲಿ. ನಾನು ಅನೇಕ ಬಾರಿ ಹಿರಿಯ ಮಂತ್ರಿಗಳಿಗೆ ಒಂದು ಮಾತನ್ನು ಹೇಳುತ್ತಿದ್ದೆ. ನಮ್ಮಲ್ಲಿ ಸಾಮಾನ್ಯವಾಗಿ ಒಬ್ಬ ಯಂಗ್ ಎಂಟ್ರಪ್ರ್ಯೂನರ್ ಒಬ್ಬ ಯುವಕ ಒಂದು ಫ್ಯಾಕ್ಟರಿ ಹಾಕುವುದಾದರೆ ಇವೊತ್ತು ನಿಜವಾಗಿ ಫ್ಯಾಕ್ಟರಿ ಮಾಡುವುದಕ್ಕೆ ಹೋದರೆ ಇವೊತ್ತು ಹತ್ತರಿಂದ ಹದಿನೆಂಟು ಡಿಪಾರ್ಟ್‌ಮೆಂಟ್ ಜೊತೆ ಅವನು ವ್ಯವಹಾರ ಮಾಡಬೇಕಾಗುತ್ತದೆ. ಪ್ರತಿ ವರ್ಷ ಈ ಹತ್ತು ಹದಿನೆಂಟು ಡಿಪಾರ್ಟ್‌ಮೆಂಟ್‌ನಲ್ಲಿ ಅವನು ಹೋಗಿ ಅಲ್ಲಿ ಕೊರಗಬೇಕಾಗುತ್ತದೆ. ಸೋ ಅದಕ್ಕೋಸ್ಕರ ನಮ್ಮ ವಿನಂತಿ ಇಷ್ಟೆ ಸರ್ಕಾರಕ್ಕೆ. ನಮ್ಮಲ್ಲಿ ಈಗ ಎಲ್ಲ ಗ್ಲೋಬಲೈಸೇಶನ್, ರಿಬರಿಲೈಸೇಶನ್ ಬಗ್ಗೆ ನಾವೆಲ್ಲರೂ ಬಹಳಷ್ಟು ಮಾತನಾಡುತ್ತಿದ್ದೇವೆ. ಆ ದೃಷ್ಟಿಯಿಂದ ಈ ಹತ್ತರಿಂದ ಹದಿನೆಂಟು ಡಿಪಾರ್ಟ್‌ಮೆಂಟಿಗೆ ನಾನು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇವೆ ಈ ಎಲ್ಲಾ ಡಿಪಾರ್ಟ್‌ಮೆಂಟ್‌ಗಳನ್ನೂ ಕೂಡ ಎಲ್ಲೋ ಒಂದು ಕಡೆ ಸಿಂಗಲ್ ವಿಂಡೋ ಕ್ಲಿಯರೆನ್ಸ್ ರೀತಿಯಲ್ಲಿ ಮಾಡಿಸಿ

ವರ್ಷಕ್ಕೆ ಒಮ್ಮೆ ಯಾವ ರೀತಿ ನಾವು ಸರ್ಕಾರಕ್ಕೆ ಇನ್‌ಕಂಟ್ಯಾಕ್ಸ್ ಅಥವಾ ಸೇಲ್ಸ್ ಟ್ಯಾಕ್ಸ್‌ನ್ನು ವ್ಯಾಟ್ ಸಿಸ್ಟಂ ತರಹ ನಾವು ಫೈಲ್ ಮಾಡುತ್ತೇವೆಯೋ ಅದೇ ರೀತಿ ಈ ಎಲ್ಲಾ ಡಿಪಾರ್ಟ್‌ಮೆಂಟ್‌ಗಳೂ ಒಂದು ಬುಕೆಲೆಟ್ ಮಾಡಿ ಅದರಲ್ಲಿ ಎಲ್ಲಾ ಇನ್‌ಫರ್ಮೇಶನ್ ಫೈಲ್ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ದಿನನಿತ್ಯ ಒಬ್ಬೊಬ್ಬ ಆಫೀಸರ್ ಬಂದು ಕೈಗಾರಿಕೆಗಳವರಿಗೆ ದಿನನಿತ್ಯ ಉಪದ್ರವ ಕೊಡುತ್ತಿರುತ್ತಾರೆ. ನಾನು ಆ ಡಿಪಾರ್ಟ್‌ಮೆಂಟಿನವನು, ಈ ಡಿಪಾರ್ಟ್‌ಮೆಂಟ್‌ನವನು ಎಂದು ಹೇಳಿ ಸುಮ್ಮನೇ ತೊಂದರೆ ಕೊಡುತ್ತಿರುತ್ತಾರೆ. ಆ ದೃಷ್ಟಿಯಿಂದ ಇದು ಎಲ್ಲಿಯವರೆಗೆ ಎಂದರೆ ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ಇವೊತ್ತು ಇಂಡಸ್ಟ್ರಿ ಎಂದು ಹೇಳಿದರೆ ಅಲರ್ಜಿ ತರಹ ಆಗುತ್ತದೆ. ಈಗಾಗಲೇ ನಾವು ಬಹಳಷ್ಟು ವಿಚಾರವನ್ನು ಮಾತನಾಡಿದ್ದೇವೆ. ಫಾರೀನ್ ಇನ್‌ವೆಸ್ಟ್‌ಮೆಂಟ್ ಬಗ್ಗೆ. ಫಾರೀನ್ ಇನ್‌ವೆಸ್ಟ್‌ಮೆಂಟ್ ಮಾಡುವಂಥ ಜನಗಳ ಹತ್ತಿರ ಮಾತನಾಡುವಾಗ ಅವರು ನಿಜವಾಗಲೂ ಬಹಳ ಬೇಸರದಿಂದ ಹೇಳುತ್ತಾರೆ. ಇಂಡಿಯಾ ಈಸ್ ಎ ವೆರಿಗುಡ್ ಕಂಟ್ರಿ, ಕರ್ನಾಟಕ ಬಹಳ ಚೆನ್ನಾಗಿ ಆಗಿದೆ, ಆದರೆ ಏನು ಮಾಡುವುದು ಅಲ್ಲಿ ಬರುವಂಥ ನೂರಾರು ಡಿಪಾರ್ಟ್‌ಮೆಂಟ್‌ಗಳು ಇದೆ. ಎಲ್ಲರನ್ನೂ ಕನ್‌ವಿನ್ಸ್ ಮಾಡುವಾಗ ವರ್ಷಗಟ್ಟಲೇ ಸಮಯ ಹೋಗುತ್ತದೆ. ಇಲ್ಲಿ ಇಂಡಸ್ಟ್ರಿ ಮಾಡುವುದಕ್ಕೆ ಸೂಕ್ತವಿಲ್ಲವೆಂದು ಹೇಳುವ ಭಾವನೆ ಅನೇಕ ಜನರ ಮನಸ್ಸಿನಲ್ಲಿ ಹೋಗಿದೆ. ಸೋ ಆ ದೃಷ್ಟಿಯಿಂದ ಹಿರಿಯರಾದ ಮಂತ್ರಿಗಳಲ್ಲಿ ನನ್ನ ವಿನಂತಿ ಇಷ್ಟೆ. ಇನ್ನು ಮುಂದೆ ಬಹಳ ವ್ಯವಸ್ಥಿತ ರೀತಿಯಲ್ಲಿ ಅತಿ ಸುಲಭದ ವಿಚಾರದಲ್ಲಿ, ಬಹಳ ಬೇಗ ಇವೆಲ್ಲವೂ ನಿವಾರಣೆಯಾಗಬೇಕು. ಏಕೆಂದರೆ ನಮ್ಮಲ್ಲಿ ನಿರುದ್ಯೋಗ ನಿವಾರಣೆಯಾಗಬೇಕಾದರೆ ಇದನ್ನೆಲ್ಲಾ ತಾವು ಸ್ವಲ್ಪ ಸಿಂಪ್ಲಿಫಿಕೇಶನ್ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತಿದ್ದೇನೆ. ಈ ರೀತಿ ಏನೆಲ್ಲಾ ಪ್ರೊಸಿಜರ್ಸ್ ಇದೆ ಅದನ್ನೆಲ್ಲಾ ಸಿಂಪ್ಲಿಫೈ ಮಾಡಿ ಸಿಂಗಲ್ ವಿಂಡೋ ಮುಖಾಂತರ ಪರ್ಮಿಶನ್ ಕೊಡುವುದು ಒಂದು ತದನಂತರ ವರ್ಷಂಪ್ರತಿ ಅವರಿಗೆ ಬೇಕಾದಂಥ ವ್ಯವಸ್ಥೆ ಮಾಡುವುದಕ್ಕೆ ಅದಕ್ಕೂ ಕೂಡ ಸಹಕಾರ ಮಾಡಬೇಕೆಂದು ಸರ್ಕಾರಕ್ಕೆ ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ತಮಗೆ ಗೊತ್ತಿರುವ ಹಾಗೆ ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಇಂಡಸ್ಟ್ರಿ ಮತ್ತು ಫೈನಾನ್ಸ್, ಅದು ಇಂಟರ್‌ರಿಲೇಟೆಡ್ ಮತ್ತು ಲೇಬರ್, ನಾನು ಅನೇಕ ಭಾರಿ ಇದರ ಬಗ್ಗೆ ಮಾತನಾಡಿದ್ದೇನೆ.

ಈಗ ಅನೇಕ ಇಂಡಸ್ಟ್ರೀಸ್ ನಮ್ಮಲ್ಲಿ ವಿಶೇಷವಾಗಿ ಕರಾವಳಿ ಕ್ಷೇತ್ರದಲ್ಲಿ ಇಂಡಸ್ಟ್ರಿ ಇವೊತ್ತು ಕಾಂಪಿಟಿಟಿವ್ ವರ್ಲ್ಡ್‌ನಲ್ಲಿದೆ. ನಾವು ಇಡೀ ಜಗತ್ತಿನಲ್ಲಿ ಪ್ರತಿಯೊಂದು ಏನು ಪ್ರಾಡಕ್ಟ್ ಮಾಡುತ್ತೇವೆ ಅದಕ್ಕೆ ಇಂಟರ್‌ನ್ಯಾಶನಲ್ ಮಾರ್ಕೆಟ್‌ನಲ್ಲಿ ಕಾಂಪಿಟ್ ಮಾಡಬೇಕಾಗುತ್ತದೆ. ಕಾಂಪಿಟ್ ಮಾಡಬೇಕಾದರೆ ನಮ್ಮಲ್ಲಿ ಟ್ಯಾಕ್ಸ್ ಸ್ಟ್ರಕ್ಚರ್ ಕಡಿಮೆ

ಇರಬೇಕಾಗುತ್ತದೆ. ನಮ್ಮಲ್ಲಿ ಅನೇಕ ಕಮಾಡಿಟಿಗಳಿಗೆ, ಮೊನ್ನೆ ಕೂಡ ನಾನು ಆ ವಿಚಾರ ಹೇಳಿದ್ದೇನೆ, ನಮ್ಮ ಕೃಷಿ ಆಧಾರಿತ ಇಂಡಸ್ಟ್ರಿ, ಅದು ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಇರಬಹುದು. ಅಥವಾ ಮೀಡಿಯಂ ಸ್ಕೇಲ್ ಇರಬಹುದು. ಕೃಷಿ ಆಧಾರಿತ ಇಂಡಸ್ಟ್ರೀಸ್‌ಗಳಿಗೆ ಯಾವುದೇ ತರಹದ ವಿಶೇಷ ಟ್ಯಾಕ್ಸ್‌ಗಳು ಇಲ್ಲದೇ, ಅದರಲ್ಲಿ ಇತ್ತೀಚೆಗೆ ವ್ಯಾಟ್ ಸಿಸ್ಟಂನಲ್ಲಿ ಅನೇಕ ವಿಚಾರಗಳ ಬಗ್ಗೆ ನಾನು ತಿಳಿಸಿದ್ದೇನೆ. ಅದು ನಮ್ಮ ಕೊಕೊಬಿನ್ಸ್ ಮೇಲೆ 4 ಪರ್ಸೆಂಟ್ ಟ್ಯಾಕ್ಸ್ ಇದೆ. ಅದೇ ರೀತಿ ಗೋಡಂಬಿ ಮೇಲೆ 18 1/2 ಪರ್ಸೆಂಟ್ ಟ್ಯಾಕ್ಸ್ ಇದೆ. ಸನ್ಮಾನ್ಯ ಮಂತ್ರಿಗಳು ಇಲ್ಲಿ ಇದ್ದಾರೆ. ಅವರಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ, ಈ ಟ್ಯಾಕ್ಸ್‌ನ್ನು ಇನ್ನಿತರ ರಾಜ್ಯಗಳಿಗೆ ನೀವು ಸಮಾನವಾಗಿ ಮಾಡಿ, ಅಥವಾ ಅದನ್ನು ಸೊನ್ನೆ ಮಾಡಿ. ಏಕೆಂದರೆ, ಕೃಷಿಗೆ ಆದ್ಯತೆ ಕೊಟ್ಟರೆ ನಮ್ಮ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ಇಷ್ಟೇ ಅಲ್ಲದೇ ಅನೇಕ ಬಡವರಿಗೆ ವಿಶೇಷವಾಗಿ ಗೋಡಂಬಿಯಲ್ಲಿ ಸಾವಿರಾರು ಹೆಣ್ಣುಮಕ್ಕಳಿಗೆ ಕೆಲಸ ಸಿಗುವಂತೆ ಆಗುತ್ತದೆ. ಆ ದೃಷ್ಟಿಯಿಂದ ಎಲ್ಲಿಯವರೆಗೆ ಎಂದರೆ ಇವೊತ್ತು ಗೋಡಂಬಿಯವರೆಲ್ಲಾ ಈಗ ಕೇರಳದಲ್ಲಿ ಫ್ಯಾಕ್ಟರಿ ಮಾಡುವುದಕ್ಕೆ ಹೊರಟಿದ್ದಾರೆ. ಅಲ್ಲಿ ಎ.ಪಿ.ಎಂ.ಸಿ.ಸೆಸ್ ಇಲ್ಲ. ಆದರೆ ಕರ್ನಾಟಕದಲ್ಲಿ 2 1/2 ಪರ್ಸೆಂಟ್ ಸೆಸ್ ಇದೆ. ಅಲ್ಲಿ 18 1/2 ಪರ್ಸೆಂಟ್ ಟ್ಯಾಕ್ಸ್ ಇಲ್ಲ.

4 ಪರ್ಸೆಂಟ್ ಟ್ಯಾಕ್ಸ್ ಇದೆ. ಈ ರೀತಿ ಟ್ಯಾಕ್ಸ್ ಸ್ಟ್ರಕ್ಚರ್‌ನ್ನು ರಿವೈವ್ ಮಾಡುವುದಕ್ಕೆ ಸಂಬಂಧಪಟ್ಟ ಫೈನಾನ್ಸ್ ಮಿನಿಸ್ಟರ್ ಹತ್ತಿರ, ಉಪ ಮುಖ್ಯಮಂತ್ರಿಗಳ ಹತ್ತಿರ ವಿಚಾರ ಮಾಡಬೇಕೆಂದು ಸನ್ಮಾನ್ಯ ಕೈಗಾರಿಕಾ ಸಚಿವರಿಗೆ ವಿನಂತಿ ಮಾಡುತ್ತೇನೆ. ಇನ್ನು ಇನ್ನೊಂದು ವಿಚಾರ ಈಗಾಗಲೇ ಹೇಳಿದ ಹಾಗೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಈಗಾಗಲೇ ಬಹಳಷ್ಟು ಜನ ಹೇಳಿದ್ದಾರೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಈಗಾಗಲೇ 60 ಪರ್ಸೆಂಟ್ ಮುಚ್ಚಿದೆ. ಅದಕ್ಕೆ ಬೇರೆ ಬೇರೆ ಕಾರಣಗಳು ಇರಬಹುದು. ಆದರೆ ಮುಚ್ಚಿದಂಥ ಇಂಡಸ್ಟ್ರಿಯನ್ನು ರಿವೈವ್ ಮಾಡುವುದಕ್ಕೆ ಯಾವುದೇ ಯೋಜನೆಗಳು ಇಲ್ಲ. ಎಲ್ಲಿಯವರೆಗೆ ಎಂದರೆ ಒಬ್ಬ ನಿಷ್ಠಾವಂತ ಏನೋ ಒಂದು ಯೋಜನೆ ಮಾಡಿ ಇಂಡಸ್ಟ್ರಿ ಹಾಕಿದ್ದಾನೆ. ಅವನು ಸಾಲದಲ್ಲಿ ಇದ್ದಾನೆ, ಅವನು ಸರ್ಕಾರದ ಮುಂದೆ ಹೋಗುವುದಕ್ಕೆ ಬ್ಯಾಂಕಿನ ಮುಂದೆ ಹೋಗುವುದಕ್ಕೆ ಹೆದರುತ್ತಾನೆ. ನಾಚಿಕೆಪಡುತ್ತಾನೆ. ಸೋ, ಅದಕ್ಕೋಸ್ಕರ ಅವನನ್ನು ನಾವು ಸ್ವತಃ ಹೋಗಿ ಅವನನ್ನು ಕರೆದು ಅವನ ಇಂಡಸ್ಟ್ರಿಯನ್ನು ರಿವೈವ್ ಮಾಡುವುದಕ್ಕೆ ಅಥವಾ ಅದರ ಬಗ್ಗೆ ಕೂಡ ಅದು ಕೆಎಸ್‌ಎಫ್‌ಸಿ ಲೋನ್ ಇರಬಹುದು, ಬ್ಯಾಂಕಿನ ಲೋನ್ ಇರಬಹುದು, ಅದನ್ನು ಸಿಂಗ್ ಕ್ಲಿಯರೆನ್ಸ್ ಪಾಯಿಂಟ್ ಮುಖೇನ ಒನ್ ಟೈಂ ಸೆಟ್ಲ್‌ಮೆಂಟ್ ಎಂದು ಮಾಡಿಸಿ ಆ ಇಂಡಸ್ಟ್ರೀಸ್‌ಗೆ ಪುನರ್‌ಜೀವ ಕೊಡುವಂಥ ಕೆಲಸವನ್ನು ಸರ್ಕಾರ ಮಾಡಬೇಕು ಈ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ ನಮ್ಮ ರಾಜ್ಯ ಒಳ್ಳೆಯ

ಕೆಲಸ ಮಾಡುವುದಕ್ಕೆ ಸಾಧ್ಯವಿದೆ.

ಆ ದೃಷ್ಟಿಯಿಂದ ತಮ್ಮ ಪ್ರಯತ್ನಬೇಕೆಂದು ಸರ್ಕಾರವನ್ನು ತಮ್ಮ ಮುಖೇನ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇನ್ನೊಂದು ಬಹಳ ಪ್ರಾಮುಖ್ಯವಾದಂತಹ ವಿಚಾರ ನಮ್ಮ ಜಿಲ್ಲೆಗೆ ಸಂಬಂಧಪಟ್ಟಿದ್ದು, ಇಲ್ಲಿ ಸನ್ಮಾನ್ಯ ವಿದ್ಯುತ್ ಮಂತ್ರಿಗಳು ಇಲ್ಲ. ಅದೇನೆಂದರೆ ಉಡುಪಿ ಮತ್ತು ಹೆಚ್ಚಿನ ಜಿಲ್ಲೆಗಳಲ್ಲಿ 3 ಫೇಸ್ ಕರೆಂಟ್ 24 ಗಂಟೆ ಇರುತ್ತದೆ. ನಮ್ಮ ಕೈಗಾರಿಕೆಗಳಿಗೆ ವಿದ್ಯುತ್ ಸರಿಯಾಗಿ ಇಲ್ಲ. ಹೆಚ್ಚಿನ ಜನರು ಜನರೇಟರ್ ಮೇಲೆ ಅವಲಂಭಿತರಾಗಿದ್ದಾರೆ. ತಮಗೆ ಗೊತ್ತಿರಬಹುದು, ಇತ್ತೀಚೆಗೆ ಕಳೆದ ಒಂದು ವರ್ಷದಿಂದ ಡೀಸೆಲ್ ಬೆಲೆ 10ರಿಂದ 12 ರೂಪಾಯಿಗೆ ಹೆಚ್ಚಾಗಿದೆ. ಆದುದರಿಂದ ಈಗ ಅವರಿಗೆ ಕಾಸ್ಟ್ ಎಫೆಕ್ಟೀವ್ ಆಗುವುದಿಲ್ಲ. ಅದಕ್ಕೋಸ್ಕರ ಫ್ಯಾಕ್ಟರಿಯನ್ನು ಮುಚ್ಚುತ್ತಿದ್ದಾರೆ. ಡೀಸೆಲ್ ಜನರೇಟರ್ ರನ್ ಮಾಡಿ ಫ್ಯಾಕ್ಟರಿ ನಡೆಸುವುದಕ್ಕೆ ಆಗುತ್ತಿಲ್ಲ. ಅದಕ್ಕೋಸ್ಕರ ಸರ್ಕಾರಕ್ಕೆ ನನ್ನ ವಿನಂತಿ ಇಷ್ಟೆ, 3 ಫೇಸ್ ವಿದ್ಯುತ್ ಅನ್ನು 24 ಅವರ್ಸ್ ಕೊಡಿ. ನಾನು ಇತ್ತೀಚೆಗೆ ಮೆಸ್ಕಾಮ್‌ನ ಎಂಡಿ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಮಾತನಾಡಿದ್ದೇನೆ. ಅವರದೇನೂ ಆಕ್ಷೇಪ ಇಲ್ಲ. ಅವರು ರಿಕವರಿ ಬೇಸಿಸ್ ವಿಚಾರದಲ್ಲೆ ಮಾತ್ರ ಮಾತನಾಡುತ್ತಿದ್ದರು. ಅದಕ್ಕೆ ನಾವು ಪೂರ್ಣ ಸಹಕಾರ ಕೊಟ್ಟರೆ, ನಾವೆಲ್ಲಾ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ನಿಮಗೆ ಸಹಕಾರ ಕೊಡುತ್ತೇವೆ. ನಮಗೆ 24 ಗಂಟೆ ವಿದ್ಯುತ್ 3 ಫೇಸ್ ವಿಶೇಷವಾಗಿ ರೈತರಿಗೆ ಮತ್ತು ಕೈಗಾರಿಕೆಗಳಿಗೆ, ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಈ ಬಗ್ಗೆ ಕೂಡ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಹೇಳಿದ ಹಾಗೆ ನಮ್ಮ ಸಹಕಾರ ಕ್ಷೇತ್ರದಲ್ಲೆ ಸಂಬಂಧಪಟ್ಟ ಹಾಗೆ ಒಂದೆರಡು ವಿಚಾರಗಳನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಸಹಕಾರಿ ಕ್ಷೇತ್ರದಲ್ಲೆ ನಮ್ಮ ಹಿರಿಯ ಮಂತ್ರಿಗಳು ಇದ್ದಾರೆ. ನಮ್ಮ ಕ್ಯಾಂಪ್ಕೋ ಸಂಸ್ಥೆ ಬಹಳಷ್ಟು ಶ್ರಮಪಟ್ಟು, ರೈತರ ಕಣ್ಮಣಿಯಾಗಿ ಕಳೆದ 20 ರಿಂದ 30 ವರ್ಷಗಳಿಂದ ಕೆಲಸ ಮಾಡುತ್ತಿದೆ. ಇತ್ತೀಚೆಗೆ ಆದಂತಹ ಕಾನೂನು ಪ್ರಕಾರ ಅಮೆಂಡ್‌ಮೆಂಟ್ ಆಗಿ ಆ್ಯಕ್ಟ್ ಪ್ರಕಾರ ಮತ್ತು ಬೈಲಾ ಪ್ರಕಾರ ಇಬ್ಬರು ನಿರ್ದೇಶಕರು ಕರ್ನಾಟಕ ಸರ್ಕಾರದ ಪರವಾಗಿ ಇರಬೇಕು. ಆದರೆ ಈಗ 5 ಜನ ಇದ್ದಾರೆ. ಅದರಲ್ಲಿ ಎಂ.ಡಿ. ಯಾರು ಸೇರಿದಂತೆ ಇದ್ದಾರೆ. ಅದರ ಬಗ್ಗೆ ನನ್ನದೇನೂ ಆಕ್ಷೇಪ ಇಲ್ಲ. ಆ ಸಂಸ್ಥೆಗೆ ಚೆನ್ನಾಗಿ ನುರಿತವರನ್ನು ಹಾಗೂ ಅನುಭವವಿರುವವರನ್ನು ಹಾಕಿದರೆ ಒಳ್ಳೆಯದು. ಏಕೆಂದರೆ ನಮ್ಮ ಸಂಸ್ಥೆಗೆ ಒಳ್ಳೆಯದಾಗಬೇಕು. ಈಗಾಗಲೇ ಮಾನ್ಯ ರವಿಯವರು ಹೇಳಿದ ಹಾಗೆ, ಅಲ್ಲಿಗೆ ಯಾರನ್ನಾದರೂ ರಾಜಕೀಯ ಉದ್ದೇಶದಿಂದ ಹಾಕಿ ಸಂಸ್ಥೆಯನ್ನು ಹಾಳು. ಮಾಡುವಂತಹ ಕೆಲಸವಾಗಬಾರದು. ಅದರ ಒಳಿತಿಗೋಸ್ಕರ ಒಳ್ಳೆಯ ವಿಚಾರವನ್ನು ಕೊಡುವಂತಹ ಜನಗಳ ಅವಶ್ಯಕತೆ ಇದೆ. ಆ ದೃಷ್ಟಿಯಿಂದ

ಸನ್ಮಾನ್ಯ ಮಂತ್ರಿಗಳು ಆ ನಿಟ್ಟಿನಲ್ಲಿ ಸ್ಪಂಧಿಸಬೇಕೆಂದು ಹೇಳಿಕೊಳ್ಳುತ್ತಿದ್ದೇನೆ. ಅಷ್ಟೇ ಅಲ್ಲದೆ ಇನ್ನು ಈ ಡಿಸಿಸಿ ಬ್ಯಾಂಕ್ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಸಂಬಂಧಪಟ್ಟ ಮಂತ್ರಿಗಳ ಮುಖೇನ ನಮ್ಮ ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಬಹಳಷ್ಟು ಸಹಾಯ ಮಾಡುವುದಕ್ಕೆ ಶತ ಪ್ರಯತ್ನ ಮಾಡುತ್ತಿದ್ದರು. ಆದರೆ ಡಿಸಿಸಿ ಬ್ಯಾಂಕ್ ಸ್ವಲ್ಪ ಹಿಂದೇಟು ಹೊಡೆಯುತ್ತಿದೆ. ಆದುದರಿಂದ ನನ್ನ ವಿನಂತಿ ಇಷ್ಟೆ, ಉಡುಪಿ ಜಿಲ್ಲೆಗೆ ಬೇರೆ ಡಿಸಿಸಿ ಬ್ಯಾಂಕ್ ಮಾಡಿ, ನಮ್ಮ ಜಿಲ್ಲೆಯ ಡಿಸಿಸಿ ಬ್ಯಾಂಕ್ ನಮಗೆ ಬಿಟ್ಟುಬಿಡಿ. ಅದರ ಬಗ್ಗೆ ಕೂಡ ಚಿಂತನೆ ಮಾಡಬೇಕೆಂದು ಹೇಳುತ್ತಿದ್ದೇನೆ. ಮತ್ತು ಕೊನೆಯದಾಗಿ ಸಮಾಜ ಕಲ್ಯಾಣ ಇಲಾಖೆಗಳ ಬಗ್ಗೆ ಸಾಕಷ್ಟು ಮಂಡನೆಯಾಗಿದೆ.

ಶ್ರೀ ಎಸ್. ಯೋಗೀಶ್ ಭಟ್: ಸನ್ಮಾನ್ಯ ಅಧ್ಯಕ್ಷರೆ, ಒಂದೆ ಒಂದು ವಿನಂತಿ, ಆಡಿಟ್‌ಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಇಂಟರ್‌ನಲ್ ಆಡಿಟ್, ಸರ್ಕಾರಿ ಆಡಿಟ್ ಎಂದು ಬೇರೆ ಬೇರೆ ರೀತಿಯಲ್ಲಿ ಇದೆ. ಒಂದೊಂದು ಸಹಕಾರಿ ಕೋ-ಅಪರೇಟೀವ್ ಬ್ಯಾಂಕ್‌ಗಳಿಂದ 4ರಿಂದ 5 ಲಕ್ಷ ರೂಪಾಯಿ ಫೀಜ್ ಕಟ್ಟುವಂತಾದ್ದು, ಬರುತ್ತಿದೆ, ಆದರೆ ಅದರ ಡೆವಿಡೆಂಟ್ಸ್ ಕೊಡುವುದಕ್ಕೆ ಬರುತ್ತಿಲ್ಲ. ಈ ನಿಟ್ಟಿನಲ್ಲಿ ತಾವು ಕನ್ಸಿಷನ್ ಕೊಡಬೇಕೆಂದು ಹೇಳುವಂತಹ ವಿನಂತಿಯನ್ನು ಮಾಡುತ್ತಿದ್ದೇನೆ. ಅದನ್ನು ಮಿನಿಮೈಜ್ ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಬಿ. ನಾಗರಾಜ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, 441 ಆಡಿಟರ್ಸ್ ಬಗ್ಗೆ ಹೇಳುವುದಾದರೆ ಸಣ್ಣ ಸಣ್ಣ ಸೊಸೈಟಿಗಳಿಗೆ ಬಹಳಷ್ಟು ದುಬಾರಿಯಾಗುತ್ತದೆ. ಏಕೆಂದರೆ, ಅದರ ಬಗ್ಗೆ ಅನೇಕ ಹಿರಿಯರು ಮಾತನಾಡಿದ್ದಾರೆ. ನಮಗೆ 441 ಅಡಿಟಿಂಗ್ ಮತ್ತು ಇನ್‌ಕಂ ಟ್ಯಾಕ್ಸ್‌ಗೋಸ್ಕರ ಬೇರೆ ಆಡಿಟರ್ ಹತ್ತಿರ ಮಾಡಿಸುವುದರಿಂದ, ಎರಡೆರಡು ಆಡಿಟ್ ಮಾಡುವಂತಹ ವ್ಯವಸ್ಥೆ ಬಂದಿದೆ. ಆದುದರಿಂದ ಸರ್ಕಾರ ಅದಕ್ಕೂ ಒಂದು ವ್ಯವಸ್ಥೆ ಮಾಡಬೇಕು. ಅಷ್ಟೇ ಅಲ್ಲದೆ ಕ್ಯಾಂಪ್ಕೋ ಸಂಸ್ಥೆ ಅಡಕೆಯನ್ನು ಪರ್ಚೆಸ್ ಮಾಡುತ್ತಿದೆ. ಅದುದರಿಂದ ಸನ್ಮಾನ್ಯ ಮಂತ್ರಿಗಳು ಅದಕ್ಕೆ 6 ಕೋಟಿ ರೂಪಾಯಿಗಳನ್ನು ಕೊಡಲೆ ಬಿಡುಗಡೆ ಮಾಡಬೇಕೆಂದು ಮತ್ತೊಮ್ಮೆ ಕೇಳಿ ಕೊಳ್ಳುತ್ತಾ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಎ.ಟಿ. ರಾಮಸ್ವಾಮಿಯವರು ಮಾತನಾಡಿ. ತಾವು 15 ನಿಮಿಷ ಮಾತ್ರ ಮಾತನಾಡಬೇಕು.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು): ಮಾನ್ಯ ಅಧ್ಯಕ್ಷರೆ, ಸರ್ಕಾರ ಮಂಡಿಸಿರತಕ್ಕಂಥ ಬೇಡಿಕೆಗಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ಇಲಾಖೆಗಳಲ್ಲೋ ಇರತಕ್ಕಂಥ ಕೆಲವು ನ್ಯೂನತೆಗಳನ್ನು ನಾನು ಚರ್ಚೆ ಮಾಡುವುದಕ್ಕೆ ಇಚ್ಚಿಸುತ್ತಿದ್ದೇನೆ. ಬಹಳ ಮುಖ್ಯವಾಗಿ ನಮ್ಮ ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆಯತ್ತಿದ್ದೇನೆ. ನಾನು ಸುಮಾರು 3 ತಿಂಗಳ ಹಿಂದೆ ಇದೇ ಸದನದಲ್ಲಿ ಸಹಕಾರಿ

ಸಕ್ಕರೆ ಕಾರ್ಖಾನೆಗಳ ದುಸ್ಥಿತಿ ಬಗ್ಗೆ ಚರ್ಚೆ ಮಾಡಿದ್ದೆ. ಆ ಸಂದರ್ಭದಲ್ಲೆ ಮಾನ್ಯ ಸಚಿವರು ಇಲ್ಲೆ ಎಂದು ಭರವಸೆಯನ್ನು ಕೊಟ್ಟಿದ್ದರು. ಆ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಏನು ಅಕ್ರಮ ಅವ್ಯವಹಾರ ನಡೆದಿದೆ ಅದರ ಬಗ್ಗೆ ಈ ರಾಜ್ಯದ ಒಬ್ಬ ಉನ್ನತಾಧಿಕಾರಿಯವರನ್ನು ನೇಮಕ ಮಾಡಿ, ಅವರಿಂದ ತನಿಖೆ ಮಾಡಿಸುತ್ತೇನೆಂದು ಹೇಳಿದ್ದರು. ಆ ಉನ್ನತಾಧಿಕಾರಿಯನ್ನು ನೇಮಕ ಮಾಡಿಸಿದಿರಾ? ಹಾಗೂ ಅದರ ಬಗ್ಗೆ ತನಿಖೆಯಾಯಿತೆ ಎಂದು ತಿಳಿಸಬೇಕು. ತಾವು ಯಾರನ್ನು ನೇಮಿಸಿದ್ದೀರಿ? ತನಿಖೆಯಿಂದ ಯಾವ ಅಂಶ ಹೊರಬಂದಿದೆ ಎಂದು ತಿಳಿಸಬೇಕು. ಕೆಲವು ಅವ್ಯವಹಾರಗಳನ್ನು ನಾನು ಪಾಯಿಂಟ್ ಔಟ್ ಮಾಡಿ ಅದು ಪರ್ಮಿಷನ್ ಇಲ್ಲದೆ ಸಕ್ಕರೆ ಮಾರಾಟ ಮಾಡಿರುವುದು.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ 2ರಿಂದ 3 ತಿಂಗಳ ಹಿಂದೆ ಇದೇ ಸದನದಲ್ಲೆ ಕೆಲವು ಸಕ್ಕರೆ ಕಾರ್ಖಾನೆಯಲ್ಲಿ ನಡೆದ ಅವ್ಯವಹಾರದ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಆಗ ಅದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇನೆಂದು ಅಶ್ವಾಸನೆ ಕೊಟ್ಟಿದ್ದು, ಆ ಪ್ರಕಾರ ಎನ್‌ಕ್ವೈರಿ ಆರ್ಡರ್ ಮಾಡಿದ್ದೇನೆ. ಅಡಿಷನಲ್ ಚೀಫ್ ಸೆಕ್ರೆಟರಿಯವರು ಎನ್‌ಕ್ವೈರಿ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎ.ಟಿ. ರಾಮಸ್ವಾಮಿ: ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸನ್ಮಾನ್ಯ ಸಚಿವರಿಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈಗ ಸಕ್ಕರೆ ಮಾರಾಟದಲ್ಲಿ ಮತ್ತು ಬಹಳಷ್ಟು ಸಕ್ಕರೆ ಕಾರ್ಖಾನೆಗಳಲ್ಲಿ ಇತ್ತೀಚೆಗೆ ತನಿಖೆಯಿಂದ, 60,000 ಕ್ವಿಂಟಾಲ್ ಸ್ಟಾಕ್ ಇಲ್ಲವೆಂದು ಮಾಹಿತಿ ನನಗೆ ತಿಳಿದುಬಂದಿದೆ. ಅದರ ಬಗ್ಗೆ ಗಂಭೀರವಾಗಿ ಗಮನ ಹರಿಸಬೇಕು. ಅವತ್ತು ಚರ್ಚೆ ಮಾಡಿದಂತಹ ಎಲ್ಲಾ ವಿಷಯಗಳ ಬಗ್ಗೆ ಗಮನ ಹರಿಸಬೇಕೆಂದು ಹೇಳಿ, ಇವತ್ತು ಬಹುಮುಖ್ಯವಾಗಿ ಈ ಸಹಕಾರ ಇಲಾಖೆಗೆ ಸಂಬಂಧಿಸಿದ ಬ್ಯಾಂಕಿಂಗ್ ವ್ಯವಹಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಬಯಸುತ್ತಿದ್ದೇನೆ. ಈಗ ವಿನಿವಿಂಕ್ ಬಗ್ಗೆ 3–4 ದಿವಸದಿಂದ ಅದರ ಹಗರಣ ಬೆಳಕಿಗೆ ಬಂದಿದೆ. ಬಹಳ ಪ್ರಮುಖವಾಗಿ ಅಂತಹ ಎಷ್ಟೊ ಬ್ಯಾಂಕುಗಳ ಹಗರಣಗಳು ಇನ್ನು ಹುದುಗಿ ಕುಳಿತಿವೆ, ಹೊರಗಡೆ ಬಂದಿಲ್ಲ. ಗ್ರಾಮಾಂತರ ಪ್ರದೇಶಕ್ಕೆ ಸಂಬಂಧಿಸಿದ ಹಾಗೆ ಡಿಸಿಸಿ ಬ್ಯಾಂಕುಗಳು ಹಾಗೂ ಅದರ ಬ್ರಾಂಚ್‌ಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಲ್ಯಾಂಡ್ ಬ್ಯಾಂಕುಗಳು ಇವೆ. ನಾಗರೀಕರಿಗೆ ಸಂಬಂಧಿಸಿದ ಹಾಗೆ ಅರ್ಬನ್ ಕೋ–ಅಪರೇಟಿವ್ ಬ್ಯಾಂಕ್ಸ್ ಇವೆ. ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿಗಳು ಇವೆ, ಫೈನಾನ್ಸ್ ಇನ್ಸಿಟ್ಯೂಷನ್ ಇವೆ, ನಾನ್ ಬ್ಯಾಂಕಿಂಗ್ ಫೈನಾನ್ಸಿಯಲ್ ಕಂಪನಿಗಳು ಇವೆ, ಚಿಟ್ ಫಂಡ್ಸ್ ಇವುಗಳನ್ನು ಬೇರೆ ಮಾಡಿಕೊಂಡಿದ್ದಾರೆ. ಇನ್ನು ಗಿರವಿ ಅಂಗಡಿಗಳಿಗೆ ಲೈಸೆನ್ಸ್ ಇಟ್ಟುಕೊಂಡಿರುವವರು,

ಇವೆಲ್ಲಕ್ಕೂ ಕೂಡ ಮಧ್ಯಮ ವರ್ಗದ ಜನ, ಬಡವರು ಹಣವನ್ನು ತೊಡಗಿಸುತ್ತಿದ್ದಾರೆ. ಅವರು ಯಾವ ನಂಬಿಕೆ ಮೇಲೆ ತೊಡಗಿಸುತ್ತಿದ್ದಾರೆ? ಸರ್ಕಾರದಲ್ಲಿ ಅವರು ನೋಂದಣಿ ಮಾಡಿಸಿಕೊಂಡಿದ್ದಾರೆ. ಪ್ರತಿವರ್ಷ ಸರ್ಕಾರ ಆಡಿಟ್ ಮಾಡುತ್ತದೆ. ಅದಕ್ಕೆಲ್ಲಾ ಮೇಲಾಧಿಕಾರಿಗಳು ಇರುತ್ತಾರೆ, ದೋಷಗಳು ಆಗುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಸರ್ಕಾರದ ವಿಶ್ವಾಸದ ಮೇಲೆ, ಮಧ್ಯಮ ವರ್ಗದ ಮತ್ತು ಬಡ ಜನರು ಹಣವನ್ನು ಇಡುತ್ತಿದ್ದಾರೆ. ಆ ವಿಶ್ವಾಸವನ್ನೆ ಸರ್ಕಾರ ಕಳೆದುಕೊಂಡರೆ, ಇಡೀ ಹಣಕಾಸಿನ ವ್ಯವಸ್ಥೆ ಕುಸಿದುಬೀಳುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತಿದ್ದೇನೆ. ಆ ಮಧ್ಯಮ ವರ್ಗದ ಮತ್ತು ಬಡ ಜನರು ಇವತ್ತು ಅನೇಕ ಕನಸುಗಳನ್ನು ಕಟ್ಟಿಕೊಂಡು ಅವರು ಹಣ ಇಟ್ಟಿದ್ದಾರೆ. ಇವತ್ತು ಅವರ ಅನೇಕ ಕನಸುಗಳು ನುಚ್ಚು ನೂರಾಗುತ್ತಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಆ ಜನರ ವಿಶ್ವಾಸವನ್ನು ಉಳಿಸಿಕೊಳ್ಳುವುದಕ್ಕೆ ಈ ವ್ಯವಸ್ಥೆಯನ್ನು ಸರಿ ಮಾಡಲೇಬೇಕಾದಂತಹ ಒಂದು ಕ್ರಮವನ್ನು ಸರ್ಕಾರ ಕೈಗೊಳ್ಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ನೇರವಾಗಿ ಸರ್ಕಾರವನ್ನು ಕೇಳುತ್ತಿದ್ದೇನೆ. ನಾನು ಹೇಳಿದಂತಹ ಈ ಸಂಸ್ಥೆಗಳೊಳಗೆ ನಿಖರವಾಗಿ ಎಷ್ಟು ಠೇವಣಿ ಜನರದು ಇದೆ ಎಂದು ಸರ್ಕಾರಕ್ಕೆ ಗೊತ್ತಿಲ್ಲ. ಈ ವಿನಿವಿಂಕ್‌ದು ಮೊನ್ನೆ ಉದಯ ನ್ಯೂಸ್‌ನಲ್ಲೆ ಸಂದರ್ಶನವನ್ನು ನೋಡುತ್ತಿದೆ. ಯಾರೋ ನಿರ್ದೇಶಕರು ಹೇಳುತ್ತಿದ್ದರು. 98 ಲಕ್ಷ ಠೇವಣಿ ಇದೆ. ಅದರಲ್ಲಿ 88 ಲಕ್ಷ ಸಾಲ ಕೊಟ್ಟಿದ್ದಾನೆ. ಇನ್ನು 10 ಲಕ್ಷ ಠೇವಣಿ ಹಾಗೆ ಉಳಿಸಿಕೊಂಡಿದ್ದಾರೆ ಎಂದು ಹೇಳಿದರು ನೂರಾರು ಕೋಟಿ ರೂಪಾಯಿಗಳ ವ್ಯವಹಾರಗಳನ್ನು ಮಾಡಿರುವಂತಹ ಅಂತಹ ಒಂದು ಸಂಸ್ಥೆ, ಎಷ್ಟು ಹಣವನ್ನು ಠೇವಣಿಯಾಗಿ ತೆಗೆದುಕೊಂಡಿದೆಯೆಂಬುದು ಇವರಿಗೆ ಗೊತ್ತಿಲ್ಲ. ಹೀಗೆ ರಾಜ್ಯದಲ್ಲಿರುವಂತಹ ವಿವಿಧ ಹಣಕಾಸಿನ ಸಂಸ್ಥೆಗಳು ಎಷ್ಟು ಹಣವನ್ನು ಠೇವಣಿಯಾಗಿ ಸ್ವೀಕರಿಸಿದ್ದಾರೆಂಬುದು ನಿಖರವಾಗಿ ಹೇಳುವಂಥಾದ್ದಕ್ಕೇ ಸರ್ಕಾರದಿಂದ ಮತ್ತು ಮಂತ್ರಿಯವರಿಂದಲೂ ಸಾಧ್ಯವಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. who is accountable for the public money? ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಆ ದಿಕ್ಕಿನಲ್ಲಿ ಇವತ್ತು ನಾನು ಮೊದಲನೇಯದಾಗಿ ಹೇಳಿದಂತೆ ಗ್ರಾಮಾಂತರ ಪ್ರದೇಶದಲ್ಲಿ ಡಿ.ಸಿ.ಸಿ. ಬ್ಯಾಂಕ್ ಮತ್ತು ಅದರ ಶಾಖೆಗಳು, ಪ್ರಾಥಮಿಕ ಕೃಷಿ ಪತ್ತಿನ ಸಂಸ್ಥೆಗಳು, ಲ್ಯಾಂಡ್ ಬ್ಯಾಂಕ್‌ಗಳು ಇವೇ. ನಗರ ಪ್ರದೇಶಗಳಿಗೆ ಯುಸಿಬಿಗಳು ಇವೆ ಅಂದರೆ ಅರ್ಬನ್ ಕೋಆಪರೇಟಿವ್ ಬ್ಯಾಂಕ್‌ಗಳು ಇವೆ. ಅದೇ ರೀತಿಯಲ್ಲಿ ಅರ್ಬನ್ ಕೋ–ಆಪರೇಟಿವ್ ಸೊಸೈಟಿಗಳು, ಫೈನಾನ್ಸ್ ಗಳು, ನಾನ್ ಬ್ಯಾಂಕ್ ಸೊಸೈಟಿಗಳು, ಚಿಟ್ ಫಂಡ್ಸ್, ಬ್ರೋಕರ್ಸ್ ಗಿರವಿ ಅಂಗಡಿಗಳು ಕೆಲಸವನ್ನು ಮಾಡುತ್ತಿವೆ. ಮಾನ್ಯ

ಅಧ್ಯಕ್ಷರೇ, ಇವತ್ತು ಬೆಂಗಳೂರಿನಲ್ಲಿರುವಂತಹ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗಳು ಏನು ಇವೆ. ಈ ಬ್ಯಾಂಕ್‌ಗಳು ಬಹುತೇಕ ದಿವಾಳಿಯ ಅಂಚಿಗೆ ತಲುಪಿವೇ. ನಾನು ಇದರಲ್ಲಿ ಕೆಲವೇ ಕೆಲವು ಉದಾಹರಣೆಗಳನ್ನು ತಮ್ಮ ಮುಂದೇ ಹೇಳುತ್ತೇನೆ. ಈ ಅಮಾನತ್ ಕೋ ಆಪರೇಟಿವ್ ಬ್ಯಾಂಕ್, ಬೆಂಗಳೂರು, ಈ ಬ್ಯಾಂಕ್ ನಲ್ಲಿ ಕೇವಲ ಒಂದು ವರ್ಷದಲ್ಲಿ 62 ಕೋಟಿ ರೂಪಾಯಿಗಳು ಲೂಟಿಯಾಗಿದೆ. ಇವತ್ತು ವೀರಶೈವ ಕೋ-ಆಪರೇಟಿವ್ ಅರ್ಬನ್ ಬ್ಯಾಂಕ್, ಬೆಂಗಳೂರು, ಇದು 5 ವರ್ಷಗಳ ಹಿಂದೆ ಸೂಪರ್ ಸೀಡ್ ಆಗಿತ್ತು. ಇವರು ಬಿಜಾಪುರದಲ್ಲಿ ಸಾಲವನ್ನು ಕೊಟ್ಟಿದ್ದಾರೆ. ಇವರ ಬ್ಯಾಂಕ್ ಬಿಜಾಪುರದಲ್ಲಿ ಇಲ್ಲ. ಇವರು 10 ಕೋಟಿ ಡಿಪಾಸಿಟ್ ಅನ್ನು ಅವರಿಗೆ ಕೊಟ್ಟಿದ್ದಾರೆ. ಈ ಬ್ಯಾಂಕ್ ಇಲ್ಲದೇ ಇರುವಂತಹ ಒಂದು ಸಂಸ್ಥೆಗೇ, ಈ ವೀರಶೈವ ಕೋ ಆಪರೇಟಿವ್ ಅರ್ಬನ್ ಬ್ಯಾಂಕ್‌ನವರು ಸಾಲವನ್ನು ಕೊಟ್ಟು ಅದು ಕೂಡ ಮುಚ್ಚುವ ಹಂತಕ್ಕೆ ಬಂದಿದೆ. ಇನ್ನು ಕರ್ನಾಟಕ ಸ್ಟೇಟ್ ಕಂಟ್ರ್ಯಾಕ್ಟರ್ಸ್ ಕೋ- ಆಪರೇಟೀವ್ ಅರ್ಬನ್ ಬ್ಯಾಂಕ್ ಬೆಂಗಳೂರು, ಇದುಮುಳುಗಿ ಹೋಗಿದೆ. ಇನ್ನು ಕರ್ನಾಟಕ ಸೌಹಾರ್ದ ಸೆಂಟರ್ ಕೋ -ಆಪರೇಟಿವ್ ಅರ್ಬನ್ ಬ್ಯಾಂಕ್ ಬೆಂಗಳೂರು, ಇದು ಮುಳುಗುವ ಹಂತಕ್ಕೆ ಬಂದಿದೆ.

ಇನ್ನು ಹನುಮಂತ ನಗರ ಸಹಕಾರ ಬ್ಯಾಂಕ್, ಈ ಬ್ಯಾಂಕ್ ಸಂಸ್ಥಾಪಕರು, ಸ್ವಾತಂತ್ರ್ಯ ಹೋರಾಟಗಾರರು ಇವರು ಹೇಳುತ್ತಾರೇ. ನಾವು ಬ್ಯಾಂಕ್ ಅನ್ನು ಸರಿಪಡಿಸಲು ಸಾಕಷ್ಟು ಹೋರಾಡಿದೇವು . ಆದರೆ ಅಧಿಕಾರಿಗಳೇ, ನಮ್ಮ ಎಲ್ಲಾ ಪ್ರಯತ್ನಗಳನ್ನು ವ್ಯರ್ಥಗೊಳಿಸಿದ್ದಾರೆ. ನಾವು ಎಲ್ಲಿ ಬೇಕಾದರೂ ಬ್ಯಾಂಕ್ ಆಡಳಿತ ಮಂಡಳಿಯ ಅವ್ಯವಹಾರವನ್ನು ಸಾಕ್ಷ್ಯಾಧಾರದೊಂದಿಗೇ ಸಮರ್ಥಿಸುತ್ತೇವೆಂದು ಹೇಳಿದ್ದಾರೆ. ಅಂದರೆ ಇಲ್ಲಿ ಬ್ಯಾಂಕ್‌ನ ಅವ್ಯವಹಾರಕ್ಕೇ ಅಧಿಕಾರಿಗಳೇ ಕಾರಣಕರ್ತರೆಂಬ ಮಾತನ್ನು ಹೇಳಿದ್ದಾರೇ. ಇನ್ನು ದೀಪಕ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ಬೆಂಗಳೂರು, ಇದು ಕೂಡ ಮುಚ್ಚುವ ಹಂತದಲ್ಲಿ ಇದೇ. ಗಾರ್ಡನ್ ಸಿಟಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ, ಇದು ಕೂಡ ಸಂಪೂರ್ಣವಾಗಿ ಮುಚ್ಚುವ ಹಂತದಲ್ಲಿ ಇದೆ. ಇದರಲ್ಲಿ ಅಕ್ರಮ ನೇಮಕಾತಿ, ಬೆನಾಮಿ ಸಾಲಗಳು, ಕೆಟ್ಟ ಸೆಕ್ಯೂರಿಟಿಯನ್ನು ಮೀರಿದ ಸಾಲಗಳು, ಸೇಕ್ಯೂರಿಟಿ ಇಲ್ಲದೇ ಕೊಟ್ಟಿರುವ ಲೋನ್‌ಗಳು, ಹೀಗಾಗಿ ಆ ಬ್ಯಾಂಕ್ ಕೂಡ ಮುಚ್ಚುವ ಹಂತಕ್ಕೆ ಸಂಪೂರ್ಣವಾಗಿ ತಲುಪಿದೆ. ಇವುಗಳ ನಗರ ಪ್ರದೇಶಕ್ಕೇ ಸಂಬಂಧಪಟ್ಟಿದ್ದು ಆದರೇ ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಇರುವಂತಹ ಹಿರಿಯೂರು ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ಎರಡು ವರ್ಷಗಳು ಆಯಿತು. ಇದು ಬೆನಾಮಿ ಸಾಲವನ್ನು ಕೊಟ್ಟು ಮುಚ್ಚಿ ಹೋಯಿತು. ಇನ್ನು ಚಳ್ಳಕೆರೆಯಲ್ಲಿರುವಂತಹ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್,

2003ರಲ್ಲಿ ಮುಚ್ಚಿ ಹೋಯಿತು. ಚಿತ್ರದುರ್ಗದಲ್ಲಿರುವಂತಹ ಸಂಪಿಗೆ ಸಿದ್ದೇಶ್ವರ ಕೋ–ಆಪರೇಟಿವ್ ಬ್ಯಾಂಕ್, ಇದು ಕೂಡ 2 ವರ್ಷಗಳಿಂದ ಮುಚ್ಚಿದೆ. ಇನ್ನು ಒನಕೆ ಓಬವ್ವನ ಹೆಸರನ್ನು ಇಟ್ಟುಕೊಂಡು ಮಹಿಳಾ ಕೋ–ಆಪರೇಟಿವ್ ಬ್ಯಾಂಕ್, ಚಿತ್ರದುರ್ಗ, ಇದು ಕೂಡ 2 ವರ್ಷಗಳಿಂದ ಮುಚ್ಚಿದೆ. ಹಿರೇಕೆರೂರು ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್, ಇದು ಕೂಡ ಮುಚ್ಚುವ ಹಂತದಲ್ಲಿ ಇದೆ. ಆ ಬ್ಯಾಂಕ್‌ನಲ್ಲಿ ಆರೂವರೆ ಕೋಟಿ ರೂಪಾಯಿ ವಿತ್‌ಔಟ್ ಸೆಕ್ಯೂರಿಟಿ ಡ್ರಾ ಮಾಡಿಕೊಂಡು ಅದನ್ನು ಸಾಲವೆಂದು ಹೇಳಿ, ನಾಮ ಹಾಕಿ ಆ ಬ್ಯಾಂಕ್ ಕೂಡ ಮುಚ್ಚಿಕೊಂಡು ಹೋಗುವ ಹಂತದಲ್ಲಿ ಇದೆ. ಇನ್ನು ಹುಬ್ಬಳ್ಳಿಯಲ್ಲಿ ಮರಾಠ ಬ್ಯಾಂಕ್, ಮರಾಠ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್, ಇಂತಹವರ ಕೈಗೆ ಸಿಕ್ಕಿ, ಬಡ ಮರಾಠರ ಬೆವರಿನ ಹಣ, ಖದೀಮರ ಮೋಜಿಗೆ ವ್ಯಯವಾಗುತ್ತಿದೆ. ಇದನ್ನು ಕೇಳುವವರು ಇಲ್ಲದೇ, ಬ್ಯಾಂಕ್ ಮುಚ್ಚುವ ಹಂತಕ್ಕೆ ಬಂದಿದೆ. ಇದನ್ನು ಏಕೆ ಹೇಳುತ್ತಿದ್ದೇನೇ ಕೇಳುವವರು ಇಲ್ಲವೆಂದು ಹೇಳುತ್ತಿದ್ದೇನೆ. ಸರ್ಕಾರ ಏನುಮಾಡುತ್ತಿದೆ, ಎನ್ನುವುದಕ್ಕೆ ನಾನು ಇದನ್ನು ಹೇಳುತ್ತಿದ್ದೇನೆ. ಚಳ್ಳಕೆರೆ ಅರ್ಬನ್ ಕೋ –ಅಪರೇಟೀವ್ ಬ್ಯಾಂಕ್ 2003ರಲ್ಲಿ ಮುಚ್ಚಿಹೋಗಿದೆ. ಇನ್ನು ಬಿಜಾಪುರ ಸಿದ್ದೇಶ್ವರ ಅರ್ಬನ್ ಕೋ – ಆಪರೇಟಿವ್ ಬ್ಯಾಂಕ್ ಅದು ಮುಚ್ಚುವ ಹಂತದಲ್ಲಿ ಇದೆ. ಅದೇ ರೀತಿಯಲ್ಲಿ ಮಾಲಿಂಗಪುರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್, ಬಾಗಲಕೋಟೆ ಜಿಲ್ಲೆ, ಇದು ಕೂಡ ಮುಚ್ಚಿದೆ. ಸರ್ಕಾರಿ ನೌಕರರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್, ಧಾರವಾಡ, ಇದು ಕೂಡ ಮುಚ್ಚುವ ಹಂತದಲ್ಲಿದೆ. ಸಿದ್ದೇಶ್ವರ ಕೋ–ಆಪರೇಟಿವ್ ಬ್ಯಾಂಕ್, ಬಿಜಾಪುರ, ದಶಕಗಳ ಇತಿಹಾಸವನ್ನು ಹೊಂದಿರುವಂತಹ ಬ್ಯಾಂಕ್, ಇದು ವರ್ತಕರ ಪಾಲಿನ ಕಲ್ಪವೃಕ್ಷದಂತೆ ನಿಂತಿತ್ತು. ಶ್ರೀಮಂತ ವರ್ತಕರಿಂದ ಹಿಡಿದು ಬಡ ಕೂಲಿ ಕಾರ್ಮಿಕರವರೆಗೂ, ಸಾವಿರಾರು ಮಂದಿ ಬ್ಯಾಂಕ್‌ನಲ್ಲಿ ಠೇವಣಿಯನ್ನು ಇಟ್ಟಿದ್ದರು. ಇಂತಹ ಬ್ಯಾಂಕ್‌ಗೆ ಶನಿ ವಕ್ಕರಿಸಿಕೊಂಡಿದ್ದಾನೆಂದು ವರದಿಯಾಗುತ್ತದೆ. ಮಹಲಿಂಗಪುರದ ಅರ್ಬನ್ ಬ್ಯಾಂಕ್, ಇವತ್ತು ಕೊಟ್ಟ ಸಾಲ ವಾಪಸ್ಸು ಆಗದೇ, ಅದರ ಬಡ್ಡಿಯು ಬಾರದೇ ಮಹಲಿಂಗಪುರದ ಅರ್ಬನ್ ಬ್ಯಾಂಕ್ ಬರ ಬಂದು ಹೋಗಿದೆ. ಇನ್ನು ಧಾರವಾಡ ಸರ್ಕಾರಿ ನೌಕರರ ಸಹಕಾರಿ ಬ್ಯಾಂಕ್ ಕಳೆದ ನಾಲ್ಕು ವರ್ಷಗಳ ಹಿಂದೆ ಅಮೃತ ಮಹೋತ್ಸವವನ್ನು ಆಚರಿಸಿಕೊಂಡಂತಹ ಈ ಧಾರವಾಡದ ಬ್ಯಾಂಕ್, ಇದರ ಹೆಸರು ಸರ್ಕಾರಿ ನೌಕರರ ಸಹಕಾರಿ ಬ್ಯಾಂಕ್, ಭ್ರಷ್ಟಾಚಾರ, ಸ್ವಜನಪಕ್ಷಪಾತ, ದುಂದುವೆಚ್ಚ, ಹಗಲು ದರೋಡೆಗಳಿಂದ, ಈ ಬ್ಯಾಂಕ್ ದಿವಾಳಿ ಎದ್ದಿದೆ. ರಬಕವಿ ಅರ್ಬನ್ ಬ್ಯಾಂಕ್ ಇದು ಕೂಡ ಹಾಳಾಗಿ ಹೋಗಿದೆ. ಕಾರವಾರದ ಮಾನ್ಯ ಸಚಿವರ ಊರಿನಲ್ಲಿ ಅಕ್ಷಯ ಬ್ಯಾಂಕ್ ಇದು ಕೂಡ ದಿವಾಳಿ ಅಂಚಿಗೆ ಹೋಗಿದೆ. ಸಿದ್ದಾಪುರದ

ಅರ್ಬನ್ ಬ್ಯಾಂಕ್, ಇದು ಅಂತಿಂಥ ಬ್ಯಾಂಕ್ ಆಗಿರಲಿಲ್ಲ. ಈ ಬ್ಯಾಂಕ್ ಜನರ ವಿಶ್ವಾಸವನ್ನೆ ಬಂಡವಾಳವನ್ನಾಗಿ ಮಾಡಿಕೊಂಡಿದ್ದರು. ಈಗ ಇಂತಹ ಬ್ಯಾಂಕ್ ಇವತ್ತು ಅದನ್ನೇ ಸ್ವಾಹ ಮಾಡಿಬಿಟ್ಟಿದ್ದಾರೆ. ಅದೇ ರೀತಿಯಲ್ಲಿ ಯಮಕನಮರಡಿ ಯು.ಸಿ.ಬಿ. ಬ್ಯಾಂಕ್ ಹೀಗೆ ವಿವಿಧ ಬ್ಯಾಂಕ್‌ಗಳು ಇವತ್ತು ದಿವಾಳಿ ಅಂಚಿಗೆ ಬಂದಿವೆ. ಇನ್ನು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು....

ಅಧ್ಯಕ್ಷರು: ಮಾನ್ಯ ರಾಮಸ್ವಾಮಿಯವರೇ, ತಾವು ಎಲ್ಲಾ ಬ್ಯಾಂಕ್‌ಗಳ ಪಟ್ಟಿಯನ್ನು ಮಾಡಿದ್ದೀರಿ. ಇನ್ನು ಉಳಿದಿರುವಂತಹ ಬ್ಯಾಂಕ್‌ಗಳು ಯಾವುದೆಂದು ಪಟ್ಟಿಯನ್ನು ಮಾಡಿಲ್ಲವೆ.

ಶ್ರೀ ಎ.ಟಿ. ರಾಮಸ್ವಾಮಿ: ಆಯಿತು ಬಂದೆ.

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ: ಮಾನ್ಯ ಅಧ್ಯಕ್ಷರೇ, ಬ್ಯಾಂಕ್‌ಗಳು ಯಾವುದು ಉಳಿದಿಲ್ಲ, ಸಚಿವರೊಬ್ಬರೇ ಉಳಿದಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಎ.ಟಿ. ರಾಮಸ್ವಾಮಿಯವರು ಕ್ಲೋಸ ಆಗಿರುವಂಥದ್ದು ಹೇಳುತ್ತಿದ್ದಾರೆ, ಓಪನ್ ಆಗಿರುವಂಥದ್ದು ಒಂದೆರಡು ಹೇಳಿಬಿಡಿ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೇ, ಅರ್ಬನ್ ಬ್ಯಾಂಕ್‌ಗಳು 300 ಇವೆ. ಅವುಗಳಲ್ಲಿ ಒಂದು ನಾಲ್ಕು ಒಳ್ಳೆಯ ಬ್ಯಾಂಕ್‌ಗಳನ್ನು ಹೇಳಲಿ. ಆಗ ಇನ್ನು ಒಳ್ಳೆಯ ಬ್ಯಾಂಕ್‌ಗಳು ಇವೆಯೆಂಬುದು ಗೊತ್ತಾಗುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ್ದೇನೇ. ಇಲ್ಲಿ ನ್ಯೂನತೆಗಳು ಇರುವಂತಹ ಬ್ಯಾಂಕ್‌ಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವಂಥದ್ದು ನಮ್ಮ ಕರ್ತವ್ಯ ಮತ್ತು ನಮ್ಮ ಧರ್ಮ. ಆ ಕೆಲಸವನ್ನು ನಾನು ಮಾಡುತ್ತಿದ್ದೇನೆಂಬ ಮಾತನ್ನು ಹೇಳುತ್ತೇನೆ. ಇನ್ನು ಕೆ.ಸಿ.ಸಿ. ಬ್ಯಾಂಕ್ ಇದು ಧಾರವಾಡದಲ್ಲಿರುವಂಥಾದ್ದು, ಇದು ಕೂಡ ಮುಳುಗುವ ಹಂತಕ್ಕೆ ಬಂದಿದೆ. ಇನ್ನು ಕೋಲಾರದ ಡಿ.ಸಿ.ಸಿ. ಬ್ಯಾಂಕ್ ಇದು ಖಾಲಿಯಾಗುತ್ತಿದೆಯಂತೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದು ಖಾಲಿಯಾಗಿ ಹೋಗಿದೆ.

ಶ್ರೀ ಎ.ಟಿ. ರಾಮಸ್ವಾಮಿ : ಇನ್ನು ದಾವಣಗೆರೆ ಡಿ.ಸಿ.ಸಿ. ಬ್ಯಾಂಕ್ ಹುಟ್ಟುವಾಗಲೇ ಸತ್ತುಬಿಟ್ಟಿತ್ತು. ಇನ್ನು ಬಿದರೆ ಡಿ.ಸಿ.ಸಿ. ಬ್ಯಾಂಕಿನಲ್ಲಿ ಲೂಟಿಯೋ ಲೂಟಿ. ಅವರು ಮಾಡಿದ್ದಾರೆ. ಇವರು ಮಾಡಿದ್ದಾರೆಂದು ನಾನು ಹೇಳಲಿಕ್ಕೆ ಹೋಗಿಲ್ಲ, ಜನರಲ್ಲಾಗಿ ಹೇಳುತ್ತಿದ್ದೇನೆ. ಇನ್ನು, ದಕ್ಷಿಣ ಕನ್ನಡ ಡಿ ಸಿ ಸಿ ಬ್ಯಾಂಕ್ ಕೂಡ ಲೂಟಿಗೆ ಬಂದಿದೆ. ಆಮೇಲೆ, ತುಮಕೂರು.....

ಶ್ರೀ ಆರ್.ವಿ. ದೇಶಪಾಂಡೆ: ರಾಮಸ್ವಾಮಿಯವರೇ, ಒಂದು ನಿಮಿಷ. ತಾವು ಹೇಳುತ್ತಿರುವುದಕ್ಕೆ ನಾನು ಅಬ್ಜಕ್ಟ್ ಮಾಡುವುದಿಲ್ಲ. ಅದು ತಮ್ಮ ರೈಟ್ ಆಗಿದೆ. ಆದರೆ ಒಂದು ವಿಚಾರವೆಂದರೆ ತಾವು ಪ್ರಸ್ತಾಪ ಮಾಡಿದಂಥ ಬ್ಯಾಂಕುಗಳಲ್ಲಿ ಕೆಲವು ಬ್ಯಾಂಕುಗಳು ಚೆನ್ನಾಗಿವೆ. ಕೋಲಾರದ ಬ್ಯಾಂಕು ಕಷ್ಟದಲ್ಲಿತ್ತು ನಿಜ.

ಆದರೆ ಮೊನ್ನೆ ನಾವು ರೈತರಿಗೆ ಬಡ್ಡಿ ಮನ್ನಾ ಮಾಡಿದ ಮೇಲೆ ರಿಕವರಿ ಚೆನ್ನಾಗಿ ಆಗಿದೆ. ಧಾರವಾಡದಲ್ಲೂ ರಿಕವರಿ ಚೆನ್ನಾಗಿ ಆಗಿದೆ. ಆದರೆ ಧಾರವಾಡ ಡಿಸಿಸಿ ಬ್ಯಾಂಕಿನಲ್ಲಿ ಏನಾಗಿದೆ ಎಂದರೆ, ಅಲ್ಲಿ ನಾನ್ ಅಗ್ರಿಕಲ್ಚರಲ್ ಲೋನ್ ಬಹಳ ಅಂದರೆ ಸುಮಾರು 73 ಕೋಟಿ ರೂಪಾಯಿಗಳಷ್ಟಿದೆ. ಬಡ್ಡಿಯನ್ನೂ ಸೇರಿಸಿದರೆ ಸುಮಾರು 100 ಕೋಟಿ ರೂಪಾಯಿಗಳಷ್ಟಿದೆ. ಆದರೆ ಅಗ್ರಿಕಲ್ಚರಲ್ ಲೋನ್ ರಿಕವರಿ ಬಹಳ ಚೆನ್ನಾಗಿ ಆಗಿದೆ. ಎಲ್ಲಾ ಬ್ಯಾಂಕುಗಳಲ್ಲೂ ಅಗ್ರಿಕಲ್ಚರಲ್ ಲೋನ್ ರೆಕವರಿ ಚೆನ್ನಾಗಿ ಆಗಿದೆ. ಕೋಲಾರ, ಗುಲ್ಬರ್ಗ, ಧಾರವಾಡ, ಚಿಕ್ಕಮಗಳೂರು ಮತ್ತು ಬೆಂಗಳೂರಿನ ಡಿಸಿಸಿ ಬ್ಯಾಂಕುಗಳು ಚೆನ್ನಾಗಿವೆ. ಇವುಗಳಲ್ಲಿ ಚಿಕ್ಕಮಗಳೂರು, ಕೋಲಾರ ಮತ್ತು ಗುಲ್ಬರ್ಗ ಈ ಮೂರು ಬ್ಯಾಂಕುಗಳು ನಮ್ಮ ದೃಷ್ಟಿಯಲ್ಲಿ ಡೆಫ್ ನೇಟಲಿ ಸುಧಾರಿಸುತ್ತಿವೆ. Dharwar, Bangalore we are committed to see that ಅವುಗಳನ್ನೂ ಸಹ ಸುಧಾರಿಸಿ ಹಾದಿಗೆ ತರಲು ಪ್ರಯತ್ನ ಮಾಡುತ್ತೇವೆ. ಆದರೆ ಸೌತ್ ಕೆನರಾ ಡಿಸಿಸಿ ಬ್ಯಾಂಕು ಮತ್ತು ಬೀದರ್ ಡಿಸಿಸಿ ಬ್ಯಾಂಕುಗಳು ಒಳ್ಳೆಯ ಲೆಂಡಿಂಗ್ ಮಾಡುತ್ತಿವೆ. ಅವಾರ್ಡ್ ಕೂಡ ಸಿಕ್ಕಿವೆ. ಎಸ್ಪೆಷಿಯಲಿ ಸೌತ್ ಕೆನರಾ ಬ್ಯಾಂಕು ಬಹಳ ಒಳ್ಳೆಯ ಕೆಲಸ ಮಾಡಿದೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಶ್ರೀ ಎ.ಟಿ. ರಾಮಸ್ವಾಮಿ: ಏತಕ್ಕೆ ಇದನ್ನು ಹೇಳಿದೆ ಎಂದರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕುಗಳು, ಡಿಸಿಸಿ ಬ್ಯಾಂಕುಗಳು, ಪಾನ್ ಬ್ರೋಕರ್‌ಗಳು ಇವೆಲ್ಲವೂ ಕೂಡ, these banks are registered under the Karnataka Co-operative Societies Act.,

ಇವರು ನೊಂದಣಿ ಮಾಡಿಸಿರುತ್ತಾರೆ. ಇವರುಗಳು ಲೇಕ್ಕಪತ್ರಗಳನ್ನು ಪ್ರತಿವರ್ಷ ಆಡಿಟ್ ಮಾಡಬೇಕು. ಪ್ರತಿವರ್ಷ ಆಡಿಟ್ ಮಾಡಿದ ಮೇಲೆ, ಆಡಿಟ್ ವರದಿಯಲ್ಲಿ ಏನು ನ್ಯೂನತೆಗಳನ್ನು ಹೇಳಿರುತ್ತಾರೆ, ಅವುಗಳನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡಬೇಕು. ಸರಿಪಡಿಸಲಿಕ್ಕೆ ಆಗದೇ ಇದ್ದಾಗ ಆ ಆಡಳಿತ ಮಂಡಳಿಗಳ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಅಧಿಕಾರವಿದೆ. ಅದಕ್ಕೆ ನಾನು ಮೊದಲು ಹೇಳಿದ್ದು, ಸರ್ಕಾರದ ನಿಯಂತ್ರಣ ಅವುಗಳ ಮೇಲಿದೆಯೆಂದು ಹೇಳಿ ಜನ ಸರ್ಕಾರದ ಮೇಲೆ ವಿಶ್ವಾಸವಿಟ್ಟು ಆ ಬ್ಯಾಂಕುಗಳಲ್ಲಿ ಡಿಪಾಸಿಟ್ ಮಾಡಿ ಹಣವನ್ನು ತೊಡಗಿಸಿದರು. ಆದರೆ ಆ ಡಿಪಾಸಿಟ್‌ಗಳ ಸುರಕ್ಷತೆಯನ್ನು ಕಾಪಾಡಲು ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ಸಾಧ್ಯವಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಕಾನೂನುಬಾಹಿರ ವ್ಯವಹಾರದ ಬಗ್ಗೆ ಏನು ತನಿಖೆ ಮಾಡಿರುತ್ತಾರೆ, ಏನು ಆಡಿಟ್ ರಿಪೋರ್ಟ್ ಬಂದಿರುತ್ತದೆ, ಅದರ ಮೇಲೆ ನಿಮ್ಮ ಇಲಾಖೆಯ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಲೀ, ಡೆಪ್ಯುಟಿ ರಿಜಿಸ್ಟ್ರಾರ್ ಆಗಲೀ ಜಾಯಿಂಟ್ ರಿಜಿಸ್ಟ್ರಾರ್ ಆಗಲೀ ಅಥವಾ ರಿಜಿಸ್ಟ್ರಾರ್ ಆಗಲೀ, ಏನೇನು ತಪ್ಪಾಗಿದೆ ಎಂದು ಪಟ್ಟಿ ಮಾಡಿ ಕಾಯಿದೆಯ ಸೆಕ್ಷನ್‌ಗಳ

ಪ್ರಕಾರ ಕ್ರಮ ತೆಗೆದುಕೊಳ್ಳಲು ಆದೇಶ ಮಾಡಬೇಕಲ್ಲವೆ ಆದೇಶ ಮಾಡಿ ಅವರು ಕ್ರಮ ತೆಗೆದುಕೊಳ್ಳದಿದ್ದರೆ ನೀವು ಸಂಬಂಧಿಸಿದ ಅಧಿಕಾರಿಗಳ ಮೇಲಾಗಲೀ ಅಥವಾ ಬೋರ್ಡ್‌ನವರ ಮೇಲಾಗಲಿ ಕ್ರಮ ತೆಗೆದುಕೊಳ್ಳಲೇಬೇಕಾಗುತ್ತದೆ. ಬೋರ್ಡ್‌ನವರು ಸೂಪರ್ ಸೀಡ್ ಕೂಡ ಮಾಡಬೇಕಾಗುತ್ತದೆ. ನಷ್ಟವನ್ನು ಅಧಿಕಾರಿಗಳು ಮಾಡಿದ್ದರೆ, ಅದನ್ನು ಅಧಿಕಾರಿಗಳಿಂದ ತುಂಬಿಸಬೇಕು ಅಥವಾ ಬೋರ್ಡ್‌ನವರು ಅದಕ್ಕೆ ಜವಾಬ್ದಾರರಾಗಿದ್ದರೆ, ಅವರಿಂದ ತುಂಬಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು. ಅದೂ ಕೂಡ ಆಗಲಿಲ್ಲ ಎಂದರೆ ನೀವು ಕಾನೂನು ರೀತ್ಯಾ ಸೂಪರ್ ಸೀಡ್ ಮಾಡುತ್ತೀರೋ ಅಥವಾ ಕ್ರಿಮಿನಲ್ ಮೊಕದ್ದಮೆ ಹೂಡುವುದನ್ನೋ ಮಾಡಬೇಕಾಗುತ್ತದೆ. ಕರ್ನಾಟಕ ಲಾ ಜರ್ನಲ್ ಒಂದು ಕಡೆ ಹೈಕೋರ್ಟಿನವರು ಒಂದು ಆದೇಶವನ್ನು ಮಾಡುತ್ತಾರೆ. Sections 63 to 69 confer enormouse powers on the registrar. These powers are provided to eradicate the evils in the Co-operative Movement and to deal effectively with the inefficient and corrupt socity. When the registrar does not take any action it is clearly a negligence of duty.

ಈ ರಾಜ್ಯದಲ್ಲಿರುವ ವಿವಿಧ ಸಹಕಾರಿ ಸಂಸ್ಥೆಗಳು ಮಧ್ಯಮ ವರ್ಗ ಮತ್ತು ಬಡ ಜನರಿಂದ ತೆಗೆದುಕೊಂಡ ಹಣವನ್ನು ನಿಮ್ಮ ಎ.ಆರ್.ಡಿಆರ್ ಜಿಆರ್ ಅಥವಾ ರಿಜಿಸ್ಟ್ರಾರ್ ಸುರಕ್ಷಿತವಾಗಿ ಕಾಪಾಡಲಿಕ್ಕೆ ಸಾಧ್ಯವಾಗಲಿಲ್ಲವೆಂದರೆ ಇಲಾಖೆಯವರು ಏನು ಮಾಡುತ್ತಿದ್ದಾರೆ. ಸಂಸ್ಥೆಗಳವರ ಮೇಲಲ್ಲ ನೀವು ಕ್ರಿಮಿನಲ್ ಮೊಕದ್ದಮೆ ಹೂಡಬೇಕಾಗಿರುವುದು. ವಿನಿವಿಂಕ್ ಶಾಸ್ತ್ರಿ ಅಥವಾ ಲೋಕೇಶ್ ಮೇಲೇ ಅಲ್ಲ. 2–3 ವರ್ಷಗಳಿಂದ ಅವರು ಈ ವ್ಯವಹಾರವನ್ನು ಮಾಡುತ್ತಿದ್ದರೂ ಕೂಡ, ಆ ಕಡೆ ಗಮನವನ್ನು ಹರಿಸದೇ ಲೂಟಿ ಮಾಡಲು ಕಾರಣಕರ್ತರಾಗಿರುವಂಥ, ಸರ್ಕಾರದ ವತಿಯಿಂದ ನೇಮಕವಾಗಿ, ಸರ್ಕಾರದ ಸಂಬಳ ತೆಗೆದುಕೊಳ್ಳುತ್ತಿರುವ ಅಧಿಕಾರಿಗಳ ಮೇಲೆ ಮೊದಲು ಕ್ರಿಮಿನಲ್ ಮೊಕದ್ದಮೆ ಹೂಡಿ. ನಿಮಗೆ ಆ ಶಕ್ತಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ, ದೇಶಪಾಂಡೆಯವರೇ, ದಯಮಾಡಿ ಆ ಕೆಲಸವನ್ನು ನೀವು ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗಾದಾಗ ಮಾತ್ರ ಈ ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ವಿಶ್ವದಲ್ಲಿ ಮೂರು ವಿವಿಧ ಆಡಳಿತ ವ್ಯವಸ್ಥೆಗಳಿವೆ. ಒಂದು ಕಮ್ಯುನಿಸಂ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಸರ್ಕಾರದ ಕೈಯಲ್ಲಿ ಅಧಿಕಾರ, ಆಡಳಿತ ಇರುತ್ತದೆ. ಅವರು ಬಟ್ಟೆಯನ್ನೂ ಕೊಡುತ್ತಾರೆ. ವಿದ್ಯೆಯನ್ನೂ ಕೊಡುತ್ತಾರೆ. ವಸತಿಯನ್ನೂ ಕೊಡುತ್ತಾರೆ. ಮತ್ತೊಂದು ವ್ಯವಸ್ಥೆಯೆಂದರೆ ಕ್ಯಾಪಿಟಲಿಸಂ, ಈ ವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳು ಬಂಡವಾಳ

ಹಾಕಿ ಅದರ ಲಾಭ ತೆಗೆದುಕೊಳ್ಳುತ್ತಾರೆ. ಮೂರನೆಯ ವ್ಯವಸ್ಥೆಯೇ ಪ್ರಜಾಪ್ರಭುತ್ವ ವ್ಯವಸ್ಥೆ, ಇದು ಸುವರ್ಣಮಾರ್ಗ ವ್ಯವಸ್ಥೆ. Golden Means

ಈ ವ್ಯವಸ್ಥೆಯಲ್ಲಿ ಜನರೇ ಬಂಡವಾಳ ಹಾಕುತ್ತಾರೆ. ಜನರೇ ಆಡಳಿತ ನಡೆಸುತ್ತಾರೆ. ಲಾಭವನ್ನು ಕೂಡ ಜನರೇ ಹಂಚಿಕೊಳ್ಳುತ್ತಾರೆ. ಆದರೆ ಇವತ್ತು ಈ ಡೆಮಾಕ್ರೆಟಿಕ್ ಫೋರಂನಲ್ಲಿ ಜನರು ಬಂಡವಾಳ ಹಾಕುತ್ತಿದ್ದಾರೆ. ಆದರೆ ಅದರ ಲಾಭವನ್ನು ಪಡೆದುಕೊಳ್ಳಲು ಅವರಿಂದ ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ಅಧಿಕಾರಶಾಹಿಗಳಿರಬಹುದು ಅಥವಾ ಕೆಲವು ಸ್ವಾರ್ಥಿಗಳಿರಬಹುದು. ಈ ದಿಕ್ಕಿನಲ್ಲಿ ಕೋ-ಆಪರೇಟಿವ್ ಮೂಮೆಂಟ್ ಹಾಳಾಗುತ್ತಿದೆ. ನಾವು ನೂರು ವರ್ಷ ಸಹಕಾರಿ ಚಳವಳಿಯನ್ನು ಮುಗಿಸಿದ್ದೇವೆ. ಶತಮಾನೋತ್ಸವವನ್ನು ಕೂಡ ಆಚರಣೆ ಮಾಡುತ್ತಿದ್ದೇವೆ. ಆದರೆ ಅದರ ಅಧಃಪತನವನ್ನು ಕೂಡ ನಾವು ಕಾಣುತ್ತಿದ್ದೇವೆಂದು ಹೇಳಿದರೆ ಸಹಕಾರ ಸಚಿವರು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ನಾನು ಭಾವಿಸಿದ್ದೇನೆ.

Finance is the backbone of Development ಎಂದು ನಾನು ಭಾವಿಸಿದ್ದೇನೆ. ಆದರೆ, ಇಂಥ ಹಣಕಾಸಿನ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿ ಇಡಲಿಕ್ಕೆ ಸಾಧ್ಯವಾಗದೇ ಇರತಕ್ಕಂಥ ನಿಮ್ಮ ಸಹಕಾರ ಇಲಾಖೆಯ ಅಧಿಕಾರಿ ವರ್ಗದವರೇ ಲೂಟಿಗೆ ನಿಂತಿರತಕ್ಕಂಥಾದ್ದು ನಿಜಕ್ಕೂ ಕೂಡ ನಾಚಿಕೆಗೇಡಿನ ವಿಷಯ. ನಿಮ್ಮ ಇಲಾಖೆಯ ಪ್ರಿನ್ಸಿಪಾಲ್ ಸೆಕ್ರೆಟರಿಯವರು ಎಷ್ಟು ಇಲಾಖೆಯ ಆಡಿಟ್ ರಿಪೋರ್ಟ್‌ಗಳನ್ನು ಎಷ್ಟು ತಿಂಗಳಿಗೊಂದು ಸಲ ತರಸಿಕೊಂಡು ರಿವ್ಯೂ ಮಾಡಿದ್ದಾರೆ ಎಂದು ಕೇಳಿ. ಏಕೆ ರಿವ್ಯೂ ಮಾಡಿಲ್ಲ? ಅವರು ಏನು ಮಾಡುತ್ತಿದ್ದಾರೆ? ಏನು ದಂಧೆ ಅವರಿಗೇ? ನಿಮ್ಮ ರಿಜಿಸ್ಟ್ರಾರ್ ಏನು ಮಾಡುತ್ತಿದ್ದಾರೆ? ಎಷ್ಟುಸಲ ರಾಜ್ಯದಲ್ಲಿರುವ ಎಲ್ಲಾ ಸೊಸೈಟಿಗಳಿಂದ ಆಡಿಟ್ ರಿಪೋರ್ಟ್‌ಗಳನ್ನು ತರಸಿಕೊಂಡು ಅದರ ಮೇಲೇ ಕ್ರಮ ತೆಗೆದುಕೊಂಡರು? ತೆಗೆದುಕೊಳ್ಳದಿದ್ದರೇ, ಏಕೇ ತೆಗೆದುಕೊಳ್ಳಲಿಲ್ಲ, ಏನಾಯಿತು? ಎನ್ನುವುದನ್ನು ಯಾವತ್ತಾದರೂ ಅವರು ರಿವ್ಯೂ ಮಾಡಿದ್ದಾರೆಯೇ? ತಾವೇ ಒಂದು ದಿವಸ ರಿವ್ಯೂ ಮಾಡಿ ಕೇಳಿ ನೋಡಿ. ಅದನ್ನು 3 ತಿಂಗಳಿಗೊಮ್ಮೆ 6 ತಿಂಗಳಿಗೊಮ್ಮೆ ಅಥವಾ ವರ್ಷಕ್ಕೊಂದು ಸಾರಿಯಾದರೂ ಮಾಡಬೇಕಾಗುತ್ತದೆ. ಆದರೆ ಇಂಥ ಕೆಲಸಗಳನ್ನು ಮಾಡಲು ಅವರಿಗೆ ಸಮಯಾವಕಾಶ ಸಾಲುವುದಿಲ್ಲ. ಇದಕ್ಕಿಂತ ಬೇರೆಬೇರೆ ಘನಂದಾರಿ ಕೆಲಸಗಳು ಅವರಿಗೆ ಇರುತ್ತವೆ. ಆ ದಿಕ್ಕಿನಲ್ಲಿ ನಿಮ್ಮ ಆಡಿಟ್ ಅನಾಮಲಿ ಏನಾಯಿತು, ಎನ್‌ಕ್ವೈರಿಗಳು, ಇನ್ಸ್‌ಪೆಕ್ಷನ್‌ಗಳು ಏನಾದವು . ಅದನ್ನು ರೆಡಿ ಮಾಡಲಿಕ್ಕೆ ಏನು ಆರ್ಡರ್ ಮಾಡಿದರು, ಇವುಗಳ ಬಗ್ಗೆ ರಿವ್ಯೂ ಮಾಡತಕ್ಕಂಥ ಅಧಿಕಾರ ನಿಮ್ಮ ಸಹಕಾರಿ ಇಲಾಖೆಯ ಅಧಿಕಾರಿ ವರ್ಗದವರಿಗೆ ಇದೆ. ಆದರೆ ಅವರು ಯಾವುದೇ ಕೆಲಸವನ್ನು ಮಾಡದೇ ಸ್ವಾರ್ಥಿಗಳಾಗಿ ಮಧ್ಯಮ ಮತ್ತು ಬಡ ವರ್ಗದ ಜನರನ್ನು ವಂಚನೆ ಮಾಡಿ ಅವರ ಡೆಪಾಸಿಟ್‌ಗಳನ್ನು ನುಂಗಿ ಹಾಕುತ್ತಿದ್ದಾರೆ ಅವರ ಜೆತೆ ಇವರೂ ಕೂಡ ಶಾಮೀಲಾಗಿದ್ದಾರೆ ಎನ್ನುವ

ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇಲ್ಲದಿದ್ದರೆ, ಇವರು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಯಾರು ಕ್ರಮಬದ್ಧವಾಗಿ ಲೆಕ್ಕಪತ್ರಗಳನ್ನು ಇಟ್ಟಿಲ್ಲ, ಯಾರು ಶಿಸ್ತುಬದ್ಧವಾಗಿ ಹಣಕಾಸಿನ ವ್ಯವಹಾರವನ್ನು ನಡೆಸುತ್ತಿಲ್ಲ. ಅಂಥ ಎಷ್ಟು ಜನರ ಮೇಲೆ ಇವರು ಕ್ರಿಮಿನಲ್ ಸ್ವರೂಪದ ಮೊಕದ್ದಮೆಯನ್ನು ಹೂಡಿದ್ದಾರೆ, ಏನು ಕ್ರಮ ತೆಗೆದುಕೊಂಡಿದ್ದಾರೆ, ಇಂಥ ಎಷ್ಟು ಬ್ಯಾಂಕುಗಳು ಆಡಳಿತ ಮಂಡಳಿಯನ್ನು ರದ್ದು ಮಾಡಲು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ ಎಂದು ಹೇಳಿ ಆ ದಿಕ್ಕಿನಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ, ಅದು ಏನಿವಿಂಕ್ ಇರಬಹುದು ಅಥವಾ ಬೇರೆಯವರು ಇರಬಹುದು. ಈ ಎಲ್ಲಾ ಹಣಕಾಸಿನ ಸಂಸ್ಥೆಗಳ ಅವ್ಯವಹಾರಕ್ಕೆ ಸಹಕಾರ ಇಲಾಖೆಯ ನಿಮ್ಮ ಅಧಿಕಾರಿಗಳ ಪ್ರತ್ಯಕ್ಷ ಅಥವಾ ಪರೋಕ್ಷ ಬೆಂಬಲವಿಲ್ಲದೇ ಅವರು ಅವ್ಯಾಹತವಾಗಿ ಲೂಟಿ ಮಾಡಲು ಸಾಧ್ಯವಾಗಿಲ್ಲ. ಆ ಲೂಟಿಗೆ ನಿಮ್ಮ ಇಲಾಖೆಯ ಅಧಿಕಾರಿಗಳು ಪ್ರಮುಖ ಕಾರಣಕರ್ತರು. ಆದ್ದರಿಂದ, ಅವರಿಗಿಂತ ಮೊದಲು ಈ ಅಧಿಕಾರಿಗಳನ್ನು ಒಳಗೆ ಹಾಕಿ, ಕ್ರಿಮಿನಲ್ ಮೊಕದ್ದಮೆಯನ್ನು ಇವರ ಮೇಲೆ ಹೂಡಿ. ಆಗ ಖಂಡಿತವಾಗಿ ನಿಮ್ಮ ಸಹಕಾರ ಇಲಾಖೆ ಸುಧಾರಣೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ಒತ್ತಾಯಪೂರ್ವಕವಾಗಿ ನಿಮ್ಮ ಗಮನಕ್ಕೆ ತರುತ್ತಾ, ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ): ಮಾನ್ಯ ಅಧ್ಯಕ್ಷರೇ, ಬೇಡಿಕೆ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಭಿನಂದನೆಯನ್ನು ಸಲ್ಲಿಸುತ್ತಾ, ಮುಖ್ಯವಾಗಿ ನಾನು ಸಹಕಾರಿ ಕ್ಷೇತ್ರದ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಸಹಕಾರಿ ತತ್ವ ಅಥವಾ ಚಳವಳಿ ಪ್ರಾರಂಭವಾಗಿ ನೂರು ವರ್ಷಗಳಾದವು . ಈ ಶತಮಾನೋತ್ಸವ ಮಾಡುವ ಸಂದರ್ಭದಲ್ಲಿ ದೇಶದಲ್ಲಿ ಪ್ರಥಮವಾಗಿ ಸಹಕಾರಿ ಕಾನೂನು ಅಸ್ತಿತ್ವಕ್ಕೆ ಬಂದು ನೂರು ವರ್ಷಗಳು ಕಳೆದಿವೆ. ಅದರ ಬಗ್ಗೆ ಕರ್ನಾಟಕ ಸರ್ಕಾರ ಕೂಡ ಯೋಚನೆಯನ್ನು ಚಿಂತನೆಯನ್ನು ಮಾಡಬೇಕಾಗಿದೆ. ಆ ದಿಶೆಯಲ್ಲಿ ನೋಡಿದಾಗ ನಮ್ಮ ರಾಜ್ಯದಲ್ಲಿ ಎಷ್ಟು ಜನ ಸಹಕಾರಿ ಸಂಘದ ಪ್ರತಿನಿಧಿಗಳಾಗಿ ಆ ಚಳುವಳಿಯಲ್ಲಿ ಭಾಗವಹಿಸಿದ್ದಾರೆಂಬುದನ್ನು ಅವಲೋಕನ ಮಾಡಬೇಕಾಗಿದೆ. ಈಗಾಗಲೇ ನಮ್ಮ ಮಾನ್ಯ ಸದಸ್ಯರು ಹೇಳಿದಂತೆ, ಸಹಕಾರಿ ಸಂಘಗಳು ಹುಟ್ಟುತ್ತವೆ. ಅವುಗಳ ಜನನವಾಗುವುದರ ಜೊತೆ ಜೊತೆಯಲ್ಲಿಯೇ ಅವು ಮರಣ ಹೊಂದುವಂಥ ಸಂದರ್ಭಗಳನ್ನು ನಾವು ಕಾಣುತ್ತಿರುತ್ತೇವೆ. ಈಗಾಗಲೇ ಪಟ್ಟಿ ಮಾಡಿ ಹೇಳಿದ ಹಾಗೆ ಸುಮಾರು ಸಹಕಾರಿ ಸಂಘಗಳು ಅವ್ಯವಹಾರ ಮಾಡಿಕೊಂಡು ಬಂದಿರುವುದನ್ನು ನಾವು ನೋಡುತ್ತಾ ಬಂದಿದ್ದೇವೆ. ಆದರೇ ಅದಕ್ಕೇ ಸರಿಯಾದಂಥ ಕ್ರಮವನ್ನು ಜರುಗಿಸುವಂಥ ವ್ಯವಸ್ಥೆ ಸಹಕಾರಿ ಇಲಾಖೆಯಲ್ಲಿ ಇಲ್ಲದಿರುವುದು ದುರಾದೃಷ್ಟ. ಸಹಕಾರಿ ಸಂಘ ಹುಟ್ಟಿನಿಂದ

ಸಾವಿನವರೆಗೂ ಕೂಡ ಎಲ್ಲಾ ಕೆಲಸಕಾರ್ಯಗಳನ್ನು ಸಹಕಾರಿ ತತ್ವದ ಆಧಾರದ ಮೇಲೆ ಮಾಡಿದಾಗ ಪ್ರತಿಯೊಬ್ಬನ ಕೆಲಸ ಸಹ ಸುಲಭವಾಗುತ್ತದೆ. ಆ ರೀತಿಯಲ್ಲಿ ಸಹಕಾರಿ ಸಂಘ ಬೆಳೆಯಬೇಕೆಂಬ ಇಚ್ಛೆ ನಮ್ಮೆಲ್ಲರದು ಆಗಿದ್ದರೂ ಕೂಡ ಇದರ ಕಡೆಗೆ ಸರ್ಕಾರ ಕೂಡ ಹೆಚ್ಚು ಗಮನ ಕೊಡುತ್ತಿಲ್ಲ. ನಮ್ಮ ಸಹಕಾರಿ ಸಂಘಗಳಲ್ಲಿ ಅಥವಾ ಅದನ್ನು ನೋಡಿಕೊಳ್ಳುವ ಇಲಾಖೆಗಳಲ್ಲಿ ಮುಖ್ಯವಾಗಿ ಬೇಕಾಗಿರುವ ಸಿಬ್ಬಂದಿ ವರ್ಗದವರೇ ಇಲ್ಲ. Assistant Registrar Office ನಲ್ಲಿ ಒಬ್ಬ (AR) ಇರುತ್ತಾರೆ. ಒಬ್ಬ ಗುಮಾಸ್ತನು ಇರುತ್ತಾನೆ. ಅವನ ಕೈಕೆಳಗೆ ಒಂದು ಸಾವಿರಕ್ಕಿಂತಲೂ ಹೆಚ್ಚು ಸಹಕಾರಿ ಸಂಘಗಳು ಇವೆ. ಅಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ಆ ಇಲಾಖೆಯ ಒಬ್ಬ ಅಧಿಕಾರಿ ನೋಡಿಕೊಳ್ಳುವುದಕ್ಕೆ ಸಾಧ್ಯವೇ? ಎನ್ನುವ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಅದನ್ನು ಬಲಪಡಿಸುವ ದೃಷ್ಟಿಯಲ್ಲಿ ಸಹಕಾರ ಇಲಾಖೆಯ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಹೆಚ್ಚು ಸಿಬ್ಬಂದಿಗಳು ಇದ್ದಾಗ ಸರ್ಕಾರಕ್ಕೆ ಅದರಿಂದ ನಷ್ಟವಾಗುತ್ತದೆ ಅಥವಾ ಅದರಿಂದ ತೊಂದರೆಗಳಾಗುವ ದೃಷ್ಟಿಯಿಂದ ಅದರ ಸಂಖ್ಯೆ ಕಡಿಮೆಯಾಗಬೇಕೆಂದು ಹೇಳುತ್ತೇವೆ. ಯಾವುದಕ್ಕೆ ಸಿಬ್ಬಂದಿಗಳು ಅಥವಾ ಅಧಿಕಾರಿಗಳು ಬೇಕೊ ಅದಕ್ಕೆ ತಕ್ಕಂತೆ ಆ ಸಂಘಗಳಲ್ಲಿ ವ್ಯವಹಾರಗಳನ್ನು ನೋಡಿಕೊಳ್ಳಲಿಕ್ಕೆ ಬೇಕಾದಂಥ ಅಧಿಕಾರಿಗಳು ಇದ್ದಾಗ ಮಾತ್ರ ಅದು ಸುಸೂತ್ರವಾಗಿ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಮುಖ್ಯವಾಗಿ ಚುನಾವಣೆಗಳು ಬಂದಾಗಲೂ ಕೂಡ ನಾನು ನೋಡುತ್ತಿದ್ದೇನೆ. ಚುನಾವಣೆಗೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡುತ್ತೇವೆ. ಆ ಅಧಿಕಾರಿ ಪ್ರಾಥಮಿಕ ಸಹಕಾರಿ ಸಂಘದ ಒಂದು ಚುನಾವಣೆಗೆ ಬಂದಾಗ ರೂ. 60 ಸಾವಿರವನ್ನು ಅವನ ಚುನಾವಣಾ ವೆಚ್ಚಕ್ಕಾಗಿ ವ್ಯಯ ಮಾಡುತ್ತಾನೆ. ಈ ಬಗ್ಗೆ ಈ ಸದನದಲ್ಲಿಯೇ ನಾನು ಪ್ರಸ್ತಾಪ ಮಾಡಿದ್ದೆ. ನನ್ನ ಬೆಳ್ತಂಗಡಿ ಕ್ಷೇತ್ರದ ಹಳದಂಗಡಿ ಪ್ರಾಥಮಿಕ ಸಹಕಾರಿ ಸಂಘದ ಚುನಾವಣೆಯ ಸಂದರ್ಭದಲ್ಲಿ ಒಬ್ಬ ಅಧಿಕಾರಿ ಅವನ ಚುನಾವಣೇಯ ಖರ್ಚಿಗಾಗಿ 60 ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿ ಆ ಮೂಲಕ ಈ ಸದನದಲ್ಲಿ ಪ್ರಸ್ತಾಪ ಮಾಡಿದಾಗ ರೂ. 20 ಸಾವಿರವನ್ನು ಮಾತ್ರ ವಾಪಸ್ಸು ಕಟ್ಟಿರುವಂಥ ಪ್ರಸಂಗಗಳು ಇವೆ. ಅದೇ ರೀತಿ ತೀರ್ಥಹಳ್ಳಿ ತಾಲೂಕಿನ ತೆಕ್ಕಾರ ಸಹಕಾರಿ ಸಂಘದಲ್ಲಿಯೂಕೂಡ ಅವ್ಯವಹಾರ ಆಗಿದೆ. ಸಣ್ಣ ಸಣ್ಣ ಸಹಕಾರಿ ಬ್ಯಾಂಕಿನ ಚುನಾವಣೆಯಲ್ಲಿಯೂ ಕೂಡ ಒಬ್ಬ ಅಧಿಕಾರಿಗಳು ಬಂದು ಅಷ್ಟು ಅವ್ಯವಹಾರಗಳನ್ನು ಮಾಡುತ್ತರೆಂದರೆ ಇದು ಸಹಿಸಿಕೊಳ್ಳುವಂಥದ್ದು ಅಲ್ಲ. ಆ ರೀತಿಯಲ್ಲಿ ಸಹಕಾರಿ ಇಲಾಖೆಗೆ ಪುನರುಜ್ಜೀವನ ಮಾಡಬೇಕಾಗಿದೆ.

(ಈ ಹಂತದಲ್ಲಿ ಸಭಾಧ್ಯಕ್ಷರ ಪೀಠವನ್ನು ಮಾನ್ಯ ಉಪಾಧ್ಯಕ್ಷರು ಅಲಂಕರಿಸಿದರು)

ಹಾಗಾಗಿ ಅದು A.R - D.R office ಇರಬಹುದು, G.R. office ಇರಬಹುದು, ಅಲ್ಲಿ ಸರಿಯಾದಂಥ ಸಿಬ್ಬಂದಿಗಳು, ಬೇಕಾದಂಥ ವ್ಯವಸ್ಥೆಗಳು ಆಗಬೇಕಾಗಿದೆ. ಎಂದು ನಾನು ತಮ್ಮ ಮೂಲಕ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದರ ಜೊತೆಯಲ್ಲಿ ಚುನಾವಣೆಯಲ್ಲಿಯೂ ಕೂಡ ಕೆಲವೊಂದು ತಿದ್ದುಪಡಿಗಳು ಆಗಬೇಕಾಗಿದೆ. ಒಂದು ಸಹಕಾರಿ ರಂಗದಲ್ಲಿ 100 ಸದಸ್ಯರು ಇದ್ದರೆ ಒಬ್ಬ ನಾಮಪತ್ರ ಹಾಕಬೇಕಾಗಿದ್ದರೆ 10 ಜನರು ಸೂಚನೆ ಮಾಡಬೇಕಾಗಿದೆ. ಒಂದು ಗುಂಪಿನ 10 ಜನರ ನಾಮಪತ್ರವನ್ನು ಸಲ್ಲಿಸಿದ ನಂತರ ಮತ್ತೊಂದು ಗುಂಪಿಗೆ ಅಲ್ಲಿ ಚುನಾವಣೆಗೆ ಸ್ಪರ್ಧೆ ಮಾಡುವುದಕ್ಕೆ ಅವಕಾಶವೇ ಇಲ್ಲದಂಥ ಸಂದರ್ಭಗಳು ಹೆಚ್ಚಿರುವ ಕಾರಣ, ಸಹಕಾರಿ ಸಂಘದಲ್ಲೂ ತಿದ್ದುಪಡಿ ಮಾಡಬೇಕಾಗಿದೆ. ಒಬ್ಬನಿಗೆ 9 ಜನರನ್ನು ಆಯ್ಕೆ ಮಾಡುವಂಥ ಅಧಿಕಾರ ಇರುತ್ತದೆ. ಆದರೆ ಒಬ್ಬನಿಗೆ ಒಮ್ಮೆ ಮಾತ್ರ ಸೂಚನೆ ಮಾಡುವಂಥ ಅಧಿಕಾರ ಇದ್ದಾಗ ಅಲ್ಲಿ ಅನ್ಯಾಯಗಳು ಆಗುತ್ತವೆ. ಬೇರೊಬ್ಬರು ಆಯ್ಕೆಯಾಗುವಂಥ ಸಂದರ್ಭಗಳು ಕಡಿಮೆ ಇರುತ್ತವೆ. ಹಾಗಾಗಿ ಸಹಕಾರಿ ಸಂಘದ ಕಾಯಿದೆಗೆ ಕೂಡ ತಿದ್ದುಪಡಿಯಾಗಬೇಕಾಗಿದೆ. ಇಲ್ಲಿ ಒಬ್ಬನಿಗೆ 9 ಜನರನ್ನು ಆಯ್ಕೆ ಮಾಡುವಂಥ ಸಂದರ್ಭದಲ್ಲಿ 9 ಜನರಿಗೂ ಕೂಡ ಸೂಚನೆ ಮಾಡುವಂಥ ಅವಕಾಶಗಳಿರಬೇಕು. ಇಲ್ಲದಿದ್ದಾಗ ಒಂದು ಅಥವಾ ಎರಡು ಜನ ಸೂಚನೆ ಮಾಡಿದರೆ ಸಾಕು, ಅದರ ಬಗ್ಗೆಯೂ ಕೂಡ ನಾವು ಯೋಚನೆಗಳನ್ನು ಮಾಡ ಬೇಕಾದಂಥ ಅವಶ್ಯಕತೆಗಳು ಇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದರ ಜೊತೆಯಲ್ಲಿ ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳ ವ್ಯವಸ್ಥೆಗಳು ಇದ್ದ ಹಾಗೇನೇ ಕೂಡ ಜಿಲ್ಲಾ ಮಟ್ಟದಲ್ಲಿ ಡಿ.ಆರ್.ಆಫೀಸ್ ಕೂಡ ಕಂಪ್ಯೂಟರ್‌ಗಳನ್ನು ಇಟ್ಟುಕೊಂಡು, ಎ.ಆರ್.ಆಫೀಸ್‌ನಲ್ಲಿ ಕೂಡ ಕಂಪ್ಯೂಟರ್‌ಗಳನ್ನು ಇಟ್ಟುಕೊಂಡು ಎಲ್ಲಾ ದಿನನಿತ್ಯ ವ್ಯವಹಾರಗಳು ಅವರಿಗೆ ತಿಳಿಯುವಂತೆ ಆಗುವಂಥದ್ದು ಅವಶ್ಯಕತೆ ಇದೆ. ಆ ದೃಷ್ಟಿಯಲ್ಲಿ ಅಧಿಕಾರಿಗಳನ್ನೇ ಧೂಷಣೆ ಮಾಡುವ ಬದಲು ಅಧಿಕಾರಿಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುವಂಥದ್ದು ಸರ್ಕಾರದ ಕರ್ತವ್ಯವಾಗಿದೆ. ಆ ದೃಷ್ಟಿಯಲ್ಲಿ ಅವರಿಗೆ ಬೇಕಾದಂಥ ಸವಲತ್ತುಗಳನ್ನು ನಾವು ಕೊಡದಿದ್ದಾಗ ಒಬ್ಬ ಅಧಿಕಾರಿ ಒಂದು ಊರಿಗೆ ಹೋಗಬೇಕಾಗಿದ್ದಾಗ, ಅವನಿಗೆ ವಾಹನ ಕೊಡುತ್ತೇವೆ, ಡ್ರೈವರ್ ಅನ್ನು ಕೊಡುತ್ತೇವೆ, ಆದರೆ ಡೀಸೆಲ್ ಇಲ್ಲ ಎಂದು ಹೇಳುವುದರಿಂದ, ಆ ಅಧಿಕಾರಿ ಏನು ಮಾಡುತ್ತಾನೆ? ಒಂದು ದಿನ 10 ಸಹಕಾರಿ ಸಂಘಗಳಿಗೆ ಹೋದರೆ ಪ್ರತಿಯೊಂದು ಸಹಕಾರಿ ಸಂಘದಿಂದಲೂ ಕೂಡ ಐದು ನೂರು ಅಥವಾ ಒಂದು ಸಾವಿರ ರೂಪಾಯಿಗಳನ್ನು ಕೇಳುತ್ತಾನೆ. ನಾನು ನಿಮ್ಮಲ್ಲಿಗೆ ಬರಬೇಕಾಗಿದ್ದರೆ ಐದು ನೂರು ರೂಪಾಯಿಗಳ ಡಿಸೇಲ್ ಹಾಕಬೇಕಾಗಿದೆ. ಹಾಗಾಗಿ ಅದನ್ನು ಕೊಡಿ ಎಂಬ ವಿಚಾರವನ್ನು

ಹೇಳುತ್ತಾನೆ. ಆ ರೀತಿಯಲ್ಲಿ ಆಗಿರುವಂಥದ್ದು ನನ್ನ ಗಮನಕ್ಕೂ ಬಂದಿರುವುದರಿಂದ ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗಿದೆ. ಅವನಿಗೆ ಬೇಕಾದಂಥ ವ್ಯವಸ್ಥೆಗಳನ್ನು ಡಿಸೇಲ್ ವ್ಯವಸ್ಥೆಗಳನ್ನು ಮಾಡುವಂಥದ್ದು ಸರ್ಕಾರದ ಕರ್ತವ್ಯವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿ ಇಲಾಖೆಗಳಲ್ಲಿ ಮಂಜೂರಾಗಿರುವ ಹುದ್ದೆಗಳಲ್ಲಿಯೂ ಕೂಡ ಕ್ಷೇತ್ರ ಮಟ್ಟದಲ್ಲಿಯೂ ಕೂಡ ಅಥವಾ ತಾಲೂಕು ಮಟ್ಟದಲ್ಲಿಯೂ ಕೂಡ ನಾವು ಯಾರನ್ನೂ ನೇಮಕ ಮಾಡಿಲ್ಲ, ತಾಲೂಕು ಮಟ್ಟದಲ್ಲಿ ಮೊದಲೆಲ್ಲ ಕೂಡ ಕ್ಷೇತ್ರ ಮಟ್ಟದಲ್ಲಿ ಹುದ್ದೆಗಳು ಇದ್ದವು. ಅವೆಲ್ಲವೂ ಕೂಡ ಖಾಲಿಯಾಗಿದೆ. ಅದನ್ನು ನೇಮಕಾತಿ ಮಾಡುವಂಥ ವಿಚಾರದಲ್ಲಿ ಸರ್ಕಾರ ಕ್ರಮಕೈಗೊಳ್ಳಬೇಕಾಗಿದೆ. ಅದೇ ರೀತಿ ರೈತರಿಗೆ ಯಶಸ್ವಿನಿ ಯೋಜನೆಯನ್ನು ಜಾರಿ ಮಾಡಿರುವುದು ಬಹಳ ಸಂತೋಷದ ವಿಚಾರವಾಗಿದೆ. ಆದರೆ ಕೆಲವೊಂದು ಸಂದರ್ಭದಲ್ಲಿ ಅವರುಗಳು ಆಸ್ಪತ್ರೆಗೆ ಹೋದಾಗ ಕೆಲವೊಂದು ತೊಡಕುಗಳು ಕಾಡುತ್ತವೆ. ಹಾಗಾಗಿ ಆ ತೊಡಕುಗಳನ್ನು ನಿವಾರಣೆ ಮಾಡಲಿಕ್ಕೆ ಬೇರೆ ಬೇರೆ ಎಲ್ಲಾ ರೋಗಗಳಿಗೂ ಕೂಡ ಚೆಕ್ ಮಾಡಿಸುವುದಕ್ಕೆ ಅವರಿಗೆ ಅವಕಾಶವಾಗುವ ನಿಟ್ಟಿನಲ್ಲಿ ಸರ್ಕಾರ ಯೋಜನೆಗಳನ್ನು ಮಾಡಬೇಕಾಗಿದೆ. ಜೊತೆಗೆ ಅದರ ಆಫೀಸ್ ಬೆಂಗಳೂರಿನಲ್ಲಿ ಮಾತ್ರ ಇರುವುದಲ್ಲ. ಅದರ ಬದಲಾಗಿ ಅದಕ್ಕೆ ಸಂಬಂಧಪಟ್ಟಂಥ ಕಚೇರಿಗಳು ಜಿಲ್ಲಾ ಮಟ್ಟದಲ್ಲಿ ಇದ್ದು ಅದು ಅವರಿಗೆ ಉಪಯೋಗವಾಗುವಂಥ ದೃಷ್ಟಿಯಲ್ಲಿ ಇರಬೇಕಾದಂಥ ಅವಶ್ಯಕತೆ ಇದೆ. ಸಹಕಾರಿ ಸಂಸ್ಥೆಗಳಲ್ಲಿ ನಗದು ದಾಸ್ತಾನು ದುರುಪಯೋಗ ಪ್ರಕರಣಗಳು ಲೆಕ್ಕಪರಿಶೋಧನೆ ಆದಾಗ ಅದನ್ನು ಆಡಿಟ್ ಆದ ನಂತರ ಈಗಾಗಲೇ ಶ್ರೀ ರಾಮಸ್ವಾಮಿಯವರು ಹೇಳಿದ ಹಾಗೆ ಅದನ್ನು ನೋಡುವಂಥ ವ್ಯವಸ್ಥೇ ಇಲಾಖೆಯಲ್ಲಿ ಇಲ್ಲ. ನೋಡಿಕೊಂಡು ಆಡಿಟ್‌ನಲ್ಲಿ ಏನು ಆಕ್ಷೇಪಣೆಗಳಿವೆ, ಏನು ದುರುಪಯೋಗವಾಗಿದೆ, ಅದನ್ನು ಸರಿಯಾಗಿ ನೋಡಿಕೊಂಡು ಅದನ್ನು ವ್ಯವಸ್ಥೆ ಮಾಡುವಂಥ ಜವಾಬ್ದಾರಿ ಇಲಾಖೆಯ ಮೇಲೆ ಇದೆ. ಅವರ ಮೇಲೆ ಸರಿಯಾದ ಕಾನೂನು ಕ್ರಮವನ್ನು ತೆಗೆದುಕೊಂಡಾಗ ಅವನಿಗೆ, ಸಹಕಾರಿ ಸಂಘಕ್ಕೆ ಖಂಡಿತವಾಗಿ ಹೆದರಿಕೆಯಾಗುತ್ತದೆ. ಇದರಿಂದ ಸರಿಯಾದ ನಿಟ್ಟಿನಲ್ಲಿ ಅವರು ಕರ್ತವ್ಯ ನಿರ್ವಹಿಸಿಕೊಂಡು ಹೋಗುತ್ತಾರೆ. ಇನ್ನು ನಮಗೆ ಗೊತ್ತಿದ್ದ ಹಾಗೆ Taluk Marketing Society ಗಳ ಸ್ಥಿತಿಗತಿಗಳನ್ನು ನೋಡಿದಾಗ Taluk Marketing Society ಅದು ಏತಕ್ಕೆ ಇದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಅಲ್ಲಿ ಈಗ ಅವರು ಮಾಡುವಂಥ ವ್ಯವಹಾರಗಳು ಏನೆಂದರೆ, ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವಂಥ ವ್ಯವಸ್ಥೆಗಳಿಲ್ಲ. ಕೆಲವೊಂದು ಕಡೆ ಅಕ್ಕಿ ಗಿರಣಿಗಳಿವೆ. ಬೇರೆ ಕಡೆಯಿಂದ ಭತ್ತವನ್ನು ತರಿಸಿ ಅದರಲ್ಲಿ ಅಕ್ಕಿ ಮಾಡಿ ಮಾರಾಟ ಮಾಡುತ್ತಾರೆ. ಅದರ ಜೊತೆಗೆ ಪಡಿತರ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಅವರ ದಾಸ್ತಾನನ್ನು

ಇಡುವಂಥ ಕೆಲಸ ಕಾರ್ಯಗಳನ್ನು ಮಾತ್ರ ಮಾಡುತ್ತಿದ್ದಾರೆ. ಇದರ ಕಡೆಗೆ ಹೆಚ್ಚು ಗಮನವನ್ನು ಸರ್ಕಾರ ಕೊಡುತ್ತಿಲ್ಲ. ಹಾಗಾಗಿ ಮಾರಾಟ ಸಹಕಾರಿ ಸಂಘಗಳನ್ನು ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಮಾರಾಟ ಮತ್ತು ಮಾರಾಟ ಮಾಡುವಂಥ ಸಹಕಾರಿ ಸಂಘಗಳಿಗೆ ಉತ್ತೇಜನ ಕೊಡುವಂಥದ್ದು, ಗೋಡೌನ್ ಅನ್ನು ನಿರ್ಮಾಣ ಮಾಡುವಂಥದ್ದು, ಅದರ ಜೊತೆಯಲ್ಲಿ ರೈತರಿಗೂ ಕೂಡ ಉತ್ತಮ ಬೆಲೆ ಬರಬೇಕೆಂಬ ದೃಷ್ಟಿಯಿಂದಲೂ ಕೂಡ ಯೋಜನೆ ಮಾಡುವಂಥದ್ದು ಅಗತ್ಯತೆ ಇದೆ. ಹಾಗೇ, ಗಿರಿ ಜನರ ಆರ್ಥಿಕಾಭಿವೃದ್ಧಿಗೆ ಸ್ಥಾಪಿತವಾಗಿರುವಂಥ ಲ್ಯಾಂಪ್ ಸೊಸೈಟಿಗಳು. ಅದನ್ನು ನೋಡಿದಾಗ, ಅವರಿಗೆ ಮುಖ್ಯವಾಗಿ ಅರಣ್ಯ ಉತ್ಪಾದನೆಯನ್ನು ಮಾರಾಟ ಮಾಡುವಂಥ ಹಕ್ಕನ್ನು ಮೊದಲು ಸರ್ಕಾರ ಕೊಟ್ಟಿದ್ದರೂ ಕೂಡ ಈಗ ಹಾಗೆ ಕೊಡುತ್ತಿಲ್ಲ. ಅದನ್ನು ಕೂಡ ಏಲಂ ಮೂಲಕವಾಗಿ, ಗಿರಿಜನ ಸೊಸೈಟಿಗಳು ಲ್ಯಾಂಪ್ ಸೊಸೈಟಿಗಳು ಪಡೆದುಕೊಳ್ಳಬೇಕಾದಂಥ ಪ್ರಮೇಯ ಬಂದಿದೆ. ಇದು ಖಂಡಿತವಾಗಿಯೂ ಕೂಡ ತಪ್ಪು. ಗಿರಿ ಜನರು ಈ ಹಿಂದೆ ಅವರಿಗೆ ಯಾವ ರೀತಿಯ ಅವರಿಗೆ ಕೊಡುತ್ತಿತ್ತೋ ಅದೇ ರೀತಿಯಾಗಿ ಅವರಿಗೆ ಆ ಉತ್ಪನ್ನಗಳನ್ನು, ಕಾಡು ಉತ್ಪತ್ತಿಗಳನ್ನು ಸಂಗ್ರಹಿಸಿ ಮಾರಾಟ ಮಾಡುವಂಥ ವ್ಯವಸ್ಥೆಗಳಾಬೇಕು. ಅದರ ಚಟುವಟಿಕೆಗಳಿಗೆ ಹೆಚ್ಚು ಸರ್ಕಾರ ಉತ್ತೇಜನ ಕೊಡಬೇಕು. ಈಗಾಗಲೇ ಹೇಳಿದ ಹಾಗೆ, ಅವರು ಗಿರಿಜನರಿರಬಹುದು, ದಲಿತರಿರಬಹುದು, ಅವರ ಯಾವುದೇ ಒಂದು ಕಾರ್ಯಕ್ರಮಗಳಿಗೆ ಸರ್ಕಾರ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತಿಲ್ಲ. ಅವರನ್ನು ಕೂಡ ಸಹಕಾರ ಸಂಘದ ಸದಸ್ಯರನ್ನಾಗಿ ಸೇರಿಸಿಕೊಳ್ಳಲಿಕ್ಕೆ ಸರ್ಕಾರವೇ ಷೇರು ಬಂಡವಾಳ ಕೊಟ್ಟು, ಅವರನ್ನು ಸೇರಿಸಿಕೊಳ್ಳುವಂಥ ಪ್ರಯತ್ನಗಳನ್ನು ಮಾಡಬೇಕಾಗಿದೆ. ಡಿಸಿಸಿ ಬ್ಯಾಂಕ್‌ಗಳ ಬಗ್ಗೆ ಕೂಡ ನಾವು ಈ ಯೋಚನೆಗಳನ್ನು ಮಾಡಿದಾಗ, ಅಲ್ಲೂ ಕೂಡ ತುಂಬಾ ಡಿಸಿಸಿ ಬ್ಯಾಂಕ್‌ಗಳು ನಷ್ಟದಲ್ಲಿರುವುದನ್ನು ನಾವು ಕಾಣುತ್ತಿರುತ್ತೇವೆ. ಅದರಿಂದಾಗಿ, ರೈತರ ಸದಸ್ಯರಿಗೆ ತುಂಬಾ ತೊಂದರೆಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಸಕಾಲದಲ್ಲಿ ಅವರಿಗೆ ಸರಿಯಾದಂಥ ಸಾಲವನ್ನು ವ್ಯವಸ್ಥೆ ಮಾಡುವಂಥದ್ದನ್ನು ಮಾಡಬೇಕಾಗಿದೆ. ಈಗಾಗಲೇ ಮೊನ್ನೆ ಕೂಡ ಸಹಕಾರಿ ಇಲಾಖೆ ಮೇಲೆ ಮಾತನಾಡುವಾಗ ಥ್ರೀಟಯರ್‌ನ ಬದಲು ಟುಟಯರ್ ಸಿಸ್ಟಂ ಅನ್ನು ತರಬೇಕಾಗಿದೆ ಎಂಬ ವಿಚಾರ ಕೂಡ ಬಂದಿದೆ. ಅಪೆಕ್ಸ್ ಬ್ಯಾಂಕ್ ಮತ್ತು ನಬಾರ್ಡ್ ಒಟ್ಟಿಗೆ ಸೇರಿಕೊಂಡು ಡಿಸಿಸಿ ಬ್ಯಾಂಕ್‌ಗಳು ಬೇಡ, ನೇರವಾಗಿ ಪ್ರಾಥಮಿಕ ಸಹಕಾರಿ ಸಂಘಗಳಿಗೆ ಬಂದಾಗ, ಆವಾಗ ಬಡ್ಡಿಯನ್ನು ಕಡಿಮೆ ಮಾಡಲಿಕ್ಕೆ ಬರುತ್ತದೆ. ಆ ರೀತಿಯಲ್ಲಿ ಮಾಡಿದಾಗ, ನೇರವಾಗಿ ರೈತರಿಗೂ ಕೂಡ ಅದರಿಂದ ಸಹಕಾರ ಆಗುತ್ತದೆ ಎಂಬ ದೃಷ್ಟಿಯಿಂದಲೂ ಕೂಡ ಯೋಚನೆಗಳನ್ನು

ಮಾಡಬೇಕಾಗಿದೆ. ಅದರೊಟ್ಟಿಗೆ, ಸರ್ಕಾರ ಸಹಕಾರಿ ಸಂಘದ ಮೇಲೆ ಹಸ್ತಕ್ಷೇಪವನ್ನು ಮಾಡುತ್ತಾ ಬರುತ್ತಿದೆ. ನಾವು ನೋಡುತ್ತಿದ್ದೇವೆ, ಅದು ಆಡಳಿತ ಮಂಡಲಿ ಚುನಾವಣೆಯಾದ ತಕ್ಷಣ ಮೂರು ಜನರನ್ನು ನಾವು ನಿರ್ದೇಶನ ಮಾಡುವಂಥದ್ದು, ಅಥವಾ 3ನೇ ಒಂದು ಭಾಗ ಜನರನ್ನು ನಾಮ ನಿರ್ದೇಶನ, ರಾಜಕೀಯವಾಗಿ ನಾಮ ನಿರ್ದೇಶನ ಮಾಡಿಕೊಂಡು ಚುನಾಯಿತರಾಗಿ ಯಾರು ಬಂದಿದ್ದಾರೆ, ಬಹುಮತ ಯಾರಿಗೆ ಬಂದಿದೆ, ಆಡಳಿತ ಮಾಡುವ ರೀತಿಯಲ್ಲಿ ಈ ಒಂದು ಸಹಕಾರಿ ಸಂಘಗಳು ಮಾಡುವಂಥದ್ದನ್ನು ನಾವು ಕಾಣುತ್ತಿದ್ದೇವೆ. ಅದಕ್ಕೆ ಬದಲಾಗಿ, ತಾವು ನಾಮಕರಣವನ್ನು ಮಾಡಿ. ನಾಮಕರಣ ಮಾಡುವಂಥ ಸದಸ್ಯರಿಗೆ ಮತದಾನದ ಹಕ್ಕನ್ನು ಕೊಡಬಾರದು. ಇದಕ್ಕೆ ತಾವೇನಾದರೂ ಯೋಚನೆಯನ್ನು ಮಾಡುತ್ತೀರಾ? ಎಲ್ಲವನ್ನೂ ಕೂಡ ರಾಜಕೀಯ ದೃಷ್ಟಿಕೋನದಿಂದ ನೋಡಿದಾಗ, ಸಹಕಾರಿ ಸಂಘ ಖಂಡಿತವಾಗಿಯೂ ಕೂಡ ಬೆಳೆಯಲಿಕ್ಕೆ ಸಾಧ್ಯವಿಲ್ಲ. ಆ ಒಂದು ದೃಷ್ಟಿಯಲ್ಲಿ ತಾವು ಕೂಡ ಯೋಚನೆಗಳನ್ನು ಮಾಡಬೇಕಾಗಿದೆ. ಯಾರಾದರೂ ಒಬ್ಬರು ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡುವಂಥ ಅಗತ್ಯವಿದೆ. ಹಾಗಾಗಿ, ಸಹಕಾರಿ ಸಚಿವರು ಈ ವಿಚಾರದಲ್ಲಿ ಒಂದು ದಿಟ್ಟವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಹಾಗೇ, ಸಹಕಾರಿ ಸಂಘಗಳು ನೀಡುವಂಥ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ ಹಾಗು ದೀರ್ಘಾವಧಿ ಸಾಲಗಳು ಸರಳವಾಗಿರಬೇಕು ಮತ್ತು ಸಮಯಕ್ಕೆ ಸರಿಯಾಗಿ ಅವರಿಗೆ ಸಿಗುವಂಥ ವ್ಯವಸ್ಥೆಗಳು ಆಗಬೇಕಾಗಿದೆ. ಇದರ ಬಗ್ಗೆ ಕೂಡ ಚಿಂತನೆಗಳು ಆಗಬೇಕಾಗಿದೆ. ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಎಲ್ಲಾ ರೈತರಿಗೂ ವಿತರಣೆ ಮಾಡಬೇಕು ಎಂಬ ದೃಷ್ಟಿಯಿಂದ ಅಟಲ್‌ಬಿಹಾರಿ ವಾಜಪೇಯಿಯವರು ಕೇಂದ್ರದಲ್ಲಿದಂಥ ಸಂದರ್ಭದಲ್ಲಿ ಜಾರಿ ಮಾಡಿರುವುದನ್ನು ನಾವೆಲ್ಲರೂ ಕಂಡಿದ್ದೇನೆ. ಅದು ಎಲ್ಲರಿಗೂ ಕೂಡ ಅದರ ಪ್ರಯೋಜನ ಆಗಬೇಕು. ಕ್ರೆಡಿಟ್ ಕಾರ್ಡ್ ಸಿಸ್ಟಂನಲ್ಲಿ ನಾವು ತೆಗೆದುಕೊಂಡಂಥ ಸಾಲಕ್ಕೆ ಮಾತ್ರ ನಾವು ಬಡ್ಡಿ ಕೊಟ್ಟರಾಯ್ತು. ಉಳಿದಂತೆ, ಯಾವುದಕ್ಕೂ ಕೊಡುವಂಥ ಅವಶ್ಯಕತೆ ಇಲ್ಲ. ಆ ಒಂದು ದೃಷ್ಟಿಯಲ್ಲಿ ಆ ಕ್ರೆಡಿಟ್ ಕಾರ್ಡ್ ವ್ಯವಸ್ಥೆಯನ್ನು ಒಮ್ಮೆ ಕೊಟ್ಟಾದ ನಂತರ, ಪ್ರತಿ ವರ್ಷ ರಿನ್ಯೂವಲ್ ಮಾಡುವ ಬದಲು 3 ವರ್ಷಕ್ಕೊಮ್ಮೆ ಅದು ರಿನ್ಯೂವಲ್ ಮಾಡುವಂಥ ವ್ಯವಸ್ಥೆಗಳಾದಾಗ ಅವನಿಗೆ ರೈತನಿಗೆ ತುಂಬಾ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದಲೂ ಕೂಡ ಸಹಕಾರಿ ಇಲಾಖೆ ಇದರ ಬಗ್ಗೆ ಯೋಚನೆಯನ್ನು ಮಾಡಬೇಕು. ಸನ್ಮಾನ್ಯ ಸಚಿವರು ಇದರ ಬಗ್ಗೆ ತುಂಬಾ ಪ್ರಯತ್ನಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾ, ಮುಖ್ಯವಾಗಿ ಸಮಾಜ ಕಲ್ಯಾಣದ ಬಗ್ಗೆ ನಾವು ಹೇಳುವುದಿದ್ದರೆ, ಸಮಾಜ ಕಲ್ಯಾಣದಲ್ಲಿ ಆ ಇಲಾಖೆಯಲ್ಲಿ ಗಿರಿ

ಜನರಿಗಾಗಿ ಅಥವಾ ದಲಿತರಿಗಾಗಿ ವಸತಿ ಶಾಲೆಗಳನ್ನು ಮಾಡುತ್ತೇವೆಂಬ ವಿಚಾರವನ್ನು ಕೂಡ ಸಮಾಜ ಕಲ್ಯಾಣ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿಯೂ ಕೂಡ ಪರಿಶಿಷ್ಟ ಪಂಗಡದವರಿಗೊಂದು ವಸತಿ ಶಾಲೆಯನ್ನು ಕೊಡುತ್ತೇವೆಂಬ ಮಾತನ್ನು ಕೂಡ ಹೇಳಿದ್ದಾರೆ. ಹಾಗಾಗಿ, ಮುಂದಿನ ದಿನಗಳಲ್ಲಿ ಅದರ ಬಗ್ಗೆ ಖಂಡಿತವಾಗಿ ಕೂಡ ಚಿಂತನೆಗಳನ್ನು ಮಾಡಬೇಕಾದಂಥ ಅವಶ್ಯಕತೆ ಇದೆ. ಈಗಾಗಲೇ ಎಲ್ಲಾ ನಮ್ಮ ಶಾಸಕ ಮಿತ್ರರು ಹೇಳಿದ್ದಾರೆ. ಇದ್ದಂಥ ಹಾಸ್ಟೆಲ್‌ಗಳಲ್ಲಿ ಅದು ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುವಂಥ ಮೆಟ್ರಿಕ್ ಪೂರ್ವದ ಹಾಸ್ಟೆಲ್ ಇರಬಹುದು, ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿರಬಹುದು, ಈಗಿರುವಂಥ ವ್ಯವಸ್ಥೆಯಲ್ಲಿ 10, 15 ಸೀಟ್‌ಗಳನ್ನು ಜಾಸ್ತಿ ಮಾಡಬೇಕಾಗಿದೆ. ಅದರ ಜೊತೆಯಲ್ಲಿ ನನ್ನ ಕ್ಷೇತ್ರದಲ್ಲಿಯೂ ಕೂಡ ಸಚಿವರ ಗಮನಕ್ಕೆ ನಾನು ತಂದಿದ್ದೇನೆ. ಎರಡು ಆದರೂ ಕೂಡ ಹೆಣ್ಣು ಮಕ್ಕಳ ಪದವಿಯ ಕಾಲೇಜ್, ಹಾಸ್ಟೆಲ್‌ಗಳನ್ನು ಕೊಡುವುದನ್ನು ಮಾಡಬೇಕಾಗಿದೆ. ಅದಕ್ಕೆ ಅವರು ಕೊಡುತ್ತಾರೆಂಬ ಇಚ್ಛೆಯನ್ನು ವ್ಯಕ್ತಪಡಿಸುತ್ತಾ, ಈಗಿರುವಂಥ ವ್ಯವಸ್ಥೆಯಲ್ಲಿ 450 ರೂಪಾಯಿಯಲ್ಲಿ ಒಂದು ವಿದ್ಯಾರ್ಥಿಗೆ ಒಂದು ತಿಂಗಳಿಗೆ ಅವನಿಗೆ ಆಹಾರವನ್ನು ಒದಗಿಸಲಿಕ್ಕೆ ಕಷ್ಟ ಸಾಧ್ಯವಿದೆ. ಆ ಒಂದು ದೃಷ್ಟಿಯಲ್ಲಿಯೂ ಕೂಡ, ಆ ಒಂದು ಹಣವನ್ನು ತಿಂಗಳಿಗೆ ಕೊಡುವಂಥ ಹಣವನ್ನು ಕೂಡ ಹೆಚ್ಚು ಮಾಡುವಂಥ ಅಗತ್ಯವಿದೆ ಎಂದು ಹೇಳಿಕೊಳ್ಳುತ್ತಾ ಮುಖ್ಯವಾಗಿ ನಮ್ಮ...

ಶ್ರೀ ಎನ್.ಯೋಗೀಶ್ ಭಟ್:- ಈ ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳಿಗೆ ಆಹಾರಕ್ಕೋಸ್ಕರ, ಆಹಾರ ಧಾನ್ಯಗಳನ್ನು ಖರೀದಿ ಮಾಡುವುಕ್ಕೋಸ್ಕರ ತಾವು ಬಿಡುಗಡೆ ಮಾಡುವಂಥ ಹಣವನ್ನು ಕ್ಲುಪ್ತ ಸಮಯಕ್ಕೆ ಅದನ್ನು ಬಿಡುಗಡೆ ಮಾಡಿದ್ದರೆ ಈ ಮಕ್ಕಳಿಗೆ ಕೊಡುವಂಥ ಯಾವ ಒಂದು ಗೌರವ ಧನ ಇದೆಯಲ್ಲ, ಪ್ರೋತ್ಸಾಹ ಧನವೆಂದು ಇದೆಯಲ್ಲ, ಅದರಲ್ಲಿ 450 ರೂಪಾಯಿ ಏನು ಕೊಡುತ್ತೀದ್ದೀರ, ಅದರಲ್ಲಿ ಡಿಡೆಕ್ಟ್ ಮಾಡಿ, ಅದನ್ನು ಉಪಯೋಗ ಮಾಡುವಂಥದ್ದೆಲ್ಲ ನಡೆಯುತ್ತಿದೆ. ಅದಕ್ಕೆ ಅವಕಾಶ ಕೊಡುವ ರೀತಿಯಲ್ಲಿ ಅದನ್ನು ತಾವು ಮಾಡಿಕೊಡಬೇಕೆಂದು ಒಂದು ವಿನಂತಿ. ನಮ್ಮ ಮಂಗಳೂರಿನ ಇದರಲ್ಲಿ ಸುಮಾರು 4ಲಕ್ಷದ 2 ಸಾವಿರದ 6 ರೂಪಾಯಿಯಷ್ಟು ರಿಲೀಜ್ ಆಗದೆ ಅಲ್ಲಿ ಬವಣೆಗಳು, ತುಂಬಾ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಕೇವಲ ಒಂದು ಮಂಗಳೂರು ತಾಲೂಕಿಗೆ ಸಂಬಂಧಪಟ್ಟಂತೆ ನಾನು ಇದನ್ನು ಲೆಕ್ಕಾಚಾರ ಕೊಡುತ್ತಿದ್ದೇನೆ. ಜಿಲ್ಲೆಗೆ ಸಂಬಂಧಪಟ್ಟ ಹಾಗೆ, ಇನ್ನು ಬಿಡುಗಡೆಯಾಗಿಲ್ಲ. ಇಂಥ ಒಂದು ದುಃಸ್ಥಿತಿಯಲ್ಲಿ ತನ್ನ ಎಸ್‌ಸಿ/ಎಸ್‌ಟಿ ಹಾಸ್ಟೆಲ್ ಬಹಳ ದುಃಸ್ಥಿತಿಯಲ್ಲಿರುವಂಥದ್ದನ್ನು ಕೂಡ ನಾನು ಈ ಸಂದರ್ಭದಲ್ಲಿ ದಾಖಲು ಮಾಡುತ್ತಿದ್ದೇನೆ. ತಕ್ಷಣ ಕ್ರಮಕೈಗೊಳ್ಳುವಂತೆ ವಿನಂತಿ ಮಾಡುತ್ತಿದ್ದೇನೆ. ಮತ್ತೆ ಮಾನ್ಯ

ಸದಸ್ಯರು ಹಾಸ್ಟೆಲ್ ಬಗ್ಗೆ ಹೇಳಿದರು. ಜಿಲ್ಲಾ ಕೇಂದ್ರಗಳಲ್ಲಿ ಹಾಸ್ಟೆಲ್ ಕೊಡುವಂಥದ್ದು ಮಾಡಬೇಕು. ಮಂಗಳೂರು ವಿಧಾನಸಭಾ ಕ್ಷೇತ್ರದಂಥದ್ದರಲ್ಲಿ 12 ವರ್ಷಗಳ ಹಿಂದೆ ಒಂದು ಹಾಸ್ಟೆಲ್ ಕಟ್ಟಿದ್ದಾರೆ. 12 ವರ್ಷಗಳಲ್ಲಿ ಇಷ್ಟರತನಕ ಅಲ್ಲಿ ಒಂದೇ ಒಂದು ಮಗು ಉಪಯೋಗ ಮಾಡಿಕೊಳ್ಳಲಿಕ್ಕಾಗಲಿಲ್ಲ. ಜಿಲ್ಲಾ ಕೇಂದ್ರಗಳಲ್ಲಿ ಗ್ರಾಮೀಣ ಪ್ರದೇಶದ ನಮ್ಮ ಪರಿಶಿಷ್ಟ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬರುತ್ತಿದ್ದಾರೆ. ಅವರಿಗೆ ಅವಕಾಶ ಕೊಡಲಿಕ್ಕಾಗುತ್ತಿಲ್ಲ. ತಮ್ಮ ಗಮನವನ್ನು ಪದೇ ಪದೇ ಸೆಳೆಯುತ್ತಿದ್ದೇನೆ. ಯಾವುದೇ ಒಂದು ಫಲಕಾರಿಯಾಗಿಲ್ಲ. ಇಂಥ ಕನಿಷ್ಟ ಹಾಸ್ಟೆಲ್‌ಗಳ ಬಗ್ಗೆಯಾದರೂ ತಾವು ವಿಶೇಷ ಕಾಳಜಿ ವಹಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಕೆ.ಪ್ರಭಾಕರ ಬಂಗೇರ:– ಈಗ ಸರ್ಕಾರಿ ಸಂಘಗಳಿಗೆ, ಪ್ರಾಥಮಿಕ ಸಹಕಾರಿ ಸಂಘಗಳು ತುಂಬಾ ಇವೆ. ಹಾಲು ಉತ್ಪಾದಕರ ಸಹಕಾರಿ ಸಂಘ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಖ್ಯವಾಗಿ ಎಲ್ಲಾ ಕಡೆಗಳಲ್ಲಿ ಇರುವುದನ್ನು ನಾವು ಗಮನಿಸಿದ್ದೇವೆ. ಅಲ್ಲಿ ಅವರಿಗೆ ಬೇಕಾದಂಥ 5 ಸೆಂಟ್ಸ್, 10 ಸೆಂಟ್ಸ್ ಜಾಗವನ್ನು ಕೊಡುವಂಥ ವ್ಯವಸ್ಥೆ ಆಗುತ್ತಾ ಇಲ್ಲ. ಕಂದಾಯ ಇಲಾಖೆಯಿಂದ ನಾನು ಈ ಸದನದ ಮೂಲಕ ತಮ್ಮ ಮೂಲಕ ಒತ್ತಾಯ ಮಾಡುವುದಿಷ್ಟೆ ಸಹಕಾರಿ ಸಂಘಗಳು ಇರುವುದು, ಅಂಥವರಿಗೆ ನಿವೇಶನವನ್ನು ಕೂಡ ಒದಗಿಸುವಂತೆ ಸಹಕಾರ ಇಲಾಖೆಯಿಂದಲೂ ಕೂಡ ಅಲ್ಲಿ ಒತ್ತಡಗಳು ಬಂದಾಗ ಅವರಿಗೆ 10ರಿಂದ 15 ಸೆಂಟ್ಸ್ ಜಾಗವನ್ನು ಕೊಟ್ಟಾಗ ಅವರು ವ್ಯವಸ್ಥಿತ ರೀತಿಯಲ್ಲಿ ಆ ಒಂದು ಸಹಕಾರಿ ಸಂಘವನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ ಬರುತ್ತದೆ. ಅದು ಮಾತ್ರ ಅಲ್ಲ, ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ...

ಶ್ರೀ ಕೆ.ಪದ್ಮನಾಭ ಕೊಠಾರಿ:– ಸಹಕಾರಿ ಬ್ಯಾಂಕ್‌ಗಳಿಗೆ ಅಥವಾ ಸಹಕಾರಿ ಸಂಘಕ್ಕೆ... ಈಗಾಗಲೇ ಅವರು ಮಾತನಾಡುತ್ತಿದ್ದಾರೆ. ನಾವು ಇವತ್ತೊಂದು ಕಟ್ಟಡ ಕಟ್ಟಬೇಕಿದ್ದರೆ, 15–20 ಸೆಂಟ್ಸ್ ಜಾಗ ಕೇಳಬೇಕೆಂದರೆ, ಆ ಯಾವುದು ಕಮ್ಮಿ ಜಾಗ ಇದೆಯೋ, ಆ ಕಮ್ಮಿ ರೈಟ್ ವಿಥ್‌ಡ್ರಾ ಮಾಡಿ ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳುವಂಥಾದ್ದು, ಸಂಬಂಧಪಟ್ಟಂಥ ಕಂದಾಯ ಇಲಾಖೆಯಿಂದ ಕೇಳಿ ಬರುತ್ತಿದೆ. ದಯಮಾಡಿ, ಕುಮ್ಕಿ ಹಕ್ಕು ವಿಥ್‌ಡ್ರಾ ಮಾಡಿ ಸಹಕಾರಿ ಸಂಘಗಳಿಗೆ, ಸಹಕಾರಿ ಬ್ಯಾಂಕ್‌ಗಳಿಗೆ ಆ ಕಟ್ಟಡ ಕಟ್ಟಬೇಕಾಗಿದ್ದರೆ, ಜಾಗ ಕೊಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಹೇಳಿ ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ.ಪ್ರಭಾಕರ ಬಂಗೇರ:– ಅದರ ಜೊತೆಗೆ, ಹಾಲು ಉತ್ಪಾದಕರ ಸಹಕಾರಿ ಸಂಘ ಅಂಥ ಆದಾಗ, ಅವರಿಗೆ ಮೇವನ್ನು ಮಾಡಲಿಕ್ಕೆ ಬೇಕಾಗಿ ಕೆಲವೊಂದು ಸರ್ಕಾರಿ ಭೂಮಿಗಳಿದ್ದಾಗ, ಅದು ಕೊಡುವಂಥ ವ್ಯವಸ್ಥೆಗಳಾಬೇಕಾಗಿದೆ. ಒಂದು 2ರಿಂದ 4 ಎಕರೆ ಜಾಗ ಅವರಿಗೆ ಕೊಟ್ಟಾಗ, ಆ ಒಂದು ಸಹಕಾರಿ ಸಂಘದ ಎಲ್ಲಾ

ಸದಸ್ಯರಿಗೂ ಕೂಡ ಉತ್ತಮವಾದಂಥ ಮೇವನ್ನು ಅವರಿಗೆ ಕೊಡಲಿಕ್ಕೆ ಬರುತ್ತದೆ.

ಹೀಗಾಗಿ ನಾನು ಮೊನ್ನೆ ಅಲ್ಲಿಗೆ ತೋಟಗಾರಿಕೆ ಮಂತ್ರಿಗಳು ಬಂದಾಗ ಅವರನ್ನು ವಿನಂತಿಸಿದ್ದೇನೆ. ನನ್ನ ಕ್ಷೇತ್ರದಲ್ಲಿ 125 ಎಕರೆ ಜಮೀನು ಅವರದು ಇದೆ, ಆ ಜಮೀನಿನಲ್ಲಿ ಒಂದು ಐದು ಎಕರೆ ಸ್ಥಳವನ್ನು ಆದರೂ ಕೂಡ ಈ ಸಹಕಾರಿ ಸಂಘದ ಈ ಮೇವಿಗಾಗಿ ಕೊಡಿ ಎಂದು ಮಾತನಾಡುತ್ತಾ ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ಕೇಳಿದಾಗ ಅವರು ಹೇಳಿದರು. ನಾವು ಎಲ್ಲವನ್ನು ಲೀಸ್‌ನಲ್ಲಿ ಕೊಡುವಂಥ ವ್ಯವಸ್ಥೆ ಮಾಡುತ್ತೇನೆ, ಎಲ್ಲವನ್ನು ಇಲಾಖೆಗಳ ಮೂಲಕ ನೋಡುವುದಕ್ಕೆ ಆಗುವುದಿಲ್ಲವೆನ್ನುವ ವಿಚಾರವನ್ನು ಹೇಳಿದರು. ಸದನದಲ್ಲಿ ಕೂಡ ಮೊನ್ನೆ ಎನ್‌ಜಿಒಗಳು ಯಾರಾದರೂ ಇದ್ದರೆ 125 ಎಕರೆ ಜಾಗವನ್ನು ಅವರಿಗೆ ಲೀಸ್‌ಗೆ ಕೊಡುತ್ತೇವೆನ್ನುವ ವಿಚಾರವನ್ನು ಹೇಳಿದ್ದಾರೆ. ಬೆಳ್ತಂಗಡಿಯಲ್ಲಿ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ ಪೂಜ್ಯ ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ಏನು ನಡೆಯುತ್ತದೆ, ಅವರಿಗೆ ಇದನ್ನು ಹಸ್ತಾಂತರ ಮಾಡಿದರೆ ಖಂಡಿತವಾಗಿ ಅಲ್ಲಿನ ರೈತರಿಗೂ ಅನುಕೂಲವಾಗುತ್ತದೆ. ಅಲ್ಲಿ ಉತ್ತಮ ತೋಟವಾಗಿ ಮಾರ್ಪಾಡು ಆಗುವುದಕ್ಕೆ ಸಾಧ್ಯತೆ ಇದೆ. ಆ ದೃಷ್ಟಿಯಿಂದಲೂ ತೋಟಗಾರಿಕೆ ಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಂಡು ಆ ಒಂದು ಜಾಗವನ್ನು ಧರ್ಮಸ್ಥಳದ ಗ್ರಾಮೀಣಾಭಿವೃದ್ಧಿ ಯೋಜನೆಯವರಿಗೆ ಲೀಸ್‌ನಲ್ಲಿ ಕೊಟ್ಟು ಆ ವ್ಯವಸ್ಥೆ ಸರಿ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರ ಮೊನ್ನೆ ಬಡ್ಡಿಯನ್ನು ಮನ್ನಾ ಮಾಡಿದೆ. ರೈತರಿಗೆ 6 ಪರ್ಸೆಂಟ್ ಬಡ್ಡಿಯ ರೀತಿಯಲ್ಲಿ ಸಾಲ ನೀಡಿದೆ. 1985ನೇ ಇಸ್ವಿಯಲ್ಲೂ ಕೂಡ ಒಂದು ಸಾರಿ ಬಡ್ಡಿ ಮನ್ನಾ ಮಾಡಲಾಗಿತ್ತು. ಆದರೆ ಸರ್ಕಾರ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಹಣವನ್ನು ಬಿಡುಗಡೆ ಮಾಡದೇ ಆ ಸಹಕಾರಿ ಸಂಘಗಳು ನಷ್ಟದಲ್ಲಿರುವುದನ್ನು ನಾವು ಕಾಣುತ್ತಿದ್ದೇವೆ. ಹೀಗಾಗಿ ನಾನು ತಮ್ಮ ಮೂಲಕ ವಿನಂತಿ ಮಾಡುವುದು ಇಷ್ಟೆ, ನಾವು ಇಲ್ಲಿ ಹೇಳುತ್ತೇವೆ ಆದರೆ ಸಹಕಾರಿ ಸಂಘಗಳಿಗೆ ಹಣ ಹೋಗುತ್ತಿಲ್ಲ. ಹೀಗಾಗಿ ತಾವೇನು ಬಡ್ಡಿ ಮನ್ನಾ ಮಾಡಿದ್ದೇವೆಂದು ಹೇಳುತ್ತೀರಿ. ಎಷ್ಟೆಷ್ಟು ಸಹಕಾರಿ ಸಂಘಗಳಿಗೆ ಬಡ್ಡಿಯ ರೂಪದಲ್ಲಿ ಕೊಡಬೇಕಾಗಿದೆ ಅದನ್ನು ಸರ್ಕಾರ ಶೀಘ್ರವಾಗಿ ಬಿಡುಗಡೆ ಮಾಡಿ ಆ ನಷ್ಟದಲ್ಲಿರುವಂಥ ಸಹಕಾರಿ ಸಂಘಗಳಿಗೂ ಕೂಡ ಲಾಭ ಆಗುವುದಕ್ಕೆ ಬರುತ್ತದೆ. ಅದರ ಜೊತೆಯಲ್ಲಿ ನಮ್ಮ ಬೇಡಿಕೆಗಳು ಕೂಡ ಇವೆ. ಬೇಡಿಕೆಗಳನ್ನು 20 ದಿನದೊಳಗೆ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಾನು ಏನು ಹೇಳಿದ್ದೇವೆ ಎಂದರೆ, 1–4–2005ರವರೆಗೆ ಸಾಲ ಯಾರ್‍ಯಾರು ಕಟ್ಟಿದ್ದಾರೆ ಅವರಿಗೆ ಖಂಡಿತವಾಗಿ ಬಡ್ಡಿ ಮನ್ನಾ ಆಗಬೇಕಾಗಿದೆ. ಯಾರೂ ಪ್ರಾಮಾಣಿಕವಾಗಿ ಸಾಲ ಕಟ್ಟುತ್ತಾನೆ, ಯಾರು ಬಡ್ಡಿಯನ್ನು ಕಟ್ಟುತ್ತಾನೆ, ಅವನಿಗೆ ಸರ್ಕಾರ ಏನೂ ಸಹಾಯವನ್ನು ಮಾಡುತ್ತಿಲ್ಲ. ಯಾರು ಸಾಲವನ್ನು

ತೆಗೆದು ಆ ಬ್ಯಾಂಕಿನ ಕಡೆಗೆ ಅಥವಾ ಸಹಕಾರಿ ಸಂಘಗಳಿಗೆ ಮುಖವನ್ನು ತೋರಿಸದೇ ಇರುವಂಥ ಜನರಿಗೆ ಮಾತ್ರ ಇದರಿಂದ ಲಾಭವಾಗಿದೆಯೇ ಹೊರತು ಸಾಮಾನ್ಯವಾಗಿ ಪ್ರಾಮಾಣಿಕವಾಗಿ ಯಾರು ಕೆಲಸ ಮಾಡಿ ಬಡ್ಡಿಯನ್ನು ಕಟ್ಟಿದ್ದಾನೋ ಅವನಿಗೆ ಯಾವುದೇ ರೀತಿಯ ಸಹಕಾರ ಆಗಿಲ್ಲ. ಈ ಒಂದು ದೃಷ್ಟಿಯಲ್ಲಿ ನಾವು ನೋಡಿದಾಗ ಯಾರು ಪ್ರಾಮಾಣಿಕವಾಗಿ ಸಾಲವನ್ನು ಕಟ್ಟಿದ್ದಾನೆ ಅವನಿಗೆ ಕೂಡ ಬಡ್ಡಿ ಮನ್ನಾ ಆಗುವಂಥ ವ್ಯವಸ್ಥೆ ಸರ್ಕಾರ ಮಾಡಿದಾಗ ಸರ್ಕಾರದ ಮೇಲೆ ಅವನಿಗೆ ಅನುಕಂಪ ಬರುತ್ತದೆ. ನನ್ನ ಬಗ್ಗೆ ರೈತರ ಬಗ್ಗೆ ಸರ್ಕಾರ ಚಿಂತೆ ಮಾಡುತ್ತಿದೆ, ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡಿದವನಿಗೆ ಇದರ ಪ್ರಯೋಜನ ಆಗುತ್ತದೆ ಎನ್ನುವ ವಿಚಾರ ಗೊತ್ತಾಗುತ್ತದೆ. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಅವನೇನು ಯೋಚನೆ ಮಾಡುತ್ತಾನೆ ಎಂದರೆ, ಇನ್ನೊಂದು ಸರ್ಕಾರ ಬರುತ್ತದೆ ನಾನು ಸಾಲವನ್ನು ತೆಗೆದುಕೊಂಡು ಕಟ್ಟದೇ ಇದ್ದಾಗ ಬಂದಂಥ ಸರ್ಕಾರ ಸಾಲ ಕಟ್ಟುವುದು ಬೇಡ, ಸಾಲ ಮತ್ತು ಬಡ್ಡಿಯನ್ನು ಕೂಡ ಮನ್ನಾ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿವೆ ಎನ್ನುವಂಥದ್ದರ ಬಗ್ಗೆ ವಿಚಾರ ಮಾಡುತ್ತಾನೆ. ಹೀಗಾದಾಗ ಎಲ್ಲರೂ ಕೂಡ ಸಾಲವನ್ನು ಕಟ್ಟದೇ ಇರುವಂತೆ ಆಗುತ್ತದೆ. ಇದರಿಂದಾಗಿ ಸಹಕಾರಿ ಸಂಘಗಳಿಗೆ ತುಂಬಾ ತೊಂದರೆಗಳಾಗುತ್ತವೆ. ಆದುದರಿಂದ, ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುವುದು ಏನೆಂದರೆ, ಪ್ರಾಮಾಣಿಕವಾಗಿ ಯಾವ ರೈತರು ಸಾಲವನ್ನು ಕಟ್ಟುತ್ತಾನೆ ಅವನಿಗೆ ಬಡ್ಡಿ ಮನ್ನಾ ಆಗಬೇಕೆನ್ನುವ ವಿಚಾರವನ್ನು ಹೇಳುತ್ತಾ, ಈಗಾಗಲೇ ನಾಗರಾಜು ಶೆಟ್ಟಿರವರು ಕೂಡ ಹೇಳಿದರು, ರೈತ ತುಂಬಾ ಕಂಗಾಲಾಗಿದ್ದಾನೆ, ಅವನು ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಮುಖ್ಯವಾಗಿ ಅಡಿಕೆ ಬೆಳೆಗಾರರಿಗೆ ನಿಯೋಗದವರು ಹೋಗಿ ಕೇಳಿಕೊಂಡಿದ್ದರಿಂದ ನಾಲ್ಕು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ, ಹತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಸರ್ಕಾರ ಹೇಳಿತ್ತು. ಆದರೆ ನಾಲ್ಕು ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟು, ಈಗ ಅಡಕೆಗೆ ಬೆಲೆ ಕುಸಿತ ಬರುವಂಥ ಸಂದರ್ಭದಲ್ಲಿ ರೈತನಿಗೆ ಪ್ರಯೋಜವಾಗಬೇಕಾಗಿದೆ. ಕೃಷಿ ಸಚಿವರು ಕೂಡ ಇಲ್ಲಿ ಇದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಕೂಡ ಇಲ್ಲಿ ಇದ್ದಾರೆ. 10 ಕೋಟಿಯನ್ನು ಕೊಡುತ್ತೇವೆಂದು ಏನು ಹೇಳಿದಿರಿ, ಅದರಲ್ಲಿ ತಕ್ಷಣ ಆರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ರೈತರಿಗೆ ನೆರವು ಆಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಆರು ಕೋಟಿ ರೂಪಾಯಿಗಳನ್ನು ಅಡಿಕೆ ಬೆಂಬಲ ಬೆಲೆಯನ್ನು ಕೊಡುತ್ತೇವೆಂದು ತಾವು ಹೇಳಿದಿರಿ. ಕೊಡಲಿಲ್ಲ, ಅಡಕೆ ಬೆಲೆ ಕುಸಿದಿದೆ, ರೈತರು ಬಹಳವಾಗಿ

ಗೋಳಾಡುತ್ತಿದ್ದಾರೆ, ದಯವಿಟ್ಟು ಮೊನ್ನೆ ಕೂಡ ಪ್ರಸ್ತಾಪ ಆಗಿತ್ತು, ತಾವು ಬಿಡುಗಡೆ ಮಾಡುತ್ತೇವೆಂದು ಹೇಳಿದಿರಿ, ದಯವಿಟ್ಟು ಅಡಕೆ ಬೆಂಬಲ ಬೆಲೆಯನ್ನು ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಆರು ಕೋಟಿ ರೂಪಾಯಿಗಳನ್ನು ಬಿಡುಗಡೆಗೊಳಿಸಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಾದರೆ ಅಲ್ಲಿ ಏನು ನಡೆಯುತ್ತದೆ ಗೊತ್ತಿಲ್ಲ. ನಾನೇ ತಮ್ಮ ಕೊಠಡಿಗೆ ಅಡಿಕೆ ಬೆಳೆಗಾರರನ್ನು ಕರೆದುಕೊಂಡು ಬಂದು ಹೇಳಿದಾಗ ತಾವೇ ಅದರ ಮೇಲೆ ಹತ್ತು ಕೋಟಿ ಎಂದು ಬರೆದಿರಿ, ನಂತರ ನಾಲ್ಕು ಕೋಟಿ ಫಸ್ಟ್ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಬಿಡುಗಡೆ ಮಾಡಿ ನಂತರ ಇದರ ಉಪಯೋಗವಾದ ಮೇಲೆ ಉಳಿದಿರುವುದನ್ನು ಬಿಡುಗಡೆ ಮಾಡೋಣ ಎಂದು ಹೇಳಿದಿರಿ. ಈಗ ಆ ಹಣವನ್ನು ಯೂಟಿಲೈಸ್ ಮಾಡಿಕೊಂಡು ಸುಮಾರು ಒಂದೆರಡು ತಿಂಗಳು ಕಳೆಯಿತು. ಅಡಕೆಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ತಮ್ಮ ಹತ್ತಿರ ಎರಡು ಮೂರು ಸಲ ಬಂದಾಗ ತಾವು ಪ್ರಾಮಿಸ್ ಮಾಡಿದಿರಿ. ಆರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಪ್ರಾಮಿಸ್ ಮಾಡಿದಿರಿ. ಆದರೆ ಇರುವರೆವಿಗೂ ಆರು ಕೋಟಿ ಬಿಡುಗಡೆ ಆಗಿಲ್ಲ. ಅದೇನು ವಾಪಸ್ ಬರುವಂಥ ದುಡ್ಡು. 10 ಕೋಟಿಯಲ್ಲಿ ನಾಲ್ಕು ಕೋಟಿ ಕೊಟ್ಟಿದ್ದೀರಿ, ಇನ್ನುಳಿದ ಆರು ಕೋಟಿಯಲ್ಲಿ ನಿಮಗೆ ವಾಪಸ್ ಬರುತ್ತದೆ. ಅದನ್ನು ಬೇರೆಯದಕ್ಕೆ ಉಪಯೋಗಿಸುವ ಪ್ರಶ್ನೆ ಬರುವುದಿಲ್ಲ. ಅವರು ಅದನ್ನು ಟರ್ನ್‌ಓವರ್ ಮಾಡುತ್ತಾರೆ ನಿಮಗೆ ಟ್ಯಾಕ್ಸ್ ಬರುತ್ತದೆ ಹೀಗಾಗಿ ಹತ್ತು ಕೋಟಿ ನಿಮಗೆ ವಾಪಸ್ ಬರುತ್ತದೆ. ಸಕಾಲಕ್ಕೆ ಅದು ಬರದಿದ್ದರೆ ಅಡಿಕೆ ಬೆಲೆ ಕಡಿಮೆಯಾಗಿರುವ ಸಂದರ್ಭದಲ್ಲಿ ಏಕೆ ಈ ಆರು ಕೋಟಿ ಬಿಡುಗಡೆಗೆ ಮೀನಾಮೇಷ ಮಾಡುತ್ತಿದ್ದೀರಿ. ಇದು ಒಂದು ರೀತಿ ನಿಮಗೆ ಭಿಕ್ಷೆ ಬೇಡುವ ರೀತಿಯಲ್ಲಿ ನಮ್ಮ ಪರಿಸ್ಥಿತಿ ಆಗಿದೆ. ಅಡಿಕೆ ಬೆಳೆಗಾರರ ಬಗ್ಗೆ ಇರಬಹುದು, ಬೇರೆ ವಿಷಯದ ಬಗ್ಗೆ ಇರಬಹುದು, ನೀವು ಹೇಳಿದರೂ ನಿಮ್ಮ ಆದೇಶ ಅವರು ಫಾಲೋ ಮಾಡುವುದಕ್ಕೆ ರೆಡಿ ಇಲ್ಲವೋ ಏಕಾಗಿ ಇದನ್ನು ಅವರು ಮಾಡುತ್ತಾರೋ ನಮಗಂತೂ ಅರ್ಥವಾಗಿಲ್ಲ. ವಿರೋಧ ಪಕ್ಷದಲ್ಲಿದ್ದುಕೊಂಡು ನಾವು ನಿಮಗೆ ನೂರು ಕೋಟಿ ಕೇಳುತ್ತಿಲ್ಲ, ಇನ್ನೂರು ಕೋಟಿ ಕೇಳುತ್ತಿಲ್ಲ. ನೀವೇ ಭರವಸೆ ಕೊಟ್ಟಿದ್ದನ್ನು ತಾವು ಸೂಚನೆ ಕೊಟ್ಟು ಮೇಲೂ ಅವರು ರಿಲೀಸ್ ಮಾಡುವುದಿಲ್ಲವೆಂದರೆ ಇದು ಏನು ಸಾರ್? ಇದು. ರೈತರ ದುಡ್ಡು ಕೊಡಿಸಿ ರೈತರು ಬದುಕಿಕೊಳ್ಳುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ: ಎಪಿಎಂಸಿ ಯಲ್ಲಿ ದುಡ್ಡು ಇದೆ ಸಾರ್ ಆ ದುಡ್ಡನ್ನೇ ಕೊಟ್ಟರೂ ಸಾಕು. ಅದು ರೈತರ ದುಡ್ಡು, ರೈತರ ದುಡ್ಡನ್ನೇ ರೈತರಿಗೆ ಕೊಡಿ ಎಪಿಎಂಸಿ ಯಲ್ಲಿ ಉಳಿದಿದೆ ಅದನ್ನೇನು ಮಾಡುತ್ತೀರಿ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ವಿರೋಧ ಪಕ್ಷದ ನಾಯಕರು ನನ್ನ ಕೊಠಡಿಗೆ ಬಂದು ಅಡಕೆ ಬೆಳೆಗಾರರ ತೊಂದರೆ ಇದೆ ಎಂದು ಹೇಳಿದ ಮೇಲೆ ನಾವು ಮಾತನಾಡಿ ನಾಲ್ಕು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಹತ್ತು ಕೋಟಿ ಬಿಡುಗಡೆ ಮಾಡಬೇಕಾಗಿತ್ತು. ಸದನದಲ್ಲಿ ಕೂಡ ಪ್ರಸ್ತಾಪವಾಗಿದೆ. ಬಿಡುಗಡೆ ಮಾಡುತ್ತೇನೆ ಎನ್ನುವ ಆಶ್ವಾಸನೆ ಕೊಟ್ಟಿದ್ದೆ. ಮತ್ತೆ ಅದರ ಬೆಲೆ ಹೆಚ್ಚಾಯಿತು, ಮತ್ತೆ ಈಗ ಕಡಿಮೆ ಆಗಿದೆ. ಅದನ್ನು ಬಿಡಿಸಿ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಕೊನೆಯ ಶಬ್ದ ನಮಗೆ ಕೇಳಲಿಲ್ಲ. ನೀವು ಯಾವುದು ಹೇಳಬೇಕೋ ಅದನ್ನು ನುಂಗಿಬಿಟ್ಟಿರಿ.

ಶ್ರೀ ಧರ್ಮಸಿಂಗ್: ತಾವು ಹೇಳಿದ ಮೇಲೆ ಮಧ್ಯದಲ್ಲಿ ಅಡಕೆ ಬೆಲೆ ಬಹಳ ಹೆಚ್ಚಾಯಿತು, ಮತ್ತೆ ಅದಕ್ಕೆ ನಿಲ್ಲಿಸಿಬಿಟ್ಟೆವು, ಈಗ ಮತ್ತೆ ಕಡಿಮೆಯಾಗಿದೆ, ಅದಕ್ಕೆ ಕೊಡಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಕೇಳಲಿಲ್ಲ ಸಾರ್.

(ಗೊಂದಲ)

ಸ್ವಲ್ಪ ತಡೀರಿ ಏಕೆ ಆ ರೀತಿ ಮಾಡುತ್ತೀರಿ? ಅವರು ರಿಲೀಸ್ ಮಾಡಬೇಕೋ ಎದ್ದು ನಿಂತುಕೊಂಡು ಮಾತನಾಡಿದರೆ ಸಮಾಧಾನವೇ?

ಶ್ರೀ ಧರ್ಮಸಿಂಗ್: ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದ ಹಾಗೆ ಯಾವಾಗಲೂ ಕೂಡ ವಿರೋಧ ಪಕ್ಷದ ನಾಯಕರು ಬಂದು ಪ್ರಸ್ತಾಪಿಸಿದಾಗ, ಇದು ಮೊದಲನೇ ಸಮ್ಮಿಶ್ರ ಸರಕಾರ ನಿಮಗೆ ನಾವು ಸ್ಪಂದಿಸಿದ್ದೇವೆ. ಅಡಕೆ ರೈತರಿಗೆ ಏನೂ ತೊಂದರೆ ಇತ್ತು ಅದನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ತ್ವರಿತವಾಗಿ ನಾಲ್ಕು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಹೋದ ಸದನದಲ್ಲಿ ಕೂಡ ಪ್ರಸ್ತಾಪ ಮಾಡಿದ್ದೀರಿ. ಕೊಡುತ್ತೇವೆ ಎನ್ನತಕ್ಕಂಥ ಆಶ್ವಾಸನೆ ಕೊಟ್ಟೆವು, ಬೆಲೆ ಹೆಚ್ಚಾಗಿದೆ ಎನ್ನುವ ರಿಪೋರ್ಟ್ ಬಂತು, ನಾನು ಪುನಃ ನಮ್ಮ ಪ್ರಿನ್ಸಿಪಾಲ್ ಸೆಕ್ರೇಟರಿಯವರನ್ನು ಏಕೆಂದು ವಿಚಾರಿಸಿದೆ ಅವರು ಬೆಲೆ ಇಳಿದಿದೆ ಎಂದು ಹೇಳಿದರು. ಅದಕ್ಕೆ ಕೊಡತಕ್ಕಂಥದ್ದು ಹಣ ಬಿಡುಗಡೆ ಮಾಡುತ್ತೇವೆ.

ಶ್ರೀ ಪ್ರಭಾಕರ ಬಂಗೇರ: ನಾನು ಹೇಳುತ್ತಿರುವುದು ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಅವರಿಗೆ ಧನ್ಯವಾದಗಳನ್ನು ಹೇಳುತ್ತಾ, ಕೃಷಿಗೆ ಮುಖ್ಯವಾಗಿ ಕನಿಷ್ಟ ಬೆಲೆಯನ್ನು ಸರ್ಕಾರ ಘೋಷಣೆ ಮಾಡಿದಾಗ ಮಾತ್ರ ರೈತ ಬದುಕುತ್ತಾನೆ. ಆ ಒಂದು ದೃಷ್ಟಿಯಲ್ಲಿ ರೈತರ ಬೆಳೆಗಳಿಗೆ ಏನು ಇದೆ ಅದನ್ನು ವೈಜ್ಞಾನಿಕವಾಗಿ ಸರ್ವೆಯನ್ನು ಮಾಡಿಕೊಂಡು ಅದಕ್ಕೆ ಎಷ್ಟು ಅಸಲು ಬೆಳೆಯುತ್ತದೆ ಎಷ್ಟು ಖರ್ಚಾಗುತ್ತದೆ ಎಷ್ಟು ಲಾಭಾಂಶವನ್ನು ಇಡಬೇಕು, ಎಂಬುದರ ಬಗ್ಗೆ ಚರ್ಚಿಸಿ, ಕನಿಷ್ಟ ಬೆಲೆಯನ್ನು ತಾವು ಘೋಷನೆ

ಮಾಡಿದಾಗ ಬೆಂಬಲ ಬೆಲೆಯ ಅವಶ್ಯಕತೆಯೇ ಬರುವುದಿಲ್ಲ. ಹೀಗಾಗಿ ಎಲ್ಲಾ ಬೆಳೆಗಳಿಗೂ ಕೂಡ ಒಂದು ಯೋಜನೆಯನ್ನು ಮಾಡಬೇಕು. ಆವರ್ತನಿಧಿಯನ್ನು ತಾವು ಮಾಡಿದಿರಿ, ಮುಂದಿನ ದಿನಗಳಲ್ಲಿ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ಕನಿಷ್ಠ ಬೆಲೆಯನ್ನು ತಾವು ಘೋಷಣೆ ಮಾಡಿದಾಗ ಆಗ ಎಲ್ಲರೂ ಕೂಡ ಅದಕ್ಕಿಂತ ಹೆಚ್ಚಿನ ಬೆಲೆಯಲ್ಲಿ ಖರೀದಿ ಮಾಡುತ್ತಾರೆ. ಆ ಮೂಲಕ ರೈತನಿಗೆ ಪ್ರಯೋಜನವಾಗುತ್ತದೆಂದು ಹೇಳುತ್ತಾ ನನಗೆ ಅವಕಾಶವನ್ನು ಮಾಡಿಕೊಟ್ಟ ಸನ್ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಬೋಪಯ್ಯನವರೇ ತಾವು ಮಾತನಾಡಿ.

ಶ್ರೀ ಎಂ.ಟಿ.ಕೃಷ್ಣಪ್ಪ: ಉಪಾಧ್ಯಕ್ಷರೆ, ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಿ.

ಉಪಾಧ್ಯಕ್ಷರು: ಆಯಿತು, ಐದು ನಿಮಿಷ, ಮಾನ್ಯ ಬೋಪಯ್ಯನವರೇ ಹತ್ತು ನಿಮಿಷದಲ್ಲಿ ಮುಗಿಸುತ್ತೀರಾ? ಈಗ ಚರ್ಚೆ ಐದು ಗಂಟೆಗೆ ಕ್ಲೋಸ್ ಆಗಬೇಕು, ಏಕೆಂದರೆ ಮತ್ತೆ ಪ್ರಶ್ನೋತ್ತರ ಇದೆ, ಇಲ್ಲವೆಂದರೆ ನಾಳೆ ಮಾತನಾಡಿ.

ಶ್ರೀ ಬೋಪಯ್ಯ: ಆಗಬಹುದು.

ಉಪಾಧ್ಯಕ್ಷರು: ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಉಪಾಧ್ಯಕ್ಷರೆ, ಪ್ರಶ್ನೋತ್ತರ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬೇಕಾಗಿದೆ. ಇವತ್ತಿನ ದಿವಸ ತಮಿಳುನಾಡು ರಾಜ್ಯದ ಮುಖ್ಯಮಂತ್ರಿಯಾಗಿರುವ ಜಯಲಲಿತರವರು ಕಾವೇರಿ ನದಿಯ ನೀರನ್ನು ಬಿಡಬೇಕೆಂದು ಬಹಳ ಒತ್ತಾಯ ಮಾಡುತ್ತಿದ್ದಾರೆ. ಮತ್ತೆ ಪ್ರಾಧಿಕಾರದ ಸಭೆ ಕರೆಯಬೇಕೆಂದು ಒತ್ತಡ ಮಾಡುತ್ತಿದ್ದಾರೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ವಾಟಾಳ್ ನಾಗರಾಜ್‌ರವರು ಯಾವಾಗಲೂ ಕೂಡ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತಾರೆ. ಬೇರೆಯವರ ಗಮನ ಸೆಳೆಯುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಕ್ಷಮಿಸಬೇಕು. ಆ ರೀತಿಯ ಉದ್ದೇಶ ಏನಿಲ್ಲ. ಈಗ ಕೃಷ್ಣರಾಜಸಾಗರದಲ್ಲಿ ನಮಗೆ ನೀರಿಲ್ಲ. ಮತ್ತೆ ನಮ್ಮ ರೈತರೆ ಬಹಳ ತೊಂದರೆಯುಲ್ಲಿದ್ದಾರೆ. ನೀರು ಬಿಡಿ ಎಂದು ತಮಿಳುನಾಡಿನವರದು ಪ್ರತಿಸಾರಿ ಒಂದೇ ಸಮನಾಗಿ ಒಂದು ರೀತಿಯ ವರ್ತನೆಯಾಗಿದೆ. ಈ ಸಾರಿ ಅವರ ಒತ್ತಡಕ್ಕೆ ಏನಾದರೂ ಮಣಿದು ನಾವು ನೀರು ಬಿಡುವುದಕ್ಕೆ ಹೋದರೆ ಇಡೀ ರಾಜ್ಯದಲ್ಲಿ ಒಂದು ದೊಡ್ಡ ಸಮರವೇ ಆಗುತ್ತದೆ. ಪ್ರಾಧಿಕಾರದ ಸಭೆಯನ್ನು ಕರೆಯಬಾರದೆಂದು ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರಕ್ಕೆ

ಒತ್ತಡ ತರಬೇಕು. ಈ ಬಗ್ಗೆ ಸರ್ಕಾರ ಏನು ಚಿಂತನೆ ಮಾಡಿದೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಮತ್ತೆ ಇವತ್ತಿನ ದಿವಸ ಕಬಿನಿ ಜಲಾಶಯದಿಂದ ಸಿಕ್ಕಾಪಟ್ಟೆ ನೀರು ಹೋಗುತ್ತಿದೆ. ಕಬಿನಿಯಿಂದ ಪ್ರತಿದಿನ ಎಷ್ಟು ನೀರು ಹೋಗುತ್ತದೆಂಬುದನ್ನು ಲೆಕ್ಕ ಹಾಕಬೇಕು. ಇದು ಮಳೆ ನೀರು ಇರಬಹುದು ಅಥವಾ ಪ್ರವಾಹ ಇರಬಹುದು, ಒಟ್ಟಿನಲ್ಲಿ ಯಾವುದೇ ನೀರು ಆಗಿದ್ದರೂ ಕೂಡ ಅದರು ಮೆಟ್ಟೂರು ಜಲಾಶಯಕ್ಕೆ ಹೋಗುತ್ತದೆ,. ಆದ್ದರಿಂದ ಇದನ್ನು ನಾವು ಸಂಪೂರ್ಣವಾಗಿ ಲೆಕ್ಕ ಹಾಕಲೇ ಬೇಕಾಗುತ್ತದೆ. ಇವತ್ತಿನ ದಿವಸ ಇಡೀ ರಾಜ್ಯದಲ್ಲಿ ನಮಗೆ ತೀವ್ರ ಅನ್ಯಾಯವಾಗಿದೆ ಮತ್ತು ನಮ್ಮ ರೈತರಿಗೆ ತೊಂದರೆಯಾದುದರಿಂದ ತಮಿಳುನಾಡಿಗೆ ನೀರು ಬಿಡತಕ್ಕಂಥ ಪ್ರಶ್ನೆಯೇ ಇಲ್ಲ. ಆದ್ದರಿಂದ, ಈಗ ಪ್ರಾಧಿಕಾರದ ಸಭೆ ಕರೆಯಬಾರದೆಂದು ಸರ್ಕಾರ ಹೇಳಬೇಕು. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ನಿರ್ಧಾರ ಮತ್ತು ನೀತಿ ಏನಿದೆ ಎಂಬುದನ್ನು ಹೇಳಬೇಕೆಂದು ನಾವು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಕಾವೇರಿ ನದಿ ನೀರಿನ ಬಗ್ಗೆ ಹೇಳುವುದಾದರೆ, ನೀರು ಬಿಡುವುದಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಆದರೆ, ನಮ್ಮ ಕೆಆರ್‌ಎಸ್‌ನಲ್ಲಿ ನೀರಿಲ್ಲ ಎನ್ನತಕ್ಕಂಥದ್ದು ನಮ್ಮ ಪ್ರಶ್ನೆಯಾಗಿದೆ. ಏಕೆಂದರೆ, ಏನೊಂದು ತಪ್ಪು ಗ್ರಹಿಕೆ ರಾಜ್ಯದ ಜನತೆಗೆ ಮತ್ತು ತಮಿಳುನಾಡಿನ ಜನತೆಗೆ ಹೋಗುವುದು ಬೇಡ. ಕೆಆರ್‌ಎಸ್‌ನಲ್ಲಿ ಇದುವರೆಗೆ ನೀರು ಇದ್ದಾಗ ನಾವು ತಮಿಳುನಾಡಿಗೆ ನೀರನ್ನು ಬಿಟ್ಟುಕೊಂಡು ಬಂದಿದ್ದೇನೆ. ಆದರೆ, ಈ ಬಾರಿ ಕೆಆರ್‌ಎಸ್‌ನಲ್ಲಿ ನೀರಿಲ್ಲ. ಕಳೆದ ನಾಲ್ಕಾರು ವರ್ಷಗಳಿಗೆ ಹೋಲಿಕೆ ಮಾಡಿದಾಗ ಯಾವ ಪ್ರಮಾಣದಲ್ಲಿ ನೀರು ಇರಬೇಕಾಗಿತ್ತೋ ಆ ಪ್ರಮಾಣದಲ್ಲಿ ನೀರಿಲ್ಲ. ಇವತ್ತಿನ ದಿವಸ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಮಳೆ ಸರಿಯಾಗಿ ಆಗದೆ ಇರುವುದರಿಂದ ಬಹಳ ಸಂಕಷ್ಟದಲ್ಲಿರತಕ್ಕಂಥ ಸಂದರ್ಭ ಇವತ್ತಿನದಿವಸ ಆಗಿದೆ. ಆದರೆ, ಇವತ್ತಿನ ದಿವಸ ಕಬಿನಿ ಜಲಾಶಯದಲ್ಲಿ ನೀರು ತುಂಬಿ ತುಳುಕುತ್ತಿದೆ, ಇದರಿಂದ ನೀರು ಹರಿದು ಹೋಗುತ್ತಿದೆ. ಇದನ್ನು ಯಾರು ಹೋಗಿ ಅಡ್ಡ ತಡೆದು ಹಿಡಿದುಕೊಂಡಿಲ್ಲ. ಈ ನೀರು ಮೆಟ್ಟೂರು ಜಲಾಶಯಕ್ಕೆ ಹೋಗಿ ತಲುಪುತ್ತಿದೆ. ಇಷ್ಟಾದರೂ ಕೂಡ ತಮಿಳುನಾಡಿನ ಮುಖ್ಯಮಂತ್ರಿಯವರು ಆ ಜನರನ್ನು ಪ್ಲೀಜ್ ಮಾಡುವುದಕ್ಕೋಸ್ಕರ ಮತ್ತೆ ಮತ್ತೆ ಕಾವೇರಿ ವಿಷಯ ಕೆದಕಿ ನೀರು ಬಿಟ್ಟಿಲ್ಲ ಎಂದು ಆರೋಪ ಮಾಡತಕ್ಕಂಥದು ಮತ್ತು ಈ ದೇಶದ ಜನರ ಮುಂದೆ ನಾವೊಂದು ರೀತಿಯಲ್ಲಿ ಅಪರಾಧಿಗಳು ಎನ್ನುವ ರೀತಿಯಲ್ಲಿ ಮೂಡಿಸುವಂಥ ಪ್ರಯತ್ನವನ್ನು ಪದೇ ಪದೇ ಆ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆ. ಆದ್ದರಿಂದ, ಅಲ್ಲಿರತಕ್ಕಂಥ ವಾಸ್ತವ ಸ್ಥಿತಿಯನ್ನು ತಿಳಿಸಿ, ನಾವೇ ಸಂಕಷ್ಟದಲ್ಲಿರತಕ್ಕಂಥ ಈ ಪರಿಸ್ಥಿತಿಯಲ್ಲಿ ಜಲಾಶಯ ತುಂಬುವುದಕ್ಕಿಂತ ಮುಂಚಿತವಾಗಿಯೇ ನೀರು ಬಿಡುವುದಕ್ಕೆ

ಆಗುವುದಿಲ್ಲ ಎಂದು ನೀವು ಸ್ಪಷ್ಟವಾಗಿ ಈಗಾಗಲೇ ಹೇಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಸ್ಪಷ್ಟವಾಗಿ ತಿಳಿಸುವಂಥ ಪ್ರಯತ್ನವನ್ನು ನೀವು ಮಾಡಬೇಕೆಂಬ ಮನವಿಯನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷರೆ, ಕಾವೇರಿ ನ್ಯಾಯ ಮಂಡಳಿ ರಚನೆ ಮಾಡಿ ಈಗಾಗಲೇ 9 ವರ್ಷಗಳಾಗಿದೆ. ಇದು ಯಾವಾಗ ಮುಗಿದು ಇದರ ತೀರ್ಪು ಯಾವಾಗ ಬರಬಹುದು? 9 ವರ್ಷಗಳಿಂದ ಒಂದೇ ಸಮನಾಗಿ ನಾವು ಹೋರಾಟ ಮಾಡುತ್ತಿದ್ದೇವೆ. ನ್ಯಾಯ ಮಂಡಳಿಯ ತೀರ್ಪು ಯಾವುದಾದರೊಂದು ಹಂತದಲ್ಲಿ ಬರುತ್ತದೆಂದು ಹೇಳಬೇಕಲ್ಲವೇ? ಇದಕ್ಕೆ 9 ವರ್ಷ ತೆಗೆದುಕೊಂಡಿರತಕ್ಕಂಥದು ಒಳ್ಳೆಯ ಸೂಚನೆಯಲ್ಲ. ತೀರ್ಪು ಕೊಡತಕ್ಕಂಥ ಸೂಚನೆ ಯಾವಾಗ ಬರುತ್ತದೆ? ಈಗ ಅದರ ಕಾರ್ಯಭಾರ ಏನು? ಏನೇನು ನಡೆಯುತ್ತದೆ ಎನ್ನತಕ್ಕಂಥದನ್ನು ಸದನದ ಮುಂದೆ ತಾವು ಹೇಳಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಮತ್ತು ಜಲಸಂಪನ್ಮೂಲ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ, ಈ ವಿಷಯದ ಬಗ್ಗೆ ನಿನ್ನೆ ಮತ್ತು ಮೊನ್ನೆ ದಿವಸ ಮಾಧ್ಯಮ ಮಿತ್ರರು ಪ್ರತಿಕ್ರಿಯೆಯನ್ನು ನನಗೆ ಕೇಳಿದ್ದರು. ಈಗಾಗಲೇ ಅದಕ್ಕೆ ನಾವು ಪ್ರತಿಕ್ರಿಯಿಸಿದ್ದೇವೆ. ಅದೇನೆಂದರೆ, ಈಗಾಗಲೇ ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಕೆಆರ್‌ಎಸ್ ಸಾಗರದಲ್ಲಿರತಕ್ಕಂಥ ನೀರನ್ನು ಕಳೆದ ವರ್ಷಕ್ಕೆ ಹೋಲಿಸಿದಾಗ ಇವತ್ತಿನ ದಿನದಲ್ಲಿ ಸುಮಾರು ಇನ್ನು 6 ಟಿಎಂಸಿ ನೀರು ಕಡಿಮೆ ಇದೆ. ಅಂದರೆ ಇವತ್ತಿನ ದಿವಸ ಅಲ್ಲಿನ ನೀರಿನ ಮಟ್ಟ 98.56 ಅಡಿ ಇರಬಹುದು. ಇದೇ ದಿವಸ ಹೋದ ವರ್ಷ ಸುಮಾರು 104 ಅಡಿಗಿಂತ ಜಾಸ್ತಿ ನೀರು ಇತ್ತು. ಈ ವರ್ಷ ನಮಗೆ ಇನ್ನು ಸಫಿಶಿಯೆಂಟ್ ನೀರು ಬಂದಿಲ್ಲ. ಹೋದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಇನ್ನು ಅತ್ಯಂತ ಕಡಿಮೆ ನೀರು ಇದೆ. ತಮಗೆ ಗೊತ್ತಿರುವ ಹಾಗೆ ಜಲಾಶಯದಲ್ಲಿ ನೀರು ಮೇಲಕ್ಕೆ ಬಂದ ಹಾಗೆ ಹೆಚ್ಚು ನೀರು ಸಂಗ್ರಹವಾಗುತ್ತದೆ. ಈ ಒಂದು ತೊಂದರೆ ಇರುವ ಕಾರಣ ನಮ್ಮ ರೈತರಿಗೆ ಅನಾನುಕೂಲ ಆಗುತ್ತದೆ ಮತ್ತು ಎಲ್ಲಿಯವರೆಗೆ ನಮ್ಮ ರೈತರಿಗೆ ಎಷ್ಟು ಬೇಕೋ ಅಷ್ಟು ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದಾಗ ಕೆಆರ್‌ಎಸ್‌ನಿಂದ ನೀರು ಬಿಡತಕ್ಕಂಥ ಪ್ರಶ್ನೆ ಉದ್ಭವಿಸುವುದಿಲ್ಲ. ಈಗಾಗಲೇ ಕಬಿನಿ ಜಲಾಶಯ ತುಂಬಿ ನೀರು ಹರಿದು ಹೋಗುತ್ತಿದೆ. ನಾವು ಕೂಡ ನೀರು ಬಿಡುತ್ತಿದ್ದೇವೆ. ಇವತ್ತಿನ ದಿವಸ ಹೆಚ್ಚು ಕಡಿಮೆ ನಾಲ್ಕು ಅಡಿ ನೀರು ಕಡಿಮೆ ಇದ್ದರೂ ಕೂಡ ಸದ್ಯಕ್ಕೆ ಕಬಿನಿಯಿಂದ ನೀರು ಹರಿದು ಹೋಗುತ್ತಿದೆ. ಆದರೂ ಸಹ ತಮಿಳುನಾಡು ಸರ್ಕಾರ

ಯಾವಾಗಲೂ ಕೂಡ, ಅಂದರೆ ಅಲ್ಲಿ ಯಾವುದೇ ಸರ್ಕಾರ ಇರಲಿ, ಈಗ ಇರುವ ಜಯಲಲಿತ ಸರ್ಕಾರ ಆಗಲಿ ಅಥವಾ ಈ ಹಿಂದೆ ಇದ್ದಂಥ ಡಿಎಂಕೆ ಸರ್ಕಾರ ಇರಲಿ, ಇವರ ಪ್ರಯತ್ನ ಏನೆಂದರೆ, ಒಂದೆರಡು ತಿಂಗಳ ನಂತರ ನೀರು ಬೇಕಾಗುತ್ತದೆಂದರೆ ಮೊದಲೇ ನೀರು ಬಿಡಿ ಎಂದು ಪ್ರಯತ್ನ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈಗ ಅವರು ಹೇಳಿಯೇ 15 ದಿವಸ ಆಗಿದೆ. ಅವರು ಯಾವಾಗಲೂ ಕೂಡ ಒಂದು ರೀತಿಯ ಪ್ರೆಷರ್ ಪ್ರಾಕ್ಟಿಸ್ ಮಾಡುತ್ತಿದ್ದಾರೆ. ನಾವು ಈಗಾಗಲೇ ಹೇಳಿದ ಹಾಗೆ ಕಾವೇರಿ ಅಥಾರಿಟಿ ಮೀಟಿಂಗ್ ಕರೆಯತಕ್ಕಂಥ ಅವಶ್ಯಕತೆ ಇಲ್ಲ ಮತ್ತು ಪ್ರಾಧಿಕಾರದ ಸಭೆ ಸೇರತಕ್ಕಂಥ ಅವಶ್ಯಕತೆ ಇಲ್ಲ. ಹಾಗೆಯೇ ಈಗ ನೀರು ಬಿಡತಕ್ಕಂಥ ಪ್ರಶ್ನೆಯೇ ಈ ಸಂದರ್ಭದಲ್ಲಿ ಉದ್ಭವಿಸುವುದಿಲ್ಲ ಎಂದು ನಾವು ಈಗಾಗಲೇ ಸ್ಪಷ್ಟಪಡಿಸಿದ್ದೇವೆ. ಮತ್ತೆ ಇವತ್ತೂ ಕೂಡ ಇದನ್ನು ಸಹ ಸ್ಪಷ್ಟಪಡಿಸುತ್ತೇವೆ. ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡಿಕೊಂಡು ಮುಂದಿನ ಕ್ರಮವನ್ನು ಮಾಡುವುದಕ್ಕೆ ಆಗುತ್ತದೆ ಹೊರತಾಗಿ, ನಮ್ಮ ರೈತರ ಹಿತವನ್ನು ಬದಿಗಿಟ್ಟು, ಬಲಿಕೊಟ್ಟು ಯಾವ ಕೆಲಸವನ್ನೂ ಕೂಡ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ನ್ಯಾಯ ಮಂಡಳಿಯದು ನಮ್ಮ ಕೈಯಲ್ಲಿ ಇಲ್ಲ. ತಮಗೆ ಗೊತ್ತಿರುವ ಹಾಗೆ ಟ್ರಿಬ್ಯುನಲ್ ಲಾ ಪ್ರಕಾರ ಜಡ್ಜ್‌ಸ್‌ರವರು ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥ ಸ್ವಾತಂತ್ರ್ಯ ಅವರಿಗೆ ಇರತಕ್ಕಂಥದು. ಇವತ್ತೆ ಕೊಡಿ ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಮತ್ತೆ ಇದರ ಹಿಯರಿಂಗ್ ಈಗಾಗಲೇ ನಡೆದಿದೆ. ಹಾಗೆಯೇ ಅನಿಲ್ ದಿವಾನ್‌ರವರ ಆರ್ಗ್ಯುಮೆಂಟ್ ಕೂಡ ಈಗಾಗಲೇ ನಡೆದಿರತಕ್ಕಂಥದು ತಮಗೆಲ್ಲಾ ಗೊತ್ತಿದೆ. ಮತ್ತೆ ಇವತ್ತು ಕೂಡ ಚೆನ್ನಾಗಿ ಆರ್ಗ್ಯುಮೆಂಟ್ ಮಾಡಿದ್ದಾರೆ. ಹಾಗೆಯೇ ನಮ್ಮ ನಾರಿಮನ್‌ರವರೂ ಕೂಡ ಆರ್ಗ್ಯುಮೆಂಟ್ ಮಾಡಿ ಮುಗಿಸಿದ್ದಾರೆ. ಇದೆಲ್ಲಾ ಆದ ಮೇಲೆ ಅವರು ಯಾವ ಸಂದರ್ಭದಲ್ಲಿ ತೀರ್ಪು ಕೊಡುತ್ತಾರೆ ಎನ್ನತಕ್ಕಂಥದ್ದನ್ನು ನೋಡೋಣ.

ಉಪಾಧ್ಯಕ್ಷರು:– ಈಗ ಪ್ರಶ್ನೋತ್ತರ ವೇಳೆ. ಮೊದಲ ಪ್ರಶ್ನೆ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು.

ಶ್ರೀ ಸಿ.ಟಿ.ರವಿ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು...

ಉಪಾಧ್ಯಕ್ಷರು:– ಈಗ ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರೆ ತಾವು ಪ್ರಶ್ನೆ ಕೇಳಿ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಅವರ ಗಮನಕ್ಕೆ ತೆಗೆದುಕೊಂಡು ಬನ್ನಿ ಎಂದು ಈಗಾಗಲೇ ಹೇಳಿದ್ದರು. ನಾನು 10 ದಿವಸಗಳ ಕಾಲ ಪಾದಯಾತ್ರೆ ಮಾಡಿಕೊಂಡು ಬಂದು